ಕಾಡುಗೊಲ್ಲರ ಬದುಕಿನ ಸ್ಥಿತ್ಯಂತರಗಳು

(ಚನ್ನಗಿರಿ ತಾಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ವಿನೋದ್‌ಕುಮಾರ್ ಹೆಚ್.ಬಿ.

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

ಕಾಡುಗೊಲ್ಲರ ಬದುಕಿನ ಸ್ಥಿತ್ಯಂತರಗಳು

(ಚನ್ನಗಿರಿ ತಾಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ವಿನೋದ್‌ಕುಮಾರ್ ಹೆಚ್.ಬಿ.

ಮಾರ್ಗದರ್ಶಕರು
ಡಾ. ಗಂಗಾಧರ ದೈವಜ್ಞ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೪-೨೦೧೫

ಮಾರ್ಗದರ್ಶಕರ ಪ್ರಮಾಣ ಪತ್ರ

"ಕಾಡುಗೊಲ್ಲರ ಬದುಕಿನ ಸ್ಥಿತ್ಯಂತರಗಳು" (ಚನ್ನಗಿರಿ ತಾಲೂಕನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ **ವಿನೋದ್‌ಕುಮಾರ್ ಹೆಚ್**.ಬಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ:
ಸ್ಥಳ: ವಿದ್ಯಾರಣ್ಯ

(ಡಾ. ಗಂಗಾಧರ ದೈವಜ್ಞ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

"ಕಾಡುಗೊಲ್ಲರ ಬದುಕಿನ ಸ್ಥಿತ್ಯಂತರಗಳು" (ಚನ್ನಗಿರಿ ತಾಲೂಕನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು **ಡಾ. ಗಂಗಾಧರ ದೈವಜ್ಞ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್(ಸಮಾಜಶಾಸ್ತ್ರ) ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

Vinodkumar HB

ದಿನಾಂಕ:

ಸ್ಥಳ: ವಿದ್ಯಾರಣ್ಯ

(ವಿನೋದ್‌ಕುಮಾರ್ ಹೆಚ್.ಬಿ.)

ಸಂಶೋಧಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಪ್ರಸ್ತಾವನೆ

ಕರ್ನಾಟಕದ ಹಿಂದುಳಿದ ಸಮುದಾಯಗಳಲ್ಲೊಂದಾದ ಕಾಡುಗೊಲ್ಲರು ಕಾಡುಗಳಲ್ಲಿ ವಾಸ ಮಾಡುತ್ತಾರೆ. ಕಾಡುಗೊಲ್ಲರು ಎಂದರೆ ಕಾಡುಗಳಲ್ಲಿ ವಾಸ ಮಾಡುವ ಗೋಪಾಲಕರು ಎಂದೆ ಅರ್ಥ ಕಾಡುಗೊಲ್ಲರ ಸಂಸ್ಕೃತಿ ಕಾಡುಗಳಿಂದ ರೂಪಿತವಾಗಿರುವುದರಿಂದ ಇವರನ್ನು ಕಾಡುಗೊಲ್ಲರೆಂದು ಕರೆಯುವ ವಾಡಿಕೆಯಿದೆ. ಅಡವಿಗೊಲ್ಲರು ಹಟ್ಟಿಗೊಲ್ಲರು ಮೊದಲಾದ ಹೆಸರುಗಳಿಂದಲೂ ಕಾಡುಗೊಲ್ಲರನ್ನು ಕರೆಯುವ ಪದ್ಧತಿಯಿದೆ. ಗೊಲ್ಲರಲ್ಲಿ ಕಾಡುಗೊಲ್ಲರು ಮಾತ್ರವಲ್ಲದೆ, ಊರುಗೊಲ್ಲರು, ಮೊದಲಾದ ಕೆಲವು ಉಪ ಪಂಗಡಗಳಿವೆ ಇವರಲ್ಲಿ ಊರುಗೊಲ್ಲರಿಗೆ ಮತ್ತು ಕಾಡುಗೊಲ್ಲರಿಗೆ ಅನೇಕ ವ್ಯತ್ಯಾಸಗಳಿವೆ.

ಕಾಡುಗೊಲ್ಲರು ಸಾಮಾನ್ಯವಾಗಿ ಕನ್ನಡ ಭಾಷೆ ಮಾತನಾಡುತ್ತಾರೆ. ಇವರದೇ ಆದ ಒಂದು ಉಪಭಾಷೆ ಇವರಿಗಿರುವುದು ಕಂಡುಬರುತ್ತದೆ. ಕಾಡುಗೊಲ್ಲರ ಮನೆಮಾತು ಕನ್ನಡ ಅದರಲ್ಲಿ ಯಾವುದೇ ಸಂಶಯವಿಲ್ಲ ಕಾಡುಗೊಲ್ಲರು ಇತರೆ ಸಮುದಾಯಗಳಿಂದ ದೂರವಿರುವ ಕಾರಣ ಬುಡಕಟ್ಟುಗಳ ಚಹರೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಇವರು ದೇವರ ಬಗ್ಗೆ ತಮ್ಮದೇ ಆದ ನಂಬಿಕೆಗಳನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಊರುಗೊಲ್ಲರ ಮನೆ ಮಾತು ತೆಲುಗು ಆಂಧ್ರದಲ್ಲಿ ಊರುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಆದರೆ ಕರ್ನಾಟಕದಲ್ಲಿರುವ ಊರುಗೊಲ್ಲರಿಗೆ ಕನ್ನಡ ಮಾತನಾಡಲು ಬರುತ್ತದೆ. ಆದರೆ ಅವರ ಮಾತೃಭಾಷೆ ತೆಲುಗು.

ಕಾಡುಗೊಲ್ಲರ ಮುಖ್ಯ ಕಸುಬು ಪಶುಪಾಲನೆ ನಂತರ ಇವರು ಕಾಲಾಂತರದಲ್ಲಿ ಕೃಷಿಯನ್ನು ಪ್ರಾರಂಭಿಸಿದರು. ಇಂದಿಗೂ ಕೂಡ ಕಾಡುಗೊಲ್ಲರನ್ನು ಬಹಳ ಬೇಗ ಗುರುತಿಸಬಹುದು.ಇವರ ಹಟ್ಟಿಗಳನ್ನು ಪ್ರವೇಶಿಸಿದಾಗ ಮೊದಲು ಅವರ ಮನೆಯ ಮುಂದೆ ಹಸು, ಎಮ್ಮೆ, ಕುರಿ, ಮೇಕೆಗಳು ಕಂಡುಬರುತ್ತವೆ. ಜೀವನ ನಿರ್ವಹಣೆಗೋಸ್ಕರ ಕುಟುಂಬ ಸಮೇತ ವಲಸೆ ಬಂದು ಕುರಿಗಳಿಗೆ ಮೇವು, ನೀರು ಹುಡುಕಿಕೊಂಡು. ಪ್ರದೇಶದಿಂದ ಪ್ರದೇಶಕ್ಕೆ ವರ್ಷವೀಡಿ ಅಲೆದಾಡುತ್ತಾ ಕುರಿ ಸಂಗೋಪನೆ ಮಾಡುವವರನ್ನು ಅಲೆಮಾರಿ ಕಾಡುಗೊಲ್ಲರೆಂದು ಕರೆಯುತ್ತಾರೆ. ಕುರಿ ಸಂಗೋಪನೆಗೆಂದು ಬಂದ ಇವರು ತಮಗೆ ಅನುಕೂಲವೆನಿಸಿದ ಭೂಪ್ರದೇಶಕ್ಕಿಂತ ಕುರಿಗಳಿಗೆ ಎಲ್ಲಿಯ ವಾಯುಗುಣ ಹೊಂದಿಕೊಳ್ಳುತ್ತದೆಯೋ ಮತ್ತು ಎಲ್ಲಿ ನೀರು ಮೇವು ಅತಿ ಹೆಚ್ಚು ಸಮೃದ್ಧವಾಗಿ ದೊರೆಯುತ್ತದೆಯೋ ಅಂತಹ ಪ್ರದೇಶಗಳಲ್ಲಿ ಜೀವನ ಸಾಗಿಸುತ್ತಾರೆ. ಕಾಡುಗೊಲ್ಲರಲ್ಲಿ ಇಂದು ಅಲೆಮಾರಿತನ ಕಂಡುಬರುತ್ತಿಲ್ಲ. ಕೆಲವರು ಒಂದು ಕಡೆ ನೆಲೆ ನಿಂತು ವ್ಯವಸಾಯವನ್ನು ಕೈಗೊಂಡಿದ್ದಾರೆ ಜೊತೆಗೆ ಸಂಪ್ರದಾಯಗಳನ್ನು

ಮೂಲೆಗೆ ತಳ್ಳಿ ಜೀವನ ನಿರ್ವಹಣೆಗೋಸ್ಕರ ಯಾವ ಕೆಲಸವನ್ನಾದರೂ ಮಾಡಲು ಸಿದ್ಧರಾಗಿರುವುದನ್ನು ಕಾಣುತ್ತೇವೆ. ಆದರೆ ಆಧುನಿಕತೆಯ ಇಂದಿನ ಪರಿಸರದಲ್ಲಿ ಯುವಕ/ ಯುವತಿಯರು ಕುರಿ ಹಾಗೂ ದನ ಕಾಯುವುದು ಹಾಗೂ ವ್ಯವಸಾಯ ಮಾಡುವುದು ಅವಮಾನವೆಂದು ಭಾವಿಸುತ್ತಿದ್ದಾರೆ. ಇಂದಿನ ಯುವಕ ಯುವತಿಯರು ಶಿಕ್ಷಣವನ್ನು ಕಲಿತು ವಿದ್ಯಾವಂತರಾಗಿರುವುದರಿಂದ ಆಧುನಿಕತೆಯ ನಗರೀಕರಣ ಅಥವಾ ಕೈಗಾರಿಕೀಕರಣದ ಪ್ರಭಾವದಿಂದ ಇಂದು ಇವರು ದೇಶದ ಮತ್ತು ರಾಜ್ಯದ ವಿವಿಧ ಕಡೆ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿದ್ದಾರೆ. ಇವರು ಡಾಕ್ಟರ್ ಇಂಜೀನಿಯರ್, ಲಾಯರ್, ಟೀಚರ್, ಉಪನ್ಯಾಸಕರು, ಪೋಲಿಸ್, ಸಬ್ ಇನ್‌ಸ್ಪೆಕ್ಟರ್‌ರಿಂದ ಹಿಡಿದು ಎಲ್ಲಾ ಕೆಲಸಗಳಲ್ಲಿ ಕಾಡುಗೊಲ್ಲರು ಇಂದು ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ.

ಯುವಕರು ಹಟ್ಟಿಯಿಂದ ಪಟ್ಟಣದ ಕಡೆ ಮುಖ ಮಾಡುತ್ತಿದ್ದಾರೆ. ಇಂದಿನ ಆಧುನಿಕತೆಯ ಯುಗದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇತರೆ ಬೇರೆ ಬೇರೆ ಸಮುದಾಯಗಳಿಗೆ ಹೋಲಿಕೆ ಮಾಡಿದರೆ ಕಾಡುಗೊಲ್ಲರು ಇನ್ನೂ ಹಿಂದುಳಿದಿದ್ದಾರೆ. ಸರ್ಕಾರದ ಮೂಲಭೂತ ಸೌಕರ್ಯಗಳಿಂದ ಇವರು ವಂಚಿತರಾಗಿದ್ದಾರೆ. ಇಂದೂ ಎಷ್ಟೋ ಗೊಲ್ಲರ ಹಟ್ಟಿಗಳಿಗೆ ಸಾರಿಗೆ ವ್ಯವಸ್ಥೆಯಿಲ್ಲ, ವಿದ್ಯುತ್ ಸೌಲಭ್ಯ ಇವತ್ತಿಗೂ ಕೆಲವೊಂದು ಮನೆಗಳಿಗೆ ಇಲ್ಲ, ಭಾಗ್ಯಜ್ಯೋತಿ ಯೋಜನೆ, ಗಂಗಾಕಲ್ಯಾಣ ಯೋಜನೆ, ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಡಾಂಬರ್ ರಸ್ತೆ, ಶೌಚಾಲಯದ ವ್ಯವಸ್ಥೆಯು ಇಂದು ಇಲ್ಲವಾಗಿವೆ. ಆಧುನಿಕ ಯುಗದಲ್ಲಿಯೂ ಇವರು ಸಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಕೆಲವು ಗೊಲ್ಲರ ಹಟ್ಟಿಗಳು ಹಿಂದೆ, ನೆಲ ಮತ್ತು ಗುಡಿಸಲಿನಲ್ಲಿ ವಾಸವಾಗಿರುವುದನ್ನು ಕಾಣುತ್ತೇವೆ. ಕಡುಬಡತನ ಅವರನ್ನು ಕಾಡುತ್ತದೆ. ಅಕ್ಷರ ಎಂದರೆ ಏನು ಎನ್ನುವ ಸಮುದಾಯ ಇದಾಗಿದೆ. ಯಾಕೆಂದರೆ ಅವರ ಹಟ್ಟಿಗಳು ನಾಗರೀಕತೆಯಿಂದ ದೂರ ಉಳಿದಿವೆ. ಆದರೆ ಇತ್ತೀಚೆಗೆ ಆಧುನಿಕತೆಯ ಪ್ರಭಾವದಿಂದ ಶೈಕ್ಷಣಿಕವಾಗಿ, ಆರ್ಥಿಕವಾಗಿ ಬದಲಾವಣೆಯನ್ನು ಹೊಂದುತ್ತಿದ್ದಾರೆ. ಕಾಡುಗೊಲ್ಲರ ಜನರ ಆಚಾರ-ವಿಚಾರ-ಸಂಪ್ರದಾಯಗಳು ಅವರ ಆರಾಧನೆಗಳು ಇವತ್ತಿಗೂ ಕೂಡ ಬದಲಾವಣೆಯಾಗಿಲ್ಲ ಏಕೆಂದರೆ ಕಾಡುಗೊಲ್ಲರಲ್ಲಿ ಹುಟ್ಟಿದರೂ ಸೂತಕ ಸತ್ತರೂ, ಸೂತಕ ಇದಕ್ಕೆ ಕಾರಣ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಯರ‍್ರಣ್ಣ, ಎತ್ತಪ್ಪ, ಜುಂಜಪ್ಪ, ವೀರಸಾತಣ್ಣ, ವೀರಚಿಕ್ಕಣ್ಣ, ಗೌರಸಂದ್ರದ ಮಾರಮ್ಮ ಮುಂತಾದವರು. ಕಾಡುಗೊಲ್ಲರ ವಿಶೇಷವೆಂದರೆ ಮೂಲದೇವರ ಆಯುಧಗಳನ್ನು, ದೇವರ ರೂಪದಲ್ಲಿ ಪೂಜಿಸುತ್ತಾರೆ. ಅವುಗಳನ್ನು ವೀರಹಲಗು ಎಂದೂ ಕರೆಯುತ್ತಾರೆ.

ಪ್ರತಿಯೊಬ್ಬ ಸಾಂಸ್ಕೃತಿಕ ವೀರನು ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ನಾಯಕಗೊಲ್ಲ, ಮುಸ್ಲಿಂ, ಜನಾಂಗದೊಂದಿಗೆ ಹೋರಾಡಿ ವೀರ ಮರಣವನ್ನು ಹೊಂದಿದ್ದಾರೆ. ಆದ್ದರಿಂದ ಇವರನ್ನು ಈರಗಾರರು, ಎಂದೂ ಕರೆಯುತ್ತಾರೆ. ದಲಿತರನ್ನು ಇಂದಿಗೂ ಊರೊಳಗೆ ಸೇರಿಸುವುದಿಲ್ಲ ಹಾಗೂ ಅವರಿಗೆ ಅನ್ನ ನೀರು ಸಹ ಕೊಡುವುದಿಲ್ಲ.

ಕಾಡುಗೊಲ್ಲರು ತುಮಕೂರು, ಚಿತ್ರದುರ್ಗ, ಬೆಂಗಳೂರು, ಹಾಸನ, ದಾವಣಗೆರೆ, ಬಳ್ಳಾರಿ, ಈ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಚಿತ್ರದುರ್ಗ ಜಿಲ್ಲೆಯನ್ನು ಬುಡಕಟ್ಟು ಸಮುದಾಯಗಳ, ತವರೂರು ಎಂದೂ ಕರೆಯಬಹುದು. ಇಲ್ಲಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಅದೇ ರೀತಿ ದಾವಣಗೆರೆ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಅಂದರೆ ಚನ್ನಗಿರಿ ಜಗಳೂರು ಮುಂತಾದ ತಾಲ್ಲೂಕುಗಳಲ್ಲಿ ಇಂತಹ ನೆಲೆಗಳನ್ನು ನಾವು ಕಾಣಬಹುದಾಗಿದೆ. ಈ ಎರಡೂ ಬುಡಕಟ್ಟು ಸಮುದಾಯಗಳು ಯಾಕೆ ಈ ಪ್ರದೇಶವನ್ನು ಆಯ್ಕೆಮಾಡಿ ಕೊಂಡರೆಂದರೆ ಮೂಲತಃ ಚಿತ್ರದುರ್ಗ, ಬಯಲು ಹುಲ್ಲುಗಾವಲಿನಿಂದ ಕೂಡಿದ ಪ್ರದೇಶ ಮ್ಯಾಸಬೇಡರು ಬೇಟೆ ಆಡಲು ಈ ಪ್ರದೇಶವನ್ನು ಆಯ್ಕೆ ಮಾಡಿಕೊಂಡರೆ ಕಾಡುಗೊಲ್ಲರು ಪಶುಪಾಲಕರು ಪಶುಗಳಿಗೆ ಬೇಕಾದ ಹುಲ್ಲು ನೀರು ಈ ಪ್ರದೇಶದಲ್ಲಿ ಲಭ್ಯವಾದ್ದರಿಂದ ಅಥವಾ ಪಶುಪಾಲನೆಗೆ ಯೋಗ್ಯವಾದ ಸ್ಥಳವಾಗಿದ್ದರಿಂದ ಇಲ್ಲಿ ನೆಲೆ ಕಂಡುಕೊಂಡರು. ಅದೇ ರೀತಿ ದಾವಣಗೆರೆ ಜಿಲ್ಲೆಯು ನೀರಾವರಿ ಹಾಗೂ ಒಣಭೂಮಿ ಪ್ರದೇಶವನ್ನು ಮತ್ತು ಗುಡ್ಡಗಾಡಿನಿಂದ ಕೂಡಿರುವುದರಿಂದ ಚನ್ನಗಿರಿ ತಾಲ್ಲೂಕು ಜಗಳೂರು, ತಾಲೂಕುಗಳಲ್ಲಿ ಕಾಡುಗೊಲ್ಲರು ನೆಲೆ ನಿಂತಿರುವುದನ್ನು ಕಾಣಬಹುದು.

ಇಂದು ಕಾಡುಗೊಲ್ಲರು ಆರಾಧಿಸುವ ದೈವಗಳೆಲ್ಲವೂ ಅವರ ಸಮುದಾಯದ ಸಾಂಸ್ಕೃತಿಕ ನಾಯಕರೇ ಆಗಿದ್ದಾರೆ. ಪಶುಪಾಲನೆಯ ಸಂದರ್ಭದಲ್ಲಿ ತಮ್ಮ ಪಶುಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡಿದ ವೀರರ ಬದುಕಿನ, ಹೋರಾಟದ ಚಿತ್ರಣಗಳನ್ನು ಆ ದೈವಗಳ ಹಬ್ಬ ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಕಾಣುತ್ತೇವೆ. ಗೊಲ್ಲರಲ್ಲಿ ಎರಡು ಪಂಗಡಗಳಿವೆ ೧. ಊರುಗೊಲ್ಲರು ೨ ಕಾಡುಗೊಲ್ಲರು ಊರುಗೊಲ್ಲರು ಊರಿನಲ್ಲಿ ವಾಸವಾಗಿರುತ್ತಾರೆ. ಕೃಷಿ ವ್ಯಾಪಾರ ಇವರ ಮುಖ್ಯ ವೃತ್ತಿ, ಇವರ ಮನೆಮಾತು ಅಡ್ಡ ತೆಲುಗು, ಇವರು ಮೂಲತಃ ಆಂಧ್ರ ಪ್ರದೇಶದಿಂದ ವಲಸೆ ಬಂದಿರಬಹುದು. ಕಾಡುಗೊಲ್ಲರೊಂದಿಗೆ ಯಾವುದೇ ರೀತಿಯ ವೈವಾಹಿಕ ಸಂಬಂಧವನ್ನು ಇವರು ಇಟ್ಟುಕೊಂಡಿಲ್ಲ.

೨. ಕಾಡುಗೊಲ್ಲರು ಊರು ಬಿಟ್ಟು ೧.ಕಿ.ಮೀ ರಿಂದ ೨.ಕಿ.ಮೀ. ದೂರದಲ್ಲಿ ವಾಸವಾಗಿರುತ್ತಾರೆ. ಯಾಕೆಂದರೆ ಇವರ ಆರಾಧ್ಯ ದೈವಗಳು ಸೂತಕವನ್ನು ಇಷ್ಟಪಡುವುದಿಲ್ಲ. ಇವರು ವಾಸಮಾಡುವ ಜಾಗವನ್ನು "ಹಟ್ಟಿ"ಎಂದೂ ಕರೆಯುತ್ತಾರೆ.

ಕಾಡುಗೊಲ್ಲರು ಮೂಲತಃ ಮಾತೃದೇವತೆಗಳ ಆರಾಧಕರು, ವೈಷ್ಣವ ಧರ್ಮದ ಪ್ರಭಾವದಿಂದ ಕಾಡುಗೊಲ್ಲರ ಹೆಂಗಸರು ಗಂಡ ಸತ್ತ ನಂತರ ಕೊರಳ ತಾಳಿ ಮತ್ತು ಕೈ ಬಳೆ ತೆಗೆಯುವುದಿಲ್ಲ. ಶ್ರೀಕೃಷ್ಣನೆ ಗಂಡನೆಂಬ ಕಲ್ಪನೆ ಅವರಲ್ಲಿದೆ. ಆದರೂ ಇವರಲ್ಲಿ ಮಾತೃದೈವಗಳ ಮತ್ತು ಸಮುದಾಯದ ಸಾಂಸ್ಕೃತಿಕ ನಾಯಕರ ಆರಾಧನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿರುವುದು ಇವರಲ್ಲಿ ಕಂಡುಬರುತ್ತದೆ. ವೈಷ್ಣವ ಧರ್ಮದ ಪ್ರಭಾವದ ನಂತರ ಶ್ರೀಕೃಷ್ಣನೇ ಕಾಡುಗೊಲ್ಲರ ಆರಾಧ್ಯದೈವ ಆಗಿರಬಹುದು.

ಅಧ್ಯಯನದ ಉದ್ದೇಶಗಳು:

೧. ಆಧುನೀಕರಣದ ಪ್ರಭಾವದಿಂದ ಕಾಡುಗೊಲ್ಲ ಸಮುದಾಯದ ಮೇಲೆ ಆಗಿರುವ ಪರಿಣಾಮವನ್ನು ಅಭ್ಯಸಿಸುವುದು.

೨. ಕಾಡುಗೊಲ್ಲರ ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡುವುದು.

೩. ಪ್ರಸ್ತುತ ಸಂದರ್ಭದಲ್ಲಿ ಕಾಡುಗೊಲ್ಲರ ಬದುಕಿನ ಮೂಲಭೂತ ಸೌಕರ್ಯಗಳು ಮತ್ತು ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುವುದು.

೪. ಕಾಡುಗೊಲ್ಲರ ಹಬ್ಬ, ಜಾತ್ರೆ, ಆಚರಣೆ, ಸಂಪ್ರದಾಯ ಹಾಗೂ ಧಾರ್ಮಿಕ ನಂಬಿಕೆಗಳ, ಕುರಿತು ಅಧ್ಯಯನ ಮಾಡುವುದು.

೫. ಪ್ರಸ್ತುತ ಸಂದರ್ಭದಲ್ಲಿ ಕಾಡುಗೊಲ್ಲರ ಶೈಕ್ಷಣಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು.

೬. ಸರ್ಕಾರದ, ಅಭಿವೃದ್ದಿಯ ಯೋಜನೆಗಳು ಎಷ್ಟರಮಟ್ಟಿಗೆ ಈ ಸಮುದಾಯಗಳನ್ನು ತಲುಪಿವೆ ಎಂಬುದನ್ನು ಅಧ್ಯಯನ ಮಾಡುವುದು.

ಅಧ್ಯಯನದ ಪ್ರಾಕಲ್ಪನೆಗಳು:

೧. ಇಂದಿನ ಆಧುನಿಕ ದಿನಗಳಲ್ಲಿ ಕಾಡುಗೊಲ್ಲರ ತಮ್ಮ ಮೂಲ ವೃತ್ತಿಗಳಾದ ಪಶುಪಾಲನೆ ಕೃಷಿ ಮತ್ತು ವ್ಯಾಪಾರಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆಯೇ ಅಥವಾ ತಮ್ಮ ಮೂಲ ವೃತ್ತಿಯಲ್ಲಿ ಮುಂದುವರಿದಿದ್ದಾರೆಯೇ ಎಂಬುದನ್ನು ಅಧ್ಯಯನ ಮಾಡುವುದು.

೨. ಈ ಸಮುದಾಯಗಳ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆಯಾಗಿದೆಯೇ ಎಂಬುದನ್ನು ಅಧ್ಯಯನ ಮಾಡುವುದು.

೩. ಕಾಡುಗೊಲ್ಲರ ಮಕ್ಕಳು ಮೂಲಭೂತ ಶಿಕ್ಷಣದಿಂದ ವಂಚಿತರಾಗಲು, ಕಾರಣಗಳೇನು? ಎಂಬುದನ್ನು ಅಧ್ಯಯನ ಮಾಡುವುದು.

೪. ಈ ಸಮುದಾಯದ ಜನರು ರಾಜಕೀಯ ಕ್ಷೇತ್ರದಲ್ಲಿ ಬೆಳವಣಿಗೆ ಹೊಂದಿದ್ದಾರೆಯೇ ಎಂಬುದನ್ನು ಅಧ್ಯಯನ ಮಾಡುವುದು.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕದ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿರುವ ಸಂತೇಬೆನ್ನೂರು ಹೋಬಳಿಯ ದೊಡ್ಡಬ್ಬೀಗೇರೆ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಬರುವ ಗೊಲ್ಲರಹಟ್ಟಿ ಮತ್ತು ಕೋಂಡದ ಹಳ್ಳಿಯಿಂದ ಸುಮಾರು ೨ ಕಿ.ಮೀ. ದೂರವಿರುವ ಗೊಲ್ಲರಹಟ್ಟಿಗಳಲ್ಲಿ ವಾಸವಾಗಿರುವುದರಿಂದ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ನನ್ನ ಅಧ್ಯಯನಕ್ಕಾಗಿ ಈ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರಣಗಳೆಂದರೆ ಇಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಮತ್ತು ಮಧ್ಯಮವರ್ಗದ ಕುಟುಂಬಗಳು ಹಾಗೂ ಶ್ರೀಮಂತ ಕುಟುಂಬಗಳ ಮಿಶ್ರಣವಿರುವುದರಿಂದ ಈ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡಿರುತ್ತೇನೆ ಹಾಗಾಗಿ ಈ ಪ್ರದೇಶಗಳ ಕಾಡುಗೊಲ್ಲರ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ ಸ್ಥಿತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ.

ಅಧ್ಯಯನದ ಮಹತ್ವ:

ಕರ್ನಾಟಕ ರಾಜ್ಯದಲ್ಲಿ ಹಲವಾರು ಸಮುದಾಯಗಳು ನೆಲೆಗೊಂಡಿವೆ. ಅವುಗಳಲ್ಲಿ ಕಾಡುಗೊಲ್ಲ ಸಮುದಾಯಗಳಿಗೆ ಹೋಲಿಸಿದರೆ ಇವರ ಸಾಮಾಜಿಕ ಜೀವನ ಶೈಲಿಯಲ್ಲಿ ಬಹಳಷ್ಟು ವ್ಯತ್ಯಾಸಗಳಿವೆ. ಹಾಗೂ ಹಲವಾರು ಸಮಸ್ಯೆಗಳ ಸುಳಿವಿನಲ್ಲಿ ಸಿಲುಕಿದ್ದಾರೆ. ಕಾಡುಗೊಲ್ಲರು ನಾಗರೀಕ ಸಮಾಜದಿಂದ ಅಥವಾ ಊರು ಪಟ್ಟಣಗಳಿಂದ ದೂರವಿರುವ ಇವರು ತಮ್ಮದೇ ಆದ ಹಟ್ಟಿಗಳನ್ನು ಕಟ್ಟಿಕೊಂಡು ಜೀವನ ನಿರ್ವಹಿಸುತ್ತಾರೆ. ಜೊತೆಗೆ ಇವರು ಇಂದು ಆರ್ಥಿಕವಾಗಿ ಬಡವರಿದ್ದು ಇವರ ಮೂಲವೃತ್ತಿಯಾದ ಪಶುಪಾಲನೆ ಹಾಗೂ ಕುರಿ ಮೇಕೆಯ ಸಾಕಾಣಿಕೆಯಲ್ಲಿ ಇಂದು ಸ್ವಲ್ಪ ಮಟ್ಟಿಗೆ ತೊಡಗಿರುವುದು ಕಂಡುಬರುತ್ತದೆ. ಇತ್ತೀಚಿನ ಆಧುನಿಕ ದಿನಗಳಲ್ಲಿ ಕಾಡುಗೊಲ್ಲರ ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಹಾಗೂ ಹಬ್ಬ ಹರಿದಿನಗಳು ಜಾತ್ರೆಗಳಲ್ಲಿ ಬಹಳ ಭಕ್ತಿಯಿಂದ ಅಥವಾ ಭಯದಿಂದ ಕಟ್ಟುನಿಟ್ಟಿನ ವ್ಯವಸ್ಥೆಯನ್ನು ಆಚರಿಸುತ್ತಿದ್ದಾರೆಯೇ ಅಥವಾ ಸಾಮಾಜಿಕ ಬದಲಾವಣೆ ಯಾಗುತ್ತಿದ್ದಾರೆಯೇ ಎಂಬುದನ್ನು ತಿಳಿಯುವುದು. ಜೊತೆಗೆ ಇಂದು ಶಿಕ್ಷಣವನ್ನು ಕಲಿತು ವಿದ್ಯಾವಂತರಾಗಿದ್ದಾರೆಯೇ ಅಥವಾ ಸರಕಾರಿ ಉದ್ಯೋಗಗಳನ್ನು ಪಡೆದಿದ್ದಾರೆಯೇ ಎಂಬುದನ್ನು ಗಮನಿಸುವುದು. ಈ ರೀತಿ ಪ್ರಸ್ತುತ ದಿನಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಇಂದಿನ ಆಧುನಿಕ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಸಾಮಾಜಿಕ ಬದಲಾವಣೆಯಾಗುತ್ತಿದ್ದಾರೆಯೇ ಎಂಬ ಸಮಸ್ಯೆಗಳನ್ನು ಗಮನಿಸಲು ಇಂತಹ ಸಮುದಾಯಗಳ ಬದುಕಿನ ಚಿತ್ರಣವನ್ನು ಅಧ್ಯಯನ ಮಾಡುವುದು ತುಂಬಾ ಅವಶ್ಯಕವಾಗಿದೆ ಒಟ್ಟಾರೆ ಈ ರೀತಿಯ ದೃಷ್ಟಿಯಿಂದ ಕಾಡುಗೊಲ್ಲ ಸಮುದಾಯದ ಅಧ್ಯಯನದ ಮಹತ್ವವನ್ನು ತಿಳಿಯಬಹುದು.

ಪ್ರಸ್ತುತ ಈ ನಿಬಂಧವು ಒಟ್ಟು ೭ ಅಧ್ಯಯನಗಳನ್ನು ಒಳಗೊಂಡಿದೆ.

ಅಧ್ಯಾಯ: ಒಂದು ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಹತ್ವ

ಕಾಡುಗೊಲ್ಲರ ಕುರಿತು ಇಲ್ಲಿಯವರೆಗೆ ನೆಡೆದಿರುವ ಅಧ್ಯಯನಗಳನ್ನು ಪರಿಶೀಲನೆ ಮಾಡುವುದರ ಜೊತೆಗೆ ಕಾಡುಗೊಲ್ಲರ ಪರಿಚಯ ಮತ್ತು ಇವರ ಭೌಗೋಳಿಕ ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ ಈ ಒಂದು ಸಮುದಾಯಗಳು ನೆಲೆಗೊಂಡಿರುವ ವಿವಿಧ ಸ್ಥಳಗಳ ಪರಿಚಯ ಮಾಡುವುದು. ಇಲ್ಲಿಯವರೆಗೆ ನಡೆದಂತಹ ಸಮೀಕ್ಷಾ ವರದಿಗಳನ್ನು, ಲೇಖನಗಳನ್ನು, ನಿಬಂಧ ರಚನೆಯ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ: ಎರಡು ಸಮುದಾಯದ ಪರಿಚಯ

ಈ ಅಧ್ಯಯನದಲ್ಲಿ ಕರ್ನಾಟಕದಲ್ಲಿ ಕಾಡುಗೊಲ್ಲರ ನೆಲೆಯ ಬಗ್ಗೆ ಅವರು ವಾಸವಿರುವ ತಾಲ್ಲೂಕುಗಳ ಮತ್ತು ಊರುಗಳ ಹೆಸರುಗಳು ಮತ್ತು ಜನಸಂಖ್ಯೆಯ ಬಗ್ಗೆ ಪರಿಚಯಿಸಲಾಗಿದೆ.

ಅಧ್ಯಾಯ: ಮೂರು ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು

ಈ ಅಧ್ಯಯನದಲ್ಲಿ ಕಾಡುಗೊಲ್ಲರು ಹುಟ್ಟಿನಿಂದ ಸಾವಿನ ವರೆಗೆ ನಡೆಸುವ ಆಚರಣೆಗಳು ಹೇಗಿವೆ ಎಂಬುದನ್ನು ಕುರಿತು ಮತ್ತು ಆಧುನಿಕತೆಯ ಇಂದಿನ ಸಂದರ್ಭದಲ್ಲಿ ಅವರ ಈ ಆಚರಣೆಗಳಲ್ಲಿ ಯಾವ ರೀತಿಯ ಬದಲಾವಣೆಗಳಾಗುತ್ತಿವೆ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಂಡು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ: ನಾಲ್ಕು ಆರ್ಥಿಕ ಮತ್ತು ಶೈಕ್ಷಣಿಕ ಬದುಕಿನ ಸ್ಥಿತ್ಯಂತರಗಳು

ಕಾಡುಗೊಲ್ಲರ ಮೂಲ ವೃತ್ತಿಯಿಂದ ಹಿಡಿದು ಕೃಷಿ ಪಶುಪಾಲನೆಯಲ್ಲಿ ಹಿಂದೆ ಯಾವ ರೀತಿ ಬದುಕಿದ್ದರು ಮತ್ತು ಇತ್ತೀಚಿನ ಆಧುನಿಕ ಯುಗದಲ್ಲಿ ಯಾವ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದಾರೆಯೇ ಎಂಬುದನ್ನು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾವಂತರಾಗಿದ್ದಾರೆಯೇ ಎಂಬುದನ್ನು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಂಡು ವಿವರಿಸಲಾಗಿದೆ.

ಅಧ್ಯಾಯ: ಐದು ಧಾರ್ಮಿಕ ಸಾಂಸ್ಕೃತಿಕ ಮತ್ತು ರಾಜಕೀಯ ಬದುಕಿನ ಸ್ಥಿತ್ಯಂತರಗಳು

ಈ ಪ್ರಸ್ತುತ ಅಧ್ಯಯನದಲ್ಲಿ ಧಾರ್ಮಿಕ ನಂಬಿಕೆ ಆಚರಣೆಗಳ ಬಗ್ಗೆ ದೈವರಾಧನೆ, ಜಾತ್ರೆ, ರಾಜಕೀಯದಲ್ಲಿ ಮೀಸಲಾತಿ ರಾಜಕೀಯ ಕ್ಷೇತ್ರದಿಂದ ಕಾಡುಗೊಲ್ಲರು ಸ್ಪರ್ಧಿಸುತ್ತಿದ್ದಾರೆಂಬುದನ್ನು ಈ ಒಂದು ಕ್ಷೇತ್ರ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಾಯ: ಆರು ಕಾಡುಗೊಲ್ಲರ ಸಮಸ್ಯೆ ಮತ್ತು ಪರಿಹಾರೋಪಾಯಗಳು

ಈ ಅಧ್ಯಯನದಲ್ಲಿ ಕಾಡುಗೊಲ್ಲರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆಯೇ ಅಥವಾ ಸರ್ಕಾರದಿಂದ ಇವರಿಗೆ ಮೂಲಭೂತ ಸೌಲಭ್ಯಗಳು ದೊರಕಿದವೆಯೇ ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡು ವಿವರಿಸಲಾಗಿದೆ.

ಅಧ್ಯಾಯ: ಏಳು ಸಮಾರೋಪ

ಅಧ್ಯಯನದ ವಿಧಾನಗಳು:

೧ ಕ್ಷೇತ್ರ ಕಾರ್ಯ ವಿಧಾನ:

ಕಾಡುಗೊಲ್ಲರ ಬದುಕಿನ ಆಚರಣೆ ಸಂಪ್ರದಾಯ ಉಡುಗೆ-ತೊಡುಗೆ ನಂಬಿಕೆ ಮತ್ತು ಧಾರ್ಮಿಕ ಸ್ಥಿತ್ಯಂತರಗಳ ಅಧ್ಯಯನಕ್ಕಾಗಿ ಈ ಸಮುದಾಯಗಳ ಹಿರಿಯರು ಮತ್ತು ಕಿರಿಯರನ್ನು ಭೇಟಿಯಾಗಿ ಅವರಿಂದ ಅವರ ಪಶುಪಾಲನೆ ಕುರಿಸಾಕಾಣಿಕೆ ವೃತ್ತಿಯ ಆಚರಣೆಗಳಲ್ಲಿರುವ ಸ್ಥಿತ್ಯಂತರಗಳ ಬಗ್ಗೆ ಮಾಹಿತಿಯನ್ನು ವ್ಯವಸ್ಥಿತವಾಗಿ ಅಕ್ಷರಗಳ ಜೋಡಣೆಯಿಂದ ಅರ್ಥವಾಗುವ ಅಥವಾ ಸರಳ ರೀತಿಯಲ್ಲಿ ವರ್ಗೀಕರಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

೨. ಪ್ರಶ್ನಾವಳಿ ವಿಧಾನ:

ಕಾಡುಗೊಲ್ಲರ ಸ್ಥಿತ್ಯಂತರಗಳನ್ನು ಕುರಿತು ಅಧ್ಯಯನ ಮಾಡುವುದಕ್ಕಾಗಿ, ಸುದೀರ್ಘವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ಎರಡು ಗ್ರಾಮಗಳನ್ನು ಸೂಕ್ಷ್ಮ ಸಮೀಕ್ಷೆಗೆ ಒಳಪಡಿಸಲಾಗಿದೆ. ಈ ಪ್ರಶ್ನಾವಳಿಯಿಂದ ಅಥವಾ ಮಾಹಿತಿದಾರರಿಂದ ಮಾಹಿತಿ ಸಂಗ್ರಹಿಸಿ ಅದನ್ನು ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೩. ಅವಲೋಕನ ವಿಧಾನ:

ಕಾಡುಗೊಲ್ಲರ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆ ಮಾಹಿತಿ ಪಡೆಯಲು ಕ್ಷೇತ್ರಕಾರ್ಯದಲ್ಲಿ ಅವಲೋಕನ ವಿಧಾನವು ಮುಖ್ಯವಾದುದು, ಅವಲೋಕನವು ಸಾಮಾಜಿಕ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಗಾಗಿ ಬಳಸಲಾಗುತ್ತಿರುವ ಮುಖ್ಯ ತಂತ್ರ ಸಾಧನಗಳಲ್ಲೊಂದು ಪ್ರಶ್ನಾವಳಿ ಮತ್ತು ಸಂದರ್ಶನದ ಅವಧಿಯಲ್ಲಿ ಕಂಡುಬರುವ ಕೆಲವು ಸಮಸ್ಯೆಗಳನ್ನು ಅವಲೋಕನದ ಮೂಲಕ, ಬಗೆಹರಿಸಿಕೊಳ್ಳಲು, ಸಾಧ್ಯವಾಗುತ್ತದೆ ಕಾಡುಗೊಲ್ಲರ ಜೊತೆಯಲ್ಲಿ ಸಹಭಾಗಿಯಾಗಿ ಸಮುದಾಯದ ಅಂತರಾಳದಲ್ಲಿ ಹುದಗಿರುವ ಮಾಹಿತಿ ಹಾಗೂ ಪ್ರಸ್ತುತ ಇವರ ಬದುಕಿನ ಸಮಸ್ಯೆ ಸವಾಲುಗಳನ್ನು ಕುರಿತು ಮಾಹಿತಿಯನ್ನು ತಿಳಿದು ಅಧ್ಯಯನಕ್ಕೆ ಪೂರಕವಾಗಿ, ಕಟ್ಟಿಕೊಳ್ಳಲಾಗಿದೆ.

೪ ಸಂದರ್ಶನ ವಿಧಾನ:

ಕಾಡುಗೊಲ್ಲರ ಬದುಕಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಆಚರಣೆ ನಂಬಿಕೆಗಳಲ್ಲಿ ಹಾಗೂ ಹಬ್ಬ, ಜಾತ್ರೆ, ಹರಿದಿನಗಳಲ್ಲಿ ಇಟ್ಟರುವ ನಂಬಿಕೆಯನ್ನು ತಿಳಿಯುವುದಕ್ಕೋಸ್ಕರ ಪ್ರಶ್ನಾವಳಿ ಮಾಡಿಕೊಂಡು ಸಮುದಾಯದ ಹಿರಿಯರು ಸ್ತ್ರೀಯರು, ಯುವಕರು,ಮುಂತಾದವರಲ್ಲಿ ಸಂದರ್ಶನ ನಡೆಸಲಾಗಿದೆ. ಸಮುದಾಯದ ಸಂದರ್ಶನದ ಸಮಯದಲ್ಲಿ ಅವರು ಹೇಳಿಕೊಂಡ ಸಮಸ್ಯೆಗಳನ್ನು ಬದುಕಿನ ಚಿತ್ರಣವನ್ನು ಮೂಡಿಸುವ, ಗುಡಾರ, ಮನೆ, ವೇಷ ಭೂಷಣ, ಕುರಿ ಸಂಗೋಪನೆ, ದೈವಚಾರಣೆ ಇತ್ಯಾದಿಗಳನ್ನು

ಅಧ್ಯಯನದ ಮಾಹಿತಿಗಾಗಿ ಬಳಸಿಕೊಂಡು ಅವರ ಧ್ವನಿ ಮುದ್ರಿತ ಹಾಗೂ ಛಾಯ ಚಿತ್ರಗಳನ್ನು ಪ್ರಬಂಧ ರಚನೆಗೆ ಬಳಸಿಕೊಳ್ಳಲಾಗಿದೆ.

೫. ಸಂಖ್ಯಾಶಾಸ್ತ್ರೀಯ ವಿಧಾನ:

ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಅಂಕಿ ಸಂಖ್ಯೆಗಳ ವಿಷಯಕ್ಕೆ ಸಂಬಂಧಿಸಿದಂತೆ ವರ್ಗೀಕರಣ ಮಾಡಿ ಅನೇಕ ಕೋಷ್ಟಕಗಳನ್ನು ಸಿದ್ದಪಡಿಸಲಾಗಿದೆ.

ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ:

ಕಾಡುಗೊಲ್ಲ ಸಮುದಾಯವನ್ನು ಕುರಿತಂತೆ ವಿದೇಶಿ ಸಂಶೋಧಕರು ಸೇರಿದಂತೆ ಹಲವಾರು ವಿದ್ವಾಂಸರು, ಸಂಶೋಧಕರು ಸಮಾಜಶಾಸ್ತ್ರಜ್ಞರು, ಮತ್ತು ಮಾನವಶಾಸ್ತ್ರಜ್ಞರು, ಲೇಖನ ಮತ್ತು ಕೃತಿಗಳನ್ನು ರಚಿಸಿದ್ದಾರೆ ಮತ್ತು ಸಮಾಜ ಶಾಸ್ತ್ರಜ್ಞರು ಈ ಸಮುದಾಯಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇಂತಹ ಕೃತಿಗಳಲ್ಲಿ ಕೆಲವು ಪಿಎಚ್.ಡಿ ಸಂಶೋಧನೆ ಮಾಡಿ ಪುಸ್ತಕಗಳ ರೂಪದಲ್ಲಿ ಪ್ರಕಟಿತವಾದವುಗಳಾಗಿದ್ದರೆ ಮತ್ತು ಕೆಲವು ಜನಾಂಗೀಯ, ಅಥವಾ ಕುಲಶಾಸ್ತ್ರೀಯ, (Ethnographic) ಅಧ್ಯಯನಗಳಾಗಿವೆ ಕೆಲವೊಂದು ಮಾನವಶಾಸ್ತ್ರೀಯ (Anthropological studies) ಅಧ್ಯಯನಗಳು, ಆಗಿವೆ, ಅನೇಕ ಲೇಖನಗಳು ದಿನಪತ್ರಿಕೆ, ವಾರಪತ್ರಿಕೆ ತ್ರೈಮಾಸಿಕ ಮುಂತಾದ ಪತ್ರಿಕೆಗಳಲ್ಲಿ ಕಾಡುಗೊಲ್ಲರ ಸಾಮಾಜಿಕ ಜೀವನ ಮತ್ತು ಅವರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಉಲ್ಲೇಖವಿದೆ. ಕಾಡುಗೊಲ್ಲರ ಲಿಖಿತ ಚರಿತ್ರೆ ಕುಲಶಾಸ್ತ್ರೀಯ ಅಧ್ಯಯನದ, ಬಗ್ಗೆ ಬೆಳಕು ಚೆಲ್ಲಿ ಕೃತಿ ಮತ್ತು ಲೇಖನ, ಪ್ರಕಟಿಸಿರುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಗುರುಲಿಂಗಯ್ಯ.ಎಂ ಮತ್ತು ನಾಗಪ್ಪ.ವಿ “ಕಾಡುಗೊಲ್ಲ” (೨೦೦೮) ಎಂಬ ಕೃತಿಯಲ್ಲಿ ಕಾಡುಗೊಲ್ಲರು ಕರ್ನಾಟಕದಲ್ಲಿ ಯಾವ ಪ್ರದೇಶಗಳಲ್ಲಿ ನೆಲೆ ನಿಂತಿದ್ದಾರೆ. ಮತ್ತು ಅವರ ನೆಲೆಗಳ ಹೆಸರುಗಳು ಹಾಗೂ ಸಂಪ್ರದಾಯ, ಆಚರಣೆ, ನಂಬಿಕೆ, ನ್ಯಾಯ ಪಂಚಾಯಿತಿ, ಸಾಹಿತ್ಯ ಮತ್ತು ಭಾಷೆ ಅವರ ಸಾಂಸ್ಕೃತಿಕ ಕಲೆಗಳ ಬಗ್ಗೆ ಹಾಗೂ ಕಾಡುಗೊಲ್ಲರ ಸಮಸ್ಯೆ ಮತ್ತು ಪರಿಹಾರಗಳ ಬಗ್ಗೆ ಸ್ಪಷ್ಟವಾಗಿ ವಿವರಣೆಯನ್ನು ನೀಡಿದ್ದಾರೆ.

ಚಲುವರಾಜು ಅವರು ಕಾಡುಗೊಲ್ಲರ ಸಾಂಸ್ಕೃತಿಕ ವೀರನಾದ “ಜುಂಜಪ್ಪನ ಕಾವ್ಯ”ವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಕೋಟ್ಯಾಂತರ ದೈವಗಳನ್ನು ಆರಾಧಿಸುವ ಪರಂಪರೆ ಇದೆ. ದೈವಗಳ ಚರಿತ್ರೆಗಳು ಕಲ್ಪನಾ ತೀತವಾಗಿವೆ. ಆದರೆ ಬುಡಕಟ್ಟು ಸಮುದಾಯಗಳು ಆರಾಧಿಸುವ ದೈವಗಳು ನಮ್ಮ ನಡುವೆ ಬಾಳಿ ಬದುಕಿ ಹೋರಾಟದ ಮೂಲಕ ಆ ಸಮುದಾಯಗಳಿಗೆ ನೆಲೆ ತಂದು ಕೊಟ್ಟ ಸಾಂಸ್ಕೃತಿಕ ನಾಯಕರನ್ನೇ ತಮ್ಮ ಆರಾಧ್ಯ ದೈವವಾಗಿ ಪೂಜಿಸುತ್ತಿದ್ದಾರೆ. ಅಂಥವರಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಜುಂಜಪ್ಪನು ಒಬ್ಬ ಅವನ ಹುಟ್ಟು ಬೆಳವಣಿಗೆ ವೃತ್ತಿ ಸಾಹಸ ಪವಾಡ ಹೋರಾಟಗಳನ್ನು ಕುರಿತು ಮೌಖಿಕ ಸಂಪ್ರದಾಯದಲ್ಲಿರುವ ಕಾವ್ಯ ಇದಾಗಿದೆ.

ಕಾಳೇಗೌಡ ನಾಗವಾರ ಎನ್.ಹುಚ್ಚಪ್ಪ ಮಾಸ್ತರವರ ಸಂಪಾದಕತ್ವದಲ್ಲಿ ಪ್ರಕಟಿಸಿದ "ಗಿರಿಜನ ಸಂಸ್ಕೃತಿ" (೨೦೦೦) ಎಂಬ ಗ್ರಂಥದಲ್ಲಿ ಮೀರಾಸಾಬಿಹಳ್ಳಿ ಶಿವಣ್ಣನವರು "ಎತ್ತಪ್ಪನ ಸಂಪ್ರದಾಯ" ಎಂಬ ಲೇಖನ ಪ್ರಕಟಿಸಿದ್ದಾರೆ. ಹೆತ್ತ ತುಪ್ಪದಲ್ಲಿ ಹುಟ್ಟಿರತಕ್ಕಂತ ಎತ್ತಪ್ಪ ಕಾಡುಗೊಲ್ಲ ಜನಾಂಗದ ಪ್ರಥಮ ಸಾಂಸ್ಕೃತಿಕ ಬುಡಕಟ್ಟು ವೀರನಾಗಿದ್ದು ಎತ್ತಪ್ಪನನ್ನು ನೆನೆಯುವ ಗೂಡಿನ ಹಬ್ಬವನ್ನು ಹಾಲು ಮೀಸಲು ಸಂಪ್ರದಾಯವನ್ನು ಚರ್ಚಿಸಿದ್ದಾರೆ ಪಶುಪಾಲನೆ ಸಂಸ್ಕೃತಿಯ ಜುಂಜಪ್ಪನ ಸಂಪ್ರದಾಯಕ್ಕಿಂತ ಭಿನ್ನವಾಗಿದ್ದನ್ನು ಹಾಗೂ ಎತ್ತಪ್ಪನ ಸಂಪ್ರದಾಯದ ವೈಶಿಷ್ಟತೆಯನ್ನು ಚರ್ಚಿಸಿದ್ದಾರೆ.

ಕೆ.ಎಂ.ಮೈತ್ರಿ ಅವರು ಸಂಪಾದಿಸಿದ "ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ"(೧೯೯೭)ರಲ್ಲಿ ಕಾಡುಗೊಲ್ಲರ ಸಮುದಾಯದ ಕಲಾವಿದರನ್ನು ಪರಿಚಯಿಸುವುದರ ಜೊತೆಗೆ ಕಾಡುಗೊಲ್ಲರ ಸಮುದಾಯದಲ್ಲಿರುವ ಮೌಖಿಕ ಕಥನಗಳಲ್ಲಿ ಅವರ ಸಾಂಸ್ಕೃತಿಕ ನಾಯಕರ ಮತ್ತು ಆರಾಧ್ಯ ದೈವಗಳ ಮಹಿಮೆಯನ್ನು ಕೊಂಡಾಡಿದ್ದಾರೆ. ಅವರಲ್ಲಿ ಎತ್ತಯ್ಯ, ಚಿತ್ತಯ್ಯ, ಈರಣ್ಣ, ಬೋಮ್ಮಲಿಂಗಯ್ಯ, ಗೌರಸಂದ್ರಮಾರೆಮ್ಮ, ತಿರುಪತಿತಿಮ್ಮಪ್ಪ, ಹಾಗೂ ಅಭಿಮನ್ಯುವನ್ನು ಕುರಿತಾದ ಬಿಡಿ ಬಿಡಿಯಾದ ಕಥನ ಕಾವ್ಯಗಳಿವೆ.

ಅಂಬಳಿಕೆ ಹಿರಿಯಣ್ಣನವರು "ಕಾಡುಗೊಲ್ಲರ ಜನಪದ ಗೀತೆಗಳು"ಎಂಬ ಕೃತಿಯಲ್ಲಿ ಕಾಡುಗೊಲ್ಲರ ಪಂಚ ದೈವಗಳಾದ ಕ್ಯಾತಲಿಂಗ ಪಾತೇಲಿಂಗ ಕಾಟಂಲಿಂಗರನ್ನು ಕುರಿತಾದ ಗೀತೆಗಳನ್ನು ಸಂಗ್ರಹಿಸಿದ್ದಾರೆ ಕಾಡುಗೊಲ್ಲರ ಮದುವೆ ಹಾಡು, ಪದಗಳು, ಅವರ ಆರಾಧ್ಯ ದೈವಗಳಾದ ಕರಿಓಬೇನಹಳ್ಳಿ ಮಾರಕ್ಕ ಮಾಯಸಂದ್ರದ ಕರಿಯಮ್ಮ ರಂಗಪ್ಪ ಮೊದಲಾದವರನ್ನು ಕುರಿತಾದ ಹಾಡುಗಳನ್ನು ಸಂಗ್ರಹಿಸುವುದರ ಜೊತೆಗೆ ತ್ರಿಪದಿಗಳಲ್ಲಿ ಅಡಗಿರುವ ಜುಂಜಪ್ಪನ ಸಾಹಿತ್ಯವನ್ನು ಕಲೆಹಾಕಿದ್ದಾರೆ.

ತೀ.ನಂ ಶಂಕರನಾರಾಯಣರವರು "ಕಾಡುಗೊಲ್ಲರ ನಂಬಿಕೆಗಳು ಮತ್ತು ಸಂಪ್ರದಾಯಗಳು" (೧೯೮೨) ಎಂಬ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪ್ರಕಟಿಸಲಾಗಿದೆ. ಈ ಕೃತಿ ಇದುವರೆಗೂ ನಡೆದ ಅಧ್ಯಯನಗಳಲ್ಲಿ ಅತ್ಯಂತ ಮಹತ್ವವಾಗಿದ್ದು ಕಾಡುಗೊಲ್ಲರನ್ನು ಕುರಿತು ಸವಿಸ್ತಾರವಾದ ಮಾಹಿತಿಯನ್ನು ವಿಶ್ಲೇಷಣೆಯೊಂದಿಗೆ ವಿವರಿಸಿದ್ದಾರೆ. ಕಾಡುಗೊಲ್ಲರನ್ನು ಕುರಿತು ವಿಮರ್ಶಾತ್ಮಕವಾಗಿ ಸಂಶೋಧನೆ ಕೈಗೊಂಡ ಅತ್ಯುತ್ತಮ ಅಧ್ಯಯನವಾಗಿದೆ. ಈ ಕೃತಿಯಲ್ಲಿ ಕಾಡುಗೊಲ್ಲರ ಹುಟ್ಟಿನಿಂದ ಸಾಯುವವರೆಗೂ ನಡೆಸುವ ಎಲ್ಲ ಸಂಪ್ರದಾಯ ಆಚರಣೆಗಳನ್ನು ವಿವರಿಸಲಾಗಿದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಎತ್ತಪ್ಪ ಮತ್ತು ಜುಂಜಪ್ಪನನ್ನು ಕುರಿತಾದ ಸೃಷ್ಠಿ ಪುರಾಣಗಳನ್ನು ಹಾಗೂ ಇವರು ದೈವವಾಗಿ ಕಾಣಿಸಿಕೊಂಡ ಬಗೆಯನ್ನು ವಿವರಿಸಲಾಗಿದೆ. ಹಾಗೂ ಕಾಡುಗೊಲ್ಲರು ಇತರೆ ಸಮುದಾಯಗಳ ಜೊತೆ ಹೊಂದಿರುವ ಬಾಂಧವ್ಯಗಳನ್ನು ಕುರಿತು ಚರ್ಚಿಸಿದ್ದಾರೆ.

ಮೀರಾಸಾಬಿಹಳ್ಳಿ ಶಿವಣ್ಣ ಅವರ ಕೃತಿಯಾದ "ಕಾಡುಗೊಲ್ಲರ ಸಂಸ್ಕೃತಿ" (೨೦೦೪) ಎಂಬ ಗ್ರಂಥದಲ್ಲಿ ಕಾಡುಗೊಲ್ಲರ ಮೂಲ ವೃತ್ತಿ ಪಶುಪಾಲನೆ, ಇಂದು ಯಾವ ಹಂತದಲ್ಲಿದೆ, ಆಧುನಿಕತೆಯ ಪರಿಸರದಲ್ಲಿ ಕಾಡುಗೊಲ್ಲರ ಪಶುಪಾಲನೆ ಯಾವ ಕಡೆ ಸಾಗುತ್ತದೆ. ಅವರ ಸಮಸ್ಯೆಗಳೇನು ಈ ಸಮುದಾಯದ ಸಾಂಸ್ಕೃತಿಕ ನಾಯಕರಾದ ಎತ್ತಪ್ಪ ಮತ್ತು ಜುಂಜಪ್ಪನ ಪಶುಪಾಲನೆಯ ವಿವರಗಳನ್ನು ಅವರ ಹೋರಾಟವನ್ನು ವಿವರಿಸುವುದರ ಜೊತೆಗೆ ಕಾಡುಗೊಲ್ಲರ ಸಂಪೂರ್ಣ ಜೀವನ ಕ್ರಮವನ್ನು ಚರ್ಚಿಸಿದ್ದಾರೆ.

ಮೀರಾಸಾಬಿಹಳ್ಳಿ ಶಿವಣ್ಣ ಅವರು ರಚಿಸಿದ "ಗೊಲ್ಲಕಡಗ" (೧೯೯೯) ಎಂಬ ಗ್ರಂಥದಲ್ಲಿ ಕಾಡುಗೊಲ್ಲರ ನೆಲೆಗಳು ಪ್ರಸಿದ್ದ ಕುಲದೇವರುಗಳು ರವಿಕೆ ರಹಿತ ಸಂಪ್ರದಾಯ ಮತ್ತು ಎತ್ತಪ್ಪನ ಸಂಪ್ರದಾಯವನ್ನು ವಿವರಿಸಿದ್ದಾರೆ. ಕಾಡುಗೊಲ್ಲರ ಸಂಪ್ರದಾಯ ಆಚರಣೆಗಳಲ್ಲದೇ ಎರಡು ವಿಶಿಷ್ಟ ಸಂಪ್ರದಾಯಗಳ ಬಗ್ಗೆ ವಿವರಿಸಿದ್ದಾರೆ. ಕಾಡುಗೊಲ್ಲರಲ್ಲಿಯ ಊದುಗಣಿ ಢಗಮು ಇವು ರೋಚಕ ಜನಪದ ವಾದ್ಯಗಳು ಇವುಗಳ ಬಗ್ಗೆ ವಿಶ್ಲೇಷಣೆ ನೀಡಿದ್ದಾರೆ. ಕಾಡು ಗೊಲ್ಲರ ಸಮುದಾಯವು ಜಾನಪದೀಯ ನೆಲೆಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದೆ ಅದು ಈಗ ಚರಿತ್ರೆಯನ್ನಾಗಿ ಹೇಗೆ ಕಟ್ಟಿಕೊಳ್ಳುತ್ತಿದೆ ಮತ್ತು ತನ್ನ ಸಮುದಾಯದ, ವೈಶಿಷ್ಟತೆಯನ್ನು ಹೇಗೆ ಕಾಪಾಡಿಕೊಳ್ಳುತ್ತಿದೆ ಎಂಬುದನ್ನು ಚರ್ಚಿಸಿದ್ದಾರೆ.

ಎ.ಎಸ್. ಪ್ರಭಾಕರ ಸಂಪಾಧಿಸಿದ "ಆದಿವಾಸಿ ಆಖ್ಯಾನ" (೨೦೦೬) ಎಂಬ ಗ್ರಂಥದಲ್ಲಿ, ಡಾ. ಕಾಳೇಗೌಡ ನಾಗವಾರವರು "ಕಾಡುಗೊಲ್ಲರ ಬದುಕಿನ, ಅರ್ಥವ್ಯವಸ್ಥೆ" ಎಂಬ ಲೇಖನವಿದೆ ಇಲ್ಲಿ ಕಾಡುಗೊಲ್ಲರು ಮೂಲವೃತ್ತಿ ಬೇಟೆ, ಪಶುಪಾಲನೆ ಮಾಡುತ್ತಿದ್ದು ಆನಂತರ ವ್ಯವಸಾಯ ಕೈಗೊಳ್ಳತೊಡಗಿದರು ಈಗ, ಅವರು ತಮ್ಮ ವೃತ್ತಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆ ಹಾಗೂ ಪರಿಹಾರಗಳನ್ನು ಕುರಿತು ವಿವರಿಸಿದ್ದಾರೆ.

ಪ್ರೊ.ಎಚ್.ಜೆ. ಲಕ್ಕಪ್ಪಗೌಡರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದಿರುವ "ಕರ್ನಾಟಕ ಬುಡಕಟ್ಟುಗಳು ಸಂಪುಟ–೧(೧೯೯೮)ರಲ್ಲಿ ಡಾ. ಕೃಷ್ಣಮೂರ್ತಿ ಹನೂರು ಅವರ "ಕಾಡುಗೊಲ್ಲ ಎಂಬ ಲೇಖನವಿದೆ. ಇದರಲ್ಲಿ ಕಾಡುಗೊಲ್ಲರ ಹಟ್ಟಿಯ ರಚನೆ ಜೀವನ ಕ್ರಮ, ಅವರ ಆಚರಣೆ ಸಂಪ್ರದಾಯಗಳ ಮಾಹಿತಿ ಜೊತೆಗೆ, ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳ ವಿಶ್ಲೇಷಣೆ ಹಾಗೂ ಕುಟುಂಬ ನ್ಯಾಯ ವ್ಯವಸ್ಥೆಯ ಜೊತೆಗೆ, ಕಲೆ ಸಾಹಿತ್ಯ ವೈದ್ಯ ಪದ್ಧತಿ, ಮತ್ತು ಅವರ, ಸಮುದಾಯದಲ್ಲಿ ಪ್ರಚಲಿತವಿರುವ ಪುರಾಣ ಮತ್ತು ಸಾಂಸ್ಕೃತಿಕ, ವೀರರ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

ಗಂಗಾಧರ ದೈವಜ್ಞರವರ "ಬುಡಕಟ್ಟು ಸಮಾಜ ಹುಟ್ಟು ಸಾವು ನಡುವೆ" (೨೦೦೦) ಎಂಬ ಕೃತಿಯಲ್ಲಿ ಕಾಡುಗೊಲ್ಲರ ಸೃಷ್ಠಿ ಪುರಾಣದಲ್ಲಿ ಅವರ ಮೂಲಪುರುಷರು ಹೇಗೆ ಜನ್ಮತಾಳಿದರು ಅವರ ಸೃಷ್ಠಿಯಿಂದ ಕಾಡುಗೊಲ್ಲರ ಸಂತತಿ ಹೇಗೆ ಬೆಳೆಯಿತು. ಈ

ಸಮುದಾಯದಲ್ಲಿ ಹುಟ್ಟಿನಿಂದ ಸಾಯುವವರೆಗೆ ಆಚರಿಸುವ ಆಚರಣೆಗಳು ಹೇಗಿವೆ ಹಾಗೂ ಸಾವಿನ ನಂತರದ ಆಚರಣೆಗಳನ್ನು ದೆವ್ವ ಭೂತಗಳ ಪರಿಕಲ್ಪನೆಗಳನ್ನು ವಿವರಿಸಿದ್ದಾರೆ.

ಸಣ್ಣ ಓಬಯ್ಯ ಎಸ್.ಕೆ ಅವರು "ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು"(೨೦೦೨) ಒಂದು ಸಮಾಜಶಾಸ್ತ್ರೀಯ ಅಧ್ಯಯನ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧದಲ್ಲಿ ಮ್ಯಾಸಬೇಡರ ಆಚರಣೆಗಳಿಗೂ ಕಾಡುಗೊಲ್ಲರ ಆಚರಣೆಗಳ ನಡುವೆ ಇರುವ ವ್ಯತ್ಯಾಸ ಮತ್ತು ಮ್ಯಾಸ ಬೇಡರ ಬಳಿ, ಕುಲ, ಬೆಡಗುಗಳ ಬಗ್ಗೆ ಹಾಗೂ ಕಾಡುಗೊಲ್ಲರ ೭೩ ಬೆಡಗುಗಳನ್ನು ಸ್ಪಷ್ಟವಾಗಿ ಹೆಸರಿಸಿದ್ದಾರೆ, ಜೊತೆಗೆ ಇವರು ಕಾಡುಗೊಲ್ಲರ ಆಚರಿಸುವ ಹಬ್ಬಗಳ ಬಗ್ಗೆ ವಿವರಣೆ ನೀಡಿದ್ದಾರೆ. ಮತ್ತು ಬದುಕಿನ ಸಂಬಂಧ ಅಥವಾ ಸಂಘರ್ಷಗಳನ್ನು ವಿವರಿಸಿದ್ದಾರೆ.

ಕಾಳೇಗೌಡ ನಾಗವಾರ ಅವರು "ಕಾಡುಗೊಲ್ಲರ ಹಟ್ಟಿಯೊಂದರ ಜನಪದ ಸಾಹಿತ್ಯ" ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇಲ್ಲಿ ಕಾಡುಗೊಲ್ಲರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಸಮಸ್ಯೆಗಳನ್ನು ವಿವರಿಸುವುದರ ಜೊತೆಗೆ ಕಾಡುಗೊಲ್ಲರ ಸಾಂಸ್ಕೃತಿಕ ನೆಲೆ ವೀರನಾದ ಜುಂಜಪ್ಪನ ಸಾಹಸವನ್ನು ವಿವರಿಸಿದ್ದಾರೆ.

ಲೂಯಿಸ್.ಎ.ಎ.ಡಿ ಅವರು "tribes of mysore" ನಲ್ಲಿ ೨೭ ಬುಡಕಟ್ಟುಗಳನ್ನು ಗುರುತಿಸಿದ್ದಾರೆ. ಇದರಲ್ಲಿ ಕಾಡುಗೊಲ್ಲ ಸಮುದಾಯವು ಸಹ ಒಂದು ಬುಡಕಟ್ಟು ಎಂದು ಪರಿಗಣಿಸಿದ್ದಾರೆ. ಯಾವುದೇ ಒಂದು ಬುಡಕಟ್ಟು ಎಂದು ಕರೆಯಿಸಿಕೊಳ್ಳಬೇಕಾದರೆ ಭಾರತ ಸರ್ಕಾರ "The Central Tribal Advisory Boardನ ಅಧ್ಯಕ್ಷರು "The All India Nomadica Tribal Enquirey Commity" ಸದಸ್ಯರಾಗಿದ್ದು ಇವರ ಕಾಡುಗೊಲ್ಲರ ಭಾಷೆಯಲ್ಲಿ ಉರ್ದು, ಮರಾಠಿ ಮತ್ತು ಕನ್ನಡ ಶಬ್ಧಗಳಿಂದ ತುಂಬಿದೆ ಎಂದು ಹೇಳಿರುವುದು ಸೂಕ್ತವಲ್ಲವೆಂದೇ ಹೇಳಬಹುದು. ಆದರೆ ಇದು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಲ್ಲ. ಹಿಂದುಳಿದ ವರ್ಗಗಳಲ್ಲಿ(Back Ward Classes) ಅರೆ ಅಲೆಮಾರಿ ಬುಡಕಟ್ಟು(Semi Nomadic Tribe) ವರ್ಗಕ್ಕೆ ಹಿಂದೆ ಸೇರಿಸಿದ್ದರು. ಈಗ ಅದನ್ನು ಹಿಂದುಳಿದ ಬುಡಕಟ್ಟು(Back Ward) ಗುಂಪಿಗೆ ಸೇರಿಸಿದ್ದಾರೆ.

ಎಡ್ಗರ್ ಥರಸ್ಟನ್ ಮತ್ತು ಕೆ.ರಂಗಚಾರಿಯವರು (೧೯೮೭) ತಮ್ಮ "Castes and Tribes of Southern India" ಎಂಬ ಕೃತಿಯಲ್ಲಿ ಕಾಡುಗೊಲ್ಲರ ಬಗ್ಗೆ ಮೂರು ಪುಟಗಳಲ್ಲಿ ವಿವರಿಸುತ್ತಾ ಕಾಡುಗೊಲ್ಲ ಸಮುದಾಯವು ಬುಡಕಟ್ಟು ಪಂಗಡವಾಗಿದೆ ಎಂದು ಇದನ್ನು ೧೮೯೧ ಮತ್ತು ೧೯೦೧ ರಲ್ಲಿ ದೊರೆತ ಮಾಹಿತಿಯನ್ನು ಆಧರಿಸಿ ವಿವರಿಸಿದ್ದಾರೆ. ಇದರ ವಿವರಣೆಯನ್ನು "Journal of Anthropological Society of Bombay" ಎಂಬ ಪತ್ರಿಕೆಯ ಭಾಗದಲ್ಲಿ ವಿವರಿಸಿದ್ದಾರೆ.

ಗುರುಲಿಂಗಯ್ಯ.ಎಂ "ಕರ್ನಾಟಕದ ಗೊಲ್ಲಸಮುದಾಯ"(೨೦೦೫) ಎಂಬ ಗ್ರಂಥದಲ್ಲಿ ಕಾಡುಗೊಲ್ಲರು ಹುಟ್ಟಿನಿಂದ ಸಾಯುವವರೆಗೆ ಯಾವ ಯಾವ ಕ್ರಿಯೆಗಳನ್ನು ಆಚರಿಸುತ್ತಾರೆ ಎಂಬುದನ್ನು ವಿವರಿಸಿದ್ದಾರೆ. ಕಾಡುಗೊಲ್ಲರ ಅಭಿವೃದ್ಧಿಯಲ್ಲಿ ಹಿಂದುಳಿದ ವರ್ಗಗಳ ಆಯೋಗಗಳಿಂದ ಎಷ್ಟು ಶೋಷಣೆಯಾಗುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಎಷ್ಟು ಜನರು ಉನ್ನತ ಶಿಕ್ಷಣದ ಸ್ಥಾನವನ್ನು ಪಡೆದಿದ್ದಾರೆ. ರಾಜಕೀಯವಾಗಿ ಎಷ್ಟರ ಮಟ್ಟಿಗೆ ಸಂಘಟನೆಯಾಗುತ್ತಿದ್ದಾರೆ. ಶೋಷಣೆಗೆಗೊಳಗೊಂಡ ಈ ಸಮುದಾಯಕ್ಕೆ ಸರ್ಕಾರದಿಂದ ಸಿಗಬೇಕಾಗಿದ್ದ ಸೌಲಭ್ಯಗಳು ಸಿಗುವಂತೆ ಮಾಡುವುದಕ್ಕೆ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಕ್ಕೆ ಶಿಫಾರಸ್ಸು ಮಾಡಿದ್ದಾರೆ.

❑❑❑

ಅಧ್ಯಾಯ ಎರಡು

ಸಮುದಾಯದ ಪರಿಚಯ

ಅಧ್ಯಾಯ ಎರಡು

ಸಮುದಾಯದ ಪರಿಚಯ

ಕರ್ನಾಟಕ ರಾಜ್ಯವು ಬಹಳ ವಿಶಾಲವಾದ ಮತ್ತು ಸಂಪದ್ಭರಿತವಾದ ರಾಜ್ಯವಾಗಿದೆ.ಇಲ್ಲಿ ವೈವಿಧ್ಯಮಯವಾದ ಭಾಷೆ, ಸಂಸ್ಕೃತಿ, ಧರ್ಮ, ಸಮುದಾಯ, ಜಾತಿ ಮುಂತಾದ ವೈರುಧ್ಯಗಳ ನಡುವೆ ಜನ ಜೀವಿಸುತ್ತಿದ್ದಾರೆ. ಇಂತಹ ವೈರುಧ್ಯಗಳ ನಡುವೆ ನಿಕೃಷ್ಠ ಜೀವನ ನಡೆಸುತ್ತಿರುವ ಅಲೆಮಾರಿ ಸಮುದಾಯಗಳು ಬಹಳ ಹಿಂದಿನ ಕಾಲದಿಂದಲೂ ಅಂದರೆ ಶತ ಶತಮಾನಗಳಿಂದ ಕಾಡು ಗುಡ್ಡ ಬೆಟ್ಟ ಪ್ರದೇಶಗಳಲ್ಲಿ ಮತ್ತು ಅರಣ್ಯ ನದಿ ತೀರದ ಕಣಿವೆಗಳ ಪ್ರದೇಶಗಳಲ್ಲಿ ಜೀವನ ಸಾಗಿಸುವವರಿಗೆ, ಆದಿವಾಸಿಗಳು, ಇಲ್ಲವೇ ಅಲೆಮಾರಿಗಳೆಂದು ಕರೆಯುತ್ತಾರೆ. ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿಯೂ ಇಂತಹ ಸಾವಿರಾರು ಅಲೆಮಾರಿಗಳು ತಮ್ಮ ಅಲೆದಾಡುವಿಕೆಯ, ಜೀವನವನ್ನು ಕಳೆಯುತ್ತಾ ಜೀವಿಸುತ್ತಿದ್ದಾರೆ. ಅಲೆಮಾರಿ ಸಮುದಾಯಗಳು ನಾಗರೀಕ ಸಮಾಜದಿಂದ ಅಂದರೆ ದೂರವಿರುವ ಬಯಲು ಪ್ರದೇಶಗಳ ಜೊತೆಗೆ ಹುಲ್ಲುಗಾವಲುಗಳಿಂದ ಕೂಡಿದ ಅಥವಾ ಊರಿನಿಂದ ಬಹುದೂರ ಉಳಿದುಕೊಂಡು ಜೀವನ ಸಾಗಿಸುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಅಂದರೆ ಸುಮಾರು ಪ್ರತಿ ಜಿಲ್ಲೆಯಲ್ಲಿಯೂ ಬಹಳಷ್ಟು ಅರೆಅಲೆಮಾರಿ ಸಮುದಾಯಗಳು ಕಂಡುಬರುತ್ತವೆ. ಅವುಗಳಲ್ಲಿ ಕಾಡುಗೊಲ್ಲ ಸಮುದಾಯವು ಒಂದು ಆಧುನಿಕ ಸಮಾಜದಲ್ಲಿಯೂ ಕೂಡ ಕಾಡುಗೊಲ್ಲರು ತಮ್ಮ ಮೂಲ ವೃತ್ತಿಯಾದ ಪಶುಪಾಲನೆ, ಕುರಿ ಮೇಕೆ, ಎಮ್ಮೆ, ಸಾಕಾಣಿಕೆಯ ಜೊತೆಗೆ ಕೃಷಿಯನ್ನು ರಚಿಸಿಕೊಂಡಿವೆ. ಈ ಸಮುದಾಯಗಳು ಸಂವಿಧಾನಬದ್ಧವಾಗಿ ಪರಿಶಿಷ್ಟ ಪಂಗಡದಲ್ಲಿರದೇ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದೆ ಮತ್ತು ಈ ಸಮುದಾಯದಲ್ಲಿ ಸಾಕ್ಷರತೆ ತುಂಬಾ ಕಡಿಮೆ ಇರುವುದು ಕಂಡುಬರುತ್ತದೆ. ಆಧುನಿಕ ದಿನಗಳಲ್ಲಿ ಹಂತಹಂತವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸುಧಾರಣೆಯಾಗುತ್ತಿದ್ದಾರೆ ಎಂದು ಹೇಳಬಹುದು.

ಅಲೆಮಾರಿ ಮತ್ತು ಅರೆಅಲೆಮಾರಿ ಪದದ ವಿವರಣೆ:

'ಮಾನವಶಾಸ್ತ್ರಜ್ಞರು ಆರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದಾರೆ'. "ಎನ್‌ಸೈಕ್ಲೋಪೆಡಿಯ ಬ್ರಿಟಾನಿಕಾದ ಪ್ರಕಾರ ಅಲೆಮಾರಿತನವು ಒಂದು ಜೀವನ ವಿಧಾನ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ. ದಿಕ್ಕುದೆಸೆಯಿಲ್ಲದ ಅಥವಾ ಕಾಲಕ್ರಮಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ ಎಂದು ಅರ್ಥೈಸಿದೆ

ಪಶುಪಾಲನೆ ಅಥವಾ ಇತರೆ ಕಸುಬುಗಳ ಹಿನ್ನೆಲೆಯ ಸಮುದಾಯಗಳು ಕಾಲಾಂತರದಲ್ಲಿ ಅಲ್ಲಲ್ಲಿ ಸ್ಥಾಯಿಯಾಗಿ ನೆಲೆನಿಂತರೂ ಪಶುಸಂಗೋಪನೆಗಾಗಿ ಅಥವಾ ಇತರೆ ಕಸುಬುಗಳ ನಿರ್ವಹಣೆಗಾಗಿ ಅಲೆಮಾರಿತನ ಅನಿವಾರ್ಯವಾಗಿ ಮುಂದುವರಿಸುವರು. ಇಂತಹ ಸಮುದಾಯಗಳನ್ನು ಅರೆ ಅಲೆಮಾರಿ ಸಮುದಾಯ (semi-nomadic Tribes) ಗಳೆಂದು ಕರೆಯಲಾಗುವುದು. ಈ ಸಮುದಾಯಗಳ ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಸಾಮಾಜಿಕ ಭದ್ರತೆಯ ಹಿನ್ನೆಲೆಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿತನದ ಸ್ಥಿತಿಯನ್ನು ನಿರ್ಧರಿಸಬಹುದಾಗಿದೆ.

ಅಲೆಮಾರಿ ಮತ್ತು ಅರೆಅಲೆಮಾರಿ ಪದದ ಅರ್ಥ:

ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೊಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟಿ, ಮರಾಟಿಯಲ್ಲಿ ಭಟಕ್ಯಾ, ಹಿಂದಿಯಲ್ಲಿ ಸಂಚಾರಿ, ಘುಮಂತು, ಗ್ರೀಕಿನಲ್ಲಿ ನೆಮಿನ್ (Nemein),ಲ್ಯಾಟಿನಿನಲ್ಲಿ ನೋಮಾಸ್ (Nomas), ಇಂಗ್ಲೀಷಿನಲ್ಲಿ ನೊಮ್ಯಾಡ್ (Nomad), ಜೊತೆಗೆ ಪರದೇಶಿ, ನೆಲೆಯಿಲ್ಲದವರು, ದೇಶ ಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ಉಚಲ್ಯಾ, ಜಿಪ್ಸಿ, ಬೀಡು ಬಿಡುವವರು, ಗುಳೆ ಹೋಗುವವರು, ವಲಸಿಗರು, ಗಿರಿಜನರು, ಸನ್ಯಾಸಿಗಳು ಎಂಬ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಭಿಕ್ಷಾವೃತ್ತಿಯ ಹಿನ್ನೆಲೆಯಲ್ಲಿ ಇವರನ್ನು ತಮಿಳಿನಲ್ಲಿ ಪಿಚ್ಚೈಕರಾ, ಹಿಂದಿಯಲ್ಲಿ ಭಿಕಾರಿ, ಕನ್ನಡದಲ್ಲಿ ಭಿಕ್ಷುಕರೆಂತಲೂ ಗುರುತಿಸಲಾಗುವುದು. ಜನಪದರು ಇವರನ್ನು ಗೋಸಾಯಿ, ಜಂಗಾಲಿ, ಜಂಗಮ,ಜೋಗಿ, ದಾಸಯ್ಯ ಎಂತಲೂ ಕರೆಯುವರು.'[೧]

೨.೧ ಗೊಲ್ಲ ಪದದ ನಿಷ್ಪತ್ತಿ:

'ಗೊಲ್ಲ ಸಮುದಾಯದ ಪದದ ಹುಟ್ಟಿನ ಬಗ್ಗೆ ಹಲವಾರು ವಿದ್ವಾಂಸರು ತಮ್ಮ ವ್ಯಾಖ್ಯಾನ ನೀಡಿದ್ದಾರೆ. ಗೊಲ್ಲ ಎಂಬ ಪದವು ವೃತ್ತಿಯನ್ನು ಸೂಚಿಸುವ ಪದವಾಗಿದೆ. 'ಗೊಲ್ಲ' ಎಂದರೆ ಗೋವುಗಳನ್ನು ಕಾಯುವವನು ಎಂದು' ಕಾಡುಗೊಲ್ಲ', ಎಂದರೆ ಕಾಡಿನಲ್ಲಿ ವಾಸಿಸುವ ಗೊಲ್ಲನೆಂದು, ಕಾಡುಗೊಲ್ಲರನ್ನು ಅರ್ಥೈಯಿಸಿದ್ದಾರೆ. ಅಡವಿಗೊಲ್ಲರು ಹಟ್ಟಿಗೊಲ್ಲರು ಎಂಬ ಹೆಸರುಗಳಿಂದಲೂ ಸಹ ಕರೆಯುವ ವಾಡಿಕೆ ಇದೆ. ಇವರು ಕೃಷ್ಣನ ವಂಶಸ್ಥರೆಂದು ಗುರುತಿಸಿಕೊಳ್ಳುತ್ತಾರೆ. ಮಹಾಭಾರತದ ಕೃಷ್ಣ ಇವರ ಮೂಲ ಪುರುಷ ಎಂಬುದು ಗೊಲ್ಲ ಸಮುದಾಯದವರ ನಂಬಿಕೆ, ಕಾಡುಗೊಲ್ಲರು ಊರಿನಿಂದ ಹೊರಗೆ ಪ್ರತ್ಯೇಕವಾದ ಹಟ್ಟಿಗಳನ್ನು ಕಟ್ಟಿಕೊಂಡು, ವಾಸಮಾಡುವುದರಿಂದ ಅವರನ್ನು ಸಾಮಾನ್ಯವಾಗಿ 'ಹಟ್ಟಿ' ಗೊಲ್ಲರೆಂದು ಕರೆಯುವ ವಾಡಿಕೆಯೂ ಇದೆ.

ಗೊಲ್ಲ ಸಮುದಾಯದವರು, ಭಾರತದಾದ್ಯಂತ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ ಉದಾಹರಣೆಗೆ ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ ಪಂಜಾಬ್ ಮತ್ತು ಇತರೆ

ಭಾಗಗಳಲ್ಲಿ ಇವರನ್ನು ಅಹಿರ್, ಜಾತ್, ಸಿಂಗ್, ಯಾದವ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಕೇರಳದಲ್ಲಿ ಇವರು ಯಾದವ ಮತ್ತು ಮಣಿಯಾಣಿಗಳೆಂದೂ ತಮಿಳುನಾಡಿನಲ್ಲಿ ಇಂಡಿಯಾನ್, ಕೋನಾರ್‌ಗಳೆಂದೂ ಗುರುತಿಸಿಕೊಂಡಿದ್ದಾರೆ. ಹಾಗೆಯೇ ಆಂಧ್ರ ಪ್ರದೇಶದಲ್ಲಿ ರೆಡ್ಡಿಗೊಲ್ಲ, ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟರೆ, ಕರ್ನಾಟಕದಲ್ಲಿ ಇವರನ್ನು ಗೊಲ್ಲ, ಗೊಲ್ಲರ್ ರೆಡ್ಡಿ ಮಣಿಯಾಣಿ, ಯಾದವ ಎಂಬ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಈ ಎಲ್ಲಾ ಬೇರೆ ಬೇರೆ ರಾಜ್ಯಗಳ ಗೊಲ್ಲ ಸಮುದಾಯದವರು ಆಯಾ, ರಾಜ್ಯದ ಪ್ರಾದೇಶಿಕ ಬಳಕೆಯ ಹೆಸರಿನ ಜೊತೆಗೆ, ಭಾರತದಾದ್ಯಂತ "ಯಾದವ" ಎಂಬ ಹೆಸರಿನೊಂದಿಗೆ ಗುರುತಿಸಿಕೊಂಡರು ತಮ್ಮ ಮೂಲವನ್ನು ಮಾತ್ರ ಇವರು ಎಂದಿಗೂ ಬಿಡುವ ಮಾತೆ ಇಲ್ಲವೆನ್ನಬಹುದು.'[೨]

೨.೨ ಕಾಡುಗೊಲ್ಲರ ಮೂಲ:

'ಕರ್ನಾಟಕ ರಾಜ್ಯದಲ್ಲಿ ಕಾಡುಗೊಲ್ಲರು ಕೆಲವೇ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಅದರಲ್ಲೂ ವಿಶೇಷವಾಗಿ ಚಿತ್ರದುರ್ಗದಲ್ಲಿ ಮತ್ತು ತುಮಕೂರಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಚಿತ್ರದುರ್ಗ ಜಿಲ್ಲೆಯನ್ನು ಬುಡಕಟ್ಟು ಸಮುದಾಯಗಳ ತವರೂರು ಎಂದೂ ಕರೆಯಬಹುದು. ಇಲ್ಲಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಕರ್ನಾಟಕದ ಬೆಂಗಳೂರು ಬಳ್ಳಾರಿ ಹಾಸನ ದಾವಣಗೆರೆ, ಚಿಕ್ಕಮಗಳೂರು, ಹಾಗೂ ಇತರೆ ಜಿಲ್ಲೆಗಳಲ್ಲಿ ಹರಿದು ಹಂಚಿ ಹೋಗಿದ್ದಾರೆ. ಕಾಡುಗೊಲ್ಲರು ಬಹಳ ಹಿಂದಿನ ಕಾಲದಲ್ಲಿ ಗುಡ್ಡ-ಬೆಟ್ಟ ಸಮತಟ್ಟಾದ ಪ್ರದೇಶಗಳಲ್ಲಿ ಹಾಗೂ ಸುಂದರವಾದ ಪ್ರಕೃತಿಯ ಸೌಂದರ್ಯ ಹಚ್ಚ ಹಸಿರಿನಿಂದ ಕೂಡಿರುವ ಹುಲ್ಲುಗಾವಲು ಪ್ರದೇಶ ಕೆರೆ ನದಿಯ ಸಮೀಪದಲ್ಲಿ ಇವರು ಜೀವನ ಸಾಗಿಸುತ್ತಾ ಬಂದಿದ್ದಾರೆ. ಹಳ್ಳಿ ಮತ್ತು ನಗರಗಳಿಂದ ಅಂದರೆ ಬೇರೆ ಜನಾಂಗ ಅಥವಾ ಸಮುದಾಯದವರೊಂದಿಗೆ ಬೇರೆಯದೆ ಅವರದೇ ಆದ ಸಂಸ್ಕೃತಿ ಆಚಾರ ವಿಚಾರ ಸಂಪ್ರದಾಯಗಳನ್ನು ಆಚರಿಸಲು ಸುಮಾರು ಊರುಗಳಿಂದ ದೂರ ವಾಸವಾಗಿರುತ್ತಾರೆ. ಹಿಂದಿನ ಕಾಲದಲ್ಲಿ ಕಾಡುಗಳು ಬಹಳ ಜಾಸ್ತಿ ಇದ್ದುದರಿಂದ ಕಾಡುಗೊಲ್ಲರು ಪಶುಪಾಲನೆಗಾಗಿ ಎಮ್ಮೆ, ಕುರಿ, ಮೇಕೆ, ಹಸುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕುತ್ತಿದ್ದರು. ಪಶುಪಾಲನೆಯ ಜೊತೆಗೆ ಇತ್ತೀಚಿನ ದಿನಗಳಲ್ಲಿ ವ್ಯವಸಾಯದಲ್ಲಿಯೂ ಸಹ ತೊಡಗಿದ್ದಾರೆ.

ಕಾಡುಗೊಲ್ಲರ ಮೂಲ ಮತ್ತು ಪರಂಪರೆಯ ಬಗ್ಗೆ ಕುರಿತು ಹಲವಾರು ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಸಹ ಕಾಡುಗೊಲ್ಲರು ಉತ್ತರ ಭಾರತದ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದರು ಎಂದು ಸಣ್ಣೋಬಯ್ಯನವರು ಅಭಿಪ್ರಾಯಪಡುತ್ತಾರೆ.

ಕಾಡುಗೊಲ್ಲರ ಹುಟ್ಟಿನ ಅಥವಾ ಮೂಲದ ಬಗ್ಗೆ ಏನೇ ಐತಿಹ್ಯ ಅಥವಾ ಪುರಾಣ (Legends) ಗಳಿರಲಿ ಇವರು ಕರ್ನಾಟಕದವರೇ ಆಗಿ ತಮ್ಮದೇ ಆದ ನೆಲೆಗಳನ್ನು ಹೊಂದಿದ್ದಾರೆ. ಕರ್ನಾಟಕದ ಕಾಡುಗೊಲ್ಲರು ಕನ್ನಡ ಭಾಷೆಯನ್ನು ಮಾತನಾಡುವುದರಿಂದ ಇವರು ಕನ್ನಡ ನಾಡಿನ ಬುಡಕಟ್ಟಿನ ಗುಂಪಿನವರು ಎಂದು ಹೇಳಬಹುದು.

ವಿಜಯನಗರದ ಕಾಲದಲ್ಲಿ ಮತ್ತು ವಿಜಯನಗರದ ಸುತ್ತಮುತ್ತಲಿನ ಪ್ರದೇಶಗಳಾದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಬಯಲು ಪ್ರದೇಶಗಳಾಗಿದ್ದರಿಂದ ಮತ್ತು ಸಮತಟ್ಟಾದ ಭೂಪ್ರದೇಶವನ್ನು ಹೊಂದಿರುವುದರಿಂದ ಉತ್ತಮವಾದ ಗುಡ್ಡ-ಬೆಟ್ಟ ಕಾಡುಗಳಲ್ಲಿ ಮೇವು ನೀರು ಸಿಗುವುದರಿಂದ ಕಾಡುಗೊಲ್ಲರು ಪಶುಪಾಲನೆಗೆ ಮತ್ತು ಕುರಿ, ಮೇಕೆ, ಎಮ್ಮೆ, ಹಸು, ಸಾಕಾಣಿಕೆಗೆ ಯೋಗ್ಯವಾದ ಕುರುಚಲು ಕಾಡುಗಳಾಗಿದ್ದುದರಿಂದ ಅಂತಹ ಸಂದರ್ಭದಲ್ಲಿ ಅಂಬೆರಾಯ ಮತ್ತು ತುಂಬೆರಾಯ ಎಂಬ ವ್ಯಕ್ತಿಗಳ ಎರಡು ಕುಟುಂಬಗಳಿದ್ದು ಮುಂದೆ ಈ ಕುಟುಂಬಗಳು ಕಾಲಾಂತರದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ವಲಸೆ ಹೋಗಿ ಅಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿದರು. ಇವರೇ ಕಾಡುಗೊಲ್ಲರ ಮೂಲದವರು ಇವರಿಗೆ ಕನ್ನಡ ಭಾಷೆ ಬಿಟ್ಟರೆ ಬೇರೆ ಭಾಷೆ ತಿಳಿದಿರಲಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಕಾಡುಗೊಲ್ಲರ ವಂಶದ ಬಗ್ಗೆ ಹೇಳುವುದಾದರೆ ಚಂದ್ರವಂಶದ ಚಂದಮುತ್ತಿ ಮತ್ತು ಸೂರ್ಯವಂಶದ, ಚಿತ್ತಮುತ್ತಿ ಎಂಬುವವರು ಕಾಡುಗೊಲ್ಲರ ಮೂಲ ಪುರುಷರು ಇವರು ದೆಹಲಿ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಪಶುಪಾಲನೆ, ಕೃಷಿ, ನೀರಾವರಿ ಮತ್ತು ಹೈನುಗಾರಿಕೆಯ ವೃತ್ತಿಯಲ್ಲಿ ತೊಡಗಿದ್ದವರು ಇವರ ಹೆಣ್ಣು ಮಕ್ಕಳು ದೆಹಲಿ ಪಟ್ಟಣದಲ್ಲಿ ಉತ್ತಮವಾದ ಹಸುಗಳನ್ನು ಮತ್ತು ಎಮ್ಮೆಗಳನ್ನು ಕಟ್ಟಿಕೊಂಡು ಉತ್ತಮವಾದ ಮೇವು, ನೀರು ನೀಡುತ್ತಿದ್ದುದರಿಂದ ಉತ್ತಮವಾದ ಹಾಲನ್ನು ಹಸು, ಎಮ್ಮೆಗಳು ನೀಡುತ್ತಿದ್ದವು. ಇವರು ದೆಹಲಿ ಪಟ್ಟದಲ್ಲಿ ಹಾಲು, ಮೊಸರು ಮಾರುತ್ತಿರುವಾಗ, ಈ ಹೆಣ್ಣು ಮಕ್ಕಳ ಸೌಂದರ್ಯಕ್ಕೆ ದೆಹಲಿಯ "ನವಾಬ" ಮೋಹಿತನಾಗಿ, ಅವರನ್ನೇ ಮದುವೆಯಾಗಬೇಕೆಂದು ಚಂದಮುತ್ತಿ ಮತ್ತು ಚಿತ್ತಮುತ್ತಿಗೆ ಹೇಳಿ ಕಳುಹಿಸುತ್ತಾನೆ ಆ ನವಾಬನ ದುಡುಕುತನಕ್ಕೆ "ಚಂದಮುತ್ತಿ" ಬಂಧುಗಳಾದ ಬಲ್ಲಾಳು, ಸೋಮಗೊಂಡನ ಗೌಡ, ಭೂಮ, ಮುತ್ತಿ ಚಿತ್ತಮುತ್ತಿ ರಾಮಚಂದ್ರ ಮುತ್ತಿ ಅರೆರಾಯ, ಗೊಂಡ ಮೆರೆರಾಯ ಗೊಂಡ, ಎಗಡಿ, ಮುತ್ತಿ, ಅತ್ತೆರಾಯ, ಅಜ್ಜಿಮುತ್ತಿ ಮುತ್ತೆರಾಯ ಕರಡಿ ಬಳ್ಳನಾಯ್ಕ, ಬಾಲಮುತ್ತ ನಾಯ್ಕ, ಪದ್ಮಳ್ಳ ನಾಯ್ಕ ಮಾದಲಾದವರು ಉದ್ರೇಕಿತರಾಗಿ, ಹಾಲಿನಂತ ಕುಲ ನೀರಾಗಬಾರದು ಎಂದು ಕಾಡುಗೊಲ್ಲರು ಆ ಕುಲದ ಹಿರಿಯ ವಂಶಸ್ಥರು ಮತ್ತು ಹಿರಿಯ ಯಜಮಾನರು, ಗೋಕುಲದ ಹೆಣ್ಣು ಮಕ್ಕಳನ್ನು ತುರುಕರಿಗೆ ಕೊಟ್ಟು ಮದುವೆ ಮಾಡುವುದು, ನಮ್ಮ ಗೊಲ್ಲಾಳಿಕೆಗೆ ಕೆಟ್ಟ ಮರ್ಯಾದೆ ಮತ್ತು ಅಪಮಾನವೆಂದು ಎಲ್ಲಾ ಹಿರಿಯ ಮುಖಂಡರು ಕುಳಿತು ವಿಚಾರಮಾಡಿ ಅಥವಾ ಸರ್ವದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ

ದೆಹಲಿ ಪಟ್ಟಣವನ್ನು ಬಿಟ್ಟು ದಕ್ಷಿಣ ಭಾರತದ ಕಡೆಗೆ ವಲಸೆ ಹೋಗಲು ನಿರ್ಧಾರ ಕೈಗೊಂಡರು.'[೩]

೨.೩ ಕರ್ನಾಟಕದಲ್ಲಿ ಕಾಡುಗೊಲ್ಲರ ನೆಲೆಗಳು:

'ಕರ್ನಾಟಕದ ಬಯಲು ಸೀಮೆಯ ಪ್ರದೇಶಗಳಲ್ಲಿ ಕೇಂದ್ರಿಕೃತವಾಗಿದ್ದು ಮುಖ್ಯವಾಗಿ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಕಂಡುಬರುತ್ತವೆ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಾಡುಗೊಲ್ಲರ ನೆಲೆ (Settlements)ಗಳು ಕಂಡುಬರುತ್ತವೆ. ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ ಈ ತಾಲ್ಲೂಕುಗಳ ಪೈಕಿ ಹಿರಿಯೂರು ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರ ಹಟ್ಟಿಗಳು ಕಂಡುಬರುತ್ತವೆ.

ಚಿತ್ರದುರ್ಗ ಜಿಲ್ಲೆಯನ್ನು ಬಿಟ್ಟರೆ ಕಾಡುಗೊಲ್ಲರ ಪ್ರಸಾರ ನೆಲೆಗಳನ್ನು ಹೊಂದಿರುವ ಎರಡನೇ ಜಿಲ್ಲೆ ತುಮಕೂರು ಜಿಲ್ಲೆಯಾಗಿದೆ. ತುಮಕೂರು ಜಿಲ್ಲೆಯ ಶಿರಾ, ಪಾವಗಡ, ಮಧುಗಿರಿ, ತುಮಕೂರು, ಕುಣಿಗಲ್, ಗುಬ್ಬಿ, ತುರುವೇಕೆರೆ, ಚಿಕ್ಕನಾಯಕನಹಳ್ಳಿ ತಿಪಟೂರು ತಾಲ್ಲೂಕುಗಳಲ್ಲಿ ಕಾಡುಗೊಲ್ಲರ ನೆಲೆಗಳಿರುವುದು ಕಂಡುಬರುತ್ತದೆ.

ಶಿರಾ ತಾಲ್ಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರ ನೆಲೆಗಳು ಕಂಡುಬರುತ್ತವೆ. ಉಳಿದಂತೆ ಪಾವಗಡ, ಮಧುಗಿರಿ, ಗುಬ್ಬಿ, ಮತ್ತು ತುರುವೇಕೆರೆ, ತಾಲ್ಲೂಕುಗಳಲ್ಲಿ ಶಿರಾ ತಾಲ್ಲೂಕಿಗಿಂತ ಕಡಿಮೆ ಸಂಖ್ಯೆಯಲ್ಲಿ ಕಾಡುಗೊಲ್ಲರ ನೆಲೆಗಳು ಕಂಡುಬರುತ್ತವೆ. ಕುಣಿಗಲ್ ತಾಲ್ಲೂಕಿನಲ್ಲಿ ಕಡಿಮೆ ಸಂಖ್ಯೆಯ ನೆಲೆಗಳು ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿಯೂ ಕಾಡುಗೊಲ್ಲರ ನೆಲೆಗಳು ಕಂಡುಬರುತ್ತವೆ. ದಾವಣಗೆರೆ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಅಂದರೆ ಚನ್ನಗಿರಿ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಕಾಡುಗೊಲ್ಲರ ನೆಲೆಗಳನ್ನು ನಾವು ಕಾಣಬಹುದಾಗಿದೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ಕಾಡುಗೊಲ್ಲರ ಹಟ್ಟಿಗಳು ಕಂಡುಬರುತ್ತವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ನೆಲಮಂಗಲ, ಹಾಗೂ ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ಚದುರಿದಂತೆ ಕಾಡುಗೊಲ್ಲರ ಒಂದೆರಡು, ನೆಲೆಗಳು ಕಂಡುಬರುತ್ತವೆ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ ಕೆಲವು ಕಡೆ ಕಾಡುಗೊಲ್ಲರ ನೆಲೆಗಳನ್ನು ಕಾಣಬಹುದು. ಈ ನೆಲೆಗಳಿಗೆ ಗೊಲ್ಲರ ದೊಡ್ಡಿ ಎಂದು ಕರೆಯುತ್ತಾರೆ. ಹಾಗೆಯೇ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೆಲವೇ ಕೆಲವು ಕಾಡುಗೊಲ್ಲರ ನೆಲೆಗಳಿವೆ.'[೪]

ಚಿತ್ರದುರ್ಗ ಜಿಲ್ಲೆ:

ಚಿತ್ರದುರ್ಗ ಜಿಲ್ಲೆಯಲ್ಲಿ ಆರು ತಾಲ್ಲೂಕುಗಳಲ್ಲಿ ಕಾಡುಗೊಲ್ಲರು ಕಂಡು ಬರುತ್ತಾರೆ. ಆಯಾ, ತಾಲ್ಲೂಕಿನಲ್ಲಿ ಇವರು ವಾಸಿಸುವ ನೆಲೆಗಳು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ಚಿತ್ರದುರ್ಗ ತಾಲ್ಲೂಕು:

'ಗೊಲ್ಲರಹಟ್ಟಿ, ಕುರುವಿನಕೆರೆ, ಗಂಜಿಗಟ್ಟಿ, ಹೊಸಕಲ್ಲಹಳ್ಳಿ, ಗೋನೂರು, ಜಾನಕೊಂಡ, ಮದಕರಿಪುರ, ತುರುವನೂರು, ಉಪ್ಪನಾಯಕನಹಟ್ಟಿ, ಗೊಲ್ಲನಹಟ್ಟಿ, ಹಾಗೂ ಗಂಜಿಹಟ್ಟಿ.

ಹಿರಿಯೂರು ತಾಲ್ಲೂಕು:

ಹರ್ತಿಕೋಟೆ, ಕಪಿಲಹಟ್ಟಿ, ಮಾರಪ್ಪನಹಟ್ಟಿ, ಹುರ್ಲಿಬೇಡಹಟ್ಟಿ, ಜರ್ಲಂತಹಟ್ಟಿ, ಕಾಟಪ್ಪನಹಟ್ಟಿ, ಹೊಸಯಳನಾಡು ಜವಗೊಂಡನಹಳ್ಳಿ, ನಂದಿಹಳ್ಳಿ, ಯರಬಳ್ಳಿ, ದೊಡ್ಡಗೊಲ್ಲರಹಟ್ಟಿ, ಸಂಗೇನಹಳ್ಳಿ ಹಾಲುಗುಡ್ಡದಹಟ್ಟಿ, ವೀರೇನಹಳ್ಳಿ, ಮರಡಿಹಳ್ಳಿ. ಪಿ.ಡಿ.ಕೋಟೆ, ವೇಣುಕಲ್‌ಗುಡ್ಡ, ಇಕ್ಕನೂರು, ಮದನಕುಂಟೆ, ಮುಂಗಸಿಹಳ್ಳಿ, ಕೂಡಲಹಳ್ಳಿ ಕರಿಓಬೇನಹಳ್ಳಿ ಕೋಡಿಹಳ್ಳಿ ಗುಂತಕಲ್‌ಹಟ್ಟಿ ಹಾಗೂ ಗುಡಿಹಳ್ಳಿ.

ಹೊಳೆಲ್ಕೆರೆ ತಾಲ್ಲೂಕು:

ಹರೇಹಳ್ಳಿ, ಹಳ್ಳಹಳ್ಳಿ ದುಮ್ಮಿ, ಅವಳಿಹಟ್ಟಿ, ಹೊಳಲ್ಕೆರೆ, ರಾಮಗಿರಿ, ಗಂಗ ಸಮುದ್ರಗೊಲ್ಲರಹಟ್ಟಿ,

ಚಿತ್ರಹಳ್ಳಿ, ಗುಂಡುಮಡುಗೊಲ್ಲರಹಟ್ಟಿ, ಅಮೃತಪುರ, ಎಮ್ಮೆಹಟ್ಟಿ (ತಿಮ್ಮಲಾಪೂರ)

ಚಳ್ಳಕೆರೆ ತಾಲ್ಲೂಕು:

ದೇವರಮರಿಕುಂಟೆ, ಹೊಸಹಳ್ಳಿ ಖಂಡೇನಹಳ್ಳಿ, ಸಾಣೀಕೆರೆ, ಸೂರನಹಳ್ಳಿ, ವಡೇರಹಳ್ಳಿಕೆರೆ, ಮುಂದಲಹಟ್ಟಿ ಕಾಟಪ್ಪನಹಟ್ಟಿ, ಯಲಗಟ್ಟಿ, ಗೊಲ್ಲರಹಟ್ಟಿ, ಕಾಮಸಮುದ್ರ, ಪುಟ್ಲಾರಹಳ್ಳಿ, ಗೋಸಿಕೆರೆ, ಗೌರಸಮುದ್ರ, ಬೆಳಗೆರೆ, ಕ್ಯಾತಗೊಂಡನಹಟ್ಟಿ, ಚೆನ್ನಮ್ಮನನಾಗತಿಹಳ್ಳಿ ಪುರ್ಲಹಳ್ಳಿ, ಗೌರಿಪುರ, ಮೊಮ್ಮಯ್ಯನಹಟ್ಟಿ ಕಾಟಪ್ಪನಹಟ್ಟಿ ಟಿ.ಎನ್.ಕೋಟೆ ಚಳ್ಳಕೆರೆ.

ಹೊಸದುರ್ಗ ತಾಲ್ಲೂಕು:

ಬೀಸನಹಳ್ಳಿ, ಇಟ್ಟಿಗೆಹಳ್ಳಿ ಹೇರೂರು, ಲಕ್ಕಿಹಳ್ಳಿ, ಮಾಡದಕೆರೆ, ಹೊಸತಿಮ್ಮನಹಟ್ಟಿ, ಹಾಗೂ ಹಳೆತಿಮ್ಮನಹಟ್ಟಿ.

ಮೊಳಕಾಲ್ಮೂರು ತಾಲ್ಲೂಕು:

ಬೊಮ್ಮಲಿಂಗನಹಳ್ಳಿ, ಭೈರಾಪುರ, ಗುಡ್ಡದಹಳ್ಳಿ, ಹಾನಗಲ್, ಕೊಂಡ್ಲಹಳ್ಳಿ ಕೊಮ್ಮನಪಟ್ಟಿ.

ತುಮಕೂರು ಜಿಲ್ಲೆ:

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವಂತೆ ತುಮಕೂರು ಜಿಲ್ಲೆಯಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರು ಕಂಡುಬರುತ್ತಾರೆ. ಈ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ನೆಲೆ ನಿಂತಿದ್ದಾರೆ. ಅವುಗಳು ಈ ಕೆಳಗಿನಂತಿವೆ.

ಶಿರಾ ತಾಲ್ಲೂಕು: ಕಳುವೋರಹಟ್ಟಿ, ಕುಂಬಾರಹಳ್ಳಿ, ಹಳೇ ಬೆಜ್ಜಿಹಳ್ಳಿ, ಪುರ್ಲಹಳ್ಳಿ, ಹುಳಿಗೆರೆ, ಮಾಗೇನಹಳ್ಳಿ, ಬೇವಿನಹಳ್ಳಿ, ತಂಗಾವರ, ಅಕ್ಕಮ್ಮನಹಳ್ಳಿಗೊಲ್ಲರಹಟ್ಟಿ, ದೊಡ್ಡ ಅಗ್ರಹಾರದ ಗೊಲ್ಲರಹಟ್ಟಿ, ರಂಗೇನಹಳ್ಳಿ, ಹಾನೇನಹಳ್ಳಿ, ಎತ್ತಪ್ಪನ ಹಟ್ಟಿ, ಕುಂಬಾರಹಟ್ಟಿ, ಓಜಗುಂಟೆಗೊಲ್ಲರಹಟ್ಟಿ, ಉದ್ದನ ಚಿಕ್ಕಣ್ಣನಹಟ್ಟಿ, ಮಾಳನಹಳ್ಳಿ ಮತ್ತು ಚಿತ್ರದೇವರ ಹಟ್ಟಿ,

ಚಿಕ್ಕನಾಯಕನಹಳ್ಳಿ ತಾಲ್ಲೂಕು: ದೊಡ್ಡ ರಾಮಪುರದ ಗೊಲ್ಲರಹಟ್ಟಿ, ಕೆಂಪುರಾಯನಹಟ್ಟಿ, ಬಗ್ಗನಹಳ್ಳಿ, ಗೊಲ್ಲರಹಟ್ಟಿ, ಜಂಗಮರಹಳ್ಳಿ ಗೊಲ್ಲರಹಟ್ಟಿ, ಮಲ್ಲಮ್ಮನಹಳ್ಳಿ, ಗಾಣದಾಳು, ದಬ್ಬುಕುಂಟೆ ಮತ್ತು ಸೋಮನಹಟ್ಟಿ.

ಗುಬ್ಬಿ ತಾಲ್ಲೂಕು: ಗುಡ್ಡದಹಳ್ಳಿ, ಹೊಸಕೆರೆ, ಚಿತ್ರದೇವರಹಟ್ಟಿ, ನಲ್ಲೂರುಹಟ್ಟಿ, ಜುಂಜಪ್ಪನಹಟ್ಟಿ, ಚೇಳೂರು, ಹಾಗವಾಡ, ಮತ್ತು ಸಣಬನಹಳ್ಳಿ.

ಪಾವಗಡ ತಾಲ್ಲೂಕು: ಕೊಂಡೇತಿಮ್ಮನಹಳ್ಳಿಹಟ್ಟಿ, ಪುಲಿಮಾಜೆಗೊಲ್ಲರಹಟ್ಟಿ, ಪೋಲನಹಳ್ಳಿ, ಜಂಗಮರಹಳ್ಳಿ, ಗೊಲ್ಲರಹಟ್ಟಿ ಮತ್ತು ಮಲ್ಲಮ್ಮನಹಳ್ಳಿ.

ತಿಪಟೂರು ತಾಲ್ಲೂಕು: ಸಿಡಿಲಹಳ್ಳಿಹಟ್ಟಿ ಮತ್ತು ಎತ್ತಪ್ಪನ ಹಟ್ಟಿ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು: ಕೂಡ್ಲಿಗಿ ತಾಲ್ಲೂಕಿನ ತಮ್ಮಡಿ ಗೊಲ್ಲರಹಟ್ಟಿ, ಕ್ಯಾಸಿನಕೆರೆ ಗೊಲ್ಲರಹಟ್ಟಿ, ಮರಬದ ಮತ್ತು ಮರಮನಹಳ್ಳಿ ಗೊಲ್ಲರಹಟ್ಟಿ, ಸುಪ್ಪಕನಹಳ್ಳಿ ಗೊಲ್ಲರಹಟ್ಟಿ, ಗೊಂದೀಗೇರಿ ಗೊಲ್ಲರಹಟ್ಟಿ, ಹೇಡಿಗುಡ್ಡದ ಗೊಲ್ಲರಹಟ್ಟಿ, ಶಿವಪುರದ ಗೊಲ್ಲರಹಟ್ಟಿ, ನಡುವಲಿ ಗೊಲ್ಲರಹಟ್ಟಿ, ಬಸವನಗೊಲ್ಲರಹಟ್ಟಿ, ಸೂರದಾರಹಳ್ಳಿ ಗೊಲ್ಲರಹಟ್ಟಿ, ಹೆಂಬನಹಳ್ಳಿ ಗೊಲ್ಲರಹಟ್ಟಿ, ತುಂಬರ ಗೊಲ್ಲರಹಟ್ಟಿ, ಕಲ್ಲಹಳ್ಳಿಗೊಲ್ಲರಹಟ್ಟಿ.

ದಾವಣಗೆರೆ ಜಿಲ್ಲೆ: ಹಿರೇಮಲ್ಲನಹೊಳೆ ಗೊಲ್ಲರಹಟ್ಟಿ.'[೨]

ಚನ್ನಗಿರಿ ತಾಲ್ಲೂಕು: ದೊಡ್ಡಬ್ಬಿಗೇರೆ ಗ್ರಾಮಪಂಚಾಯಿತಿಯ ಗೊಲ್ಲರಹಟ್ಟಿ, ಕೊಂಡದಹಳ್ಳಿ ಗೊಲ್ಲರಹಟ್ಟಿ, ಹೀರೆಉಡದ ಗೊಲ್ಲರಹಟ್ಟಿ ಮತ್ತು ಗೊಲ್ಲರಹಟ್ಟಿ ಚಿಕ್ಕಗಂಗೂರಿನ ಗೊಲ್ಲರಹಟ್ಟಿ, ಮರವಂಜಿ ಚಿಕ್ಕೋಡಗೊಲ್ಲರಹಟ್ಟಿ, ಚನ್ನಾಪುರ, ತಿಪ್ಪೇಗೇನಹಳ್ಳಿ, ಯರಗಟ್ಟಿಹಳ್ಳಿ, ಬುಳಸಾಗರದಹಟ್ಟಿ ಹಾಗೂ ಸೋಮಶೆಟ್ಟಿಹಳ್ಳಿ.

ಈ ಮೇಲೆ ತಿಳಿಸಿದ ಪ್ರದೇಶಗಳಲ್ಲದೇ ಇನ್ನು ಅನೇಕ ಕಡೆ ಕಾಡುಗೊಲ್ಲರು ತಮ್ಮ ನೆಲೆಗಳನ್ನು ಕಟ್ಟಿಕೊಂಡಿದ್ದಾರೆ. ಜೊತೆಗೆ ಹೆಚ್ಚು ವಿದ್ಯಾವಂತರು ಇಂದು ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಕಂಡುಬಂದಿದ್ದು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರು ಬೇರೆ ಬೇರೆ ಕಡೆಗೆ ವೃತ್ತಿಗಳನ್ನು ಉಡುಕಿಕೊಂಡು ಇಂದು ನಗರ ಪ್ರದೇಶಗಳಿಗೆ ವಲಸೆ ಬರುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಾ ನಡೆದಿದೆ.

೨.೪ ಭೌಗೋಳಿಕ ಪರಿಚಯ:

ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಅಲೆಮಾರಿ ಸಮುದಾಯಗಳು ನೆಲೆಸಿರುವ ರೀತಿಯಲ್ಲಿಯೇ ಕಾಡುಗೊಲ್ಲ ಸಮುದಾಯದವರು ನೆಲೆಸಿರುವುದನ್ನು ಕಾಣಬಹುದು. ಕಾಡುಗೊಲ್ಲರು ವಾಸಿಸುವ ಪ್ರದೇಶಗಳು ಹಳ್ಳಿಗಳಿಂದ ಸುಮಾರು ೨.ಕಿ.ಮೀ ಅಥವಾ ೩.ಕಿ.ಮೀ ದೂರವಿರುವ ಬಹಳ ವಿಶಾಲವಾದ ನಿರ್ಜನವಾದ ಪ್ರದೇಶದಲ್ಲಿ ತಮ್ಮ ಹಟ್ಟಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಇವರು ವಾಸಿಸುವ ಹಟ್ಟಿಗಳಿಗೆ ಗೊಲ್ಲರಹಟ್ಟಿ ಅಥವಾ ಗೊಲ್ಲರ ಬೀದಿ, ಗೊಲ್ಲರ ದೊಡ್ಡಿ ಎಂಬ ಹೆಸರುಗಳಿಂದ ಕರೆಯುತ್ತಾರೆ.

'ಕಾಡುಗೊಲ್ಲರ ಭೌಗೋಳಿಕತೆಯ ಬಗ್ಗೆ ಡಾ.ಕೃಷ್ಣಮೂರ್ತಿಹನೂರು ಅವರು ಹೀಗೆ ಅಭಿಪ್ರಾಯಪಡುತ್ತಾರೆ. ಕಾಡುಗೊಲ್ಲರು ಬೇಡ ನಾಯಕರಂತೆಯೇ ಊರಿನಿಂದ ಪ್ರತ್ಯೇಕವಾಗಿ, ಹಟ್ಟಿಗಳನ್ನು ಕಟ್ಟಿಕೊಂಡು ತಮ್ಮಲ್ಲಿ ಬುಡಕಟ್ಟು ಸಂಪ್ರದಾಯ ಆಚರಣೆಗಳೊಂದಿಗೆ ಅನೇಕ ವರ್ಷಗಳಿಂದ ಬದುಕಿ ಬಂದಿದ್ದಾರೆ. ಕಾಡುಗೊಲ್ಲರ ಗುಡಿಸಲುಗಳು ಹತ್ತು ಅಡಿ ಅಗಲದ ವೃತ್ತಾಕಾರಕ್ಕೆ ಕಟ್ಟಲ್ಪಟ್ಟು ಅದರ ಮೇಲೆ ಅಂಚಿ ಹುಲ್ಲು, ಬಾದೆ ಹುಲ್ಲು ಹೊದಿಸಲ್ಪಟ್ಟಿರುತ್ತದೆ. ಜೊತೆಗೆ ಬೊಂಬುಗಳು ಅಥವಾ ಗಳಗಳನ್ನು ಅಡ್ಡಬಡ್ಡ ಹಾಕಿ ಅದರ ಮೇಲೆ ತೆಂಗಿನ ಗರಿಗಳನ್ನು ಇಳೆ ಬಿಡುತ್ತಿದ್ದರು. ಈ ಮನೆ ಅಥವಾ ಗುಡಿಸಲು ಮುಂಭಾಗಕ್ಕೆ ಅವರು ಮೂಲತಃ ಪಶುಪಾಲಕರಾಗಿರುವುದರಿಂದ ಮತ್ತು ಪ್ರಾಣಿಗಳನ್ನು ಸಾಕಿರುವುದರಿಂದ ಹಸು, ಎಮ್ಮೆ, ಕುರಿ, ಮೇಕೆ, ಕರು, ಮುಂತಾದವುಗಳ ರಕ್ಷಣೆಗೆ ರೊಪ್ಪಗಳಿರುತ್ತವೆ. ಈ ರೊಪ್ಪವನ್ನು ಮುಚ್ಚಿಕೊಳ್ಳುವಂತೆ ಸುತ್ತ ಗೋಡೆಯು ಬಂದಿರಬಹುದು. ಏಕೆಂದರೆ ಚಿತ್ರದುರ್ಗ ಪ್ರದೇಶವು ಇತಿಹಾಸ ನಡೆದ ಬಯಲಾದುದರಿಂದ ಆಗಾಗ ಶತ್ರುಗಳ ದಾಳಿ ಆ ನೆಲದ ಮೇಲೆ ಇರುತ್ತಿದ್ದು ರಕ್ಷಣೆಯ ದೃಷ್ಟಿಯಿಂದ ಕಾಡುಗೊಲ್ಲರು ತಮ್ಮ ಹಟ್ಟಿಯ ಸುತ್ತ ಮುಳ್ಳು ಬೇಲಿ ಹಾಕಿಕೊಳ್ಳುತ್ತಿದ್ದರು. ಈ ಬೇಲಿಯೊಳಗೆ ಇರುವ ತಮ್ಮ ಗುಡಿಗಳ ಸುತ್ತಾ ಇನ್ನು ಬಲವಾದ ಮುಳ್ಳುಬೇಲಿ ಹಾಕಿಕೊಳ್ಳುತ್ತಿದ್ದಕ್ಕೆ ಅವರದೇ ಆದ ಕಾವ್ಯವಿದೆ.'[೬]

ಆಧುನಿಕ ದಿನಗಳಲ್ಲಿಯೂ ಸಹ ಕಾಡುಗೊಲ್ಲರು ಗುಡಿಸಲುಗಳು ಸ್ವಲ್ಪ ಮಟ್ಟಿಗೆ ಕಂಡುಬರುತ್ತವೆ. ಹೆಚ್ಚಿನ ಸಂಖ್ಯೆಯಲ್ಲಿ ಹಂಚಿನ ಮನೆ ಹಾಗೂ ಆರ್.ಸಿ.ಸಿ ಮನೆಗಳು ಮತ್ತು ಜಂಕ್ ಶೀಟ್‌ನಿಂದ ನಿರ್ಮಾಣ ಮಾಡಿದ ಮನೆಗಳು ಮಾಳಿಗೆ ಮನೆಗಳು ಕಂಡುಬರುತ್ತವೆ. ಸಾಮಾಜಿಕವಾಗಿ, ಆರ್ಥಿಕವಾಗಿ ಬದಲಾಗಿದ್ದಾರೆ. ಮನೆಗಳ ಹೊರಗಡೆ ಅಥವಾ ಒಳಗಡೆ ವಿಧ ವಿಧವಾದ ನೆಲಕ್ಕೆ ಕಡಪದ ಕಲ್ಲುಗಳು ಮತ್ತು ಮಾರ್ಬಲ್ ಕಲ್ಲುಗಳನ್ನು ನೆಲಕ್ಕೆ ಹಾಕಿರುವುದನ್ನು ಕಾಣಬಹುದು. ಈ ರೀತಿಯ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ ಜೊತೆಗೆ ಕೆಲವೊಂದು ಮನೆಗಳಲ್ಲಿ ಶೌಚಾಲಯ ಕಟ್ಟಿಸಿಕೊಂಡಿರುವುದನ್ನು ಕಾಣಬಹುದು.

ಇತ್ತೀಚಿನ ದಿನಗಳಲ್ಲಿ ಕೃಷಿಯಲ್ಲಿ ತೊಡಗಿರುವುದರಿಂದ ಕಾಡುಗಳು ಬಹಳ ಕಡಿಮೆ ಇರುವುದರಿಂದ ಮತ್ತು ಆಧುನಿಕತೆಯ ಪ್ರಭಾವದಿಂದ ವ್ಯಾಪಾರ ಮುಂತಾದ ಉದ್ಯೋಗಗಳಲ್ಲಿ

ತೊಡಗಿರುವುದರಿಂದ ಕುರಿಗಳ ರೊಪ್ಪಗಳ ಸಂಖ್ಯೆಯು ಕಡಿಮೆಯಾಗುತ್ತಿದೆ. ಮತ್ತು ಇಂದಿಗೂ ರೊಪ್ಪದ ಸುತ್ತಲೂ ಕಳ್ಳಿ, ಬೇಲಿ, ಮುಳ್ಳುಗಳಿಂದ ಕೂಡಿರುವ ರೊಪ್ಪಗಳನ್ನು ಕಾಣುತ್ತೇವೆ.

ಚನ್ನಗಿರಿ ತಾಲ್ಲೂಕು: 'ಚನ್ನಗಿರಿ ತಾಲ್ಲೂಕು ೧೮೭೦ರಲ್ಲಿ ಅಸ್ಥಿತ್ವಕ್ಕೆ ಬಂದಿದೆ ಶಿವಮೊಗ್ಗ ಜಿಲ್ಲೆಯ ಒಂದು ತಾಲ್ಲೂಕು ಆಗಿತ್ತು ಆದರೆ ಜಿಲ್ಲಾವಾರು, ಪುನರ್‌ವಿಂಗಡನೆ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಿಂದ ಬೇರ್ಪಟ್ಟು ೧೫-೦೮-೧೯೯೭ರಂದು ದಾವಣಗೆರೆ ಜಿಲ್ಲೆಯ ಒಂದು ತಾಲ್ಲೂಕು ಆಯಿತು. ಈಗ ಶಿವಮೊಗ್ಗ ಜಿಲ್ಲೆಯ ಪೂರ್ವದಲ್ಲಿದ್ದು ದಕ್ಷಿಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು, ಪೂರ್ವದಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ ಹಾಗೂ ಹೊನ್ನಾಳಿ, ಭದ್ರಾವತಿ, ದಾವಣಗೆರೆ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ತಾಲ್ಲೂಕು ಬಯಲು ಸೀಮೆಯಂತೆ ಮೈದಾನ ಪ್ರದೇಶವಾಗಿದ್ದರೂ ಸಹ ಅಕ್ಕ ಪಕ್ಕದಲ್ಲಿ ಅರೆಮಲೆನಾಡು, ಮತ್ತು ಮಲೆನಾಡು ಪ್ರದೇಶಗಳನ್ನು ಹೊಂದಿದ್ದು ತಾಲ್ಲೂಕಿನ ವಿಸ್ತೀರ್ಣ ೧೨೧೯.೭೬ ಚ.ಕಿ.ಮೀ. ವಿಸ್ತಾರವಾಗಿ ಉತ್ತರ ಮತ್ತು ವಾಯುವ್ಯ ಫಲವತ್ತಾದ ಕಪ್ಪು ಮಣ್ಣಿನಿಂದ ದಕ್ಷಿಣದಲ್ಲಿ ಕಲ್ಲು ಮಿಶ್ರಿತ ಕೆಂಪು ಮಣ್ಣು, ಉಳಿದ ಭಾಗದಲ್ಲಿ ಕಪ್ಪು ಕೆಂಪು, ಮಣ್ಣಿನ ಭೂ ಲಕ್ಷಣವನ್ನು ಹೊಂದಿದೆ.

ಚನ್ನಗಿರಿ ತಾಲ್ಲೂಕಿನ ದಕ್ಷಿಣ ಮತ್ತು ಪಶ್ಚಿಮದಲ್ಲಿ ಬೆಟ್ಟದ ಸಾಲುಗಳು ಹೆಚ್ಚು ಹಬ್ಬಿವೆ ಅನೇಕ ಹಳ್ಳ ಕೊಳ್ಳ ತೊರೆಗಳು ತುಂಬಿ ಹರಿಯುತ್ತಿವೆ. ಉತ್ತರದಲ್ಲಿ ಹರಿದ್ರಾ ನದಿಗಳು ಹರಿಯುತ್ತವೆ. ತಾಲ್ಲೂಕಿನ ಮಧ್ಯ ಇರುವ, ಸೂಳೆಕೆರೆಗೆ ಈ ಹಳ್ಳಕೊಳ್ಳ ನದಿಗಳಲ್ಲಿ ಬಂದು ಸಂಗಮವಾಗುತ್ತವೆ. ಹರಿದ್ರಾ ನದಿ ಹರಿಹರದ ಬಳಿ ತುಂಗಭದ್ರೆಗೆ ಸಂಗಮವಾಗುತ್ತದೆ. ವಾರ್ಷಿಕ ಸರಾಸರಿ ಮಳೆ ೭೪೯-೭೫ ಮೀ.ಮೀ.ಮಳೆ ಬೀಳುತ್ತದೆ ತಾಲ್ಲೂಕಿನಲ್ಲಿ ೧೩೧ ದೊಡ್ಡ ಕೆರೆಗಳು ೨೯ ಸಣ್ಣ ಕೆರೆಗಳು ಒಟ್ಟು ೧೬೦ ಕೆರೆಗಳಿವೆ.

ತಾಲ್ಲೂಕಿನ ನೈರುತ್ಯದಲ್ಲಿ ಅರಣ್ಯವಿದ್ದು ಉಳಿದ ಮೈದಾನದಲ್ಲಿ ಹಚ್ಚಹಸಿರಿನಿಂದ ಕೂಡಿದ ಹುಲ್ಲುಗಾವಲುಗಳಿವೆ. ಜೋಳದಾಳು ಅರಣ್ಯ ಇಡೀ ತಾಲ್ಲೂಕಿನಲ್ಲಿಯೇ ಪ್ರಸಿದ್ಧವಾದುದು ಸೊಳೆಕೆರೆಯಿಂದ ನೀರಾವರಿಗೆ ತುಂಬಾ ಅನುಕೂಲವಾಗಿ ಕಬ್ಬಿನ ಗದ್ದೆಗಳು ಭತ್ತದ ಗದ್ದೆಗಳು ಸಮೃದ್ಧವಾಗಿವೆ. ಉತ್ತಮ ಅರಣ್ಯವಿರುವುದರಿಂದ ಮತ್ತು ಗುಡ್ಡಗಾಡು ಇರುವುದರಿಂದ ವಿಫಲವಾಗಿ ಮರಗಿಡ ಬೆಳೆದಿರುವುದರಿಂದ ಮರದ ಕೆಲಸ ಚೆನ್ನಾಗಿ ನಡೆಯುತ್ತದೆ. ಉಳಿದಂತೆ ತೋಟಗಳು ಸಮೃದ್ಧವಾಗಿವೆ ಇತರೆ ಬೆಳೆಯಾಗಿ, ಹತ್ತಿ, ರಾಗಿ, ಜೋಳ, ದ್ವಿದಳದಾನ್ಯಗಳನ್ನು ಬೆಳೆಯುತ್ತಾರೆ. ನೀರು ಹುಲ್ಲುಗಾವಲು ಅರಣ್ಯವಿರುವುದರಿಂದ ವ್ಯವಸಾಯ, ನೆಯ್ಗೆ, ಮಡಿಕೆ, ಸಾಮಾನು ತಯಾರಿಕೆ ಮುಂತಾದವುಗಳು ನಡೆಯುತ್ತವೆ.

ಚನ್ನಗಿರಿಯ ದಕ್ಷಿಣದಲ್ಲಿ ಅಪಾರವಾಗಿ, ಸುಣ್ಣದಕಲ್ಲು ದೊರೆಯುವುದರಿಂದ ಸುಣ್ಣ ಸುಡುವ ಉಪಕಸುಬು ನಡೆಯುತ್ತದೆ. ಉಬ್ರಾಣಿ ಚೀಲನ ಹಳ್ಳಿಯಲ್ಲಿ ಟೈಟಾನಿಯಂ ಖನಿಜ ಜೋಳದಾಳಿನ ಬಳಿ ಕಬ್ಬಿಣ, ಸೊಳೆಕೆರೆಯ ಬಳಿ ಮ್ಯಾಂಗನೀಸ ದೊರೆಯುತ್ತದೆ.

ಇಷ್ಟೇಲ್ಲಾ ಭೌಗೋಳಿಕ ಹಿನ್ನೆಲೆ ಹೊಂದಿರುವ ಈ ತಾಲ್ಲೂಕು ಆಡಳಿತದ ದೃಷ್ಟಿಯಿಂದ ನಾಲ್ಕು ಹೋಬಳಿಗಳನ್ನು ಹೊಂದಿದೆ. ಚನ್ನಗಿರಿ ಕಸಬಾ ಸಂತೇಬೆನ್ನೂರು, ಬಸವಾಪಟ್ಟಣ, ಉಬ್ರಾಣಿ, ೧೯೯ಜನ ವಸತಿ ೪೭ ಬೇಚರಾಕು ಗ್ರಾಮಗಳು ಒಟ್ಟು ೨೪೬ ಗ್ರಾಮಗಳಿಂದ ಕೂಡಿದ ತಾಲ್ಲೂಕಾಗಿದೆ.

ಐತಿಹಾಸಿಕವಾಗಿ ತಾಲ್ಲೂಕು:

ಚನ್ನಗಿರಿ ತಾಲ್ಲೂಕು ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಅಸಂಧಿ ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ಹನ್ನೆರಡನೇ ಶತಮಾನದಲ್ಲಿ ಚಾಳುಕ್ಯರಿಗೆ ನಂತರ ನೊಳಂಬವಾಡಿ ೩೨೦೦೦ಕ್ಕೆ ಮಿಳಿತಗೊಂಡು ಉಚ್ಚಂಗಿದುರ್ಗದ. ಪಾಂಡ್ಯರಿಗೆ ಸೇರಿತ್ತು. ನಂತರ ವಿಜಯನಗರದ ಅರಸರು ಕೆಳದಿ ಅರಸರು ಇಲ್ಲಿ ಅಧಿಕಾರ ನಡೆಸಿದರು, ಮುಂದೆ ಸಂತೇಬೆನ್ನೂರು ಬಸವಪಟ್ಟಣದ ಪಾಳೆಯಗಾರರು, ಪ್ರಮುಖರಾಗಿ, ಇತಿಹಾಸದಲ್ಲಿ ಪ್ರಖ್ಯಾತರಾಗಿದ್ದಾರೆ. ಕೆಲವು ಕಾಲ ಚಿತ್ರದುರ್ಗದ ಪಾಳೆಯಗಾರರಿಗೂ ಬಿದನೂರು ಅರಸರಿಗೂ ಮರಾಠರವರಿಗೂ ಬಿಜಾಪುರದ ಆದಿಲ್‌ಷಾಗೂ ಮೈಸೂರು ಅರಸರಿಗೂ ಟಿಪ್ಪುಸುಲ್ತಾನ ನಂತರ ಬ್ರಿಟಿಷರಿಗೂ ಈಗ ಕರ್ನಾಟಕದ ಸರ್ಕಾರದ ಆಡಳಿತಕ್ಕೆ ಒಳಪಟ್ಟಿದೆ.

ಚನ್ನಗಿರಿ ತಾಲ್ಲೂಕಿನ ಗ್ರಾಮದ ಇತಿಹಾಸ:

ದೊಡ್ಡ ಅಬ್ಬೀಗೆರೆ: ಇಲ್ಲಿಯ ಈಶ್ವರ ದೇವಾಲಯದ ಒಂದು ದಾನ, ಶಾಸನ (ಚಾಲುಕ್ಯರ ಅಧೀನರಾಗಿದ್ದ ಉಚ್ಚಂಗಿ, ಪಾಂಡ್ಯರ ಕಾಲದ್ದಾಗಿದ್ದು ಈ ಶಾಸನ, ಅಪ್ರಕಟಿತವಾಗಿದ್ದು ಈ ಶಾಸನವನ್ನು ಗುರುತಿಸಿದವರು, ಶ್ರೀಸುಮತೀಂದ್ರ ನಾಡಿಗ ಸಂತೇಬೆನ್ನೂರವರ ಸಂಶೋಧಕ ಡಾ॥ ಶ್ರೀನಿವಾಸ ದಿತ್ತಿಯವರ ಸಹಾಯದಿಂದ ಶಾಸನದ ಪಾಠವನ್ನು ೭-೧೦-೧೯೯೯ರಲ್ಲಿ ಪ್ರಕಟಿಸಿದ್ದಾರೆ. ಈ ಶಾಸನದಲ್ಲಿ ಕ್ರಿ.ಶ.೧೧೧೬ರಲ್ಲಿ ಅಬ್ಬೀಗೆರೆಯ ಶ್ರೀಕಲ್ಲೇಶ್ವರ ದೇವರಿಗೆ ಶ್ರೀರುದ್ರಶಿವ ಪಂಡಿತರ ಮತ್ತು ಜ್ಞಾನಶಿವ ಪಂಡಿತರ ಪಾದಪೂಜೆ ಮಾಡಿ ಭೂದತ್ತಿ ನೀಡಿದ ಉಲ್ಲೇಖವಿದೆ. ಸಂತೇಬೆನ್ನೂರು ಸಾಸಲು ಮಾರ್ಗದಲ್ಲಿರುವ ಒಂದು ಗ್ರಾಮ.'[೭]

೨೦೧೧ ಜನಗಣತಿಯ ಪ್ರಕಾರ: 'ತಾಲ್ಲೂಕಿನ ಜನಸಂಖ್ಯೆ ೩೦೨೩೧೭, ಅದರಲ್ಲಿ ಗಂಡಸರು ೧೫೨೮೮೩, ಮಹಿಳೆಯರು ೧೪೯೪೩೪, ಪ್ರಾಥಮಿಕ ಕಿರಿಯ ಶಾಲೆ, ೧೫೧ ಹುಡುಗರು ,೨,೭೦೬, ಹುಡುಗಿಯರು, ೨,೫೬೧, ಪ್ರಾಥಮಿಕ ಹಿರಿಯ ಪಾಠ ಶಾಲೆ ೧೯೨, ಅದರಲ್ಲಿ ಹುಡುಗರು ೧೫,೦೮೨, ಮತ್ತು ಹುಡುಗಿಯರು ೧೪,೩೭೨, ಅದೇರೀತಿ ಪ್ರೌಢಶಾಲೆಗಳು ೭೪ ಅದರಲ್ಲಿ ಹುಡುಗರು ೬,೫೦೩ ಮತ್ತು ಹುಡುಗಿಯರು ೬,೪೦೧ ಮತ್ತು ಪದವಿಪೂರ್ವ ಕಾಲೇಜುಗಳು ೧೭ ಅದರಲ್ಲಿ ಹುಡುಗರು ೧,೯೧೪, ಹುಡುಗಿಯರು ೨,೩೮೫ ಮತ್ತು ಪದವಿ ಕಾಲೇಜುಗಳು ೫, ಹುಡುಗರು ೧,೨೩೨, ಹುಡುಗಿಯರು ೧,೭೩೩ ತಾಲ್ಲೂಕಿನಲ್ಲಿ ೬೩೯ ಗ್ರಾಮ ಪಂಚಾಯಿತಿ ಸದಸ್ಯರ ಸ್ಥಾನಗಳಿವೆ ಆರು, ವಾರ್ಡುಗಳ ಮೂಲಕ ಚುನಾವಣೆ ನಡೆಯುತ್ತದೆ.'[೮]

ತಾಲ್ಲೂಕಿನ ಇತರೆ ವಿಷಯಗಳು:

ಚನ್ನಗಿರಿ ತಾಲ್ಲೂಕಿನ ಮೈದಾನ ವಿಶಾಲವಾಗಿದ್ದು ಆದರೆ ಸುಮಾರು ೪೦–೫೫ ವರ್ಷಗಳಿಂದ ಭದ್ರಾ ಜಲಾಶಯದ, ಐರಾವತದಿಂದ ಚನ್ನಗಿರಿ ತಾಲ್ಲೂಕು ಬಹುತೇಕವಾಗಿ ಹಸಿರು ಸಮೃದ್ಧವಾದ ಪ್ರದೇಶವಾಗಿದೆ. ಜನಗಳು ಆರ್ಥಿಕವಾಗಿ ತುಂಬಾ ಅನುಕೂಲವಂತರಾಗಿದ್ದಾರೆ.

ಕೃಷಿ:

'ಚನ್ನಗಿರಿ ತಾಲ್ಲೂಕಿನ ಜನರ ಮುಖ್ಯ ಕಸುಬು ಕೃಷಿ ತಾಲ್ಲೂಕಿನ ಕೆಲ ಪ್ರದೇಶಗಳಲ್ಲಿ ನೀರಾವರಿ ವ್ಯವಸ್ಥೆಯಿದೆ ಮತ್ತೇ ಕೆಲವು ಪ್ರದೇಶಗಳು ಮಳೆಯನ್ನೇ ಅವಲಂಬಿಸಿವೆ. ಮತ್ತು ಫಲವತ್ತಾದ ಭೂಮಿಯಿರುವುದರಿಂದ ಆಧುನಿಕ ವ್ಯವಸಾಯ ಪದ್ದತಿಯನ್ನು ಹೆಚ್ಚು ಹೆಚ್ಚಾಗಿ, ಜನಪ್ರಿಯಗೊಳಿಸಲಾಗಿದೆ. ತಾಲ್ಲೂಕಿನಲ್ಲಿ ರಾಗಿ, ಜೋಳ, ಹತ್ತಿ, ಶೇಂಗಾ, ಮೆಕ್ಕೆಜೋಳ, ಸೂರ್ಯಕಾಂತಿ, ಎಳ್ಳು ಬೆಳೆಗಳು ಪ್ರಮುಖವಾಗಿ ಹೆಸರಾಗಿವೆ. ಮತ್ತು ದೊಡ್ಡಬ್ಬೀಗೆರೆಯ ಕಾಡುಗೊಲ್ಲರ ಹಟ್ಟಿಯಲ್ಲಿ ಅವರು ಬೆಳೆಯುವ ಪ್ರಮುಖ ಬೆಳೆಗಳು ಮಾವಿನ ತೋಟ ಮತ್ತು ಮೆಕ್ಕೆಜೋಳ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಅದೇ ರೀತಿಯಾಗಿ ಉತ್ತಮವಾದ ಕಪ್ಪು ಮತ್ತು ಕೆಂಪು, ಮಣ್ಣಿನ ಭೂಮಿಯನ್ನು ಪಡೆದಿದೆ. ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಕಲ್ಲು ಮಿಶ್ರಿತ ಕೆಂಪು ಭೂಮಿಯಿದೆ. ತಾಲ್ಲೂಕಿನ ಮುಖ್ಯ ಬೆಳೆ ಭತ್ತ ಸುಮಾರು ೩೦೦೦೦ ಸಾವಿರ ಹೆಕ್ಟೇರುಗಳಲ್ಲಿ ಭತ್ತ ಬೆಳೆಯಲಾಗುತ್ತದೆ. ಬಹುತೇಕ ಭೂಮಿ ಬಯಲು ಪ್ರದೇಶ ಅದರಲ್ಲೂ ಭದ್ರಾ ಮುಖ್ಯನಾಲೆ ಹಾದು ಹೋಗುವುದರಿಂದ ಉಪನಾಲೆಗಳು ಅಧಿಕವಾಗಿದ್ದು ಸುಮಾರು ೧೮೦೦೦ ಮತ್ತು ೪೦೦೦ ಸಾವಿರ ಎಕರೆಗಳಷ್ಟು ಭೂಮಿ ಅಡಕೆ ತೋಟವಿರುವುದು ಕಂಡುಬರುತ್ತದೆ. ಮತ್ತು ತಾಲ್ಲೂಕಿನಾದ್ಯಂತ ಅಡಕೆ ಬೆಳೆಯನ್ನು ಬೆಳೆಯುವ ಪದ್ಧತಿಯಿದೆ ಎಂದೂ ಹೇಳಬಹುದು.'[೯]

ಪಶುಸಂಗೋಪನೆ:

'ಚನ್ನಗಿರಿ ತಾಲ್ಲೂಕಿನಲ್ಲಿ ವಿಸ್ತಾರವಾದ ಮೈದಾನ ಮತ್ತು ಹುಲ್ಲುಗಾವಲು ಇರುವುದರಿಂದ ಇಲ್ಲಿಯ ದನಗಳು ಬಹಳ ವಿಶಿಷ್ಟವಾಗಿರುತ್ತವೆ. ಅಂದರೆ ಗುಡ್ಡಗಾಡುಗಳಿಂದ ಕೂಡಿದ ಬೆಟ್ಟಗುಡ್ಡ ಮತ್ತು ಬಯಲು ಪ್ರದೇಶಗಳ ಕಾಡಿನಿಂದ ಕೂಡಿರುವುದರಿಂದ ಕಾಡುಗೊಲ್ಲರು ದನಕರ ಹಾಗೂ ಕುರಿಗಳಿಗೆ ಉತ್ತಮ ಮೇವು ನೀರು ಸಂಗ್ರಹವಾಗಿರುವುದರಿಂದ ಅತಿ ಹೆಚ್ಚಿನದಾಗಿ ಎಮ್ಮೆಗಳನ್ನು ಸಾಕುತ್ತಾರೆ. ಮತ್ತು ಬಹುತೇಕವಾಗಿ ಹಚ್ಚಹಸಿರಿನಿಂದ ಕೂಡಿರುವುದರಿಂದ ಕುರಿಗಳಿಗೆ ಮೇಯುವುದಕ್ಕೆ ತುಂಬಾನೆ ಅನುಕೂಲವಾಗುತ್ತದೆ. ಬಹುತೇಕವಾಗಿ ಎತ್ತು ಹಸುಗಳನ್ನೇ ಉಳುಮೆಗೆ ಬಳಸಲಾಗುತ್ತದೆ. ಮತ್ತು ಎಮ್ಮೆ ಹಸುಗಳಿಂದ ಹಾಲನ್ನು ಮಾರಿ ಆರ್ಥಿಕವಾಗಿ ಜೀವನ ನಿರ್ವಹಿಸುವರು ಮತ್ತು ಹಿಂದುಳಿದವರು ಇದ್ದಾರೆ. ಇತ್ತೀಚಿನ ದಿನಗಳಲ್ಲಿ ನೀರಾವರಿ

ಮತ್ತು ಒಣ ಭೂಮಿ ಪ್ರದೇಶಗಳಲ್ಲಿಯೂ ಸಹ ಟ್ರಾಕ್ಟರ್‌ಗಳನ್ನು ಬಳಸಲಾಗುವುದು. ತಾಲ್ಲೂಕು ಪಂಚಾಯತ್ ಮತ್ತು ಮಂಡಲ್ ಪಂಚಾಯತ್‌ಗಳ ಸಹಕಾರದಿಂದ ಪಶುವೈದ್ಯ ಕೇಂದ್ರಗಳನ್ನು ಆರಂಭಿಸಲಾಗಿದೆ. ಈ ಕೇಂದ್ರಗಳಿಂದ ಪಶುಪಾಲನೆ, ಪೋಷಣೆ, ರೋಗ ತಡೆಯಲು ಚುಚ್ಚುಮದ್ದು ಹಾಕುವುದು, ಜೆರ್ಸಿ, ಮತ್ತು ಸಿಂಧಿ ಆಕಳುಗಳನ್ನು ಸಾಕುವುದಕ್ಕೆ ಗ್ರಾಮಸ್ಥರನ್ನು ಪ್ರೋತ್ಸಾಹಿಸುವುದು. ಈ ಸಂಘ ಸಂಸ್ಥೆಗಳ ಕಾರ್ಯವಾಗಿದೆ. ಮತ್ತು ತಾಲ್ಲೂಕಿನಲ್ಲಿ ಕುರಿ ಉತ್ಪನ್ನಗಳ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ.

ಮೀನುಗಾರಿಕೆ:

ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ ಮೀನುಗಳನ್ನು ಒದಗಿಸುವ ಉತ್ತಮ ಕರೆಯಾಗಿದೆ. ಇಲ್ಲಿನ ಕಿಳ್ಳೇಕ್ಯಾತರ ಮುಖ್ಯ ಕಸುಬು ಕೆರೆಗಳಲ್ಲಿ ಮೀನು ಹಿಡಿಯುವುದಾಗಿದೆ. ತಾಲ್ಲೂಕಿನ ಮೀನು ಸಾಕಾಣಿಕೆ ಶಾಖೆಗಳಲ್ಲಿ ಶಾಂತಿಸಾಗರವೂ ಒಂದಾಗಿದೆ. ಇಲ್ಲಿಯ ಕೆರೆಯ ಏರಿಯ ಕೆಳಗೆ ೪,೨೦ ಹೆಕ್ಟೇರ್‌ನಲ್ಲಿ ಮೀನು ಸಾಕಾಣಿಕೆಗೆ ವ್ಯವಸ್ಥೆ ಮಾಡಲಾಗಿದ್ದು. ೧,೦೨ ಹೆಕ್ಟೇರ್‌ನಲ್ಲಿ ಮೀನುಗಳನ್ನು ಸಾಕುತ್ತಾರೆ. ವಿಧ ವಿಧವಾದ ಮೀನುಗಳು ಇಲ್ಲಿ ಸಿಗುತ್ತವೆ. ಅವುಗಳಲ್ಲಿ ಕಡ್ಡಿ ಮೀನು, ಬಾಂಗಡಿ ಮೀನು, ಫಾರಂಮೀನು, ಹರಗಿ ಕೊರಕ ಮೀನು, ಗಂಡಾ ಕಮ್ಮೀನು, ಕಾಗೆ ಕುಚ್ಚು ಮೀನು, ಗೌರಿಮೀನು, ಹಾವುಮೀನು, ಬಾಳೆ ಮೀನು ಮುಂತಾದವು, ಇಲ್ಲಿ ಹಿಡಿದ ಮೀನುಗಳನ್ನು ದಾವಣಗೆರೆ, ಭದ್ರಾವತಿ, ಸಂತೇಬೆನ್ನೂರು, ಚನ್ನಗಿರಿ, ನಲ್ಲೂರು, ಹೊನ್ನಾಳಿ, ಹಾಗೂ ಜಿಲ್ಲೆಯ ವಿವಿಧ ಕಡೆಗಳಲ್ಲಿ ಮಾರಾಟ ಮಾಡಲಾಗುವುದು.'[೧೦]

೨.೫ ಜನಸಂಖ್ಯೆ:

ಕೋಷ್ಟಕ ೨.೧

ಕಾಡುಗೊಲ್ಲರ ನೆಲೆಗಳವಾರು ಹಾಗೂ ಲಿಂಗವಾರು ಜನಸಂಖ್ಯೆ ಪ್ರಮಾಣ:

ಜಿಲ್ಲೆ	ತಾಲ್ಲೂಕು	ನೆಲೆಗಳು	ಕುಟುಂಬ	ಗಂಡು	ಹೆಣ್ಣು	ಒಟ್ಟು
ದಾವಣಗೆರೆ	ಚನ್ನಗಿರಿ	ದೊಡ್ಡಬ್ಬಿಗೇರೆ ಗೊಲ್ಲರಹಟ್ಟಿ	೪೬	೧೪೨	೧೩೧	೨೭೩
		ಗೊಲ್ಲರ ಹಟ್ಟಿ	೩೧	೧೨೭	೧೨೫	೨೫೨
		ಒಟ್ಟು	೯೭	೨೬೯	೨೫೬	೫೨೫

ಈ ಮೇಲ್ಕಂಡ ಕೋಷ್ಟಕದನ್ವಯ ಆಯ್ದ ಗ್ರಾಮಗಳ ಒಟ್ಟಾರೆ ಕೌಟುಂಬಿಕ ಕ್ಷೇತ್ರ ಕಾರ್ಯದಲ್ಲಿ ೯೭ ಕುಟುಂಬಗಳಲ್ಲಿ ೫೨೫ ಕಾಡುಗೊಲ್ಲರ ಜನಸಂಖ್ಯೆಯಿದೆ. ಇದರಲ್ಲಿ ಗಂಡು ಮತ್ತು ಹೆಣ್ಣು ಕ್ರಮವಾಗಿ ಶೇ ೫೧.೨೩, ಹಾಗೂ ಶೇ ೪೮.೭೬ ರಷ್ಟಿದ್ದಾರೆ.

ಇದರಲ್ಲಿ ಚನ್ನಗಿರಿ ತಾಲ್ಲೂಕಿನ ದೋಡ್ಡಬ್ಬಿಗೆರೆ ಗ್ರಾಮಪಂಚಾಯಿತಿಯ ಗೊಲ್ಲರಹಟ್ಟಿಯಲ್ಲಿ ಶೇ ೫೨.೦೦ ಇದರಲ್ಲಿ ಗಂಡು ಶೇ.೫೨.೦೧ ಹಾಗೂ ಹೆಣ್ಣು ಶೇ ೪೭.೯೮ ರಷ್ಟು ಮತ್ತು ಅದೇ ರೀತಿಯಾಗಿ ಗೊಲ್ಲರ ಹಟ್ಟಿಯಲ್ಲಿ ಶೇ ೪೮.೦೦ ಇದರಲ್ಲಿ ಗಂಡು ಶೇ.೫೦.೩೯ ಮತ್ತು ಹೆಣ್ಣು ೪೯.೬೦ ರಷ್ಟು ಕಾಡುಗೊಲ್ಲ ಜನಸಂಖ್ಯೆ ಇದೆ. ಒಟ್ಟಾರೆಯಾಗಿ ದೊಡ್ಡಬ್ಬೀಗೆರೆಯ ಗೊಲ್ಲರಹಟ್ಟಿಯಲ್ಲಿ ಅತಿ ಹೆಚ್ಚಿನ ಜನಸಂಖ್ಯೆ ಪ್ರಮಾಣ ಹೆಚ್ಚಾಗಿರುವುದು ಕಾಣ ಸಿಗುತ್ತದೆ ಅಂತೆಯೇ ಹೆಣ್ಣಿನ ಲಿಂಗವಾರು ಪ್ರಮಾಣಕ್ಕೆ ಹೋಲಿಸಿದಾಗ, ಗಂಡಿನ ಲಿಂಗವಾರು, ಪ್ರಮಾಣ ಹೆಚ್ಚಾಗಿದ್ದು. ಹೆಣ್ಣಿನ, ಲಿಂಗಾನುಪಾತ ಕಡಿಮೆ ಇದೆ ಅಂದರೆ ಒಂದು, ಸಾವಿರಕ್ಕೆ ಪ್ರತಿ, ಶತ ೭.೬೩ ರಷ್ಟು ಇದೆ.

'ಕರ್ನಾಟಕ ರಾಜ್ಯದಲ್ಲಿ ಕಾಡುಗೊಲ್ಲರ ಜನಸಂಖ್ಯೆ ಅಧಿಕೃತವಾಗಿ ಎಷ್ಟು ಎಂಬುದು ಜನಗಣತಿಯ ವರದಿಗಳಲ್ಲಿ ಕಾಣಸಿಗುವುದಿಲ್ಲ, ೧೮೮೧ರ ಜನಗಣತಿಯ ಪ್ರಕಾರ ಅಂದಿನ ಮೈಸೂರು ಪ್ರಾಂತ್ಯದ ಕಾಡುಗೊಲ್ಲರ ಒಟ್ಟು ಜನಸಂಖ್ಯೆ ೪೪.೭೧೭ ಎಂದೂ ದಾಖಲಿಸಲಾಗಿದೆ ೧೯೭೫ರಲ್ಲಿ ನೇಮಕವಾದ ಮೊದಲನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ ಕಾಡುಗೊಲ್ಲರ ಜನಸಂಖ್ಯೆ ಎರಡುವರೆ ಲಕ್ಷದಷ್ಟಿರಬಹುದೆಂದು, ಊಹೆ, ಮಾಡಿ ತಿಳಿಸಿದ್ದಾರೆ.

ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ, ಪ್ರಕಾರ ಒಟ್ಟು ಕರ್ನಾಟಕ ರಾಜ್ಯದಲ್ಲಿ ೧೧೪೧ ಕಾಡುಗೊಲ್ಲರ ನೆಲೆಗಳಿದ್ದು ಆರು ಲಕ್ಷದ ೩೭ ಸಾವಿರ ಜನಸಂಖ್ಯೆ ಇದೆ ಎಂದೂ ತಿಳಿಸಿದ್ದಾರೆ, ಇದರಲ್ಲಿ ಊರು ಗೊಲ್ಲ ಹಾಗೂ ಕಾಡುಗೊಲ್ಲರು, ಸೇರಿಕೊಂಡಿರುವ ಸಾಧ್ಯತೆಗಳಿವೆ ಹೀಗಾಗಿ ಇಂದು ಸುಮಾರು ೨,೦೦,೦೦೦ ಜನರು ಕಾಡುಗೊಲ್ಲರಿರಬಹುದಾಗಿದೆ,

ಕಾಡುಗೊಲ್ಲರನ್ನು ಕರ್ನಾಟಕ ಸರ್ಕಾರ ಹಿಂದುಳಿದ ವರ್ಗಗಳ ಪ್ರವರ್ಗ-೧ ರಲ್ಲಿ ಸೇರಿಸಿರುವುದರಿಂದ ಭಾರತ ಸರ್ಕಾರ ಇವರ ಜನಗಣತಿಯನ್ನು ಮಾಡಿಲ್ಲ, ಹೀಗಾಗಿ ಕಾಡುಗೊಲ್ಲರ ಜನಸಂಖ್ಯೆ ನಿಖರವಾಗಿ ಎಷ್ಟಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ೧೯೮೬ ರಲ್ಲಿ ಕರ್ನಾಟಕ ಸರ್ಕಾರ ನೇಮಿಸಿದ ಹಿಂದುಳಿದ ವರ್ಗದ ಆಯೋಗವು ನಡೆಸಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ಪ್ರಕಾರ ಗೊಲ್ಲ ಸಮುದಾಯದ ಜನಸಂಖ್ಯೆ ೫,೯೫,೩೧೪ ರಷ್ಟಿದೆ. ಕರ್ನಾಟಕ ಸರ್ಕಾರ ಮಾಡಿರುವ ಸಮೀಕ್ಷೆಯಲ್ಲಿ ಊರುಗೊಲ್ಲರು ಹಾಗೂ ಕಾಡುಗೊಲ್ಲರು ಸೇರಿಕೊಂಡಿರುವುದರಿಂದ ಕಾಡುಗೊಲ್ಲರ ಜನಸಂಖ್ಯೆ ಎಷ್ಟಿದೆ ಎಂಬುದು ತಿಳಿಯುವುದಿಲ್ಲ.

ಕಾಡುಗೊಲ್ಲರ ಜನಸಂಖ್ಯೆ ಎಷ್ಟು ಎಂಬುದು, ಜನಗಣತಿಯವರ ದಿನಗಳಲ್ಲಿ ದೊರೆಯುವುದಿಲ್ಲ, ಈವರೆಗೆ ಎಲ್ಲಾ ಬಗೆಯ ಗೊಲ್ಲರನ್ನು ಒಟ್ಟಾರೆ ಸೇರಿಸಿ, ಯಾದವರು, ಅಥವಾ ಗೊಲ್ಲರು, ಎಂಬ ಹೆಸರಿನಲ್ಲಿ, ಜನಸಂಖ್ಯೆಯ ವಿವರಗಳನ್ನು ಕೊಟ್ಟಿದ್ದಾರೆ. ಈ ಕಾರಣಗಳಿದಿಂದಾಗಿ, ಕಾಡುಗೊಲ್ಲರ ಜನಸಂಖ್ಯೆ, ಎಷ್ಟು ಎಂಬುದರ ಬಗ್ಗೆ ಮಾಹಿತಿ ದೊರಕುವುದಿಲ್ಲ, ಈ ಬುಡಕಟ್ಟನ್ನು ಪರಿಶಿಷ್ಟ ಬುಡಕಟ್ಟುಗಳ ಪಟ್ಟಿಗೆ ಸೇರಿಸಲು, ಪ್ರಯತ್ನಗಳು ನಡೆಯುತ್ತಿವೆ ಸ್ವತಃ ೧೯೭೩ ರಲ್ಲಿ ಕಾಡು ಗೊಲ್ಲರೇ ಆಗಿರುವ ಬೆಂಗಳೂರಿನಲ್ಲಿ ಹೈಕೋರ್ಟ್ ಅಡ್ವೋಕೇಟ್ ಆಗಿರುವ ಶ್ರೀಸಿದ್ದಪ್ಪ ಕಂಬಳಿಯವರು ಕಾಡುಗೊಲ್ಲರ ಜನಗಣತಿಯ ಮಾಹಿತಿಯನ್ನು ಆರಂಭಿಸಿ ಅವರು ಹೀಗೆ ವ್ಯಕ್ತಪಡಿಸುತ್ತಾರೆ. ಈವರೆಗೆ ಕೇವಲ ಮೂರು ಜಿಲ್ಲೆಗಳಲ್ಲಿ ಜನಗಣತಿ ಕಾರ್ಯ ನಡೆದಿದೆ ವಿವರಗಳು ಕೆಳಕಂಡಂತೆ ಇವೆ.'[೧೧]

೧. ಚಿತ್ರದುರ್ಗ ೧,೭೫,೦೦೦

೨. ತುಮಕೂರು ೧,೪೯,೦೦೦

೩. ಹಾಸನ ೮,೩೩೬

ಅಡಿಟಿಪ್ಪಣಿಗಳು

೦೧. ಮೈತ್ರಿ ಕೆ.ಎಂ., ಗುರುಲಿಂಗಯ್ಯ. ಎಂ ಅಲಕ್ಷಿತರ ಸಮಾಜಶಾಸ್ತ್ರ, ೨೦೧೦, ಪುಟ–೧೯

೦೨. ಗುರುಲಿಂಗಯ್ಯ. ಎಂ ಕರ್ನಾಟಕದ ಗೊಲ್ಲಸಮುದಾಯ, ೨೦೦೫, ಪುಟ–೦೨

೦೩. ಸಣ್ಣೋಬಯ್ಯ. ಎಸ.ಕೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ, ೨೦೦೨, ಪುಟ–೩೧, ೩೨

೦೪. ಗುರುಲಿಂಗಯ್ಯ. ಎಂ.ವಿ. ನಾಗಪ್ಪ ಕಾಡುಗೊಲ್ಲ, ೨೦೦೮, ಪುಟ–೨೩

೦೫. ವಿಮಲ ಅಮಲಪ್ಪ, ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ೨೦೦೯, ಪುಟ–೨೬, ೨೭

೦೬. ಕೃಷ್ಣಮೂರ್ತಿ ಹನೂರು, ಕಾಡುಗೊಲ್ಲರು ಸಂಪಾದಕರು, ಪ್ರೊ.ಎಚ್.ಜೆ.ಲಕ್ಕಪ್ಪಗೌಡರು, ಕರ್ನಾಟಕದ ಬುಡಕಟ್ಟುಗಳು, ಸಂಪುಟ–೧, ೧೯೯೮, ಪುಟ–೮೧೯, ೮೨೦

೦೭. ಗಿರಿಜ.ಟಿ, ದಾವಣಗೆರೆ ಇದು ನಮ್ಮ ಜಿಲ್ಲೆ, ೨೦೦೧, ಪುಟ–೪೬೨, ೪೬೩

೦೮. ದಾವಣಗೆರೆ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೧೨–೧೩ ನೇ ಸಾಲಿನ

೦೯. ಇಕ್ಬಾಲ ಅಹಮದ್. ಕೆ.ಆರ್, ಚನ್ನಗಿರಿ ದರ್ಶನ, ೨೦೦೦, ಪುಟ–೧೬

೧೦. ಅದೇ ಪುಟ–೧೭

೧೧. ವಿಮಲ ಅಮಲಪ್ಪ, ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು, ಅಪ್ರಕಟಿತ ಪಿಎಚ್,ಡಿ ಪ್ರಬಂಧ, ೨೦೦೯, ಪುಟ–೨೮, ೨೯

❑❑❑

ಅಧ್ಯಾಯ ಮೂರು

ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು

ಅಧ್ಯಾಯ ಮೂರು

ಸಾಮಾಜಿಕ ಬದುಕಿನ ಸ್ಥಿತ್ಯಂತರಗಳು

'ಮಾನವನ ಸಮಾಜ ಪರಿವರ್ತನಾಶೀಲವಾದುದು, ಇದರಿಂದಾಗಿ ಸಮಾಜ ನಿರಂತರವಾಗಿ ಪರಿವರ್ತನೆ, ಹೊಂದುತ್ತಲೇ ಇರುತ್ತದೆ. ಪರಿವರ್ತನಾಶೀಲ ಗುಣವಿರುವ ಕಾರಣ, ಮಾನವನ ಸಮಾಜವನ್ನು ಹರಿಯುವ ನದಿಗೆ ಹೋಲಿಸುತ್ತಾರೆ. ಅದೇ ರೀತಿಯಲ್ಲಿ ಹರಿಯುವ ನದಿಯಲ್ಲಿ ಹೊಸನೀರು ಬರುತ್ತಲೇ ಇರುತ್ತದೋ ಹಾಗೆಯೇ ಸಮಾಜ, ಬದಲಾವಣೆ, ಹೊಂದುತ್ತಲೇ ಇರುತ್ತದೆ. ಬದಲಾವಣೆ ಸಮಾಜದ ಅಂತರ್ಗತ ಗುಣವಾಗಿದೆ.

ಆಧುನಿಕ ದಿನಗಳಲ್ಲಿ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿನ ಸಂಪ್ರದಾಯಗಳು ಆಚಾರ ವಿಚಾರಗಳು ನಂಬಿಕೆಗಳು ರೀತಿ–ನೀತಿಗಳು ಮತ್ತು ಉಡುಗೆ, ತೊಡುಗೆಗಳಲ್ಲಿ ಬದಲಾವಣೆಯಾಗುತ್ತಿರುವುದು ಕಂಡುಬರುತ್ತದೆ. ಬದಲಾವಣೆ ನಿಸರ್ಗ ಸಹಜವಾದುದು ಮತ್ತು ಅನಾದಿಕಾಲದಿಂದಲೂ ಮಾನವ ಸಮಾಜ ಬದಲಾವಣೆ ಹೊಂದುತ್ತಲೇ ಬಂದಿದೆ. ಹಿಂದಿನ ಸಮಾಜದಂತೆ ಈಗಿನ ಸಮಾಜವಿಲ್ಲ, ಹೀಗಿರುವಂತೆ ಮುಂದೆ ಇರಲಾರದು, ಇದಕ್ಕೆ ನಿರಂತರ ಬದಲಾವಣೆಯೇ ಕಾರಣ, ಸಮಾಜದಂತೆ ಬದಲಾವಣೆಯೂ ಸಮಾಜದ ಮೂಲಭೂತ ಗುಣವಾಗಿದ್ದರೂ. ಪರಿವರ್ತನೆಯ ಗತಿಯಲ್ಲಿ ಏರುಪೇರುಗಳು ಕಂಡುಬರುತ್ತವೆ. ಒಂದು ಸಮಾಜದಲ್ಲಿ ಪರಿವರ್ತನೆಯ ಗತಿ ತೀವ್ರವಾಗಿರಬಹುದು, ಮತ್ತೊಂದು ಸಮಾಜದಲ್ಲಿ ಪರಿವರ್ತನೆಯ ಗತಿ ಮಂದವಾಗಿರಬಹುದು. ಕೈಗಾರೀಕರಣಗೊಂಡು ಔದ್ಯಮಿಕವಾಗಿ, ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪರಿವರ್ತನೆಯ ಗತಿ ತೀವ್ರವಾಗಿರುತ್ತದೆ. ಅದೇ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬದಲಾವಣೆ ಮಂದಗತಿಯಲ್ಲಿರುತ್ತದೆ. ಸಮಾಜವು ನಿತ್ಯ ಪರಿವರ್ತನಾಶೀಲವಾದುದು ಮತ್ತು ಎಲ್ಲಾ ಸಮಾಜಗಳು ಬದಲಾವಣೆಗಳನ್ನು ಆಹ್ವಾನಿಸುತ್ತವೆ. ಆದಿವಾಸಿ ಅಲೆಮಾರಿ ಸಮುದಾಯಗಳು ಗ್ರಾಮೀಣ ಹಾಗೂ ನಗರ, ಪ್ರದೇಶಗಳ ಆಧುನಿಕ ಹೀಗೆ ಪ್ರತಿಯೊಂದು ಸಮಾಜದಲ್ಲಿಯೂ ಬದಲಾವಣೆ ದಿನನಿತ್ಯ ಉಂಟಾಗುತ್ತಿರುತ್ತದೆ. ಆದರೆ ಬದಲಾವಣೆಯ ಗತಿಶೀಲತೆ ಮಾತ್ರ ಸಮಾಜದಿಂದ ಸಮಾಜಕ್ಕೆ ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತದೆ. ಹಾಗೆಯೇ ಒಂದೇ ಸಮುದಾಯದ ಜನರು ವಿವಿಧ ಪ್ರದೇಶಗಳಲ್ಲಿ ವಾಸಿಸುವಾಗ ಅವರ ಭಾಷೆ, ಸಂಸ್ಕೃತಿ, ಸಂಪ್ರದಾಯಗಳು, ಆಚಾರ ವಿಚಾರಗಳು ಬದಲಾವಣೆಯ ಗತಿಶೀಲತೆಯು ವ್ಯತ್ಯಾಸಗೊಳ್ಳುತ್ತದೆ. ಅಂತೆಯೇ ಒಂದೇ ಸಮಾಜದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯತ್ಯಾಸಗೊಳ್ಳುತ್ತದೆ. ಆದಿವಾಸಿ ಅಲೆಮಾರಿ ಸಮುದಾಯಗಳಲ್ಲಿ ಬದಲಾವಣೆಯು ನಿಧಾನ ಗತಿಯದ್ದಾಗಿದ್ದರೆ ಗ್ರಾಮೀಣ ಸಮಾಜದಲ್ಲಿ ಸ್ವಲ್ಪ ಸಾಧಾರಣ ಗತಿಯದಾಗಿದ್ದು, ನಗರ ಸಮಾಜದಲ್ಲಿ ತೀವ್ರಗತಿಯದ್ದಾಗಿರಬಹುದು. ಹೀಗೆ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯು

ವಿವಿಧ ಮಾದರಿಗಳಲ್ಲಿ ಕಂಡುಬರುವುದು ಸ್ವಾಭಾವಿಕವಾಗಿದ್ದರೂ ಸಾಮಾಜಿಕ ಚಿಂತಕರಿಗೆ ಇಂದು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗದ ಸಾಮಾಜಿಕ ಪ್ರಕ್ರಿಯೆಯಾಗಿದೆ. ಈ ಹಿನ್ನೆಲೆಯಲ್ಲಿ ಕಾಡುಗೊಲ್ಲ ಸಮುದಾಯಗಳಲ್ಲಿ ಉಂಟಾಗುತ್ತಿರುವ ಸಾಮಾಜಿಕ ಬದಲಾವಣೆಯನ್ನು ಚರ್ಚಿಸಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಸಾಮಾಜಿಕ ಬದಲಾವಣೆಯ ಅರ್ಥ ಮತ್ತು ವ್ಯಾಖ್ಯೆ:

ಎಲ್ಲಾ ಬದಲಾವಣೆಗಳನ್ನು ಸಾಮಾಜಿಕ ಬದಲಾವಣೆ, ಎಂದೂ ಕರೆಯಲಾಗದು ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಸಂಘಟನೆಗಳಲ್ಲಿ ಕಂಡುಬರುವ ಪರಿವರ್ತನೆಯನ್ನು ಸಾಮಾಜಿಕ ಪರಿವರ್ತನೆ ಎನ್ನಬಹುದು. ಜಾತಿ ಪದ್ಧತಿಯಲ್ಲಾಗುತ್ತಿರುವ ಬದಲಾವಣೆಗಳು, ಕುಟುಂಬ ವ್ಯವಸ್ಥೆಯಲ್ಲಾಗುತ್ತಿರುವ ಬದಲಾವಣೆಗಳು, ವರ್ಗ, ಪದ್ದತಿಯಲ್ಲಾಗುತ್ತಿರುವ ಬದಲಾವಣೆಗಳು. ಸರಳವಾಗಿ ಹೇಳಬೇಕೆಂದರೆ ಸಾಮಾಜಿಕ ಪ್ರಕ್ರಿಯೆಯಲ್ಲಿ ಕಂಡುಬರುವ ಪರಿವರ್ತನೆಯನ್ನು ಸಾಮಾಜಿಕ ಬದಲಾವಣೆ ಎಂದು ಕರೆಯಲಾಗುವುದು.

ಸಾಮಾಜಿಕ ಬದಲಾವಣೆಗಳನ್ನು ಕುರಿತು ಅನೇಕ ಸಮಾಜಶಾಸ್ತ್ರಜ್ಞರು ಈ ಕೆಳಗಿನಂತೆ ವ್ಯಾಖ್ಯಾನಿಸಿದ್ದಾರೆ.

೦೧. **ಕಿಂಗ್ಸ್‌ಲೇ ಡೇವಿಸ್:** "ಸಾಮಾಜಿಕ ರಚನೆ ಮತ್ತು ಕಾರ್ಯಗಳಲ್ಲಿ ಆಗುವ ಬದಲಾವಣೆಗಳನ್ನು ಸಾಮಾಜಿಕ ಪರಿವರ್ತನೆ ಎಂದು ಕರೆದಿರುವರು".

೦೨. **ಎಂ.ಇ.ಜೋನ್ಸ್:** "ಸಾಮಾಜಿಕ ಪ್ರಕ್ರಿಯೆ, ಸಾಮಾಜಿಕ ಮಾದರಿ, ಸಾಮಾಜಿಕ ಅಂತಃಕ್ರಿಯೆ ಸಾಮಾಜಿಕ ಸಂಘಟನೆ ಇತ್ಯಾದಿಗಳಲ್ಲಿ ಯಾವುದೇ ರೀತಿಯಲ್ಲಿ ಆಗುವ ಪರಿವರ್ತನೆ ಅಥವಾ ಮಾರ್ಪಾಟುಗಳನ್ನು ವಿವರಿಸಲು ಸಾಮಾಜಿಕ ಪರಿವರ್ತನೆ" ಎಂದು ಬಳಸಲಾಗುವುದು.

೦೩. **ಹೆಚ್.ಡಿ.ಮಝುಮದಾರ:** "ಜನರ ಜೀವನದಲ್ಲಿ ಅಥವಾ ಸಮಾಜದ ಕ್ರಿಯೆಯಲ್ಲಿ ಹಳೆಯದರ ಬದಲಾಗಿ ಹೊಸದನ್ನು ಅಳವಡಿಸುವಂತಹ ವಿನೂತನವಾದ ಶೋಭಾಚಾರ ಅಥವಾ ಪದ್ದತಿಗೆ ಸಾಮಾಜಿಕ ಪರಿವರ್ತನೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ".

೦೪ **ಮೆಕೈವರ ಮತ್ತು ಪೇಜ:** "ಸಾಮಾಜಿಕ ಸಂಬಂಧಗಳಲ್ಲಾಗುವ ಪರಿವರ್ತನೆಗಳನ್ನು ಸಾಮಾಜಿಕ ಪರಿವರ್ತನೆ" ಎಂದು ಕರೆದಿರುವರು.'[೧]

ಇಂದು ಕಾಡುಗೊಲ್ಲರನ್ನು ಗಮನಿಸಿದಾಗ ಅವರ ಬದುಕಿನ ಪ್ರತಿಯೊಂದು ಹಂತದಲ್ಲೂ ಸ್ಥಿತ್ಯಂತರಗಳಾಗುತ್ತಿರುವುದು ಕಂಡುಬರುತ್ತಿದೆ. ಇದಕ್ಕೆ ಕಾರಣ ಆಧುನೀಕರಣ, ವೈಜ್ಞಾನೀಕರಣ, ನಗರೀಕರಣ, ಶಿಕ್ಷಣ ಮತ್ತು ಉತ್ಪಾದನೆ ಮತ್ತು ಆರ್ಥಿಕ ವ್ಯವಸ್ಥೆ ಎಂದು ಹೇಳಬೇಕಾಗುತ್ತದೆ.

೩.೧ ಹುಟ್ಟು:

ಕಾಡುಗೊಲ್ಲರ ಜನನಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಅಲೆಮಾರಿ ಸಮುದಾಯಗಳಲ್ಲಿ ತನ್ನದೇ ವಿಶಿಷ್ಟವಾದ ರೀತಿ ನೀತಿ ಸಂಪ್ರದಾಯಗಳು ರೂಢಿ ಪದ್ಧತಿಗಳು ಮತ್ತು ಸಾಮಾಜಿಕ ಕಟ್ಟು ಕಟ್ಟಳೆಗಳು ನಿಯಮಗಳಿವೆ. ಆದರೆ "ಕಾಡುಗೊಲ್ಲರಲ್ಲಿ ಇಂತಹ ಒಂದು ಸಾಮಾಜಿಕ ನಿಯಮ ಅಥವಾ ಪದ್ದತಿಗಳು ಬಹುಶಃ ಬೇರೆ ಯಾವುದೇ ಅರೆಅಲೆಮಾರಿ ಬುಡಕಟ್ಟು ಅಥವಾ ಜಾತಿಯಲ್ಲಿ ಕಟ್ಟು-ನಿಟ್ಟಾಗಿ ಆಚರಿಸುವುದಿಲ್ಲ ಎಂಬುದು ಕಂಡುಬರುತ್ತದೆ. ಇಂತಹ ಒಂದು ಆಚರಣೆಗಳು, ಬಹಳ ಹಿಂದಿನ ಕಾಲದಿಂದಲೂ, ನಡೆದುಕೊಂಡು ಬಂದಿರುವ ಒಂದು ನಿರಂತರ ಪ್ರಕ್ರಿಯೆ. ಆದರೆ ಪ್ರತಿಯೊಂದು ಸಮುದಾಯಗಳಲ್ಲೂ ಜನನ ಕ್ರೀಯೆ ನಡೆಯುವ ಒಂದು ಸ್ವಾಭಾವಿಕ ಶಾರೀರಿಕ ಕ್ರಿಯೆಯಾಗಿದ್ದರೂ, ಕಾಡುಗೊಲ್ಲರಲ್ಲಿ ಜನನ ಕ್ರಿಯೆಯು ಒಂದು ರೀತಿಯ ಮೂಢನಂಬಿಕೆಯ ಫಲಪ್ರದವಾದ ಜೀವನ ಕ್ರಿಯೆಯಾಗಿದೆ. ಮತ್ತು ಬೇರೆ ಬೇರೆ ಬುಡಕಟ್ಟು ಅಲೆಮಾರಿ ಸಮುದಾಯದವರಲ್ಲಿ ನಡೆಯುವಂಥಹ ಜನನ ಕ್ರಿಯೆಗಳಿಗೆ ಹೋಲಿಸಿದರೆ ಕಾಡುಗೊಲ್ಲರಲ್ಲಿನ ಜನನ ಕ್ರಿಯೆಗಳಿಗೆ ಸಂಬಂಧಿಸಿದಂತೆ ನೋಡಿದರೆ ಇಂತಹ ದರಿದ್ರ ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳು ಇಂದಿಗೂ ಕಾಡುಗೊಲ್ಲರ ಸಮುದಾಯಗಳಲ್ಲಿ ಕಂಡುಬರುತ್ತವೆ.

ಕಾಡುಗೊಲ್ಲ ಸಮುದಾಯದವರು ಕಾಡುಗಳಲ್ಲಿ ವಾಸವಾಗಿರುವ ಬುಡಕಟ್ಟು ಸಂಸ್ಕೃತಿ ಮತ್ತು ಬುಡಕಟ್ಟು ಸಮುದಾಯದವರ ಸಂಪ್ರದಾಯಗಳ ಮತ್ತು ಆಚಾರ ವಿಚಾರಗಳ ರೀತಿಯಲ್ಲಿ ಆಚರಿಸುತ್ತಾರೆ. ಮತ್ತು ಕಾಡುಗೊಲ್ಲರಲ್ಲಿ ಹುಟ್ಟಿದರೂ ಸೂತಕ, ಮೈನೆರೆದರೂ ಸೂತಕ ಮದುವೆಯಾದರೂ ಸೂತಕ ಸತ್ತರೂ ಸೂತಕ ಎಂಬ ತತ್ವವನ್ನು ಇಂದಿಗೂ ಸಹ ಕಟ್ಟುನಿಟ್ಟಾಗಿ ಆಚರಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಕಾಡುಗೊಲ್ಲರ ಮಹಿಳೆಗೆ ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಮಹಿಳೆಯನ್ನು ಹಟ್ಟಿಯಿಂದ ದೂರ ಕರೆದೊಯ್ಯಲಾಗುತ್ತಿತ್ತು. ಬಸುರಿ ಮಹಿಳೆ ತಾನೇ ಹೆರಿಗೆ ಮಾಡಿಕೊಂಡು ತನ್ನ ಮಗುವಿನ ಕರುಳಬಳ್ಳಿಯನ್ನು ಅವಳೇ ಕತ್ತರಿಸಿಕೊಳ್ಳಬೇಕಾಗಿತ್ತು. ಯಾರೂ ಸಹ ಅವಳ ನೆರವಿಗೆ ಬರುವಂತಿರಲಿಲ್ಲ. ಆದರೆ ಹೆರಿಗೆಯ ಸಂದರ್ಭದಲ್ಲಿ ಎಷ್ಟೋ ಮಹಿಳೆಯರು ಸಾವನ್ನಪ್ಪಿದ ಪ್ರಸಂಗಗಳಿವೆ.[೨]" ಆದ್ದರಿಂದ ಇತ್ತೀಚಿನ ಆಧುನಿಕ ದಿನಗಳಲ್ಲಿ ಹೆರಿಗೆಯ ಸಂದರ್ಭದಲ್ಲಿ ಸಮುದಾಯದ ಹಿರಿಯ ಮಹಿಳೆಯು ಮುಂದೆ ನಿಂತು ನೆರವಿಗೆ ಧಾವಿಸುತ್ತಾರೆ. ಆದರೂ ಕೂಡ ಇಂದು ಕಾಡುಗೊಲ್ಲರಲ್ಲಿ ಮಹಿಳೆಯರು ಅಥವಾ ಪುರುಷರು ವಿದ್ಯಾವಂತರಾಗಿರುವುದರಿಂದ ಜೊತೆಗೆ ನಗರ ಪ್ರದೇಶಗಳಲ್ಲಿ ವಾಸವಾಗಿರುವುದರಿಂದ ಉತ್ತಮ ಆರೋಗ್ಯದ ದೃಷ್ಟಿಯಿಂದ ಗರ್ಭಿಣಿ ಸ್ತ್ರೀಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಹಣವಂತರು ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರ ಸಲಹೆ ಪಡೆದು ಹೆರಿಗೆ ಮಾಡಿಸಿಕೊಳ್ಳುವುದನ್ನು ಕಾಣುತ್ತೇವೆ.

ಹಿಂದಿನ ಕಾಲದಲ್ಲಿ ಹೆರಿಗೆಯ ನಂತರ, ಈ ಮುಂಚೆ ತಯಾರಿಸಿಟ್ಟಿದ್ದ ಗುಡಿಸಲಿಗೆ ತಾಯಿ, ಮಗುವನ್ನು ಬಿಟ್ಟು ೩ ದಿನಗಳ ಕಾಲ ಹಟ್ಟಿಯವರು. ನೀರು ಕಾಯಿಸಿ, ತಾಯಿ ಮಗುವಿನ ಹತ್ತಿರ ಬರದೆ ದೂರದಿಂದಲೇ ಸುರಿಯುತ್ತಿದ್ದರು. ೩ ದಿವಸ ಮನೆಯವರು ಸಹ ಊಟ ಕೊಡುತ್ತಾರೆ. ನಂತರ ಎರಡು ತಿಂಗಳುಗಳ ಕಾಲ ಮಗುವಿನ ಜೊತೆಗೆ ತಾಯಿಯನ್ನು ಹಟ್ಟಿಯಿಂದ ಹೊರಗಿಡುತ್ತಿದ್ದರು. ಬಾಣಂತಿಯೇ ಅಡುಗೆಯನ್ನು ಮಾಡಿಕೊಂಡು ಊಟ ಮಾಡಬೇಕಿತ್ತು. ಜೊತೆಗೆ ಮಗುವಿಗೆ ನೀರು ಕಾಯಿಸಿಕೊಂಡು ಅವಳೇ ಸ್ನಾನ ಮಾಡಿಸಬೇಕಿತ್ತು. ಅವರನ್ನು ಯಾರು ಸಹ ಮುಟ್ಟುತ್ತಿರಲಿಲ್ಲ ಆದರೆ ಮಗು ಅಥವಾ ಬಾಣಂತಿಯು ಎರಡು ತಿಂಗಳುಗಳ ಕಾಲ ವನವಾಸದ ನಂತರ ಹಟ್ಟಿಯ ಪೂಜಾರಿಯ ಅಥವಾ ಗೌಡನ, ನಿಯಮದಂತೆ ಸಂಪೂರ್ಣವಾಗಿ ಸೂತಕವನ್ನು ಕಳೆದು ದೇವಸ್ಥಾನಕ್ಕೆ ಬಂದು ಮಗುವಿಗೆ ನಾಮಕರಣ ಮಾಡಿ "ಜನಿಗೆ" ಕುರಿಯ ಹಾಲಿನಿಂದ ಮೈಲಿಗೆಯನ್ನು ಕಳೆದುಕೊಂಡು ಮನೆಗೆ ಹೋಗುತ್ತಿದ್ದರು.

ಆದರೆ ಇತ್ತೀಚಿನ ಆಧುನಿಕ ದಿನಗಳಲ್ಲಿ ವಿಧ್ಯಾವಂತ ಯುವಕ ಯುವತಿಯರು ಮಹಿಳೆಯರ ಆರೋಗ್ಯ ಅಥವಾ ಮಗುವಿನ ಆರೈಕೆಯ ದೃಷ್ಟಿಯಿಂದ ಹಾಗೂ ಮಾನವೀಯ ದೃಷ್ಟಿಯಿಂದ ಮನೆಯ ಒಳಗಡೆ ಇಂದು ಒಂದು ರೂಮಿನಲ್ಲಿ ಬಾಣಂತಿಗೋಸ್ಕರ ಮಗುವಿನ ಪಾಲನೆಗೆ ಅವಕಾಶ ಮಾಡಿಕೊಟ್ಟಿರುವುದನ್ನು ಕಾಣುತ್ತೇವೆ. ಅಡುಗೆಯ ವ್ಯವಸ್ಥೆಯನ್ನು ಬಾಣಂತಿಗೆ ಮನೆಯವರೇ ಮಾಡಿಕೊಡುವ ಮೂಲಕ ಸಹಾಯ ಮಾಡುತ್ತಿದ್ದಾರೆ ಈ ರೀತಿ ಸಾಮಾಜಿಕ ಬದಲಾವಣೆಯಾಗುತ್ತಿದ್ದಾರೆ.

೩.೨ ನಾಮಕರಣಶಾಸ್ತ್ರ:

ನಾಮಕರಣಶಾಸ್ತ್ರವು ಇತ್ತೀಚಿನ ಆಧುನಿಕ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ತಿಮ್ಮಪ್ಪನ ದೇವಸ್ಥಾನದ ಮುಂದೆ ಇಟ್ಟುಕೊಳ್ಳುತ್ತಾರೆ. ಶನಿವಾರದಂದು ನಾಮಕರಣ ಶಾಸ್ತ್ರದ ಕಾರ್ಯಕ್ರಮಕ್ಕೆ ಹಟ್ಟಿಯಲ್ಲಿ ಇರುವ ಸಂಬಂಧಿಕರಿಗೆ, ನೆಂಟರಿಗೆ ಮತ್ತು ಹಟ್ಟಿಯ ಹಿರಿಯರಿಗೆ ಜೊತೆಗೆ ಗೌಡನನ್ನು ಕರೆಯುತ್ತಾರೆ. ಹಾಗೂ ಪೂಜಾರಿಗೆ ಮುಂಚಿತವಾಗಿ ತಿಳಿಸಿರುತ್ತಾರೆ. ಈ ಊರಿನ ಗೊಲ್ಲರ ಹಟ್ಟಿಯಲ್ಲಿ ನಾಮಕರಣ ಶಾಸ್ತ್ರವನ್ನು ಮಗು ಹುಟ್ಟಿದ ೯ ದಿವಸಕ್ಕೆ ಹೆಸರಿಡುವ ಕಾರ್ಯಕ್ರಮವನ್ನು ಹಟ್ಟಿಯ ಪೂಜಾರಿಯೂ ನಿಂತು ನೇರವೇರಿಸಿಕೊಡುತ್ತಾರೆ. ನಂತರ ಮಗುವನ್ನು ತೊಟ್ಟಿಲಲ್ಲಿ ಹಾಕಿ ಕಿವಿಯ ಹತ್ತಿರ ಹೋಗಿ ಹೆಸರನ್ನು ಪೂಜಾರಿಯು ಹೇಳುತ್ತಾರೆ. ನಂತರ ಪೂಜಾರಿಗೆ ಬಟ್ಟೆಯನ್ನು ಮಗುವಿನ ತಂದೆ ತಾಯಿಯವರು ಕೊಡುವುದು ಇಲ್ಲವೇ ದಕ್ಷಿಣೆ ಕೊಡುವ ಪದ್ಧತಿ ಕಂಡುಬರುತ್ತದೆ. ನಂತರ ಸೋದರಮಾವನು ಸಹ ಮಗುವಿಗೆ ಬಟ್ಟೆಯನ್ನು ತರುತ್ತಾನೆ. ಈ ಕಾರ್ಯಕ್ರಮ ಮುಗಿದ ತಕ್ಷಣ ಬಂದಿರುವ ಹಟ್ಟಿಯ ಜನರಿಗೆ ಫಲಾಹಾರ, ಹಣ್ಣು, ಸಕ್ಕರೆಯನ್ನು ಹಂಚುತ್ತಾರೆ. ನಂತರ ದಾಸಪ್ಪನನ್ನು ಕರೆಯಿಸಿ ಗೋವಿಂದ

ಇಕ್ಕಿಸುತ್ತಾರೆ. ನಂತರ ತಮ್ಮ ಮನೆಗೆ ಬಂದ ನೆಂಟರಿಷ್ಟರಿಗೆ ಮತ್ತು ಹಟ್ಟಿಯ ಜನರನ್ನು ಕರೆದುಕೊಂಡು ಬಂದು ಅವರಿಗೆ ಸಿಹಿ ಅಡುಗೆಯಾದ ಪಾಯಸ, ಅನ್ನ, ಸಾಂಬಾರ್ ಜೊತೆಗೆ ಹೋಳಿಗೆಯ ಊಟವನ್ನು ಬಡಿಸುತ್ತಾರೆ.

ಇಂದು ನಗರೀಕರಣದ ಮತ್ತು ಕೈಗಾರೀಕರಣದ ಪ್ರಭಾವದಿಂದ ಶಿಕ್ಷಣವನ್ನು ಕಲಿತು ವಿಧ್ಯಾವಂತರಾಗಿರುವುದರಿಂದ ಹಾಗೂ ನಗರಗಳಲ್ಲಿ ಉದ್ಯೋಗಕೋಸ್ಕರ ವಾಸವಾಗಿರುವುದರಿಂದ ಅಥವಾ ವ್ಯಾಪಾರಗಳಲ್ಲಿ ತೊಡಗಿಕೊಂಡಿರುವುದರಿಂದ ಬೇರೆ ಬೇರೆ ಜಾತಿ ಸಮುದಾಯದವರು ಆಚರಿಸುವ ರೀತಿಯಲ್ಲಿಯೇ ಇವರು ಕೂಡ ಬದಲಾಗಿದ್ದಾರೆ. ಜೊತೆಗೆ ಮಗುವನ್ನು ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡುವುದಕ್ಕೂ ಒಂದು ದೊಡ್ಡ ಸಮಾರಂಭವನ್ನು ಇಂದು ಏರ್ಪಡಿಸುತ್ತಿದ್ದಾರೆ. ಪ್ರಾರಂಭದಲ್ಲಿ ನಾಮಕರಣಕ್ಕೆ ಹೆಚ್ಚಿನ ಹಣ ಖರ್ಚು ಮಾಡುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ನಾಮಕರಣಕ್ಕೆ ಹೆಚ್ಚಿನ ಹಣ ಖರ್ಚು ಮಾಡುತ್ತಿದ್ದಾರೆ.

ಹಳೆಯ ಹೆಸರುಗಳು	**ಹಳೆಯ ಹೆಸರುಗಳು**	**ಆಧುನಿಕ ಹೆಸರುಗಳು**	**ಆಧುನಿಕ ಹೆಸರುಗಳು**	**ಕುಲದೇವತೆಗಳ ಹೆಸರುಗಳು**
ಗಂಡು	ಹೆಣ್ಣು	ಗಂಡು	ಹೆಣ್ಣು	
ಚಿತ್ತಪ್ಪ	ಜಯ್ಯಮ್ಮ	ರಮೇಶ್	ಸಂಜು	ಕ್ಯಾತಲೀಂಗೇಶ್ವರ
ಅಡವಿಯಪ್ಪ	ರತ್ನಮ್ಮ	ಕಿರಣ	ಸಂಧ್ಯಾ	ತಿಮ್ಮಪ್ಪ
ಪಾತ ಲಿಂಗಪ್ಪ	ಚಿತ್ತಮ್ಮ	ಸಂಜಯ್	ರಕ್ಷಿತ	ಮೇಲುಕುಂಟೆ ರಂಗಸ್ವಾಮಿ
ಮೂಡಲಗಿರಿಯಪ್ಪ	ನಾಗಮ್ಮ	ಆಕಾಶ್	ಪುಷ್ಪ	ಜುಂಜಪ್ಪ
ಚಿಕ್ಕನಾಗಪ್ಪ	ಗೌರಮ್ಮ	ಶ್ರೀಧರ್	ಸುಮ	ಜುಂಜಪ್ಪ
ಗೋಪಾಲಪ್ಪ	ತಿಮ್ಮಜ್ಜಿ	ರಾಕೇಶ್	ವಾಣಿ	ಕಾಟಂದೇವರು
ಗೋವಿಂದಪ್ಪ	ಕೆಂಚಮ್ಮ	ಪ್ರವೀಣ್‌ಕುಮಾರ್	ರಮ್ಯ	ತಿಮ್ಮಪ್ಪ
ಅವನೀರಪ್ಪ	ಸಾಕಮ್ಮ	ಹರೀಶ್	ರೇಖಾ	ಚಿತ್ತದೇವರು

ನಾಮಕರಣಕ್ಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣ ಖರ್ಚು ಮಾಡಿ ಊರಿನ ಜನರ ಜೊತೆಗೆ ನೆಂಟರಿಸ್ಟರು ಮತ್ತು ಸಂಬಂಧಿಕರನ್ನು ಕರೆದು ಊಟ ಹಾಕುವುದು ಸಾಮಾನ್ಯವಾಗಿದೆ. ಪ್ರಾರಂಭದಲ್ಲಿ ಪೂಜಾರಿಯು ಮುಂದೆ ನಿಂತು ಮಾಡುತ್ತಿದ್ದ. ಈ ಶುಭ ಸಮಾರಂಭದಲ್ಲಿ ಅವರಿಗೆ ಬೆಲ್ಲ, ಅಕ್ಕಿ, ಗೋಧಿ, ಕೊಬ್ಬರಿ, ಎಲೆ, ಅಡಿಕೆ, ಮುಂತಾದ ವಸ್ತುಗಳನ್ನು ನೀಡುತ್ತಿದ್ದರು. ಈ ನಾಮಕರಣ ಶಾಸ್ತ್ರದ ಆಚರಣೆಯನ್ನು ದೇವಸ್ಥಾನದ ಮುಂದುಗಡೆ ನಡೆಯುತ್ತಿತ್ತು.

ಪ್ರಸ್ತುತ ದಿನಗಳಲ್ಲಿ ಸೋದರಮಾವನು ಮುಂದೆನಿಂತು ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತಾನೆ. ಹುಟ್ಟಿದ ೯ ದಿನಕ್ಕೆ ನಾಮಕರಣ ಮಾಡುವ ಪದ್ದತಿ ಕಾಡುಗೊಲ್ಲ ಜನರಲ್ಲಿ ಕಂಡುಬರುತ್ತದೆ. ಇಂತಹ ಸಭೆ ಸಮಾರಂಭಗಳು ಮನೆಯಲ್ಲಿಯೇ ನಡೆಯುವುದರಿಂದ ಇಂದಿನ ದಿನಗಳಲ್ಲಿ ಬದಲಾವಣೆ ಕಂಡಿದೆ ಎನ್ನಬಹುದು. ಆದರೆ ಆರ್ಥಿಕವಾಗಿ ಅಧಿಕ ಹಣ ಖರ್ಚುಮಾಡಿ ಸಂತೋಷ ಪಡೆಯುವುದು ಹೆಚ್ಚಾಗಿದ್ದು ಉಳಿತಾಯ ಕಡಿಮೆಯಾಗಿ ಬಡತನ ಮುಂದುವರಿದಿದೆ ಎನ್ನಬಹುದು. ಇಂತಹ ಸಮಾರಂಭಗಳು ಅವರು ಯಾರಿಗೂ ಕೂಡ ಕಡಿಮೆ ಏನು ಇಲ್ಲ ಎಂಬ ಶ್ರೀಮಂತಿಕೆಯ ಪ್ರತಿಷ್ಠೆಯನ್ನು ತೋರಿಸುತ್ತದೆ. ಈ ರೀತಿ ಸಾಮಾಜಿಕ ಬದಲಾವಣೆಯಾಗುತ್ತಿದ್ದಾರೆ.

೩.೩ ಜವುಳ:

ಬೇರೆ ಬೇರೆ ಜಾತಿ ಸಮುದಾಯಗಳ ರೀತಿಯಲ್ಲಿಯೇ ಕಾಡುಗೊಲ್ಲರು ಸಹ ಇವತ್ತು ಜವುಳವನ್ನು ತೆಗೆಸುವ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಜವುಳವನ್ನು ದೇವಸ್ಥಾನದ ಹೊರಗಡೆ ತೆಗೆಸುವ ಪದ್ಧತಿಯನ್ನು ಕಾಣಬಹುದು. ಮಗುವಿನ ಜವುಳವನ್ನು ಸುಮಾರು ೯ ತಿಂಗಳಿನಿಂದ ೨ ವರ್ಷದೊಳಗೆ ತೆಗೆಸುವ ಸಂಪ್ರದಾಯ ಕಂಡುಬರುತ್ತದೆ. ಜವುಳವನ್ನು ಹಿಂದೇ ಪೂಜಾರಿಯೇ ತೆಗೆಯುತ್ತಿದ್ದ. ಆದರೆ ಇತ್ತೀಚಿಗೆ ಪೂಜಾರಿಯ ಬದಲಿಗೆ ಸೋದರಮಾವನು ಜವುಳವನ್ನು ತೆಗೆಯುವುದು ಕಂಡುಬರುತ್ತದೆ. ಆದರೆ ಸೋದರಮಾವನಿಗೆ ಮಗುವಿನ ತಾಯಿ ತಂದೆಯವರು ಬಟ್ಟೆಯನ್ನು ಕೊಡುವ ಪದ್ಧತಿ ಇಂದು ಕಂಡುಬರುತ್ತದೆ. ದೊಡ್ಡಬ್ಬೀಗೆರೆಯ ಗೊಲ್ಲರ ಹಟ್ಟಿಯಲ್ಲಿ ಜವುಳದ ಕಾರ್ಯಕ್ರಮವನ್ನು ತೆಗೆಸುವ ಸಂದರ್ಭದಲ್ಲಿ ಅವರ ನೆಂಟರಿಷ್ಟರಿಗೆ ಮತ್ತು ಹಟ್ಟಿಯ ಜನರಿಗೆ ಎರಡು ದಿವಸದ ಮುಂಚಿತವಾಗಿ ವಿಷಯವನ್ನು ತಿಳಿಸುತ್ತಾರೆ. ಜೊತೆಗೆ ಈ ಹಟ್ಟಿಯಲ್ಲಿ ಇರುವ ಶ್ರೀ ಮೈಲೆಮಾರಮ್ಮ ದೇವಿಯ ಮೂಲಸ್ಥಳ ದೊಡ್ಡಬ್ಬೀಗೆರೆ ಆಗಿರುವುದರಿಂದ ಈ ಹಟ್ಟಿಯ ಜನರು ಜವುಳವನ್ನು ಕಾಳಘಟ್ಟದಲ್ಲಿರುವ ಮೈಲೆಮಾರಮ್ಮನ ಮತ್ತು ಕರಿಯಮ್ಮನ ದೇವಸ್ಥಾನದಲ್ಲಿ ಜಾತ್ರೆಯ ದಿವಸ ಈ ಹಟ್ಟಿಯಿಂದ ಎಲ್ಲರು ವಾಹನಗಳ ಅಥವಾ ಬಸ್ಸುಗಳ ಮುಖಾಂತರ ಹೋಗಿ. ಅಲ್ಲಿ ನೆಂಟರಿಷ್ಟರು ಎಲ್ಲರು ಕೂಡ ಈ ಕಾರ್ಯಕ್ರಮಕ್ಕೆ ಬರುತ್ತಾರೆ. ಜೊತೆಗೆ ಜವುಳವನ್ನು ತೆಗೆಸುವುದಕ್ಕೆ ಇನ್ನೂ ಕೆಲವರು ಅವರ ಮನೆ ದೇವರಾದ ತಿರುಪತಿ ತಿಮ್ಮಪ್ಪನ ದೇವಸ್ಥಾನಕ್ಕೆ ಹೋಗುವ ಜನರಿದ್ದಾರೆ. ಆದರೆ ಇವರು ಆರ್ಥಿಕವಾಗಿ ಶ್ರೀಮಂತಿಕೆ ಇರುವುದರಿಂದ ದೂರದ ದೇವರುಗಳಿಗೆ ಜವುಳವನ್ನು ಬಿಡುತ್ತಾರೆ. ಅಂದರೆ ಆರ್ಥಿಕವಾಗಿ ಹಿಂದುಳಿದವರು ಈ ಕಾಳಘಟ್ಟದ ದೇವಸ್ಥಾನದಲ್ಲಿ ಜವುಳವನ್ನು ತೆಗೆಸುತ್ತಾರೆ. ಅವರವರ ಅನುಕೂಲಕ್ಕೆ ತಕ್ಕಂತೆ ದೇವರುಗಳಿಗೆ ಜವುಳವನ್ನು ಬಿಡುತ್ತಾರೆ. ಇಂದು ಆರ್ಥಿಕವಾಗಿ ಹಣವಂತರು ಸುಮಾರು ಆರು ಸಾವಿರದಿಂದ ೧೦ ಸಾವಿರದವರೆಗೆ ಹಣವನ್ನು ಖರ್ಚು ಮಾಡಲಾಗುತ್ತದೆ. ಅಷ್ಟೇ ಅಲ್ಲದೇ ಅವರ ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ಬಂದಂತಹ ಸಂಬಂಧಿಕರಿಗೆ ಹಟ್ಟಿಯ

ಜನರಿಗೆ ಅವರು ಮಾಡಿಸಿದ ಸಿಹಿ ಪದಾರ್ಥ ಹೋಳಿಗೆ ತುಪ್ಪ ಪಾಯಿಸ ಪಲ್ಲೆ ಅನ್ನಸಾಂಬಾರು ಊಟ ಮಾಡಿಸಿರುತ್ತಾರೆ. ಇದರ ಜೊತೆಗೆ ಕುರಿ ಮಾಂಸದ ಅಡುಗೆಯನ್ನು ಸಹ ಮಾಡಿಸಿರುತ್ತಾರೆ. ಬಂದ ಅತಿಥಿಗಳು ಊಟವನ್ನು ಮಾಡುತ್ತಾರೆ. ಇತ್ತೀಚಿಗೆ ಇದು ಬದಲಾವಣೆ ಕಂಡಿದ್ದು ಬಹಳ ಪೈಪೋಟಿಯಿಂದ ಸಮಾರಂಭ ಏರ್ಪಡಿಸುವುದು ಕಂಡುಬರುತ್ತದೆ.

೩.೪ ಋತುಮತಿ:

ಪ್ರತಿಯೊಂದು ಬುಡಕಟ್ಟು ಸಮುದಾಯದಲ್ಲೂ ವಯಸ್ಸಿಗೆ ಬಂದಂತಹ ಎಲ್ಲಾ ಹೆಣ್ಣು ಮಕ್ಕಳು ಮೈನೆರೆಯುವುದು ಅಂದರೆ ಋತುಮತಿಯಾಗುವುದು ಪ್ರಕೃತಿ ಸಹಜವಾದದ್ದು. ವಿವಿಧ ಸಮುದಾಯಗಳಿಗಿಂತ ಕಾಡುಗೊಲ್ಲರಲ್ಲಿ ಹೆಣ್ಣು ಮಕ್ಕಳು ಋತುಮತಿಯಾದರೆ ಸೂತಕ ಎಂದು ಬಹಳ ವರ್ಷಗಳಿಂದ ಕಟ್ಟು ನಿಟ್ಟಿನ ಆಚರಣೆಗಳನ್ನು ಮಾಡುವುದನ್ನು ನಡೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹಿಂದಿನ ಕಾಲದಿಂದಲೂ ಅವರ ಸಮುದಾಯದಲ್ಲಿ ಹೆಣ್ಣು ಮಕ್ಕಳು ಋತುಮತಿಯಾದರೆ ೯ ರಿಂದ ೧೧ ದಿವಸಗಳ ಕಾಲ, ಮತ್ತು ಮುಟ್ಟಾದರೆ ೩ ರಿಂದ ೬ ದಿವಸಗಳ ಕಾಲ ಮನೆಯಿಂದ ಮತ್ತು ಹಟ್ಟಿಯಿಂದ ಸೂತಕದ ಹೆಸರಿನಲ್ಲಿ ಪ್ರತ್ಯೇಕವಾಗಿ ಅವಳನ್ನು ಹೊರಗೆ ಇಡುವುದನ್ನು ನಾವು ಕಾಣಬಹುದಾಗಿತ್ತು.

ಆದರೆ ಆಧುನಿಕ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಸೂತಕದ ಪ್ರಮಾಣ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಜೊತೆಗೆ ನಗರವಾಸಿಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇತ್ತೀಚಿಗೆ ವಿಧ್ಯಾವಂತ ತಂದೆ ತಾಯಿಯರು ಮತ್ತು ಯುವತಿಯರಲ್ಲಿ ಹೆಚ್ಚು ಕಡಿಮೆ ಈ ಸೂತಕದ ವಿಷಯವು ನಶಿಸಿ ಹೋಗಿದೆ. ಎಂದೂ ಹೇಳಬಹುದು.

ಹಿಂದಿನ ಕಾಲದಲ್ಲಿ ಕಾಡುಗೊಲ್ಲ ಬುಡಕಟ್ಟಿನ ಹೆಣ್ಣು ಮಕ್ಕಳು ಋತುಮತಿಯಾದರೆ ದೇವರ ಹಟ್ಟಿ ಮತ್ತು ಮನೆಗಳಿಗೆ ಸೂತಕ ಎಂಬ ನಂಬಿಕೆಯಿದ್ದು ಅಂತಹ ಹೆಣ್ಣು ಮಕ್ಕಳನ್ನು ಈ ಹಟ್ಟಿಯ ಹಿರಿಯ ಹೆಂಗಸರು ಅವಳನ್ನು ಹಟ್ಟಿಯಿಂದ ಹೊರಗಡೆ ಅಥವಾ ಹಟ್ಟಿಯಿಂದ ಸ್ವಲ್ಪ ದೂರದಲ್ಲಿರುವ ಬಂಡಿಗಾಡಿಯ ಕೆಳಗೆ ಅಥವಾ ಅಂಗಳದಲ್ಲಿ ಹಟ್ಟಿಯ ಹಿರಿಯ ಮುತ್ತೈದೆಯರು ಕೂರಿಸುತ್ತಿದ್ದರು ನಂತರ ಹಟ್ಟಿಯ ಹೆಣ್ಣು ಮಕ್ಕಳು ನೀರನ್ನು ಹೊಯ್ಯುತ್ತಾರೆ. ಅಗಸರವಳನ್ನು ಕರೆಸಿಕೊಂಡು ಮಡಿಮಾಡಿ ತಂದು ಕೊಟ್ಟ ಬಟ್ಟೆಗಳನ್ನು ಆ ದಿವಸ ಋತುಮತಿಯಾದ ಹೆಣ್ಣು ಮಗಳಿಗೆ ಉಡಲು ಕೊಡುತ್ತಾರೆ. ಋತುಮತಿಯಾದ ಮಹಿಳೆಗೆ ಇದೆ ರೀತಿ ೯ರಿಂದ ೧೧ ದಿವಸಗಳ ಕಾಲ ಅಗಸರವಳು ಪ್ರತಿನಿತ್ಯ ಬಟ್ಟೆಯನ್ನು ತೊಳೆದುಕೊಂಡು ಬರುತ್ತಾಳೆ. ನಂತರ ಋತುಮತಿಯಾದ ಹೆಣ್ಣುಮಗಳಿಗೆ ನಾಲ್ಕೈದು ಬೊಂಬುಗಳನ್ನು ನೆಟ್ಟು ಅವುಗಳ ಮೇಲೆ ಅಡ್ಡಲಾಗಿ ಬೇವಿನ ಮತ್ತು ಹೊಂಗೆ ಸೊಪ್ಪು ಅಥವಾ ತೆಂಗಿನ ಗರಿಯನ್ನು ಅದರ ಮೇಲೆ ಕಟ್ಟುವುದರಿಂದ ಹಸಿರು ಚಪ್ಪರವು ನಿರ್ಮಾಣವಾಗುತ್ತಿತ್ತು. ಮಳೆ, ಗಾಳಿ, ಬೇಸಿಲಿನಿಂದ ರಕ್ಷಿಸಿಕೊಳ್ಳಲು ಈ ರೀತಿ ಕಟ್ಟಿದ ಚಪ್ಪರದಲ್ಲಿ ಋತುಮತಿಯಾದ ಹುಡುಗಿಯನ್ನು

ಇಲ್ಲಿ ಬಿಡುತ್ತಿದ್ದರು. ಇಡೀ ಆ ದಿನದ ರಾತ್ರಿಯೆಲ್ಲಾ ಅವಳು ಎಚ್ಚರವಾಗಿರಬೇಕೆಂಬ ದೃಷ್ಟಿಯಿಂದ ಅವಳೊಡನೆ ಮಾತನಾಡಲು ಒಬ್ಬ ಹೆಂಗಸನ್ನು ಬಿಟ್ಟಿರುತ್ತಿದ್ದರು. ಹೆಣ್ಣು ಋತುಮತಿಯಾದ ಸಂದರ್ಭದಲ್ಲಿ ನಾಲ್ಕೈದು ಜನ ಹಿರಿಯ ಮುತ್ತೈದೆ. ಮಹಿಳೆಯರು ಜಾನಪದ ಹಾಡುಗಳನ್ನು ಹಾಡುವುದರ ಜೊತೆಗೆ ಸೋಬಾನೆ ಪದಗಳನ್ನು ಹೇಳುತ್ತಿದ್ದರು. ನಂತರ ಆ ಹೆಣ್ಣು ಮಗಳಿಗೆ ಬಾಳೆಹಣ್ಣು, ಸೇಬು, ಮೊಸಂಬಿ, ದ್ರಾಕ್ಷಿ, ಉತ್ತತ್ತಿ, ಗೋಡಂಬಿ, ಕೊಬ್ಬರಿ, ಕಡಲೆ, ಹೂವು–ಹಣ್ಣು ಮುಂತಾದವುಗಳಿಂದ ಮಡಿಲು ತುಂಬುತ್ತಾರೆ ಆ ಹೆಣ್ಣು ಮಗಳಿಗೆ ಆವತ್ತಿನ ದಿನ ಸಿಹಿ ಊಟದ ಜೊತೆಗೆ ತುಪ್ಪವನ್ನು ಬೆರೆಸಿ ಊಟಕ್ಕೆ ಬಡಿಸುತ್ತಾರೆ.

'ಇಂತಹ ಸಂಪ್ರದಾಯದಿಂದ ಕಾಡುಗೊಲ್ಲರ ಹೆಣ್ಣು ಮಕ್ಕಳನ್ನು ಒಂಟಿಯಾಗಿ ಬಿಡುವುದರಿಂದ ಅದೇ ಸಮುದಾಯದ ಅಥವಾ ಬೇರೆ ಸಮುದಾಯದ ಹುಡುಗರು ಲೈಂಗಿಕ ಕಿರುಕುಳ ಕೊಟ್ಟಿರುವುದಕ್ಕೆ ಅನೇಕ ಉದಾಹರಣೆಗಳಿವೆ. ಋತುಮತಿಯಾದ ಸಂದರ್ಭದಲ್ಲಿ ಕಾಡುಗೊಲ್ಲ ಸಮುದಾಯದ ಹೆಣ್ಣು ಮಗಳು ಬೇರೆ ಜಾತಿಯವರ ಮನೆಯ ಅಂಗಳದಲ್ಲಿ ಅಥವಾ ವರಾಂಡದಲ್ಲಿದ್ದರೆ ಅದು ಅವರಿಗೆ ಸೂತಕವೆನಿಸುವುದಿಲ್ಲ. ಆದರೆ ಕಾಡುಗೊಲ್ಲರ ಹಟ್ಟಿಯಲ್ಲಿದ್ದರೆ ಅವರ ದೇವರಿಗೆ ಸೂತಕವಾಗುತ್ತದೆ ಎಂದೂ ನಂಬಿದ್ದಾರೆ.

ಕಾಡುಗೊಲ್ಲರಲ್ಲಿ ಋತುಮತಿ ಆದ ಸಂದರ್ಭದಲ್ಲಿ ಯಾವ ರೀತಿ ನಡೆಸಿಕೊಳ್ಳುತ್ತಾರೆಯೋ ಅದೇ ರೀತಿಯಲ್ಲಿಯೇ ಬಾಣಂತಿಯರನ್ನು ಸಹ ನಡೆಸಿಕೊಳ್ಳುತ್ತಾರೆ. ಜೊತೆಗೆ ಮುಟ್ಟಾದವರ ಮೈನೆರೆದವರ ನೆರಳು ಯಾರ ಮೇಲು ಬೀಳುವಂತಿಲ್ಲ. ಊಟವನ್ನು ಇವರಿಗೆ ಕೊಡುವಾಗ ಇಂತಹ ಹೆಣ್ಣುಮಕ್ಕಳಿಗೆ ದೂರ ನಿಂತು ಕೈಗೆ ಹಾಕುತ್ತಾರೆ. ಜೊತೆಗೆ ನೀರನ್ನು ಬೊಗಸೆಗೆ ಮೇಲಿನಿಂದ ಸುರಿಯುತ್ತಾರೆ. ಈ ರೀತಿ ಮಾಡುವುದರಿಂದ ದಿನನಿತ್ಯದ ಸ್ವಚ್ಛತೆಯ ಮತ್ತು ಆರೋಗ್ಯದ ಬಗ್ಗೆ ಯಾರು ಯೋಚಿಸುವುದಿಲ್ಲ. ಕಾಡುಗೊಲ್ಲರು ಸೂತಕದ ಹೆಸರಿನಲ್ಲಿ ಮಡಿ ಮೈಲಿಗೆಯನ್ನು ಆಚರಿಸುತ್ತಾರೆ.

ಹಿಂದಿನ ಕಾಲದಲ್ಲಿ ಕಾಡುಗೊಲ್ಲರು ಹೆಣ್ಣುಮಕ್ಕಳನ್ನು ಋತುಮತಿಯಾಗುವವರೆಗೆ ಮಾತ್ರ ಶಾಲೆಗೆ ಕಳುಹಿಸುತ್ತಿದ್ದರು. ಋತುಮತಿಯಾದ ಹೆಣ್ಣು ಮಕ್ಕಳನ್ನು ಮಧ್ಯಕ್ಕೆ ಶಾಲೆ ಬಿಡಿಸುವುದರಿಂದ ಈ ಹೆಣ್ಣು ಮಕ್ಕಳು ಪ್ರೌಢ ಮತ್ತು ಕಾಲೇಜು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕಾಡುಗೊಲ್ಲರ ಹುಡುಗಿಯ ಮನೆಯವರು ಶ್ರೀಮಂತರಿರಲಿ, ಬಡವರಿರಲಿ ಶಾಲಾ ಕಾಲೇಜು ಶಿಕ್ಷಣದ ವ್ಯವಸ್ಥೆಯ ಅವಕಾಶವಿದ್ದರೂ ಸಹ ಹೆಣ್ಣು ಮಕ್ಕಳ ಶಿಕ್ಷಣವನ್ನು ಮುಂದುವರಿಸುವಂತಿರಲಿಲ್ಲ.

ಇಂದು ಗ್ರಾಮೀಣ ಪ್ರದೇಶಗಳಲ್ಲಿ ಸಹ ಶಾಲೆ ಬಿಡುತ್ತಿರುವವರಲ್ಲಿ (drop-outs) ಕಾಡುಗೊಲ್ಲ ಸಮುದಾಯದ ಹೆಣ್ಣು ಮಕ್ಕಳೇ ಅತಿ ಹೆಚ್ಚು ಎಂದೂ ಹೇಳಿದ್ದಾರೆ. ಮೈನೆರೆಯುವುದು ಒಂದು ಪ್ರಕೃತಿಯ ನಿಯಮವಾಗಿದ್ದರೂ ಕಾಡುಗೊಲ್ಲ ಸಮುದಾಯದ ಹೆಣ್ಣುಮಕ್ಕಳಿಗೆ ಶಿಕ್ಷಣದ ದೃಷ್ಟಿಯಿಂದ ಇದು ಒಂದು ಶಾಪವಾಗಿ ಪರಿಗಣಿಸಿದೆ.'[೩]

ಇತ್ತೀಚಿಗೆ ನಗರ ಪ್ರದೇಶಗಳಲ್ಲಿ ವಾಸವಾಗಿರುವ ಕಾಡುಗೊಲ್ಲ ವಿಧ್ಯಾವಂತ ಸರ್ಕಾರಿ ನೌಕರಿಯಲ್ಲಿರುವ ತಂದೆ ತಾಯಿಗಳು ತಮ್ಮ ಹೆಣ್ಣು ಮಗಳು ಋತುಮತಿಯಾಗುವುದನ್ನು ಸೂತಕ ಎಂದು ಬಾವಿಸದೆ ತಮ್ಮ ಮಕ್ಕಳನ್ನು ಶಾಲಾ–ಕಾಲೇಜುಗಳಿಗೆ ವಿದ್ಯಾಭ್ಯಾಸ ಮಾಡಲು ಮತ್ತು ಕಛೇರಿಗಳಲ್ಲಿ ದುಡಿಯಲು ಕಳುಹಿಸುವುದನ್ನು ಕಾಣುತ್ತೇವೆ.

ಕಾಡುಗೊಲ್ಲರಲ್ಲಿಯ ಕೆಲವು ಸಂಪ್ರದಾಯಸ್ಥ ನಗರವಾಸಿಗಳು ಸ್ವಂತ ಮನೆ ಕಟ್ಟುವಾಗ ಮೈನೆರೆದ ಹೆಣ್ಣುಮಕ್ಕಳಿಗೋಸ್ಕರ ಮತ್ತು ಮುಟ್ಟಾದವರಿಗೆಂದೇ ಒಂದು ಪ್ರತ್ಯೇಕ ಕೊಠಡಿ ಅಥವಾ ಬೆಡ್ ರೂಮಿನ ವ್ಯವಸ್ಥೆ ಕಲ್ಪಿಸುತ್ತಿರುವುದನ್ನು ಗಮನಿಸಿದರೆ ಇಂತಹ ಆಚರಣೆಗಳಿಗೆ ಮತ್ತು ಸೂತಕದ ಮಡಿ ಮೈಲಿಗೆಗೆ, ಕೊನೆ ಎಲ್ಲಿ ಎಂಬ ಭಾವನೆ ಉಂಟಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಗರವಾಸಿಗಳಲ್ಲಿ ಸೂತಕದ ವಿಷಯ ತುಂಬಾ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿಯೂ ಸಹ ಅಂದರೆ ನನ್ನ ಕ್ಷೇತ್ರಕಾರ್ಯದ ಗೊಲ್ಲರಹಟ್ಟಿಯಲ್ಲಿಯೂ ಸಹ ಋತುಮತಿಯಾದ ಹೆಣ್ಣುಮಕ್ಕಳನ್ನು ಹಿಂದಿನ ಕಾಲದಲ್ಲಿ ಆಚರಿಸುವ ಸಂಪ್ರದಾಯವನ್ನು ಬಿಟ್ಟು ಇತ್ತೀಚಿಗೆ ಮನೆಯ ಒಳಗಡೆ ಅವರಿಗೆ ಪ್ರತ್ಯೇಕ ಜಾಗವನ್ನು ನಿರ್ಮಿಸಿಕೊಂಡಿರುವುದನ್ನು ಕಾಣುತ್ತೇವೆ. ಪ್ರಸ್ತುತ ಆಧುನಿಕ ದಿನಗಳಲ್ಲಿ ಕಾಡುಗೊಲ್ಲರು ಸೂತಕದ ವಿಷಯದಲ್ಲಿ ಬದಲಾವಣೆಯಾಗಿದ್ದಾರೆ ಎಂದೂ ಹೇಳಬಹುದು.

೩.೫ ಉಡುಗೆ –ತೊಡುಗೆ:

ಕಾಡುಗೊಲ್ಲರ ಸಮುದಾಯದ ಉಡುಗೆ ತೊಡುಗೆಗಳು ಬಹಳ ಸಾಮಾನ್ಯವಾದವು. ಮತ್ತು ವಿಶಿಷ್ಟವಾದವು ಬೇರೆ ಸಮುದಾಯಗಳಿಗೆ ಹೋಲಿಸಿದರೆ ಇವರ ಉಡಿಗೆಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಕಾಡುಗೊಲ್ಲರು ಮೂಲತಃ ಪಶುಪಾಲಕರು, ಕುರಿಸಾಕಾಣಿಕೆ ಜೊತೆಗೆ ವ್ಯವಸಾಯ ಮಾಡುವುದರಿಂದ ಇವರು ತೊಡುವ ಉಡುಗೆಗಳು ಬಹಳ ವಿಶಿಷ್ಟವಾದುವು. ಮೂಲತಃ ಕಾಡುಗೊಲ್ಲರು ಹಸು, ಕುರಿ, ಎಮ್ಮೆ, ಎತ್ತು, ಮೇಕೆಗಳನ್ನು ಮೇಯಿಸುವುದಕ್ಕಾಗಿ ಗುಡ್ಡ, ಬೆಟ್ಟ, ಬಯಲು ಪ್ರದೇಶಗಳಿಗೆ ಹೋಗುವುದರಿಂದ ಕೃಷಿ ಕೆಲಸದಲ್ಲಿ ತೊಡಗಬೇಕಾಗುವುದರಿಂದ ಹಾಗೂ ಸದಾ ಕಾಡಿನ ಮಧ್ಯೆ ಇರುವುದರಿಂದ ಮಳೆ, ಗಾಳಿ, ಬಿಸಿಲು ಚಳಿಯಿಂದ ತಮ್ಮ ದೇಹವನ್ನು ರಕ್ಷಿಸಿಕೊಳ್ಳಲು ಇವರು ಒರಟು ಬಟ್ಟೆ ಧರಿಸುತ್ತಾರೆ. ಇವರು ಹಟ್ಟಿಯಿಂದ ಹೊರಡುವ ಸಮಯದಲ್ಲಿ ಮೈಮೇಲೆ ಅಂಗಿ, ಧೋತರ, ತಲೆಗೆ ಕೆಂಪು ಪೇಟ ಬಹುಪಾಲು ಜನರು ಮಂಡಿಯವರೆಗೆ ಕಚ್ಚೆ ಹಾಕಿರುತ್ತಾರೆ. ಹೆಗಲ ಮೇಲೆ ಒಂದು ಕರಿಯ ಕಂಬಳಿ ಹೊದ್ದಿರುತ್ತಾರೆ. ಜೊತೆಗೆ ಕೈಯಲ್ಲಿ ಒಂದು ಕೋಲನ್ನು ಹಿಡಿದುಕೊಂಡು ಹೊರಡುತ್ತಾರೆ. ಇವರಿಗೆ ಕರಿ ಕಂಬಳಿ ಎಂದರೆ ಬಹಳ ಇಷ್ಟ, ಕಾಲಿಗೆ ಚಪ್ಪಲಿ ಇದ್ದೇ ಇರಬೇಕು. ಅವರ ಚಪ್ಪಲಿ ಬಹಳ ದಪ್ಪವಾಗಿರುತ್ತದೆ ಮತ್ತು ಗಟ್ಟಿಯಾಗಿರುತ್ತದೆ. ಏಕೆಂದರೆ ಅವರು ಸದಾ ಮುಳ್ಳು, ಬಂಡೆ, ಕಲ್ಲುಗಳಿಂದ ಕೂಡಿರುವ ಗುಡ್ಡ–ಗಾಡುಗಳಲ್ಲಿ ಕುರಿಗಳನ್ನು

ಮೇಯಿಸುವುದರಿಂದ ಅವರು ಧರಿಸುವ ಚಪ್ಪಲಿಗಳು ಬಲಿಷ್ಟವಾಗಿರಬೇಕು. ಮಳೆಗಾಲದಲ್ಲಿ ಇತರೆ ಸಮುದಾಯದವರು ಛತ್ರಿಗಳನ್ನು ತೆಗೆದುಕೊಂಡು ಹೋದರೆ ಇವರು ಮಳೆಯಿಂದ ರಕ್ಷಿಸಿಕೊಳ್ಳಲು ಕಂಬಳಿ ತೆಗೆದುಕೊಂಡು ಹೋಗುತ್ತಾರೆ. ಮತ್ತು ಬಯಲು ಪ್ರದೇಶಗಳಲ್ಲಿ ಮಲಗುವುದಕ್ಕೂ ಕುಳಿತುಕೊಳ್ಳುವುದಕ್ಕೂ ಕಂಬಳಿ ಬಳಸುತ್ತಾರೆ. ಕಾಡುಗೊಲ್ಲರು ಹಿರಿಯ ಮಹಿಳೆಯರು ಹಿಂದಿನ ಕಾಲದಲ್ಲಿ ಕುಪ್ಪಸ ಅಥವಾ ರವಿಕೆ ತೊಡುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಕಾಡುಗೊಲ್ಲರ ಯುವಕ ಯುವತಿಯರು ಇತರೆ ಸಮುದಾಯದವರಂತೆ ಸಾಮಾನ್ಯ ಉಡುಗೆಗಳನ್ನೇ ತೊಡುತ್ತಿದ್ದಾರೆ. ಮತ್ತು ಪಾಶ್ಚಿಮಾತ್ಯ ಬಟ್ಟೆಗಳಿಗೆ ಮಾರು ಹೋಗಿದ್ದಾರೆ. ಕಾಡುಗೊಲ್ಲರು ವಿಧ್ಯಾವಂತರಾಗಿ ನಗರ ಪ್ರದೇಶಗಳಲ್ಲಿ ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಮುಂದುವರೆಯುತ್ತಿರುವುದರಿಂದ ಇಂದಿನ ಯುವಕ ಯುವತಿಯರು ಬೆಲೆ ಬಾಳುವ ಬಟ್ಟೆ ಮತ್ತು ಇತರೆ ವಸ್ತುಗಳ ಖರೀದಿಗಾಗಿ ಖರ್ಚು ಮಾಡುತ್ತಿರುವುದನ್ನು ಕಾಣಬಹುದು.

ಇಂದು ಯುವಕರು ಕೋಟು, ಪ್ಯಾಂಟ್, ಟೀ-ಶರ್ಟ್ ಉತ್ತಮವಾದ ಪಂಚೆಗಳನ್ನು ಮತ್ತು ಟವಲುಗಳನ್ನು ಧರಿಸುವುದನ್ನು ಕಾಣುತ್ತೇವೆ. ಯುವತಿಯರು ಚೂಡಿದಾರ, ಸೀರೆ, ಪ್ಯಾಂಟು, ಟೀ ಶರ್ಟ್‌ಗಳನ್ನು ಧರಿಸುತ್ತಾರೆ. ಹಿಂದಿನ ಕಾಲದಲ್ಲಿ ಪುರುಷರು ಉದ್ದನೆಯ ಪಟ್ಟೆ ಚಡ್ಡಿ ಮತ್ತು ಮಂಡಿಯವರೆಗೆ ಕಚ್ಚೆ ಹಾಕಿರುತ್ತಾರೆ. ತಲೆಗೆ ಪೇಟ ಸುತ್ತುತ್ತಿದ್ದರು. ಮಹಿಳೆಯರು ಕೆಂಪು ಅಂಚಿನ ಬಿಳಿಯ ಸೀರೆಯನ್ನು ಉಡುತ್ತಾರೆ. ಹಿಂದಿನ ಕಾಲದ ಮಹಿಳೆಯರು ರವಿಕೆ ತೊಡುವುದಿಲ್ಲ ಆದರೆ ಇತ್ತೀಚೆಗೆ ಅವೆಲ್ಲಾ ಬದಲಾಗಿರುವುದು ಕಂಡುಬರುತ್ತದೆ.

ತೊಡುಗೆ:

ಇಂದಿನ ಆಧುನಿಕ ಕಾಲದಲ್ಲಿ ಕಾಡುಗೊಲ್ಲ ಮಹಿಳೆಯರು ಸಾಮಾನ್ಯವಾಗಿ ಚಿನ್ನ, ಬೆಳ್ಳಿಯಿಂದ ಮಾಡಿದ ಆಭರಣಗಳನ್ನು ತೊಡುತ್ತಿರುವುದು ಕಂಡುಬರುತ್ತದೆ. "ಆದರೆ ಹಳೆಯ ಕಾಲದ ಮಹಿಳೆಯರು ಡಾಬು, ಕಾಸಿನ ಸರ, ಬುಗುಡಿ, ಸೊಂಟಕ್ಕೆ ಬೆಳ್ಳಿಯ ಡಾಬನ್ನು ತೊಡುವ ಪದ್ಧತಿ ಇತ್ತು. ಕೈಗೆ ಖಡಗ, ಮೂಗಿಗೆ ಮೂಗುತಿ, ಕಿವಿಗೆ ಓಲೆಯನ್ನು ಮತ್ತು ಕಾಲಿನ ಬೆರಳುಗಳಿಗೆ ಬೆಳ್ಳಿಯ ಕಾಲುಂಗುರ, ಸುತ್ತು, ಮಿಂಚು, ಪಿಲ್ಲಿ, ಕಾಲುಗಳಿಗೆ, ಬೆಳ್ಳಿಯ ಕಾಲಂದಿಗೆ, ಗೆಜ್ಜೆ ಪಟ್ಟಿ ತೊಡುತ್ತಾರೆ. ಪುರುಷರು ಹಿಂದಿನ ಕಾಲದಲ್ಲಿ ಕಿವಿಗೆ ಓಲೆ ಧರಿಸುತ್ತಿದ್ದರು. ಮದುವೆಯ ಸಂದರ್ಭದಲ್ಲಿ ಕಾಡುಗೊಲ್ಲರು ಗಂಡಿಗೆ ಮುಂಗೈ ಬದ್ದು, ಬಲಗೈ ತೋಳಿಗೆ ಬಟ್ಟಿನ ಸಲಿಗೆ, ಕಿವಿಗಳಿಗೆ ಪಾಟಲಾಕು, ಬಲಗಿವಿಗೆ ಅರೆಮುರುವು, ಎಡಗಿವಿಗೆ ಸಿಂಹದ ಮೂರುವು, ಕೊರಳಿಗೆ ಚೈನು ಮತ್ತು ಹೆಗಲ ಮೇಲೆ ಕರಿಕಂಬಳಿ, ಸೊಂಟಕ್ಕೆ ಕಂಚಿದಟ್ಟಿ, ತಲೆಗೆ ರೂಮಾಲು, ಕಾಲಿಗೆ, ಚಪ್ಪಲಿ ಇಷ್ಟನ್ನು ಹೆಣ್ಣಿನ ಕಡೆಯವರು ಗಂಡಿಗೆ ಕೊಡುವ ಸಂಪ್ರದಾಯವಿದೆ. ಇತ್ತೀಚಿನ ದಿನಗಳಲ್ಲಿ ಪುರುಷರು ಓಲೆಯನ್ನು ತೊಡುವುದನ್ನು ಕಡಿಮೆ ಮಾಡಿದ್ದಾರೆ."[೪]

೩.೬ ಸಂಗಾತಿ ಆಯ್ಕೆ:

ಇತರೆ ಸಮುದಾಯಗಳಿಗೆ ಹೋಲಿಸಿದರೆ ಸಂಗಾತಿ ಆಯ್ಕೆಯಲ್ಲಿ ಕಾಡುಗೊಲ್ಲರಲ್ಲಿ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಅದು ಕಟ್ಟುನಿಟ್ಟಿನ ರೂಪದಲ್ಲಿ ಕಂಡು ಬರುತ್ತದೆ. ಕುಟುಂಬದ ಹಿರಿಯರು ಊರಿನ ಮುಖಂಡರು ಮತ್ತು ಸಂಬಂಧಿಕರು ವರನಿಗೆ ತಕ್ಕ ಸಂಗಾತಿಯನ್ನು ತರಲು ಸುಮಾರು ಹಟ್ಟಿಗಳನ್ನು ಸುತ್ತಿ ದೂರದ ಸಂಬಂಧಿಕರಿಂದ ಪರಿಚಯ ಮಾಡಿಕೊಂಡು ನಂಟಸ್ಥನ ಮಾಡುತ್ತಾರೆ. ತಂದೆ–ತಾಯಿ, ಗುರು–ಹಿರಿಯರು ಹೇಳಿದ ರೀತಿಯಲ್ಲಿ ಮದುವೆ ನಡೆಯುವುದು ಇವರಲ್ಲಿರುವ ಪದ್ಧತಿ, ಇವರ ತೀರ್ಮಾನವೇ ಅಂತಿಮ. ಏಕೆಂದರೆ ಅವರು ಮುಂದೆ ಉತ್ತಮ ರೀತಿಯಲ್ಲಿ ಜೀವನ ಮಾಡಬೇಕು. ಮತ್ತು ಕುಟುಂಬದಲ್ಲಿ ಹೊಂದಾಣಿಕೆಯಿಂದ ಕೂಡಿಕೊಂಡು ಹೋಗಬೇಕು. ಎಲ್ಲರಿಗೂ ಗೌರವ ಕೊಡುವಂತಹ ಕುಟುಂಬದಿಂದ ಸಂಗಾತಿಗಳನ್ನು ಗಂಡಿಗೆ ತರುತ್ತಿದ್ದರು.

ಕಾಡುಗೊಲ್ಲರಲ್ಲಿ ಕೆಲವು ಸಲ ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಸಹ ವಿಚಾರಿಸುತ್ತಿರಲಿಲ್ಲ. ಸಂಗಾತಿಗಳ ಆಯ್ಕೆಯ ವಿಷಯದಲ್ಲಿ ವದು–ವರರಿಗೆ ಯಾವುದೇ ಅವಕಾಶ ಕೊಡದೇ ಕಡಿಮೆ ಆಯ್ಕೆಗಳು ಕಂಡುಬರುತ್ತಿದ್ದವು. ಇಲ್ಲಿ ಸಮುದಾಯದ ಹಿರಿಯ ಮುಖಂಡರ ತೀರ್ಮಾನವೇ ಮುಖ್ಯ ಪಾತ್ರವಹಿಸುತ್ತಿತ್ತು ಕಾಡುಗೊಲ್ಲರಲ್ಲಿಯು ಬೆಡಗುಗಳು ಕಂಡುಬರುತ್ತವೆ. ಸುಮಾರು ೭೩ ಬೆಡಗುಗಳನ್ನು ಕಾಡುಗೊಲ್ಲ ಸಮುದಾಯದಲ್ಲಿ ಕಾಣಬಹುದು. ಇವರು ಮದುವೆಯ ಸಂದರ್ಭದಲ್ಲಿ ಕುಲ ಮತ್ತು ಬೆಡಗುಗಳಿಗೆ ಮಹತ್ವ ಕೊಡುವುದನ್ನು ಕಾಣಬಹುದು. ೭೩ ಬೆಡಗುಗಳಲ್ಲಿ ಕರಡಿಗೊಲ್ಲರು ಅತ್ಯಧಿಕ ಸಂಖ್ಯೆಯಲ್ಲಿ ಇದ್ದಾರೆ. ೭ ಮತ್ತು ೮ ಕುಲಗಳ ಜನರು ಕರಡಿ ಗೊಲ್ಲ ಬೆಡಗುಗಳೊಂದಿಗೆ ವಿವಾಹ ಸಂಬಂಧವನ್ನು ಬೆಳಸಬೇಕು. ಹಾಗೆಯೇ ಕರಡಿಗೊಲ್ಲರು ಅವರಲ್ಲಿಯ ಬೆಡಗುಗಳ ನಡುವೆ ವಿವಾಹದ ಸಂಬಂಧವನ್ನು ಬೆಳೆಸುವಂತಿಲ್ಲ. ಇವರು ಬೇರೆ ಬೇರೆ ೨೮ ಬೆಡಗುಗಳ ಜೊತೆಗೆ ಸಂಬಂಧ ಬೆಳೆಸಬಹುದು. ಈ ಕ್ರಮವನ್ನು ಮುರಿದರೆ ಅವರನ್ನು ಊರಿನಿಂದ ಬಹಿಷ್ಕಾರ ಹಾಕಲಾಗುತ್ತದೆ.

ಆಧುನಿಕ ದಿನಗಳಲ್ಲಿ ಕಾಡುಗೊಲ್ಲರ ಯುವಕ ಮತ್ತು ಯುವತಿಯರು ವಿದ್ಯಾಭ್ಯಾಸಕ್ಕಾಗಿ ನಗರ ಪಟ್ಟಣಗಳ ಕಡೆಗೆ ಬರುವುದರಿಂದ ಇತರೆ ಸಮುದಾಯಗಳಲ್ಲಿ ಸಂಗಾತಿ ಆಯ್ಕೆಗೆ ಯಾವ ರೀತಿ ಅವಕಾಶವಿರುತ್ತದೆಯೋ ಅದೇ ರೀತಿಯಾಗಿ ಇವರು ಕೂಡ ಬೆಡಗುಗಳ ಬಗೆಗೆ ಗೊತ್ತಿಲ್ಲದೇ ಪ್ರೀತಿಸಿ ಮದುವೆಯಾಗುತ್ತಿದ್ದಾರೆ. ಯುವತಿಯರು ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಓದುವ ಸಂದರ್ಭದಲ್ಲಿ ಪರಸ್ಪರ ಅರ್ಥ ಮಾಡಿಕೊಳ್ಳುವ ಹುಡುಗ ಹುಡಿಗಿಯರನ್ನು ಆಯ್ಕೆಮಾಡಿಕೊಂಡು ಅಂತರ್ಜಾತಿ ವಿವಾಹವಾಗಿರುವುದನ್ನು ಕಾಣಬಹುದು. ಯುವಕರು ಉದ್ಯೋಗದ ದೃಷ್ಟಿಯಿಂದ ಯುವತಿಯರು ಮದುವೆಯಾಗುವುದು, ಯುವತಿಯರನ್ನು

ಪ್ರೀತಿಸಿ ಅವರ ಬೆಡಗು ಗೊತ್ತಿಲ್ಲದೇ ಯಾವುದೇ ಆಚರಣೆ, ಸಂಪ್ರದಾಯ, ಹಿರಿಯರ ಮಾತಿಗೆ ಬೆಲೆ ಕೊಡದೇ ಅವರಿಗೆ ಇಷ್ಟ ಬಂದ ರೀತಿಯಲ್ಲಿ ಜೀವನ ನಿರ್ಮಿಸಿಕೊಳ್ಳುತ್ತಿದ್ದಾರೆ.

೩.೭ ವರದಕ್ಷಿಣೆ ಪದ್ದತಿ:

ಕರ್ನಾಟಕದಲ್ಲಿ ವರದಕ್ಷಿಣೆಯ ಬಗ್ಗೆ ಹಲವಾರು ಕಾನೂನುಗಳು ಇದ್ದರೂ ಸಹ ವರದಕ್ಷಿಣೆ ಪದ್ಧತಿ ತಾಂಡವಾಡುತ್ತಿದೆ. ಇಂದು ಸಾಮಾನ್ಯವಾಗಿ ಯಾವುದೇ ಸಮುದಾಯದಲ್ಲಿ ವರದಕ್ಷಿಣೆ ಇಲ್ಲದೇ ಮದುವೆ ನಡೆಯುವುದು ಅಪರೂಪ ಎಂದು ಹೇಳಬಹುದು. ಕಾಡುಗೊಲ್ಲರಲ್ಲಿ ಹಿಂದೆ ವರದಕ್ಷಿಣೆ ಪದ್ಧತಿ ಇರಲಿಲ್ಲ, ಇವರಲ್ಲಿ ಹೆಣ್ಣನ್ನು ಮದುವೆಯಾಗಬೇಕೆಂದರೆ ಹೆಣ್ಣಿನ ತಂದೆ ತಾಯಿಗಳಿಗೆ ವಧುದಕ್ಷಿಣೆ(ತೆರ) ಕೊಡಬೇಕಿತ್ತು. ಆದ್ದರಿಂದ ಹೆಣ್ಣು ಹುಟ್ಟಿದರೆ ತಂದೆ-ತಾಯಿಗಳಿಗೆ ಮತ್ತು ಕುಟುಂಬಕ್ಕೆ ಗೌರವ ಬರುತ್ತದೆ. ಎಂಬ ತಿಳುವಳಿಕೆ ಒಂದು ಕಾಲದಲ್ಲಿತ್ತು. ಹೆಣ್ಣನ್ನು ಹುಡುಕುವುದಕ್ಕೆ ಹಟ್ಟಿಗಳನ್ನು ಸುತ್ತಿ ಚಪ್ಪಲಿಗಳು ಸವೆಯುತ್ತಿದ್ದವು. ಗಂಡಿನ ಕಡೆಯುವರು ಹೆಣ್ಣಿನ ಕಡೆಯವರಿಗೆ ಕೊಡುವ ವಧುದಕ್ಷಿಣೆಯಾಗಿ ಕಾಡುಗೊಲ್ಲರಲ್ಲಿ ತೆರವು ಅಂದರೆ ೧೨ ರೂಗಳನ್ನು ನೀಡುತ್ತಿದ್ದರು. ವಿಧ್ಯಾವಂತ ಮತ್ತು ನೌಕರಿಯಲ್ಲಿರುವ ಕೆಲ ಕಾಡುಗೊಲ್ಲರು ವರದಕ್ಷಿಣೆ ಪಡೆಯುತ್ತಾರೆಂದು ತಿಳಿದುಬರುತ್ತಿತ್ತು. ಹೀಗಾಗಿ ಇಂದು ಕಾಡುಗೊಲ್ಲರಲ್ಲಿ ವದುದಕ್ಷಿಣೆ ಪದ್ದತಿಯು ಬಹಳ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ.

ಒಂದು ಕಾಲದಲ್ಲಿ ಗಂಡು ಹೆಣ್ಣನ್ನು ಮದುವೆಯಾಗಬೇಕೆಂಗರೆ ಅಥವಾ ಹೆಂಡತಿಯನ್ನಾಗಿ ಪಡೆಯಬೇಕಿದ್ದರೆ ಗಂಡು ಮಾವನ ಮನೆಯಲ್ಲಿ ಕೆಲಸಮಾಡಬೇಕಿತ್ತು. ಏಕೆಂದರೆ ಮದುವೆಯಾದ ಮೇಲೆ ಹೆಂಡತಿಯನ್ನು ಸಾಕುವ ಜವಬ್ದಾರಿ ಇದೆಯೇ ಎಂಬುದನ್ನು ಪರೀಕ್ಷಿಸಲು ಮತ್ತು ಕುಟುಂಬವನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಾನೆಯೇ ಎಂಬ ದೃಷ್ಟಿಯಿಂದ ಮತ್ತು ಸೋಮಾರಿಯೇ ಎಂಬುದನ್ನು ತಿಳಿಯಲು ಗಂಡು ಮಾವನ ಮನೆಯಲ್ಲಿ ಇರುವ ಕುರಿ, ಮೇಕೆ, ಹಸು, ಎಮ್ಮೆ, ಎತ್ತು, ಆಕಳುಗಳನ್ನು ಕಾಡಿಗೆ ಹೊಡೆದುಕೊಂಡು ಹೋಗಿ ಅವುಗಳನ್ನು ಮೇಯಿಸಿಕೊಂಡು ಮನೆಗೆ ಬರಬೇಕಿತ್ತು. ಮನೆಯ ಅಡಿಗೆಗೆ ಸೌದೆ ಒಡೆದು ದನ ಕರುಗಳಿಗೆ ಮೇವು ನೀರು ಕುಡಿಸಬೇಕಿತ್ತು. ನಂತರ ಹೆಣ್ಣಿನ ಕಡೆಯವರು ಗಂಡಿನ ಕೆಲಸ ಕಾರ್ಯಗಳನ್ನು ಮೆಚ್ಚಿ ಹೆಣ್ಣನ್ನು ಕೊಟ್ಟು ಮದುವೆ ಮಾಡುತ್ತಿದ್ದರು. ಇಂತಹ ಸಂಪ್ರದಾಯಗಳು ಕಾಡುಗೊಲ್ಲರಲ್ಲಿ ಇಂದು ಕಂಡುಬರುವುದಿಲ್ಲ. ಮದುವೆಯಾಗುವ ಗಂಡು ಸರಿಯಾಗಿ ಕೆಲಸಕಾರ್ಯ ಮಾಡದಿದ್ದರೆ ಮದುವೆ ಸಂಬಂಧ ಮುರಿದು ಬೀಳುತ್ತಿತ್ತು. ವಧುದಕ್ಷಿಣೆಯನ್ನು ಕೊಡದೇ ಇರುವುದಕ್ಕಾಗಿಯೂ ಅನೇಕ ಸಂಬಂಧಗಳು ಮುರಿದುಬಿದ್ದಿವೆ ಎಂದು ಕಾಡುಗೊಲ್ಲರ ಹಿರಿಯರು ಅಭಿಪ್ರಾಯ ಪಡುತ್ತಾರೆ. ಆಧುನಿಕ ದಿನಗಳಲ್ಲಿ ಈ ಪದ್ಧತಿ ಕಡಿಮೆಯಾಗಿರುವುದು ಕಂಡುಬರುತ್ತದೆ.

ಕಾಡುಗೊಲ್ಲರ ಸಮುದಾಯದಲ್ಲಿ ನಾಗರೀಕತೆ ಬೆಳೆದಂತೆಲ್ಲಾ ವರದಕ್ಷಿಣೆ ಪದ್ಧತಿ ಬೆಳೆಯುತ್ತಿದೆ. ಇಂದು ಕುಟುಂಬದಲ್ಲಿ ಗಂಡು ಮಕ್ಕಳಾದರೆ ತಂದೆ ತಾಯಿಗೆ ಬಹಳ

ಸಂತೋಷದ ವಿಷಯವಾಗುತ್ತಿದೆ. ಗಂಡು ಮಕ್ಕಳು ವಂಶೋದ್ದಾರಕರು. ಅವರು ತಮ್ಮ ವಂಶವನ್ನು ಬೆಳೆಸುವರು ಜೊತೆಗೆ ವರದಕ್ಷಿಣೆ ಕೊಡುವ ಸ್ಥಿತಿ ಬರುವುದಿಲ್ಲ. ಎಂಬುದು ಅವರ ಬಯಕೆ. ಇಂದು ಹೆಣ್ಣು ಮಕ್ಕಳು ಹುಟ್ಟಿದರೆ ತಂದೆ ತಾಯಿ ಅಷ್ಟು ಸಂತೋಷ ಪಡುತ್ತಿಲ್ಲ. ಏಕೆಂದರೆ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿ ನಂತರ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆ ಕೊಡಬೇಕಲ್ಲ ಎಂಬ ಚಿಂತೆ ತಂದೆ ತಾಯಿಗೆ ಆವರಿಸುತ್ತಿದೆ. "ಕೊಟ್ಟ ಹೆಣ್ಣು ಕುಲದಿಂದ ಹೊರಕ್ಕೆ" ಎಂಬ ಗಾದೆಯಂತೆ ಎಂದಾದರು ಹೆಣ್ಣು ಗಂಡಿನ ಮನೆಗೆ ಹೋಗುವವಳು ಎಂಬ ದೃಷ್ಟಿಯಿಂದ ಗಂಡು ಮಕ್ಕಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿರುವುದು ಕಂಡುಬರುತ್ತಿದೆ.

ಕಾಡುಗೊಲ್ಲರಲ್ಲಿ ಇಂದು ಸ್ಥಿತಿವಂತರು ಮದುವೆಗಾಗಿ ಬಂಗಾರ, ದುಡ್ಡು ಅಥವಾ ವಾಹನವನ್ನು ಕೊಡುತ್ತಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಕಾಡುಗೊಲ್ಲರು ಸಹ ವರದಕ್ಷಿಣೆ ತೆಗೆದುಕೊಳ್ಳುವ ಮತ್ತು ಕೊಡುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿರುವುದು ಕಂಡುಬರುತ್ತಿದೆ.

೩.೮ ನಿಶ್ಚಿತಾರ್ಥ:

ಕಾಡುಗೊಲ್ಲ ಸಮುದಾಯದಲ್ಲಿ ನಿಶ್ಚಿತಾರ್ಥ ಸಂಪ್ರದಾಯವನ್ನು ಬಹಳ ವಿಶೇಷವಾಗಿ ಆಚರಿಸುವರು. 'ನಿಶ್ಚಿತಾರ್ಥದ ಸಂದರ್ಭದಲ್ಲಿ ಅರಿಶಿಣ ಕುಂಕುಮ ಇಡುವುದು ಮತ್ತು ತಾಂಬೂಲ ಬದಲಾಯಿಸುವುದು ಕಂಡು ಬರುತ್ತದೆ. ನಿಶ್ಚಿತಾರ್ಥದ ದಿನ ಗಂಡಿನ ಕಡೆಯವರು ಹಟ್ಟಿಯ ಗೌಡ ಅಥವಾ ಪೂಜಾರಿಯನ್ನೊಳಗೊಂಡಂತೆ ವಧುವಿನ ಮನೆಗೆ ಹೋಗಿ ಮದುವೆಯ ದಿನಾಂಕವನ್ನು ಗೊತ್ತು ಮಾಡುತ್ತಾರೆ. ಇಬ್ಬರಿಗೂ ಅನುಕೂಲವಾದ ದಿನವನ್ನು ನಿಗಧಿಪಡಿಸಿರುತ್ತಾರೆ. ಇತರೆ ಸಮುದಾಯಗಳಲ್ಲಿ ಆಷಾಡ ತಿಂಗಳಲ್ಲಿ ಮದುವೆ ಮಾಡುವುದು ಕಡಿಮೆ. ಕಾಡುಗೊಲ್ಲರಿಗೆ ಆಷಾಡ ಮಾಸ ಮದುವೆಗೆ ಅಡ್ಡಿ ಬರುವುದಿಲ್ಲ. ಕಾಡುಗೊಲ್ಲರು ಇಂದು ಪಂಚಾಂಗ ನೋಡಿ ಮದುವೆ ನಿಗದಿ ಮಾಡುವುದಿಲ್ಲ. ಕಾಡುಗೊಲ್ಲರು ತಮಗೆ ಅನುಕೂಲವಾದ ದಿನ ಅಥವಾ ಅವರ ದೇವರು ಅನುಮತಿ ಕೊಟ್ಟ ದಿನ ಮದುವೆಯ ದಿನವನ್ನು ನಿಗದಿ ಮಾಡುತ್ತಾರೆ. ಕಾಡುಗೊಲ್ಲರು ಮದುವೆಗಾಗಿ ಸ್ವಾಮಿಗಳು, ಪುರೋಹಿತರು, ಬ್ರಾಹ್ಮಣರು ಹೇಳುವ ದಿನಾಂಕವನ್ನು ನಂಬುವುದಿಲ್ಲ. ಇವರಿಗೆ ತಮ್ಮ ದೇವರು ಮತ್ತು ಹಟ್ಟಿಯ ಪ್ರಮುಖರು ಸಮುದಾಯದ ಹಿರಿಯರು ನಿಶ್ಚಯಿಸುವ ದಿನವೇ ಅವರಿಗೆ ಶುಭ ದಿನವಾಗಿರುತ್ತದೆ. ಎಂಬ ನಂಬಿಕೆ ಇದೆ. ಕಾಡುಗೊಲ್ಲರಲ್ಲಿ ನಿಶ್ಚಿತಾರ್ಥದ ದಿನ ವರನನ್ನು ನಿಶ್ಚಿತಾರ್ಥಕ್ಕೆ ಕರೆದುಕೊಂಡು ಹೋಗುವ ಪದ್ಧತಿಯಿರಲಿಲ್ಲ. ಜೊತೆಗೆ ಹೋಗುವಂತಿರಲಿಲ್ಲ. ವರನು ಹೊಲದಲ್ಲಿ ಹೊಲ ಉಳುಮೆ ಮಾಡಲು ಅಥವಾ ಕುರಿ, ದನ, ಎಮ್ಮೆ, ಎತ್ತು, ಹಸು, ಮೇಕೆಗಳನ್ನು ಕಾಯಲು ಅಡವಿಗೆ ಹೋಗಿರುತ್ತಾನೆ. ಆದರೆ ಇತರೆ ಸಮುದಾಯದಲ್ಲಿ ವರನನ್ನು ನಿಶ್ಚಿತಾರ್ಥಕ್ಕೆ ಹಿರಿಯರು ಕರೆದುಕೊಂಡು ಹೋಗುವ ಸಂಪ್ರದಾಯ ಕಂಡುಬರುತ್ತದೆ. ಕಾಡುಗೊಲ್ಲರಲ್ಲಿ ನಿಶ್ಚಿತಾರ್ಥದ ಕಾರ್ಯವನ್ನು ಹಟ್ಟಿಯ ಮುಖಂಡರು ಸಂಬಂಧಿಕರು

ನೆರವೇರಿಸಿಕೊಂಡು ಬರುತ್ತಾರೆ.'[೫] ಇತ್ತೀಚಿಗೆ ವಿದ್ಯಾವಂತ ಕಾಡುಗೊಲ್ಲರು ಮದುವೆಯ ವಯಸ್ಸಿಗೆ ಬಂದ ಯುವಕ ಯುವತಿಯರಲ್ಲಿ ಮಾತನಾಡಲು ಬಿಡುವುದುಂಟು, ಮದುವೆಯಾಗುವ ಯುವಕನಿಗೆ ಯುವತಿ ಅಥವಾ ಯುವತಿಗೆ ಯುವಕ ಇಷ್ಟವಾಗಿದ್ದಾನೆಯೇ ಎಂಬ ಮಾತುಗಳನ್ನು ಎರಡು ಕಡೆಯಿಂದ ಕೇಳುತ್ತಾರೆ. ಅವರಿಬ್ಬರ ಒಪ್ಪಿಗೆಯ ನಂತರ ತಂದೆ ತಾಯಿ ಹಿರಿಯರು ಎಲ್ಲರೂ ಸೇರಿ, ನಿಶ್ಚಿತಾರ್ಥದ ದಿನ ಯುವಕ ಯುವತಿಯನ್ನು ಹಿರಿಯರ ಎದುರಿಗೆ ಕೂರಿಸಿ ಉಂಗುರ ಮತ್ತು ಹೂವಿನ ಹಾರವನ್ನು ಬದಲಾಯಿಸಿಕೊಳ್ಳುತ್ತಾರೆ. ಇಲ್ಲಿಗೆ ಯುವತಿಯು ವರನ ಸ್ವತ್ತು ಎಂದು ಎಲ್ಲರೂ ಭಾವಿಸುತ್ತಾರೆ. ನಂತರ ನೆಂಟರು ಮತ್ತು ಬಂಧು ಬಳಗದವರು ಊಟ ಮಾಡಿಕೊಂಡು ಹಟ್ಟಿಗಳಿಗೆ ಹೋಗುತ್ತಾರೆ.

"ಕಾಡುಗೊಲ್ಲರಲ್ಲಿ ವಿವಾಹಕ್ಕೆ ಮೊದಲು ಹೆಣ್ಣು ಗಂಡಿನವರ ನಡುವೆ ಒಪ್ಪಂದ ನಡೆಯಬೇಕು. ಒಂದು ಹಟ್ಟಿಯಿಂದ, ಇನ್ನೊಂದು ಹಟ್ಟಿಗೆ ಹೆಣ್ಣು ನೋಡಲು ಹೋಗಬೇಕೆಂದರೆ ಶಕುನಗಳನ್ನು ಗಮನಿಸುವುದು ಕಂಡುಬರುತ್ತದೆ. ಮೊದಲಿನಿಂದಲೂ ಕಾಡುಗೊಲ್ಲರು ಶಕುನಗಳನ್ನು ನಂಬುವುದು ಕಂಡುಬರುತ್ತದೆ. ಕಾಡುಗೊಲ್ಲರಲ್ಲಿ ಐದು ಜನ ಹಿರಿಯ ಗಂಡಸರು ಒಬ್ಬ ಹಿರಿಯ ಹೆಣ್ಣು ಮಗಳೊಡನೆ ಹಟ್ಟಿಗೆ ಹೆಣ್ಣನ್ನು ನಿಶ್ಚಯಿಸಲು ಹೊರಡುವುದು ಹಿಂದಿನ ಕಾಲದಿಂದಲೂ ಕಂಡುಬರುತ್ತದೆ. ಕಾಡುಗೊಲ್ಲರ ಹಿರಿಯ ಹೆಣ್ಣು ಮಗಳು ಸುಣ್ಣದ ಬೊಟ್ಟು ಹಚ್ಚಿರುವ ಮಡಕೆಯನ್ನು ಹೊತ್ತು ಮುಂದೆ ನಡೆಯುತ್ತಾಳೆ."[೬]

"ಹಟ್ಟಿಗಳೂ ಒಂದಕ್ಕೊಂದು ಹೆಚ್ಚು ದೂರದಲ್ಲಿರುವುದಿಲ್ಲ. ಸುಣ್ಣದ ಬೊಟ್ಟು ಹಚ್ಚಿದ ಮಡಕೆಯಲ್ಲಿ ಅಕ್ಕಿ ವೀಳ್ಯೆದೆಲೆ, ಬಾಳೆಹಣ್ಣು ಇಟ್ಟು ಅದರ ಬಾಯನ್ನು ಬಟ್ಟೆಯಿಂದ ಮುಚ್ಚಿ ಕಟ್ಟಿರುತ್ತಾರೆ. ಗಂಡಿನ ಮನೆಯವರು ಹೆಣ್ಣಿನ ಮನೆಗೆ ಹೆಣ್ಣು ನೋಡಲು ಬರುವುದು ಚಿತ್ರದುರ್ಗದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಸಂಪ್ರದಾಯವಾಗಿದೆ. ದಾವಣಗೆರೆ ಜಿಲ್ಲೆಯಲ್ಲಿಯೂ ಈ ಸಂಪ್ರದಾಯ ಕಂಡುಬರುತ್ತದೆ. ಸಮುದಾಯದಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಮತ್ತು ಹೆಣ್ಣು ಹೆತ್ತವರಿಗೆ ಹೆಚ್ಚಿನ ಆಧ್ಯತೆ ಎಲ್ಲಾ ಕಡೆಗಳಲ್ಲಿ ಕಂಡುಬರುತ್ತದೆ. ಈಗಾಗಿ ಕುಟುಂಬದ ಮತ್ತು ಯೋಗ್ಯ ಕನ್ಯೆಯರು ಇರುವ ಅನುಕೂಲಸ್ಥ ಗ್ರಾಮೀಣ ಪ್ರದೇಶಗಳ ಹಟ್ಟಿಗೆ ಹಿಂದಿನ ಕಾಲದಿಂದಲೂ ಗಂಡಿನ ಕಡೆಯವರೂ ಹುಡುಕಿಕೊಂಡು ಬರುವುದು ವಾಡಿಕೆಯಾಗಿದೆ.

ಕಾಡುಗೊಲ್ಲರಲ್ಲಿ ಗಂಡಿನ ಮನೆಯವರು ಹೆಣ್ಣಿನ ಮನೆಗೆ ಬರುವ ಸಮಯಕ್ಕೆ ಸರಿಯಾಗಿ ಹೆಣ್ಣಿನ ಮನೆಯವರು ತಮ್ಮ ಮನೆಯನ್ನು ಸ್ವಚ್ಛವಾಗಿಟ್ಟು ಮತ್ತು ಮನೆಯ ಅಂಗಳದಲ್ಲಿ ಇರುವ ಕಸವನ್ನು ಗುಡಿಸಿ ನೀರನ್ನು ಹಾಕಿ ಮನೆಯ ಮುಂದೆ ರಂಗೋಲಿಯನ್ನು ಹಾಕಿರುತ್ತಾರೆ. ಮನೆಯ ಒಳಗಡೆ ದೀಪದ ಹಣತೆಯನ್ನು ಹಚ್ಚಿ ಇಟ್ಟಿರುತ್ತಾರೆ. ಈ ಹಣತೆ ಕಾಡುಗೊಲ್ಲರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಗಂಡಿನ ಕಡೆಯವರು ಕನ್ಯೆಯಿರುವ ಮನೆಗೆ ಬಂದಾಗ ಉರಿಯುತ್ತಿರುವ ದೀಪವನ್ನು ನೋಡಬೇಕು. ಬೇಡನಾಯಕರು ಹೆಣ್ಣಿನ ಮನೆಗೆ

ಬಂದಾಗ ಹೆಣ್ಣಿನವರು ಬಂದ ಉದ್ದೇಶವೇನು ಎಂದು ಕೇಳುತ್ತಾರೆ. ನಂತರ ಗಂಡಿನವರು ನಿಮ್ಮ ಮನೆಯಲ್ಲಿ ಹಾಲು ಅನ್ನ ಇದ್ದರೆ ಊಟ ಮಾಡಿ ಹೋಗೋಣವೆಂದು ಬಂದೆವು ಎನ್ನುತ್ತಾರೆ. ಅಂದರೆ ಮೂಲತಃ ಪಶುಪಾಲಕ ವೃತ್ತಿಯಲ್ಲಿರುವವರು ಅದಕ್ಕೆ ಸಂಬಂಧಿಸಿದ ಭಾಷೆಯಲ್ಲೇ ಮಾತನಾಡುವುದು ಸಹಜವೇ ಎಂದು ಕಂಡುಬರುತ್ತದೆ.

ಕಾಡುಗೊಲ್ಲರು ಮೂಲತಃ ಪಶುಪಾಲಕರಾಗಿರುವುದರಿಂದ ಹಸುಗಳ ಶಕುನ, ದೀಪದ ಶಕುನ, ಬಹಳ ಮುಖ್ಯವಾದುದು ಎಂದು ನಂಬುತ್ತಾರೆ. ಕೊಟ್ಟಿಗೆಯಲ್ಲಿ ದನಕರುಗಳು ಸಂತೋಷದಿಂದ ಕಿವಿ, ನಿಮಿರಿಸಿಕೊಂಡು ಮೆಲುಕು ಹಾಕುತ್ತಿದ್ದರೆ ಒಳ್ಳೆಯದೆಂದು ಭಾವಿಸುವರು. ಮತ್ತು ಗಂಡಿನ ಕಡೆಯವರು ಬರುವಾಗ ಹಚ್ಚಿಟ್ಟ ದೀಪ ರಾತ್ರಿಯಲ್ಲಿ ಆರದೇ ಉರಿದರೆ ಇದೀಗ ನೆರವೇರುತ್ತಿರುವ ವಿವಾಹ ಸಂಬಂಧ ಚೆನ್ನಾಗಿರುತ್ತದೆಂದು ತಿಳಿಯುತ್ತಾರೆ. ಮತ್ತು ಸಂಜೆಯ ಇಳಿಹೊತ್ತಿನಲ್ಲಿ ಬಂದ ಗಂಡಿನ ಕಡೆಯವರು ಹೆಣ್ಣಿನೊಂದಿಗೆ ಒಪ್ಪಂದದ ಮಾತುಕತೆ ನಡೆಸುತ್ತಾರೆ. ಈ ಒಪ್ಪಂದದ ಸಂದರ್ಭದಲ್ಲಿ ಎಲೆ ಅಡಿಕೆ ವಿನಿಮಯವೇ ಮುಖ್ಯವಾಗಿರುತ್ತದೆ. ಈ ಸಮಯದಲ್ಲಿ ಹೆಣ್ಣು ಗಂಡಿಗೆ ಒಡವೆಗಳನ್ನು ಮಾಡಿಸುವ ಮಾತುಕತೆಯೂ ನಡೆಯುವುದು.

ಆದರೆ ಇತ್ತೀಚಿನ ದಿನಗಳಲ್ಲಿ ಕಾಡುಗೊಲ್ಲರಲ್ಲಿ ಒಡವೆಗಳ ಮಾತುಕತೆ ಬರುತ್ತಿದೆಯೇ ಹೊರತು ಹಿಂದೆ ಈ ಪದ್ಧತಿ ಇರಲಿಲ್ಲ. ಒಂದು ಕಾಲದಲ್ಲಿ ಚಿನ್ನ ಬೆಳ್ಳಿಯಿಂದ ಮಾಡಿದ ಒಡವೆಗಳ ಉಪಯೋಗ ಅವರಿಗೆ ಹೆಚ್ಚಾಗಿ ತಿಳಿದಿರಲಿಲ್ಲ. ತಾಳಿಗೆ ಯಾವುದೇ ಲೋಹ ಉಪಯೋಗಿಸದೆ ಕಟ್ಟಾಣಿ ಮುತ್ತಿನ ಸರ ಉಪಯೋಗಿಸುತ್ತಿದ್ದರು. ಕಾಡುಗೊಲ್ಲರು ಮದುವೆಗೆ ಸಂಬಂಧಿಸಿದ ಮಾತುಕತೆ ನಡೆಯುವಾಗ ಬಹಳ ಸೂಕ್ಷ್ಮವಾಗಿ ಸುತ್ತಮುತ್ತಲಿನ ಶಕುನಗಳನ್ನು ಗಮನಿಸುತ್ತಾರೆ. ರಾತ್ರಿಯೂ ಸಹ ಯಾವ ಅಪಶಕುನಗಳು ಆಗಬಾರದು. ಬೆಕ್ಕು ಕಡಿದಾಡುವುದು, ಹೆಣ್ಣಿನ ಮನೆಯಲ್ಲಿ ಮಾಂಸದಡಿಗೆ ಮಾಡುವುದು, ಮಡಕೆಬಿದ್ದು ಒಡೆಯುವುದು, ಹಾವು, ಬೆಕ್ಕು ಅಡ್ಡ ಬರುವುದು ಆಗಬಾರದು. ಗಂಡಿನವರಿಗೆ ರಾತ್ರಿ ಮಲಗುವಾಗ ಕೆಟ್ಟ ಕನಸುಗಳು ಬೀಳಬಾರದು, ಹೀಗಾದರೆ ಹೆಣ್ಣು ಗಂಡಿನ ಕಡೆಯವರು ತಾವುಗಳು ಆಡಿದ ಲಗ್ನದ ಮಾತುಕಥೆ ಒಪ್ಪಂದಕ್ಕೆ ಬರುವಂತೆ ನೋಡಿಕೊಳ್ಳುತ್ತಾರೆ. ಇದರ ಜೊತೆಗೆ ಹಿಂದಿನ ಕಾಲದಿಂದಲೂ ಹೆಣ್ಣಿನ ಗುಣದ ಬಗ್ಗೆ ಸುತ್ತಮುತ್ತ ಪರಿಚಯವಿರುವವರನ್ನು ಕೇಳುತ್ತಾರೆ. ಹೆಣ್ಣಿನ ಬಗ್ಗೆ ಈ ಪರೀಕ್ಷೆಯನ್ನು ಗಂಡಿನ ಮನೆಯವರು ನೇರವಾಗಿಯೇ ಕೇಳಿ ತಿಳಿದುಕೊಳ್ಳಬಹುದು. ಹೆಣ್ಣನ್ನು ಪರೀಕ್ಷಿಸಿ ಗಂಡಿನ ಕಡೆಯವರು ಹೋದ ಮೇಲೆ ಹೆಣ್ಣಿನ ಕಡೆಯ ಒಬ್ಬ ಮುತ್ತೈದೆ ತಲೆಯ ಮೇಲೆ ಬಿಳಿ ಸುಣ್ಣದ ಬೊಟ್ಟಿನ ಕರಗ ಹೋರಿಸಿಕೊಂಡು ಜೊತೆಗೆ ಐದು ಜನ ಗಂಡಸರು ಗಂಡು ಇರುವಲ್ಲಿಗೆ ಬರುತ್ತಾರೆ. ಹೀಗೆ ಬರುವಾಗ ದಾರಿಯಲ್ಲಿ ಹೆಣ್ಣಿನ ಕಡೆಯವರು ಶಕುನಗಳನ್ನು ಗಮನಿಸುವರು. ಕಾಗೆ ಅಡ್ಡಲಾಗುವುದು, ಸಲಿಕೆ, ಗುದ್ದಲಿ ಹಿಡಿದವರು ಯಾರಾದರೂ ಎದುರಾಗುವುದು, ಕಟ್ಟಿಗೆ ಹೊತ್ತುಕೊಂಡು ಎದುರಿಗೆ ಬರುವುದು ಒಳ್ಳೆಯದಲ್ಲ

ಎಂಬ ನಂಬಿಕೆ ಸಂಪ್ರದಾಯಗಳನ್ನು ನಂಬುವುದುಂಟು. ಇಂದು ಕಾಡುಗೊಲ್ಲರಲ್ಲಿ ಅನೇಕ ನಂಬಿಕೆ ಸಂಪ್ರದಾಯಗಳು ಮಾಯವಾಗಿರುವುದು ಕಂಡುಬರುತ್ತದೆ."[೭]

ಕೊನೆ ಕಡಿಯುವ ಶಾಸ್ತ್ರ:

"ಮದುವೆ ನಿಶ್ಚಯವಾದ ನಂತರ ಮೊದಲನೇಯ ಶಾಸ್ತ್ರ ಕಟ್ಟಿಗೆ ಕಡಿಯುವ ಶಾಸ್ತ್ರವಾಗಿದೆ. ಈ ಶಾಸ್ತ್ರ ಶುರುವಾದರೆ ಮದುವೆಗೆ ಸಂಬಂಧಿಸಿದಂತೆ ಮುಂದಿನ ಕೆಲಸ ಕಾರ್ಯಗಳು ಪ್ರಾರಂಭವಾಗುತ್ತವೆ. ನಂತರ ಇಡೀ ಹಟ್ಟಿಯ ಜನರಲ್ಲಿ ಸಂಭ್ರಮವೇ ಶುರುವಾಗುತ್ತದೆ. ಕೊನೆ ಕಡಿಯುವ ಶಾಸ್ತ್ರವೆಂದರೆ ಮದುವೆಯಲ್ಲಿ ಅಡಿಗೆ ತಯಾರಿಸಲು ಬೇಕಾದ ಕಟ್ಟಿಗೆಯನ್ನು ಒದಗಿಸುವುದಾಗಿರುತ್ತದೆ. ಅಥವಾ ಕಟ್ಟಿಗೆಯನ್ನು ಓಡೆಯುವುದಾಗಿರುತ್ತದೆ. ಹಿಂದಿನ ಕಾಲದಲ್ಲಿ ಮದುವೆಗೆ ಬಂದಂತಹ ನೆಂಟರಿಸ್ಟರಿಗೆ ಸಂಬಂಧಿಕರಿಗೆ ಅಡುಗೆ ಮಾಡುವುದಕ್ಕೆ ಇಂದಿನ ಆಧುನಿಕ ಉಪಕರಣಗಳು ಎಂದರೆ ಗ್ಯಾಸ್ ಸಿಲಿಂಡರ್ ವ್ಯವಸ್ಥೆ ಕರಂಟಿನಿಂದ ಅಡುಗೆ ಮಾಡುವ ವ್ಯವಸ್ಥೆ ಇಲ್ಲದಾಗಿರುವುದರಿಂದ ಅನಿವಾರ್ಯವಾಗಿ ಅವರು ಕಟ್ಟಿಗೆಗಳಿಂದಲೇ ಅಡುಗೆಯನ್ನು ತಯಾರಿಸಬೇಕಾಗಿತ್ತು. ಜೊತೆಗೆ ಸೌದೆ ಸಂಗ್ರಹಿಸಲು ಕಾಡುಗೊಲ್ಲರು ಹಟ್ಟಿಯ ಪ್ರತಿಯೊಂದು ಮನೆಯಲ್ಲಿಯ ಗಂಡು ಮಕ್ಕಳು ಯಾರ ಮನೆಯಲ್ಲಿ ಮದುವೆ ಕಾರ್ಯವಿದೆಯೋ ಅಥವಾ ನಡೆಯುತ್ತದೆಯೋ ಅವರ ಮನೆಗೆ ಸೌದೆಯನ್ನು ಸಂಗ್ರಹಿಸಿ ಕೊಡುವ ಪದ್ಧತಿಯನ್ನ ಕಾಣಬಹುದು."[೮] ಪುರುಷರು ಆ ಹಟ್ಟಿಯ ಸುತ್ತಲೂ ಇರುವ ಯಾವುದಾದರೊಂದು ಜಾಲಿಗಿಡ ಮರದ ಸಣ್ಣ ರೆಂಬೆ ಅಥವಾ ಕೊಂಬೆಗಳನ್ನು ಮತ್ತು ಸುಬಾಬುಲಾ ಮರ ಕಡಿಯುತ್ತಿದ್ದರು. ಕಟ್ಟಿಗೆ ಕಡಿಯುವುದಕ್ಕೆ ಮೊದಲು ಗಂಡಿನ ಮನೆಯಿಂದ ಮರ ಕಡಿಯಲಿಕ್ಕೆ ತಂದ ಕುಡಗೋಲು, ಕೊಡಲಿ, ಮಚ್ಚು ಇಟ್ಟು ಪೂಜೆ ಮಾಡಿ ನಂತರ ಪುರುಷರು ಈ ಸಾಮಗ್ರಿಗಳನ್ನು ಉಪಯೋಗಿಸುತ್ತಿದ್ದರು. ಬೇರೆ ಬೇರೆ ಮರದ ಸೌದೆಗಳನ್ನು ಕಡಿದು ಒಣಗಿಸುವುದು ಹಿಂದಿನ ಕಾಲದಲ್ಲಿ ಈ ಪದ್ದತಿ ಕಂಡುಬರುತ್ತಿತ್ತು. ಈ ಕಾರ್ಯವನ್ನ ಊರಿನ ಹಟ್ಟಿಯಲ್ಲಿನ ಹಿರಿಯರು ಯಾರಾದರೂ ಒಬ್ಬರು ನಿರ್ವಹಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಸೌದೆಗೆ ಬದಲಾಗಿ ಗ್ರಾಮೀಣ ಪ್ರದೇಶಗಳಲ್ಲಿಯೂ ಸಿಲಿಂಡರ್ ಬಳಸಿ ಅಡುಗೆ ಮಾಡುವ ವ್ಯವಸ್ಥೆ ಕಂಡುಬರುತ್ತದೆ.

ಚಪ್ಪರ ಹಾಕುವ ಶಾಸ್ತ್ರ:

ಕಾಡುಗೊಲ್ಲರು ಚಪ್ಪರವನ್ನು ಮದುವೆಗೆ ಮೊದಲು ಎರಡು ಅಥವಾ ಮೂರು ದಿನ ಮನೆಯ ಮುಂದೆ ಚಪ್ಪರ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ. ಚಪ್ಪರ ಹಾಕಲು ಉದ್ದವಾದ ಗುಂಡಿ ತೋಡಿ ನಾಲ್ಕು ಕಡೆ ಕಂಬಗಳನ್ನು ನೆಡುತ್ತಾರೆ. ನಂತರದ ಚಪ್ಪರದ ಮೇಲ್ಭಾಗಕ್ಕೆ ಅಡ್ಡ ಉದ್ದ ಗಳಗಳನ್ನು ಮರದ ಕೋಲುಗಳನ್ನು ಹಾಕಿ ಹಗ್ಗದಿಂದ ಕಟ್ಟಿ ನಂತರ ತೆಂಗಿನ ಗರಿಗಳನ್ನು ಅದರ ಮೇಲೆ ಹಾಕುತ್ತಾರೆ. ಜೊತೆಗೆ ಕಂಬಗಳಿಗೆ ತೆಂಗಿನ ಗರಿ ಕಟ್ಟುತ್ತಾರೆ.

ಮಾವಿನ ಟೊಂಗೆಗಳನ್ನು ಮತ್ತು ಬಾಳೆ ಕಂದುಗಳನ್ನು ಚಪ್ಪರ ಹಾಕಿರುವ ಕಂಬಗಳಿಗೆ ಹಗ್ಗದಿಂದ ಕಟ್ಟುತ್ತಾರೆ. ಮಹೋರ್ತಕ್ಕೆ ಎರಡು ಅತ್ತಿ ಮರದ ಸಣ್ಣ ತುಂಡುಗಳನ್ನು ಮನೆಯ ಮುಂದೆ ಚಪ್ಪರದ ಮಧ್ಯದಲ್ಲಿ ನೆಡುತ್ತಾರೆ. ಕೆಲವರು ಚಪ್ಪರವನ್ನು ಹಾಕುವುದರಲ್ಲಿ ಸಣ್ಣದಿರಬಹುದು ಅಥವಾ ದೊಡ್ಡದಿರಬಹುದು ಅಂದರೆ ಅವರವರ ಅನುಕೂಲಕ್ಕೆ ತಕ್ಕಂತೆ ಅಥವಾ ಆ ಜಾಗಕ್ಕೆ ತಕ್ಕಂತೆ ಚಪ್ಪರವನ್ನು ಹಾಕುತ್ತಾರೆ. ಚಪ್ಪರ ಹಾಕುವಾಗ ಹಟ್ಟಿಯಲ್ಲಿ ಇರುವವರು ಸಹಾಯ ಮಾಡುತ್ತಾರೆ.

ಆಧುನಿಕ ದಿನಗಳಲ್ಲಿ ಈ ಚಪ್ಪರದ ಬದಲಾಗಿ ಗ್ರಾಮೀಣ ಪ್ರದೇಶಗಳಲ್ಲಿಯೂ ಶಾಮಿಯಾನ ಮತ್ತು ಖುರ್ಚಿಗಳ ವ್ಯವಸ್ಥೆ ಮಾಡುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಚಪ್ಪರ ಹಾಕುವುದಕ್ಕೆ ಸ್ಥಳವಿಲ್ಲದ ಕಾರಣ ಮನೆಯ ಅಂಗಳದಲ್ಲಿ ಶಾಸ್ತ್ರಕ್ಕೋಸ್ಕರ ನಾಲ್ಕು ಕಂಬಗಳನ್ನು ನೆಟ್ಟು ಅವುಗಳಿಗೆ ತೆಂಗಿನ ಗರಿ ಮತ್ತು ಬಾಳೇ ಕಂದು ಮಾವಿನ ಸೋಪ್ಪು ಕಟ್ಟುತ್ತಾರೆ.

ಕಂಕಳ ಶಾಸ್ತ್ರ: ಕಾಡುಗೊಲ್ಲರಲ್ಲಿ ಮೊದಲು ನಾಗರ ಹುತ್ತದ ಹತ್ತಿರ ವಧುವರರನ್ನು ಪೂಜಾರಿಯು ಕರೆದುಕೊಂಡು ಹೋಗಿ ವಧುವರರಿಂದ ಹಾಲು ತುಪ್ಪವನ್ನು ಹುತ್ತಕ್ಕೆ ಬಿಡಿಸಿ ನಂತರ ಪೂಜೆ ಮಾಡಿದ ಮೇಲೆ ಪೂಜಾರಿಯು ವಧು ವರರಿಗೆ ಕಂಕಣಧಾರಣೆ ಕಟ್ಟುವುದು ಕಂಡುಬರುತ್ತದೆ. ಆ ನಂತರ ವಧು ಮಕ್ಕಳಿಗೆ ಒಂದು ತಟ್ಟೆಯಲ್ಲಿ ಹಾಲನ್ನು ಹಾಕಿಕೊಂಡು ಜೊತೆಗೆ ಎಳ್ಳು ಎಲೆಯಿಂದ ಹಾಲನ್ನು ಎದ್ದಿಕೊಂಡು ಅಲ್ಲಿಗೆ ಬಂದಿರುವ ಮುತ್ತೈದೆಯರು ಹಿರಿಯರು, ಸಂಬಂಧಿಕರು, ವಧು ವರರ ತಲೆಗೆ ಎಲೆಯಿಂದ ಮೂರು ಸಲ, ಐದು ಜನ ಅಥವಾ ೯ ಜನ ಮುತ್ತೈದೆಯರು ಒತ್ತುವುದು ನಂತರ ಎಲ್ಲರೂ ವಧು ಮಕ್ಕಳಿಗೆ ಕೂಡ ಆರ್ಶೀವಾದ ಮಾಡುತ್ತಾರೆ.

ಅರುಣೆ ಶಾಸ್ತ್ರ: ಕಾಡುಗೊಲ್ಲರ ಮದುವೆಗಳಲ್ಲಿ ಅರುಣೆಶಾಸ್ತ್ರ ಬಹಳ ಮುಖ್ಯವಾದುದು, ಅರುಣೆಗೆ ಮತ್ತೊಂದು ಹೆಸರು "ಮಡಿಕೆ" ಎಂದು ಕರೆಯುತ್ತಾರೆ. ಅರುಣೆಯನ್ನು ತರುವುದಕ್ಕೆ ಹೋಗುವವರು ಪುರುಷರು ಮತ್ತು ಈ ಗೊಲ್ಲರ ಹಟ್ಟಿಯ ಅಕ್ಕಪಕ್ಕದ ಸಮೀಪವಿರುವ ಸೋಮಲಾಪುರದ ಕುಂಬಾರರ ಮನೆಯಿಂದ ಮತ್ತು ರಾಮಗೊಂಡನಹಳ್ಳಿಯಿಂದ ಮಡಿಕೆಗಳನ್ನು ತರುವುದನ್ನು ಕಾಣುತ್ತೇವೆ. ತಂದ ನಂತರ ಮುತ್ತೈದೆಯರು. ೮ ಸೊರೆ ೬ ಮಗ. ಅದರಲ್ಲಿ ೨ ಸೊರೆ ಸಣ್ಣವು ಜೊತೆಗೆ ನಾಲ್ಕು ಮಡಿಕೆಗಳಿಗೆ ಸುಣ್ಣ ಬಳಿದು ಕೆಂಪು ಬಣ್ಣದ ಗೆರೆಗಳನ್ನು ಎಳೆಯುತ್ತಾರೆ. ನಂತರ ನಾಲ್ಕು ಮಡಿಕೆಗಳಿಗೆ ಬಿಳಿ ದಾರ ಸುತ್ತಿ ಮುತ್ತೈದೆಯರು ಎರಡು ಸೊರೆಗೆ ನೀರು ಹಾಕುವುದು ಕಂಡುಬರುತ್ತದೆ. ಜೊತೆಗೆ ಅದರಲ್ಲಿ ಉತ್ತುತ್ತಿ, ಐದು ಕುಡಿಕೆ ಬೆಲ್ಲ ಬೆಳ್ಳುಳ್ಳಿ ಇವೆಲ್ಲವನ್ನು ಮಡಿಕೆಯಲ್ಲಿ ಹಾಕಿರುತ್ತಾರೆ. ಆ ಮೇಲೆ ಮಧುಮಗನಿಗೆ ಮತ್ತು ವಧುಮಗಳಿಗೆ ಕುರಿಸಿ ಅರಿಶಿಣ ಹಚ್ಚಿ ನೀರು ಹಾಕುವುದು ನಂತರ ಅವರನ್ನು ಎಬ್ಬರಿಸಿ, ಮಹೋರ್ತಕ್ಕೆ ಬಟ್ಟೆಯನ್ನು ಹೆಣ್ಣಿನವರು ಗಂಡಿನವರಿಗೆ ಗಂಡಿನವರು ಹೆಣ್ಣಿನವರಿಗೆ ಕೂಡುವ ಕಾರ್ಯಕ್ರಮ ನಡೆಯುತ್ತದೆ.

ಎದುರುಗೊಳ್ಳುವ ಶಾಸ್ತ್ರ: ಕಾಡುಗೊಲ್ಲರಲ್ಲಿ ಹಟ್ಟಿಯ ಹೊರಗಡೆ ಇರುವ ಒಂದು ಮನೆಯ ಹತ್ತಿರ ಬಂದಿರುವ ನೆಂಟರನ್ನು ಕೂರಿಸಿ ಬಂದು ಒಂದು ಚಂಬಿಗೆ ಪಾನಕ ಮಾಡಿಸಿಕೊಂಡು ನಂತರ ದೀಪ, ಹಚ್ಚಿಕೊಂಡು ಜೊತೆಗೆ ಒಂದು ಕಂಬಳಿ ಅಥವಾ ಕೊಪ್ಪೆ ಮಾಡಿಕೊಂಡು ಒಂದು ಮಡಿಕೆಯನ್ನು ತಲೆಯ ಮೇಲೆ ಇಟ್ಟುಕೊಂಡು ಸೋಬಾನೆ ಹೇಳುವ ಹೆಣ್ಣುಮಕ್ಕಳನ್ನು ಕರೆದುಕೊಂಡು ಬ್ಯಾನ್‌ಸೆಟ್, ಮುಖಾಂತರ ಮತ್ತು ಒಬ್ಬ ಗಂಡು ಮಗನಿಗೆ ಖುಷಿಗೆ ಸೀರೆಯನ್ನು ಹುಡಿಸಿಕೊಂಡು, ನಂತರ ನೆಂಟರನ್ನು ಕರೆದುಕೊಂಡು, ಬರುವುದಕ್ಕೆ ಹೋಗುತ್ತಾರೆ. ಆ ಮೇಲೆ ನೆಂಟರನ್ನು ಭೇಟಿಯಾದ ಮೇಲೆ ಗದ್ದಿಗೆ ಕಂಬಳಿ ಹಾಸಿ ಅದರ ಮೇಲೆ ಕುರಿಸಿ ಬೀಗರನ್ನು ಸಹ ಕುರಿಸಿ ಎಲ್ಲರಿಗೂ ಪಾನಕವನ್ನು ಕೊಟ್ಟು ನೆಂಟರಿಗೆಲ್ಲಾ ವಿಭೂತಿ, ಧರಿಸಿ, ಹಚ್ಚಿ ನೆಂಟರಿಗೆಲ್ಲರಿಗೂ ತಲೆಗೆ ಪೇಟವನ್ನು ಕಟ್ಟಿ ಗದ್ದಿಗೆಯಲ್ಲಿ ಅವರನ್ನು ಕುರಿಸಿ ಪೂಜೆ ಮಾಡಿಸಿದ ನಂತರ ಗಂಡಿನ ಕಡೆಯವರಾಗಲಿ ಅಥವಾ ಹೆಣ್ಣಿನ ಕಡೆಯವರಾಗಲಿ ಅವರನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ಜೋತೆಗೆ ಮುತ್ತೈದೆಯರೂ ಸಹ ಈ ಆಚರಣೆಯಲ್ಲಿ ಇರುತ್ತಾರೆ. ಈ ರೀತಿ ಎದುರುಗೊಳ್ಳುವ ಶಾಸ್ತ್ರವನ್ನು ಕಾಣಬಹುದು.

ಧಾರೆ ಎರೆಯುವ ಶಾಸ್ತ್ರ: ಕಾಡುಗೊಲ್ಲರಲ್ಲಿ ಮೊದಲು ಧಾರೆಗಿಂತ ಸುರಗಿ ನೀರನ್ನು ಹಾಕುವ ಸಂಪ್ರದಾಯ ಕಂಡುಬರುತ್ತದೆ. ಈ ಒಂದು ಕಾರ್ಯವನ್ನು ಬೆಳಗಿನಜಾವ ನೆರವೇರಿಸುತ್ತಾರೆ. ನಂತರ ಮದುವೆಯ ಹೆಣ್ಣಿಗೆ ಮುಂಜಾನೆಯ ಸಮಯದಲ್ಲಿ ಹಟ್ಟಿಯ ಮುತ್ತೈದೆಯರೆಲ್ಲರು ಸೇರಿ ಎಣ್ಣೆ ಅರಿಶಿಣ ಹಚ್ಚಿ ನೀರು ಹಾಕುತ್ತಾರೆ. ಕಾಡುಗೊಲ್ಲರಲ್ಲಿ ಹೆಣ್ಣಿನ ಸೋದರಮಾವ ಧಾರೆ ಎರೆದು ಕೊಡುತ್ತಾನೆ. ಹೆಣ್ಣಿನ ಚಪ್ಪರಕ್ಕೆ ಅವಳನ್ನು ಕರೆತಂದು ಹೆಣ್ಣಿಗೆ ಮೂರು ಹಸೆಯನ್ನು ಮತ್ತು ಗಂಡಿಗೆ ನಾಲ್ಕು ಹಸೆಯನ್ನು ಹಚ್ಚುವರು. ಚಪ್ಪರದ ನಾಲ್ಕು ಮೂಲೆಗಳಲ್ಲಿ ಇಟ್ಟಿರುವ ಗಡಿಗೆ ಮಧ್ಯೆ ಒಂದು ಕುಣಿಯನ್ನು ತೋಡಿ ಅದಕ್ಕೆ ಕುರಿ ಗೊಬ್ಬರ ಹಾಕಿ ಅದರ ಮೇಲೆ ಆ ಅರುಣೆಗಳನ್ನು ತಂದು ಇಡುತ್ತಾರೆ. ಈ ಎಲ್ಲಾ ಗಡಿಗೆಗಳಿಗೆ ಹಂಗುದಾರವನ್ನು ಸುತ್ತಿವರಿಸಿರುತ್ತಾರೆ. ನಂತರ ಹೆಣ್ಣನ್ನು ಧಾರೆಯ ಹಸೆಯ ಮೇಲೆ ಕುರಿಸಿ ಬಂಧು ಬಳಗದವರೆಲ್ಲರು ಅವಳ ತಲೆಗೆ ಹಾಲನ್ನು ಹಾಕುತ್ತಾರೆ. ಹುಡುಗನನ್ನು ಸಹ ಚಪ್ಪರಕ್ಕೆ ಕರೆತಂದು ವಧುವಿನ ಪಕ್ಕದಲ್ಲಿ ಕುರಿಸಿ ಅವರ ಮೇಲೆ ಅರಿಶಿಣ ಹಚ್ಚಿದ ಅಕ್ಕಿಯನ್ನು ಗಂಡಿನ ಕಡೆಯವರು ಹೆಣ್ಣಿನವರಿಗೆ ಹೆಣ್ಣಿನವರು ಗಂಡಿನವರ ಮೇಲೆ ಹಾಕುವರು. ಆ ಹಟ್ಟಿಯ ಪೂಜಾರಿಯು ಗೌಡನು, ಹಿರಿಯರು ಹಾಗೂ ಮೂರು ಕಟ್ಟೆಯ ಮನೆಯವರೆಲ್ಲರೂ ಧಾರೆಗೆ ಅಪ್ಪಣೆ ಕೊಡಬೇಕೆಂದು ಅಲ್ಲಿರುವ ಜನರನ್ನೆಲ್ಲಾ ಕೇಳುತ್ತಾರೆ. ನಂತರ ವರನನ್ನು ಮೂಡಲ ದಿಕ್ಕಿಗೆ ಕುರಿಸಿ ಅವನಿಗೂ ಸಹ ಹಾಲು ನೀರು ಎಲ್ಲರೂ ಬಿಡುವರು. ಇದಾದ ಮೇಲೆ ವರನ ಕೈ ಕೆಳಗೆ ವಧುವು ತನ್ನ ಕೈಯನ್ನು ಬೊಗಸೆ ಮಾಡಿ ಹಿಡಿಯುತ್ತಾಳೆ. ವರನ ಕೈಗೆ ಹಾಕಿದ ಹಾಲು ನೀರು ವಧುವಿನ ಕೈಗೆ ಬರುತ್ತದೆ. ಈ ಆಚರಣೆ ಮುಗಿದ ಮೇಲೆ ವಧು ವರರನ್ನು ಎದುರು

ಎದುರು ನಿಲ್ಲಿಸಿ ಅವರ ಮಧ್ಯದಲ್ಲಿ ಒಂದು ಬಿಳಿ ಬಟ್ಟೆಯ ತೆರೆಯನ್ನು ಹಿಡಿಯುವರು ಅವರ ಸುತ್ತ ಇರುವ ನಾಲ್ಕು ಮಡಿಕೆಗಳಿಗೆ ನೂಲನ್ನು ಐದುಸಲ ಸುತ್ತುವರು. ಹೆಣ್ಣಿನ ತಾಯಿ ಒಂದು ತಟ್ಟೆಯನ್ನು ಹಿಡಿದುಕೊಂಡು ಅದನ್ನು ವಧುವಿನ ತಲೆಯ ಮೇಲೆ ಹಿಡಿಯುತ್ತಾಳೆ. ಆಮೇಲೆ ಅಲ್ಲಿಗೆ ಬಂದಿರುವ ಮುತ್ತೈದೆಯರೆಲ್ಲರು ಗಡಿಗೆಗಳಲ್ಲಿ ತುಂಬಿದ ಸುಳ್ಳೀರನ್ನು ವಧುವಿನ ತಲೆಯ ಮೇಲೆ ತಟ್ಟೆಯ ಮೂಲಕ ಹಾಕುತ್ತಾ ಅಲ್ಲಿಗೆ ಬಂದಿರುವ ವಯಸ್ಸಾದ ಮುತ್ತೈದೆ ಅಜ್ಜಿಯರು ಸೋಬಾನೆ ಹಾಡುಗಳನ್ನು ಹಾಡುವರು. ಮಧುವೆಗಾಗಿ ಆಗಮಿಸಿದವರೆಲ್ಲರು ಸ್ವಲ್ಪ ಹಾಲನ್ನು ತಟ್ಟೆಯ ಮೇಲೆ ಹಾಕುತ್ತಾರೆ. ನಂತರ ವರನನ್ನು ಮಣೆಯ ಮೇಲೆ ಕೂರಿಸಿ ವಧುವಿಗೆ ಮಾಡಿದ ಆಚರಣೆಯಂತೆ ಹಾಲು ತುಪ್ಪ ಹಾಕುವರು. ನಂತರ ಎಲೆ ಅಡಿಕೆ ಹೂವು ಹಣ್ಣುಗಳನ್ನಿಟ್ಟು ತಟ್ಟೆಯಲ್ಲಿ ತಾಳಿಯನ್ನಿಟ್ಟು ಅದನ್ನು ಮುಟ್ಟಿಸಿ ವರನ ಕೈಗೆ ಕೊಡುವರು. ವರನು ಜೋರಾಗಿ ಸೂರ್ಯ ಚಂದ್ರರ ಗುರು ಹಿರಿಯರು ಹಾಗೂ ತಂದೆ ತಾಯಿಗಳ ಸಾಕ್ಷಿಯಾಗಿ ನಾನು ನಿನ್ನನ್ನು ಹೆಂಡತಿಯನ್ನಾಗಿ ಸ್ವೀಕರಿಸಿದ್ದೇನೆ ಎಂದು ಹೇಳುತ್ತಾನೆ. ಹಾಗೆಯೆ ವಧುವು ಕೂಡ ಎಲ್ಲರ ಎದುರಿಗೆ ನೀನೇ ನನ್ನ ಪತಿ ಎಂದು ಹೇಳುವಳು. ನಂತರ ವರನು ವಧುವಿಗೆ ತಾಳಿ ಕಟ್ಟುತ್ತಾನೆ. ಈ ರೀತಿಯ ಧಾರೆಯ ಶಾಸ್ತ್ರವನ್ನು ಎಲ್ಲರೆದುರಿಗೆ ಹಟ್ಟಿಯ ಪೂಜಾರಿಯೂ ನೆರವೇರಿಸಿಕೊಡುತ್ತಾನೆ ಎಂದು ಹೇಳಬಹುದು.

೩.೯ ಮದುವೆ:

ಮದುವೆ ಎಂಬುದು ಒಬ್ಬ ವ್ಯಕ್ತಿಯ ಸಾಮಾಜಿಕ ಜೀವನದ ಮುಖ್ಯ ಅಂಶ ಜೊತೆಗೆ ವಿವಾಹವು ಒಂದು ಸಮಾಜದಲ್ಲಿ ಪ್ರಮುಖ ಸಂಸ್ಥೆಯಾಗಿದ್ದು ಹಲವಾರು ರೀತಿಯಲ್ಲಿ ಅನನ್ಯತೆಯನ್ನು ಪಡೆದುಕೊಂಡಿದೆ. ನಿಶ್ಚಿತಾರ್ಥ ಆದ ನಂತರ ಮುಂದಿನ ಕಾರ್ಯವೇ ಮದುವೆಯಾಗಿದೆ. ಹಿಂದಿನ ಕಾಲದಲ್ಲಿ ೧೫ ರಿಂದ ೨೦ ದಿನಗಳವರೆಗೆ ಮದುವೆ ನಡೆಯುತ್ತಿತ್ತು. ಇತ್ತೀಚಿಗೆ ಕೇವಲ ಮೂರು ದಿನದಲ್ಲಿ ಮದುವೆಯನ್ನು ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಹಿಂದಿನ ಕಾಲದ ಸಂಪ್ರದಾಯ, ಆಚರಣೆ, ನಂಬಿಕೆ ಮುಂತಾದ ಶಾಸ್ತ್ರಗಳನ್ನು ನಡೆಸಿಕೊಂಡು ಬರುವುದನ್ನು ಕಾಣುತ್ತೇವೆ. ಜೊತೆಗೆ ಕಾಡುಗೊಲ್ಲರಲ್ಲಿ ಏಕಪತ್ನಿ ವಿವಾಹ ಪದ್ಧತಿಯನ್ನ ಇಂದಿಗೂ ಅನುಸರಿಸುವುದನ್ನು ನಾವು ಕಾಣಬಹುದು.

ಇತ್ತೀಚಿಗೆ ಕಾಡುಗೊಲ್ಲರಲ್ಲಿ ಮದುವೆಗೆ ಸಂಬಂಧಿಸಿದ ಶಾಸ್ತ್ರಗಳಲ್ಲಿ ಅನೇಕ ರೀತಿಯ ಬದಲಾವಣೆಗಳು ಆಗಿರುವುದು ಕಂಡುಬರುತ್ತದೆ. ಮದುವೆಯು ವಧುವಿನ ಮನೆಯಲ್ಲಿ ನಡೆಯುವುದನ್ನು ಕಾಣಬಹುದು. ವಿದ್ಯಾವಂತ ನಗರವಾಸಿ ಯುವಕರು ಮತ್ತು ತಂದೆ ತಾಯಂದಿರು ಮದುವೆಯನ್ನು ನಗರ ಪ್ರದೇಶಗಳಲ್ಲಿ ಅಂದರೆ ಕಲ್ಯಾಣ ಮಂಟಪಗಳಲ್ಲಿ ನೆರವೇರಿಸಿ ಕೊಡುವಂತೆ ವಧುವಿನ ಕಡೆಯವರಿಗೆ ಒತ್ತಾಯಿಸುವುದನ್ನು ಕಾಣಬಹುದು. ಅಲ್ಲದೆ ಅವರ ಘನತೆಯ ದೃಷ್ಟಿಯಿಂದ ಅವರ ಅನುಕೂಲಕ್ಕೆ ತಕ್ಕಂತೆ ವಧುವಿನ ಕಡೆಯವರು

ಸಹ ಮದುವೆಗೆ ಕಲ್ಯಾಣ ಮಂಟಪಗಳನ್ನು ಗುರುತಿಸಿ ಬುಕ್ ಮಾಡುತ್ತಾರೆ. ಈ ಕಲ್ಯಾಣ ಮಂಟಪ ಅಥವಾ ಸಮುದಾಯ ಭವನದಲ್ಲಿ ಜರುಗುವ ಮದುವೆಗೆ ಇತ್ತೀಚೆಗೆ ಪುರೋಹಿತರನ್ನು ಕರೆಯಿಸಿದರು ಸಹ ಪೂಜಾರಿಗಳನ್ನು ಮುಂದಿಟ್ಟುಕೊಂಡು ಮಹೂರ್ತ ಮಾಡಲೇಬೇಕು. ಮೊದಲು ಮದುವೆ ಮನೆಯವರು ಇತರೆ ಹಟ್ಟಿಗಳಲ್ಲಿರುವ ತಮ್ಮ ಸಂಬಂಧಿಕರಿಗೆ ಮತ್ತು ಸಮುದಾಯದವರಿಗೆ ಮಾತ್ರ ಮದುವೆಗೆ ಬರುವಂತೆ ಮನೆ ಮನೆಗೆ ಹೋಗಿ ಆಹ್ವಾನಿಸುತ್ತಿದ್ದರು. ಆದರೆ ಇವರು ಸಹ ಈಗ ಬೇರೆ ಸಮುದಾಯದ ಜನರಿಗೂ ಆಹ್ವಾನ ಪತ್ರಿಕೆಯೊಂದಿಗೆ ಮನೆ ಮನೆಗೂ ಹೋಗಿ ಮದುವೆಗೆ ಬರಬೇಕೆಂದು ಆಹ್ವಾನಿಸುತ್ತಾರೆ. ಮದುವೆಯ ಊಟೋಪಚಾರದ ವಿಷಯದಲ್ಲಿಯೂ ಸಹ ಮದುವೆಯ ಉಡುಪುಗಳಲ್ಲಿಯೂ ಇಂದು ಹೆಚ್ಚಿನ ಬದಲಾವಣೆಗಳು ಆಗುತ್ತಿರುವುದು ಕಂಡುಬರುತ್ತದೆ.

ಮಾಮನೆ ಶಾಸ್ತ್ರ: ಮದುವೆ ಎಲ್ಲಾ ಕಾರ್ಯ ಮುಗಿದ ಮೇಲೆ ಮಾಡುವ ಶಾಸ್ತ್ರವೇ ಮಾಮನೆ ಶಾಸ್ತ್ರ ಎಂದು ಕರೆಯುತ್ತಾರೆ. ಮಧುಮಗನ ಮನೆಗೆ ಮುತ್ತೈದೆಯರು ನೆಂಟರಿಷ್ಟರು ಹಟ್ಟಿಯ ಜನರು ಹೆಣ್ಣನ್ನು ಕರೆದುಕೊಂಡು ಬಂದು ಸೋದರ ಮಾವನು ಗಂಡಿನ ಮನೆಯ ಬಾಗಿಲನ್ನು ಸಾರಿಸಿ ಒಂದು ಕಬ್ಬಿಣದ ಮೊಳೆಯನ್ನು ಮದುವಣಗಿತ್ತಿಯ ಪಾದವನ್ನು ಮುಟ್ಟಿಸಿ ಮೊಳೆಯನ್ನು ಹೊಸಲಿನ ಮೇಲೆ ಬಡಿಯುವುದು ಹೆಣ್ಣಿನ ಸೋದರ ಮಾವ ಅಥವಾ ಸಂಬಂಧಿಕರು ಈ ಶಾಸ್ತ್ರವನ್ನು ಮಾಡುತ್ತಾರೆ. ನಂತರ ಒಳಗಡೆ ಬರುವಾಗ ಬಾಗಿಲಿಗೆ ಒಂದು ಸೇರು ಅಕ್ಕಿಯ ಮೇಲೆ ಬೆಲ್ಲದ ಉಂಡೆ ತುಂಬಿಟ್ಟು ಮದುವಣಗಿತ್ತಿಯು ಕಾಲಿನಿಂದ ಜಾಡಿಸಿ ಒದೆಯುವುದು ನಂತರ ಬಲಗಾಲನ್ನು ಇಟ್ಟು ಮನೆಯ ಒಳಗಡೆ ಬಂದ ಮೇಲೆ ಕುರಿಸಿ ಮುತ್ತೈದೆಯರು ಆರತಿ ಅಕ್ಷತೆಯನ್ನು ಮಾಡುತ್ತಾರೆ.

೩.೧೦ ಸೀಮಂತ:

ಮದುವೆಯಾಗಿ ಗರ್ಭಿಣಿಯಾದ ಹೆಣ್ಣು ಮಕ್ಕಳಿಗೆ ಸೀಮಂತ ಕಾರ್ಯವನ್ನು ಮಾಡುವುದನ್ನು ಇಂದು ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿಯೂ ಕಾಣುತ್ತೇವೆ. "ಕಾಡುಗೊಲ್ಲರ ಸಮುದಾಯದಲ್ಲಿಯೂ ಸಹ ಮದುವೆಯಾದ ಹೆಣ್ಣು ಗರ್ಭಿಣಿಯಾದಾಗ ಸೀಮಂತ ಕಾರ್ಯ ಮಾಡುತ್ತಾರೆ. ಇತರೆ ಸಮುದಾಯಗಳಿಗೆ ಹೋಲಿಸಿದರೆ ವಿಜೃಂಭಣೆಯಿಂದ ನಡೆಸುವುದಿಲ್ಲ, ಏಕೆಂದರೆ ಕಾಡುಗೊಲ್ಲರು ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದವರು. ಅವರವರ ಅನುಕೂಲಕ್ಕೆ ತಕ್ಕಂತೆ ಮತ್ತು ಗರ್ಭಿಣಿ ಹೆಂಗಸರಿಗೆ ಬೇಸರವಾಗದಂತೆ ನೋಡಿಕೊಳ್ಳುತ್ತಾರೆ. ಸೀಮಂತಕಾರ್ಯ ಹಟ್ಟಿಗಳಲ್ಲಿ ನಡೆಯದಿದ್ದರೆ ನೆರೆಹೊರೆಯವರು, ಸಂಬಂಧಿಕರು, ಹಟ್ಟಿಯ ಜನರು ಗರ್ಭಿಣಿ ಹೆಂಗಸರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ವಿವಿಧ ರೀತಿಯ ಆಹಾರಗಳನ್ನು ಸಿದ್ಧಪಡಿಸಿ ರುಚಿಕರವಾದ ಆಹಾರ ನೀಡುತ್ತಾರೆ. ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಶ್ರೀಮಂತರು ಬಹಳ ಸಂತೋಷ ಸಡಗರದಿಂದ ಬಂಧು ಬಳಗ ಸಂಬಂಧಿಕರನ್ನು ಮತ್ತು ಸ್ನೇಹಿತರನ್ನು ಕರೆಯಿಸಿಕೊಂಡು ಈ ಶುಭಕಾರ್ಯ ಮಾಡುತ್ತಾರೆ."[೪೪]

ಸಾಮಾನ್ಯವಾಗಿ ಸೀಮಂತ ಕಾರ್ಯವನ್ನು ಹೆಣ್ಣಿನ ತವರು ಮನೆಯಲ್ಲಿ ಮಾಡುವರು. ಹೆಣ್ಣು ಏಳು ಅಥವಾ ಎಂಟು ತಿಂಗಳು ಗರ್ಭಿಣಿಯಾದಾಗ ಹೆಣ್ಣಿನ ತಾಯಿಯ ಮನೆಯವರು ಶಾಸ್ತ್ರೋಕ್ತವಾಗಿ ಮಗಳನ್ನು ಹೆರಿಗೆಗೆ ತಮ್ಮ ತವರು ಮನೆಗೆ ಕರೆದುಕೊಂಡು ಬರುತ್ತಾರೆ. ತವರಿನಲ್ಲಿ ಹೆಣ್ಣಿಗೆ ೮ ತಿಂಗಳು ತುಂಬಿದ ತಕ್ಷಣ ಗಂಡಿನ ಮನೆಯವರು ಹೆಣ್ಣಿಗೆ ಸೀಮಂತ ಕಾರ್ಯ ಮಾಡಲು ಕುಟುಂಬದ ಹಿರಿಯರ ಒಪ್ಪಿಗೆ ಪಡೆದು ತಮ್ಮ ಬಂಧು ಬಳಗದವರೊಂದಿಗೆ ಗರ್ಭಿಣಿ ಹೆಣ್ಣಿಗೆ ಒಂದು ಹೊಸ ಸೀರೆ, ಹಸಿರು ಬಳೆ, ಹೂವು, ರವಿಕೆ, ಅರಿಶಿಣ ಕುಂಕುಮ, ಮಡಿಲಿಗೆ ತುಂಬಲು ಮಡ್ಲಕ್ಕಿ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯೆದೆಲೆ, ಅಡಿಕೆ, ಮುಂತಾದವುಗಳನ್ನು ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ.

ಗರ್ಭಿಣಿಯಾದ ಹೆಣ್ಣು ಮಗಳಿಗೆ ಹಟ್ಟಿಯಲ್ಲಿರುವ ಹಿರಿಯ ಮುತ್ತೈದೆಯರೆಲ್ಲರೂ ಸೇರಿ ಸ್ನಾನ ಮಾಡಿಸಿ ಕರಿ ಕಂಬಳಿ ಗದ್ದಿಗೆ ಹಾಸಿ ಅದರ ಮೇಲೆ ಹಸೆ ಹಾಕಿ, ಆ ಹಸೆಯ ಮೇಲೆ ಗರ್ಭಿಣಿಯನ್ನು ಕೂರಿಸಿ ಹಣೆಗೆ ಅರಿಶಿಣ, ಕುಂಕುಮವಿಟ್ಟು ಬಳೆಯನ್ನು ತೊಡಿಸಿ ಹೂವು ಮುಡಿಸಿ ಸೋಬಾನೆ ಪದಗಳನ್ನು ಹೇಳುವರು. ಕೆಲವರು ಅವಳಿಗೆ ಹೂವಿನ ಹಾರವನ್ನು ಕೊರಳಿಗೆ ಹಾಕಿ ಮುತ್ತೈದೆಯರು ಆರತಿಯನ್ನು ಬೆಳಗಿ ಅವಳ ಮಡಿಲಿಗೆ ಮಡಿಲಕ್ಕಿ ತುಂಬುತ್ತಾರೆ. ನಂತರ ಈ ಶುಭ ಕಾರ್ಯಕ್ಕೆ ಬಂದಂತಹ ಮುತ್ತೈದೆಯರೆಲ್ಲರಿಗೂ ಅರಿಶಿಣ ಕುಂಕುಮದ ಜೊತೆಗೆ ಫಲತಾಂಬೂಲ ಕೊಟ್ಟು ಅಲ್ಲಿ ನೆರೆದ ಎಲ್ಲಾ ಜನರಿಗೂ ಕಡ್ಲೆ, ಸಕ್ಕರೆ, ಸಿಹಿ ಹಂಚುವರು. ಅಂದು ಹೆಣ್ಣಿನ ಮನೆಯಲ್ಲಿ ನೆರೆದಿದವರೆಲ್ಲರಿಗೂ ಸಿಹಿ ಅಡುಗೆಯಾದ ಹೋಳಿಗೆ ಊಟವನ್ನು ಹಾಕಿಸುತ್ತಾರೆ. ಅರ್ಥಿಕವಾಗಿ ಶ್ರೀಮಂತ ವರ್ಗದವರು ಲಾಡು ಮುಂತಾದ ಅಡಿಗೆಯನ್ನು ಮಾಡಿಸುತ್ತಾರೆ. ಬಡವರು ಅಕ್ಕಿ ಅಥವಾ ರವೆ, ಉಗ್ಗಿ, ಪಾಯಸ, ಅನ್ನಸಾಂಬಾರು ಮಾಡುವರು. ಈ ಒಂದು ಕಾರ್ಯಕ್ಕೆ ಬಂದಂತಹ ನೆಂಟರೆಲ್ಲ ಸಿಹಿ ಊಟ ಮಾಡಿಕೊಂಡು ಹಟ್ಟಿಗೆ ತೆರಳುವರು. ಗಂಡಿನ ಮನೆಯವರು ಆ ದಿನ ನೆಂಟರ ಮನೆಯಲ್ಲಿ ಇದ್ದು ಮರುದಿನ ತಮ್ಮ ಹಟ್ಟಿಗೆ ಹೋಗುವವರು. ಇಂತಹ ಸಂಪ್ರದಾಯ ಸಾಮಾನ್ಯವಾಗಿ ಎಲ್ಲಾ ಗೊಲ್ಲ ಸಮುದಾಯದವರಲ್ಲಿ ಇರುವುದನ್ನು ಗಮನಿಸಬಹುದು.

ಆಧುನಿಕ ದಿನಗಳಲ್ಲಿ ನಗರಗಳಲ್ಲಿರುವ ವಿದ್ಯಾವಂತರು ನೌಕರಿಯಲ್ಲಿರುವವರು ಮತ್ತು ಆರ್ಥಿಕವಾಗಿ ಶ್ರೀಮಂತರು ಇತರೆ ಸಮುದಾಯದವರು ಸೀಮಂತ ಕಾರ್ಯ ಮಾಡುವಂತೆ ಇವರು ಸಹ ವಿಜೃಂಭಣೆಯಿಂದ ಈ ಶುಭಕಾರ್ಯವನ್ನು ಆಚರಿಸುವರು.

ಹೆರಿಗೆಯ ಸಂದರ್ಭದಲ್ಲಿನ ಸ್ಥಿತ್ಯಂತರಗಳು:

ಇಂದು ಹೆರಿಗೆಯ ಸಮಯದಲ್ಲಿ ಮನೆಯಲ್ಲಿಯೇ ೫ ದಿವಸ ಪ್ರತ್ಯೇಕವಾಗಿ ಬಾಣಂತಿಯರನ್ನು ಒಂದು ರೂಮಿನಲ್ಲಿ ಇಡುವ ಸಂಪ್ರದಾಯ ಗೊಲ್ಲರಹಟ್ಟಿಯಲ್ಲಿ ಕಂಡುಬರುತ್ತದೆ. ಜೊತೆಗೆ ಬಾಣಂತಿಯಾದವಳಿಗೆ ಒಂದು ತಿಂಗಳವರೆಗೆ ಅನ್ನ, ಹಾಲು, ಗಂಜಿ, ಮುಂತಾದ ಅಡುಗೆಯನ್ನು

ಕೊಡುತ್ತಾರೆ. ಬಾಣಂತಿಯಾದವಳಿಗೆ ಪ್ರತಿನಿತ್ಯ ೫ ದಿವಸದವರೆಗೆ ಅಗಸರ ಮಹಿಳೆಯು ಬಂದು ಬಟ್ಟೆಯನ್ನು ಬದಲಾಯಿಸಿ ಆ ಬಟ್ಟೆಯನ್ನು ತೊಳೆದುಕೊಂಡು ಬರುತ್ತಾರೆ. ಮತ್ತು ಅಗಸರಿಗೆ ೫ ದಿವಸ ಆದ ಮೇಲೆ ಅವರಿಗೆ ೨೦೦ರಿಂದ ೫೦೦ರವರೆಗೆ ಹಣವನ್ನು ಕೋಡುತ್ತಾರೆ. ಮತ್ತು ಬಾಣಂತಿಯು ಸ್ನಾನಕ್ಕೆ ಬೀಸಿ ನೀರು ಬಳಸುವುದು ಕಂಡುಬರುತ್ತದೆ. ಇದಾದ ಮೇಲೆ ಬಾಣಂತಿಯು ಮತ್ತು ಮಗುವನ್ನು ಆ ಊರಿನ ಹಟ್ಟಿಯಲ್ಲಿರುವ ರಂಗನಾಥ ಸ್ವಾಮಿಯ ದೇವಸ್ಥಾನಕ್ಕೆ ಕರೆದುಕೊಂಡು ಬರುವಾಗ ಬಾಳೇ ಹಣ್ಣು, ಉದಿನಕಡ್ಡಿ, ಕರ್ಪುರ, ಹೂವು ತೆಗೆದುಕೊಂಡು ಬಾಣಂತಿಯನ್ನು ಕರೆದುಕೊಂಡು ಬಂದು ೧ ತಾಸಿನವರೆಗೆ ಕುರಿಸಿ ಪೂಜಾರಿ ರಂಗಪ್ಪನವರು ಮಗುವಿಗೆ ನಾಮ ಹಚ್ಚಿ ತಾಯಿ ಮತ್ತು ಮಗುವಿಗೆ ದೇವಸ್ಥಾನದಲ್ಲಿ ದೇವರಿಗೆ ಪೂಜೆ ಮಾಡಿಸಿದ ಮೇಲೆ ತೀರ್ಥವನ್ನು ತಾಯಿ ಮತ್ತು ಮಗುವಿಗೆ ಹಾಕಿ ನಂತರ ಅಲ್ಲಿಗೆ ಬಂದಿರುವ ಹಟ್ಟಿಯ ಜನರಿಗೆ ಮತ್ತು ಸಂಬಂಧಿಕರಿಗೆ ಸಕ್ಕರೆ ಮಂಡಕ್ಕಿ ಕಡ್ಡಲೆ ಪ್ರಸಾದ ಹಂಚುವರು. ನಂತರ ಮನೆಯ ಒಳಗಡೆಗೆ ತಾಯಿ ಮತ್ತು ಮಗುವನ್ನು ಬಿಟ್ಟುಕೊಳ್ಳುತ್ತಾರೆ.

ಮಗುವಿಗೆ ಹೆಸರು ಕಟ್ಟುವಾಗಲೇ ೧ ಅಥವಾ ೨ ಸೇರು ಅಕ್ಕಿ ೩ ಕುಡಿಕೆ ಬೆಲ್ಲ ಒಂದು ಅಥವಾ ಎರಡು ಲೀಟರ್ ಹಾಲನ್ನು ಮನೆಯಿಂದ ಯಾರಾದರೂ ಸದಸ್ಯರು ತೆಗೆದುಕೊಂಡು ಹೋಗಿ ದೇವಸ್ಥಾನದ ಪೂಜಾರಿಗೆ ಕೊಟ್ಟು ಹಾಲು ಪಾಯಸ ಮಾಡಿಸುವುದಕ್ಕೆ ಹೇಳಿ ಅಡುಗೆಯಾದ ಮೇಲೆ ಅಲ್ಲಿಗೆ ಬಂದಿರುವ ಭಕ್ತರಿಗೆ ಪ್ರಸಾದ ಹಂಚುವರು.

ಮನೆಗೆ ಬಂದ ಬಾಣಂತಿಯು ಮತ್ತು ಪೂಜಾರಿಗೆ ಮನೆಯಲ್ಲಿ ಮಾಡಿಸಿರುವ ಸಿಹಿ ಅಡುಗೆಯಾದ ಪಾಯಸ ಅನ್ನ, ಸಾಂಬಾರನ್ನು ಮೊದಲು ಅವರಿಗೆ ಬಡಿಸಿ ಅವರು ಊಟ ಮಾಡಿದ ಮೇಲೆ ಬೇರೆಯವರಿಗೆ ಊಟ ಹಾಕುತ್ತಾರೆ. ಆ ಮೇಲೆ ಪೂಜಾರಿಗೆ ಗದ್ದಿಗೆಯ ಮೇಲೆ ಕುರಿಸಿ ಅವರ ಭಕ್ತಿಗೆ ಅನುಸಾರವಾಗಿ ದಕ್ಷಿಣೆಯನ್ನು ಮಗುವಿನ ತಂದೆ ಅಂದರೆ ಎಲೆ ಅಡಿಕೆ ಜೊತೆಗೆ ಹಣವನ್ನು ಕೊಡುವುದು ಕಂಡುಬರುತ್ತದೆ.

೩.೧೧ ವಸತಿ:

ಕಾಡುಗೊಲ್ಲರು ಮೂಲತಃ ಅಲೆಮಾರಿಗಳಾಗಿದ್ದರಿಂದ ಇವರು ಗುಡ್ಡ-ಗಾಡು ಪ್ರದೇಶಗಳಲ್ಲಿ ಕುರಿ, ಮೇಕೆ, ಎಮ್ಮೆಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿದ್ದವರು. ನಂತರ ಇವರು ಊರುಗಳಿಂದ ಮತ್ತು ಪಟ್ಟಣಗಳಿಂದ ಜನವಿರದೇ ಇರುವ ನಿರ್ಜನ ಪ್ರದೇಶಗಳಲ್ಲಿ ಗುಡಾರಗಳನ್ನು ಹಾಕಿಕೊಂಡು ಜೀವನ ನಡೆಸುತ್ತಿದ್ದರು. ನಂತರ ಅವರು ಹಟ್ಟಿಗಳನ್ನು ನಿರ್ಮಿಸಿಕೊಂಡು ಒಂದು ಕಡೆ ನೆಲೆ ನಿಂತು ಅಲ್ಲಿ ಅವರದೇ ಆದ ಸಂಸ್ಕೃತಿ ಸಂಪ್ರದಾಯದ ಮೂಲಕ ಗುಡಿಸಲುಗಳನ್ನು ನಿರ್ಮಿಸಿಕೊಂಡು ಪೂರ್ವ, ಉತ್ತರ ಇಲ್ಲವೇ ದಕ್ಷಿಣಕ್ಕೆ ತಲೆಬಾಗಿಲು ಬರುವಂತೆ ಉದ್ದನೆಯ ಒಂದು ಮರದ ಅಡ್ಡ ಬೆಲುಗು ಹಾಕಿ ಮತ್ತು ಅದರ ವಿರುದ್ಧ ದಿಕ್ಕಿನಲ್ಲಿ ತೇರುಗಳು ಅಥವಾ ಗಳಗಳನ್ನು ಹಾಕಿ ಅದರ ಮೇಲೆ ಹುಲ್ಲು ಅಥವಾ ತೆಂಗಿನ

ಗರಿಯನ್ನು ಮುಚ್ಚುತ್ತಾರೆ. ಈ ರೀತಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ಅವರದೇ ಆದ ಹಟ್ಟಿಗಳನ್ನು ಕಟ್ಟಿಕೊಂಡರು. ಕಾಡುಗೊಲ್ಲರು ವಾಸಿಸುವ ಜಾಗ ಅಥವಾ ನೆಲೆಗಳಿಗೆ ಗೊಲ್ಲರಹಟ್ಟಿ, ಗೊಲ್ಲರ ದೊಡ್ಡಿ, ಗೊಲ್ಲರಬೀದಿ, ಗೊಲ್ಲರ ಓಣಿಗಳೆಂದೂ ಕರೆಯುತ್ತಾರೆ. ಇವರ ಗುಡಿಸಲುಗಳ ರಚನೆ ತುಂಬಾ ಸರಳವಾಗಿರುತ್ತದೆ. ಆಧುನಿಕ ದಿನಗಳಲ್ಲಿ ಕಾಡುಗೊಲ್ಲರು ಒಂದು ಕಡೆ ನೆಲೆನಿಂತು ವ್ಯವಸಾಯ ಪಶುಸಂಗೋಪನೆ ಮಾಡುವುದರಿಂದ ಇತ್ತೀಚಿಗೆ ಕುರಿಯ ಸಂಪತ್ತು ಜಾಸ್ತಿಯಾಗಿರುವುದು ಮತ್ತು ಕುರಿಗಳೇ ಆದಾಯದ ಮೂಲ ಆಗಿರುವುದರಿಂದ ಕುರಿಗಳನ್ನು ರಕ್ಷಿಸಿಕೊಳ್ಳುವುದಕ್ಕೋಸ್ಕರ ಕಳ್ಳಕಾಕರಿಂದ ಮತ್ತು ತೋಳಗಳಿಂದ ಕುರಿಯ ರೊಪ್ಪದ ಸುತ್ತಲು ಜಾಲಿಮುಳ್ಳು, ತಂತಿಬೇಲಿ ಕಟ್ಟುವುದು ಕಂಡುಬರುತ್ತದೆ.

ಇತ್ತೀಚಿಗೆ ಕಾಡುಗೊಲ್ಲರ ಆರ್ಥಿಕ ಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿರುವುದರಿಂದ ಕೆಂಪು ಹಂಚಿನಮನೆ ಮತ್ತು ಕರಿ ಹಂಚಿನ ಮನೆ ಆರ್.ಸಿ.ಸಿ ಮನೆ, ಜಂಕ್ ಶೀಟ್ ಮಾಳಿಗೆ ಮನೆ ಹಾಗೂ ಮನೆಯ ಒಳಗಡೆ ಉತ್ತಮವಾದ ಮಾರ್ಬಲ್ ಕಲ್ಲುಗಳು ಜೊತೆಗೆ ಕಡಪದ ಕಲ್ಲುಗಳು ಕೆಲವೊಂದು ಮನೆಗಳಲ್ಲಿ ಕಂಡುಬರುತ್ತವೆ. ಮನೆಯಲ್ಲಿ ಶೌಚಾಲಯಗಳು ಕೂಡ ಇರುವುದು ಕಂಡುಬರುತ್ತವೆ.

ನಾನು ಕ್ಷೇತ್ರಕಾರ್ಯ ಮಾಡಿದ ಊರುಗಳಲ್ಲಿ ಸರ್ಕಾರವು ಕೂಡ ಅನೇಕ ರೀತಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ಭಾಗ್ಯಜ್ಯೋತಿ ಮತ್ತು ವಸತಿ ಇಲ್ಲದವರಿಗೆ ಜನತಾಮನೆಗಳನ್ನು ನಿರ್ಮಿಸಿಕೊಳ್ಳುವುದಕ್ಕೆ ಲೋನ್ ಮುಖಾಂತರ ಹಣವನ್ನು ಸಹ ಕೊಡಲಾಗುತ್ತಿದೆ. ಈ ರೀತಿ ಬದಲಾವಣೆಯಾಗಿದ್ದಾರೆ. ಆದರೂ ಕೂಡ ಎಲ್ಲೊ ಒಂದೊಂದು ಗುಡಿಸಲುಗಳು ಕಂಡುಬರುವುದನ್ನು ಗಮನಿಸಬಹುದು. ಆದ್ದರಿಂದ ಇತ್ತೀಚಿಗೆ ಕಾಡುಗೊಲ್ಲರು ಮುಂದುವರಿಯುತ್ತಿದ್ದಾರೆ ಎಂದು ಹೇಳಬಹುದು.

೩.೧೨ ಕಾಡುಗೊಲ್ಲರ ಕುಟುಂಬ ಪದ್ಧತಿ:

"ಕುಟುಂಬವು ಮಾನವನ ಸಾಮಾಜಿಕ ಜೀವನದ ತಳಹದಿಯಾಗಿದೆ, ಇದುವೆ ಮಗುವಿನ ಪ್ರಥಮ ಸಾಮಾಜಿಕ ಪರಿಸರವಾಗಿದೆ. ಅಂತೆಯೇ ಕುಟುಂಬವನ್ನು ಒಂದು ಸಾರ್ವತ್ರೀಕ ಸಾಮಾಜಿಕ ಸಂಸ್ಥೆ ಹಾಗೂ ಸಮಾಜದ ಮೂಲಭೂತ ಘಟಕವೆಂದು ಸಮಾಜಶಾಸ್ತ್ರಜ್ಞರು ಉಲ್ಲೇಖಿಸಿದ್ದಾರೆ. ಲೈಂಗಿಕ ಬಯಕೆಯ ಈಡೇರಿಕೆ, ಸಂತಾನೋತ್ಪತ್ತಿ ಮಕ್ಕಳ ಪಾಲನೆ ಪೋಷಣೆ ಮಕ್ಕಳಿಗೆ ಸಂಸ್ಕಾರ ಕಲಿಸುವುದು ಶಿಕ್ಷಣ ಕೊಡುವುದು, ಹಾಗೂ ಅವನನ್ನು ರಾಷ್ಟ್ರದ ಸಮಾಜದ ಸದಸ್ಯನನ್ನಾಗಿ ಮಾಡುವುದು ಕುಟುಂಬ ಎಂಬ ಸಂಸ್ಥೆಯಿಂದ ಮಾತ್ರ ಸಾಧ್ಯ. ಮಾನವನ ಸಾಮಾಜಿಕ ಜೀವನಕ್ಕೆ ನೆಲೆ ಮತ್ತು ಸ್ಥಿರತೆಯನ್ನು ಕೊಡುವುದು, ಕುಟುಂಬದಿಂದಲೇ ಸಾಧ್ಯವಾಗುತ್ತದೆ.

ಪ್ರತಿಯೊಂದು ಸಮುದಾಯವೂ ಕೂಡ ತನ್ನದೇ ಆದ ಕುಟುಂಬ ವ್ಯವಸ್ಥೆಯನ್ನು ಹೊಂದಿದೆ. ಕುಟುಂಬ ಪದ್ಧತಿಯು ಸರ್ವೇಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿಯೂ ಹಾಗೂ ಎಲ್ಲಾ ಕಡೆಗಳಲ್ಲಿಯೂ ಕಂಡುಬರುತ್ತದೆ. ಕುಟುಂಬವು ಮಾನವನ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವ ಸಂಸ್ಥೆಯಾಗಿದೆ.

ಕುಟುಂಬವೂ ಒಂದೇ ಸೂರಿನ ಅಡಿಯಲ್ಲಿ ವಾಸಿಸುತ್ತಾ ಒಂದೇ ಅಡಿಗೆ ಮನೆಯಲ್ಲಿ ತಯಾರಿಸಿದ ಆಹಾರ ಸೇವಿಸುತ್ತಾ, ಪೂಜೆ ಪುನಸ್ಕಾರಗಳಲ್ಲಿ ಭಾಗವಹಿಸುತ್ತಾ, ಸಾಮೂಹಿಕವಾಗಿ ಆಸ್ತಿಯನ್ನು ಅನುಭವಿಸುತ್ತಾ ಇರುವ ಜನರ ಸಮೂಹವೇ ಅವಿಭಕ್ತ ಕುಟುಂಬವಾಗಿದೆ.”[೧೦]

ಕಾಡುಗೊಲ್ಲರಲ್ಲಿ ಒಂದು ಕಾಲದಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚು ಕಂಡುಬರುತ್ತಿದ್ದವು. ಎಂದು ಗೊಲ್ಲರಹಟ್ಟಿಯ ಹಿರಿಯರು ಹೇಳುತ್ತಾರೆ. ಏಕೆಂದರೆ ಇವರು ಅನಕ್ಷರಸ್ಥರಾಗಿರುವುದರಿಂದ ಅಥವಾ ಕುಟುಂಬದ ಘನತೆ ಗೌರವಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಹಾಗೂ ಹಿಂದಿನ ಕಾಲದಲ್ಲಿ ಕಾಡುಗೊಲ್ಲರಿಗೆ ಜಮೀನುಗಳು ಇಲ್ಲದೇ ಒಂದು ಕಡೆ ನೆಲೆ ನಿಲ್ಲದಂತಹ ಪರಿಸ್ಥಿತಿ ಇದ್ದುದರಿಂದ ಈಡೀ ಕುಟುಂಬ ಸಮೇತ ಅವರು ಕುರಿಗಳನ್ನು ಹೊಡೆದುಕೊಂಡು ವಲಸೆ ಹೋಗಬೇಕಿತ್ತು. ಅಂತಹ ಸಂದರ್ಭದಲ್ಲಿ ಮನೆ ಎಲ್ಲಾ ಸದಸ್ಯರು ಕುರಿಗಳನ್ನು ರಾತ್ರಿಯ ಸಂದರ್ಭದಲ್ಲಿ ಕಳ್ಳರನ್ನು ಕಾಯುವುದಕ್ಕೆ ಬೇಕಾಗಿತ್ತು. ಆದ್ದರಿಂದ ಅವರು ಬೇರೆಯಾಗದೇ ಸಂಸಾರ ಸಮೇತ ಎರಡು ಮೂರು ತಲೆಮಾರುಗಳವರೆಗೆ. ಜೀವನ ನಡೆಸುತ್ತಿದ್ದರು ಎಂದು ಹೇಳುತ್ತಾರೆ. ಇಂದು ಆಸ್ತಿಯು ಇವರಿಗೆ ದೊರೆತಿರುವುದರಿಂದ ಮತ್ತು ಒಂದು ಕಡೆ ನೆಲೆ ನಿಂತು ಕೃಷಿ ಚಟುವಟಿಕೆಗಳನ್ನು ಮಾಡುವುದರಿಂದ ಅಧಿಕ ಹಣ ಬಂದು ಆಸೆ ಆಕಾಂಕ್ಷೆಗಳು ಹೆಚ್ಚಾಗಿ ಹಾಗೂ ಕುಟುಂಬಗಳಲ್ಲಿ ಹಿರಿಯರ ಮಾತಿಗೆ ಬೆಲೆ ಕೊಡದೇ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಗಳಾಗಿವೆ. ಅಂದರೆ ಅಣ್ಣ ತಮ್ಮಂದಿರು ತಮಗೆ ದೊರಕಬೇಕಾದ ಜಮೀನನ್ನು ಹಂಚಿಕೊಂಡು ಮನೆಯಲ್ಲಿ ತಾವು ಸಾಕಿರುವ ಪ್ರಾಣಿಗಳಾದ ಕುರಿ ಮೇಕೆ ಇವೆಲ್ಲವುಗಳನ್ನು ಹಂಚಿಕೊಂಡು ಬೇರೆಯಾಗಿ ಗಂಡ ಹೆಂಡತಿ ಮಕ್ಕಳೊಡನೆ ವಿಭಕ್ತ ಕುಟುಂಬದಲ್ಲಿ ಜೀವನ ನಡೆಸುತ್ತಿದ್ದಾರೆ. ಅವಿಭಕ್ತ ಕುಟುಂಬದಲ್ಲಿ ಯಾವ ರೀತಿ ಒಟ್ಟಿಗೆ ಸೇರಿ ಶುಭಕಾರ್ಯಕ್ರಮವನ್ನು ಆಚರಿಸುತ್ತಿದ್ದರೋ. ಅದೇ ರೀತಿ ವಿಭಕ್ತ ಕುಟುಂಬಗಳಾಗಿ ಏನೇ ಮನಸ್ತಾಪಗಳಿದ್ದರು ಸಹ ಅಣ್ಣ ತಮ್ಮಂದಿರ ಹಾಗೂ ನೆಂಟರ ಮಕ್ಕಳ ಮದುವೆ ಶುಭಕಾರ್ಯಕ್ರಮಗಳಿಗೆ ಎಲ್ಲರು ಒಟ್ಟಿಗೆ ಸೇರುತ್ತಾರೆ. ಇತರೆ ಕಷ್ಟ ಸುಖಗಳಲ್ಲಿಯೂ ಕೂಡ ಎಲ್ಲರೂ ಭಾಗಿಯಾಗುತ್ತಾರೆ. ಹೀಗೆ ಕಾಡುಗೊಲ್ಲರಲ್ಲಿಯೂ ಸಾಮೂಹಿಕವಾಗಿ ಆಸ್ತಿಯನ್ನು ಅನುಭವಿಸುತ್ತಾ ಪೂಜೆ ಪುನಸ್ಕಾರಗಳಲ್ಲಿ ಹಾಗೂ ಹಬ್ಬ ಹರಿದಿನಗಳಲ್ಲಿ ಸಂತೋಷದಿಂದ ಎಲ್ಲರೂ ಕೂಡಿರುತ್ತಾರೆ. ಈ ರೀತಿ ಕಾಡುಗೊಲ್ಲರ ಕುಟುಂಬ ಪದ್ಧತಿಯಲ್ಲಿ ಬಹಳ ಅನ್ಯೋನ್ಯತೆಯಿಂದ ಇರುವುದು ಗೊಲ್ಲರ ಹಟ್ಟಿಯಲ್ಲಿ ಕಂಡುಬರುತ್ತದೆ. ಜೊತೆಗೆ ಇತ್ತೀಚಿಗೆ ಕಾಡುಗೊಲ್ಲರು ವಿದ್ಯೆಯನ್ನು ಕಲಿತು ನಗರಗಳಲ್ಲಿ ನೌಕರಿ ಪಡೆದುಕೊಂಡು ಅಲ್ಲಿಯೇ ತಮ್ಮ ನೆಲೆ ಕಂಡುಕೊಳ್ಳುತ್ತಿದ್ದಾರೆ.

೩.೧೩ ಆಹಾರ ಪದ್ಧತಿ:

ಕಾಡುಗೊಲ್ಲರು ತಮ್ಮದೇ ಆದ ವಿಶಿಷ್ಟವಾದ ಆಹಾರ ಪದ್ಧತಿ ಹೊಂದಿರುವುದನ್ನು ಹಿಂದಿನ ಕಾಲದಿಂದಲೂ ಕಾಣುತ್ತಿದ್ದೇವೆ. ಪ್ರಾಚೀನ ಕಾಲದಲ್ಲಿ ಆದಿಮಾನವನು ಮೂಲತಃ ಆಹಾರಕ್ಕಾಗಿ ಗುಡ್ಡಗಾಡುಗಳಲ್ಲಿ ಜೀವನ ಮಾಡುವುದರಿಂದ ಅವನು ಅಲೆಮಾರಿಯಾಗಿ ಕಾಡಿನಲ್ಲಿ ಸಿಗುವ ಗೆಡ್ಡೆ-ಗೆಣಸು ಹಣ್ಣು ಹಂಪಲುಗಳನ್ನು ತಿಂದು ಜೀವಿಸುತ್ತಿದ್ದನು. ನಂತರ ಅವನು ಪ್ರಾಣಿಗಳನ್ನು ಬೇಟೆಯಾಡುವುದರ ಮೂಲಕ ಜೀವನ ಸಾಗಿಸುತ್ತಿದ್ದನು. ದಿನಕಳೆದಂತೆ ಮಾನವನು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುವುದರಿಂದ ಸರ್ಕಾರವು ಅರಣ್ಯ ಇಲಾಖೆಯನ್ನು ವಶಪಡಿಸಿಕೊಂಡಾಗ ಮಾನವನಿಗೆ ಪ್ರಾಣಿಗಳನ್ನು ಬೇಟೆಯಾಡುವುದು ತೊಂದರೆಯಾಯಿತು. ನಂತರ ಅವನು ಪಶು ಸಂಗೋಪನೆ ಮತ್ತು ಕೃಷಿ ಭೂಮಿಯ ಕಡೆಗೆ ಓಲವು ತೋರಿಸಿ ಕೃಷಿಭೂಮಿಯ ಮುಖಾಂತರ ಉಳುಮೆ ಮಾಡುವುದಕ್ಕೆ ಎತ್ತುಗಳನ್ನು ಬಳಸಿ ಆಹಾರ ಧಾನ್ಯ, ತರಕಾರಿ ಬೆಳೆದು ಜೀವನ ನಡೆಸಲು ಆರಂಭಿಸಿದರು.

ಕಾಡುಗೊಲ್ಲರು ಹಿಂದೆ ಕಾಡು ಗುಡ್ಡ-ಗಾಡು ಮತ್ತು ಬಯಲು ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಸಂದರ್ಭಗಳಲ್ಲಿ ಅವರ ಮುಖ್ಯ ಕಸುಬು ಪಶುಪಾಲನೆಯಾಗಿತ್ತು. ಇವರು ಹಸು, ಎಮ್ಮೆ, ಕುರಿ, ಮೇಕೆ ಪ್ರಾಣಿಗಳನ್ನು ಸಾಕುತ್ತಿದ್ದರು. ಮತ್ತು ಕುರಿ ಮತ್ತು ಮೇಕೆಯ ಮಾಂಸವನ್ನು ಬಳಸುತ್ತಿದ್ದರು. ಏಕೆಂದರೆ ಇವರು ಪ್ರಾಣಿಗಳನ್ನು ಸಾಕುವುದರಿಂದ ಅವುಗಳನ್ನು ಅಡುಗೆಗೆ ಬಳಸಿಕೊಳ್ಳುವುದು ಕಂಡುಬರುತ್ತದೆ. ಇದರ ಜೊತೆಗೆ ಮೀನು, ಮೊಟ್ಟೆ, ಕುರಿ, ಮೇಕೆ ಮಾಂಸವನ್ನು ಆಹಾರಕ್ಕಾಗಿ ಬಳಸುತ್ತಾರೆ. ಬಯಲು ಸೀಮೆಯಲ್ಲಿ ವಾಸಿಸುವ ಕಾಡುಗೊಲ್ಲರು ರಾಗಿ, ಮುದ್ದೆ, ಅನ್ನ ಸಾರು ಅವರಿಗೆ ಇಷ್ಟವಾದ ದಿನನಿತ್ಯದ ಆಹಾರವಾಗಿದೆ. ಜೊತೆಗೆ ಅಪ್ಪಳ, ಸೊಂಡಿಗೆ ಉಪ್ಪಿನಕಾಯಿಯನ್ನು ಊಟಕ್ಕೆ ಬಳಸುತ್ತಾರೆ.

ಕಾಡುಗೊಲ್ಲರಲ್ಲಿ ದಿನನಿತ್ಯದ ಅಡುಗೆಗಳು, ಹಬ್ಬ ಮದುವೆ ಧಾರ್ಮಿಕ ಸಭೆ ಸಮಾರಂಭಗಳು ಜನನ ಸಂದರ್ಭದಲ್ಲಿ ಜಾತ್ರೆ ಮತ್ತು ತಿಥಿ ಸಂದರ್ಭದ ಅಡುಗೆಗಳು ಭಿನ್ನವಾಗಿರುತ್ತವೆ.

ಕಾಡುಗೊಲ್ಲರು ರಾಗಿ ಮುದ್ದೆಯನ್ನು ತಮ್ಮ ಮುಖ್ಯ ಆಹಾರವನ್ನಾಗಿಸಿಕೊಂಡಿದ್ದಾರೆ. ಪಶುಪಾಲಕರಾದ ಇವರು ಊಟಕ್ಕೆ ತುಪ್ಪ, ಹಾಲು, ಮೊಸರು ಮತ್ತು ಬೆಣ್ಣೆಯನ್ನು ಉಪಯೋಗಿಸುವುದನ್ನು ಕಾಣಬಹುದು. ಆಹಾರದ ಬಗ್ಗೆ ಊರಿನ ಅಥವಾ ಹಟ್ಟಿಯ ಹಿರಿಯರನ್ನು ವಿಚಾರಿಸಿದಾಗ "ನಾವು ಹಿಂದೆ ತುಪ್ಪದಲ್ಲಿ ಕೈ ತೊಳೆಯುತ್ತಿದ್ದೇವು" ಎನ್ನುವ ಮಾತನ್ನು ಗಮನಿಸಿದಾಗ ಹಾಲು, ಮೊಸರು ತುಪ್ಪವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದರು ಎಂದೂ ಕಂಡುಬರುತ್ತದೆ. ಈಗಲೂ ಸಹ ಅವರು ಎಮ್ಮೆಗಳನ್ನು ಜೊತೆಗೆ ಹಸುಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಾಕಿದ್ದಾರೆ.

ಕಾಡುಗೊಲ್ಲರು ಹಿಂದಿನ ದಿನಗಳಲ್ಲಿ ಕಾಫಿ ಮತ್ತು ಚಹಾ ತಯಾರಿಸಲು ಕುರಿ ಮತ್ತು ಮೇಕೆ ಹಾಲನ್ನು ಬಳಸುತ್ತಿದ್ದರು. ಇಂದು ಕಾಡುಗೊಲ್ಲರು ಬೇಸಾಯ ಮತ್ತು ಪಶುಪಾಲನೆಯನ್ನು ಅವಲಂಬಿಸಿರುವುದರಿಂದ ಹೊಲಗದ್ದೆ ತೋಟಗಳಲ್ಲಿ ಮತ್ತು ಜಮೀನುಗಳಲ್ಲಿ ಕೆಲಸ ಮಾಡಲು ಶಕ್ತಿ ಬರುವಂಥ ರಾಗಿಮುದ್ದೆ, ಕುರಿ ಮಾಂಸದ ಸಾರು ಜೊತೆಗೆ ಸೊಪ್ಪಿನ ಸಾರು ಮತ್ತು ವಿವಿಧ ದ್ವಿದಳ ಧಾನ್ಯಗಳಿಂದ ಸಾಂಬಾರನ್ನು ತಯಾರಿಸುತ್ತಾರೆ. ಜೊತೆಗೆ ಬೆಳಗಿನ ಉಪಹಾರಕ್ಕೆ ರಾಗಿ ಮುದ್ದೆ ಇಲ್ಲವೇ ಅನ್ನ ಸಾಂಬಾರು, ಊಟ ಮಾಡಿ ಹೊಲಗದ್ದೆಗಳಿಗೆ ಕೆಲಸಕ್ಕೆ ಹೊರಡುತ್ತಾರೆ. ಕೃಷಿ ಚಟುವಟಿಕೆಯಲ್ಲಿ ತೊಡಗುವುದರಿಂದ ಉತ್ತಮವಾದ ಗಟ್ಟಿ ಅಥವಾ ಪೌಷ್ಟಿಕ ಆಹಾರವನ್ನು ಬಳಸಬೇಕಾಗುತ್ತದೆ. ಮಧ್ಯಾಹ್ನದ ಸಮಯದಲ್ಲಿ ರಾಗಿ, ರೊಟ್ಟಿ, ತುಪ್ಪ, ಚಟ್ನಿ ಅಥವಾ ಪಲ್ಯ ಮುಂತಾದ ಅಡಿಗೆಯನ್ನು ಮಾಡುತ್ತಾರೆ.

ಇತ್ತೀಚಿಗೆ ಕಾಡುಗೊಲ್ಲರು ತಮ್ಮ ಕೃಷಿಭೂಮಿಯಲ್ಲಿ ವಿವಿಧ ರೀತಿಯ ಸೊಪ್ಪುಗಳನ್ನು ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಹಸಿಮೆಣಸಿನಕಾಯಿ ಹೀರೆಕಾಯಿ, ಜವಳಿಕಾಯಿ, ಬೆಂಡೆ ಕಾಯಿ, ಮೂಲಂಗಿ ಮುಂತಾದ ತರಕಾರಿಗಳು ಮೆಂತೆಸೊಪ್ಪು, ಅನೆಗೊನೆಸೊಪ್ಪು, ಅಲೆಸೊಪ್ಪು, ಕೋತ್ತುಂಬರಿ ಸೊಪ್ಪು, ಪಾಲಕದ ಸೊಪ್ಪು ಜೊತೆಗೆ ದಂಟಿನಸೊಪ್ಪು, ಎಳೆಹರಿವೆ ಸೊಪ್ಪು, ಬಳಒಡಕ ಸೊಪ್ಪು, ಸಬ್ಬಸ್ಗಿ ಸೊಪ್ಪು ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದು ಕಂಡುಬರುತ್ತದೆ.

ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವವರ ಆಹಾರ ಪದ್ಧತಿಯಲ್ಲಿ ಬದಲಾವಣೆಯನ್ನು ಕಾಣಬಹುದು. ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೇ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಬದಲಾವಣೆ ಇರುವುದು ಕಂಡುಬರುತ್ತದೆ. ಬೆಳಿಗ್ಗೆ ಅಲ್ಲಿಯೂ ಕೂಡ ವಿವಿಧ ಬಗೆಯ ತಿಂಡಿ ತಿನಿಸುಗಳು ಹೋಟೆಲ್‌ಗಳು ಕಂಡುಬರುತ್ತವೆ. ಅಂದರೆ ಮನೆಯಲ್ಲಿ ಇಡ್ಲಿ, ಸಾಂಬಾರು, ದೋಸೆ, ಪಡ್ಡು, ಪಲಾವ್, ಚಿತ್ರನ್ನ ಮುಂತಾದ ತಿಂಡಿಗಳನ್ನು ಗ್ರಾಮೀಣ ಪ್ರದೇಶದಲ್ಲಿಯೂ ಬಳಸುವುದನ್ನು ಕಾಣಬಹುದು. ಶಾಲೆಯ ಮಕ್ಕಳಿಗೆ ಅಷ್ಟೇ ಅಲ್ಲದೇ ಕುಟುಂಬದ ಎಲ್ಲರಿಗೂ ತಿಂಡಿಯ ವ್ಯವಸ್ಥೆ ಇರುವುದು ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ಇರುವವರು ಅವಲಕ್ಕಿ, ಗೀ ರೈಸ್, ಪೂರಿ, ಇಡ್ಲಿವಡೆ, ಉಪ್ಪಿಟ್ಟು, ಬಿಸಿಬೆಳೆಬಾತು ಮುಂತಾದ ತಿಂಡಿಗಳನ್ನು ನಗರಗಳಲ್ಲಿ ತಯಾರಿಸುತ್ತಾರೆ. ಸಂಜೆ ಬಂದ ನಂತರ ಮಂಡಕ್ಕಿ ಮೆಣಸಿನಕಾಯಿ ಸಿದ್ದಪಡಿಸುತ್ತಾರೆ. ಇತ್ತೀಚಿಗೆ ನಗರ ಪ್ರದೇಶಗಳಲ್ಲಿ ಬೀದಿ ಅಂಗಡಿಯಲ್ಲಿ ಗೋಬಿ ಮಂಚೂರಿ, ಪಾನೀಪುರಿ, ಸೇವ್‌ಪೂರಿ, ಬೇಲ್ ಪುರಿ ಮುಂತಾದ ತಿಂಡಿ ತಿನಿಸುಗಳನ್ನು ಸೇವಿಸುತ್ತಾರೆ. ನಗರ ಪ್ರದೇಶಗಳಲ್ಲಿ ಕಾಫಿ ಮತ್ತು ಟೀಗೆ ಹಸುವಿನ ನಂದಿನಿ ಹಾಲನ್ನು ಬಳಸುತ್ತಾರೆ. ಮತ್ತು ಸಾಯಂಕಾಲ ರಾಗಿ ಮುದ್ದೆಯನ್ನು ಸೇವಿಸುತ್ತಾರೆ.

ಸಮಾಜ ಬದಲಾದಂತೆ ಕಾಡುಗೊಲ್ಲರು ಸಾಂಪ್ರದಾಯಿಕ ಅಡುಗೆ ಪದ್ಧತಿಯಿಂದ ಆಧುನಿಕ ಅಡುಗೆ ಪದ್ಧತಿಗೆ ಮಾರು ಹೋಗಿರುವುದನ್ನು ಗಮನಿಸಬಹುದು. ಮತ್ತು ಇತರೆ ಸಮುದಾಯದವರಂತೆ ವಿವಿಧ ರೀತಿಯ ಅಡುಗೆ ಪದಾರ್ಥಗಳನ್ನು ತಯಾರಿಸಿ ತಿನ್ನುವುದನ್ನು ಕಾಣುತ್ತೇವೆ. ನಗರವಾಸಿ ಸಮುದಾಯದವರೂ ರಾಗಿ ಮುದ್ದೆಯನ್ನು ಮುಖ್ಯ ಆಹಾರವನ್ನಾಗಿ ಬಳಸುತ್ತಾರೆ. ಜೊತೆಗೆ ಉತ್ತಮವಾದ ದಿನನಿತ್ಯ ಸಣ್ಣ ಅಕ್ಕಿಯನ್ನು ಅಂದರೆ ಸೋನಾಮಸೂರಿ ಜೆ.ಜೆ.ಎಲ್. ಅಂಕೂರ ಸೋನಾ ಸ್ಟೀಮ್ ಶ್ರೀರಾಮ್ ಮುಂತಾದ ಅಕ್ಕಿಯನ್ನು ದಿನನಿತ್ಯದ ಆಹಾರಕ್ಕೆ ಉಪಯೋಗಿಸುತ್ತಾರೆ.

೩.೧೪ ನಂಬಿಕೆ ಮತ್ತು ನಿಷೇಧಗಳು:

ಕಾಡುಗೊಲ್ಲರಲ್ಲಿ ಅನೇಕ ನಂಬಿಕೆ ನಿಷೇಧಗಳು ಕಂಡುಬರುತ್ತವೆ. ಏಕೆಂದರೆ ಈ ನಂಬಿಕೆ ನಿಷೇಧಗಳು ಹಿಂದಿನ ಕಾಲದಿಂದಲೂ ಹಟ್ಟಿಯ ಹಿರಿಯರು ಸಂಪ್ರದಾಯವಾಗಿ ನಡೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಕಾಡುಗೊಲ್ಲರು ನಿರ್ಮಿಸಿಕೊಂಡಿರುವ ಹಟ್ಟಿಯೊಳಗೆ ಊರಿನ ಹಿರಿಯರನ್ನು ಕೇಳದೆ ಪ್ರವೇಶಿಸುವಂತಿಲ್ಲ. ಹಿಂದಿನ ಕಾಲದಲ್ಲಿ ಹರಿಜನರನ್ನು ಹಟ್ಟಿಯೊಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ. ಅವರಿಗೆ ಗೊತ್ತಿಲ್ಲದೆ. ಹಟ್ಟಿಯೊಳಗೆ ಹರಿಜನರು ಬಂದರೆ ಅವರನ್ನು ಕರೆಸಿ ಅವರಿಗೆ ದಂಡ ಹಾಕಿ ಗೊಲ್ಲರು ತಮ್ಮ ದೇವರನ್ನು ಶುದ್ದಿ ಮಾಡಲು ಹೊಳೆಗೆ ಹೋಗುತ್ತಿದ್ದರು. ಅಲ್ಲಿ ದೇವರನ್ನು ಶುದ್ದಿ ಮಾಡಿಕೊಂಡು ಬಂದು ದೇವರ ಗುಡಿಯನ್ನೆಲ್ಲಾ ಸ್ವಚ್ಚವಾಗಿ ಶುಚಿಗೊಳಿಸಿ ಆ ಹಟ್ಟಿಯ ದಾಸಯ್ಯನನ್ನು ಕರೆದು ಗೋವಿಂದ ಇಕ್ಕಿಸಿ ಆನಂತರ ದೇವರನ್ನು ಗುಡಿಯಲ್ಲಿ ಸ್ಥಾಪಿಸುತ್ತಿದ್ದರು. ಕಾಡುಗೊಲ್ಲರು ಹಟ್ಟಿಯೊಳಗೆ ಇಂದು ಸಹ ಹಂದಿ ಅಥವಾ ಕೋಳಿ ಸಾಕುವುದಿಲ್ಲ, ಜೊತೆಗೆ ಹಟ್ಟಿಗಳಲ್ಲಿ ಬಿಟ್ಟುಕೊಳ್ಳುವುದಿಲ್ಲ. ಇವರು ಮಾಂಸಾಹಾರಿಗಳಾದರೂ ಸಹ ಕುರಿ ಮತ್ತು ಮೇಕೆ ಮಾಂಸವನ್ನು ಮಾತ್ರ ತಿನ್ನುವರು. ಹಂದಿ ಕೋಳಿ ಮತ್ತಿತರ ಮಾಂಸಗಳನ್ನು ತಿನ್ನುವುದಿಲ್ಲ. ಇವರ ಕುಲದೇವರಿಗೂ ಹಂದಿ ಮತ್ತು ಕೋಳಿ ಸಾಕುವುದು ಮತ್ತು ತಿನ್ನುವುದನ್ನು ನಿಷೇಧಿಸಿದ್ದಾರೆ.

"ಕಾಡುಗೊಲ್ಲರು ಮೊದಲು ತಮ್ಮ ಹಟ್ಟಿಯ ಒಳಗೆ ಚಪ್ಪಲುಧರಿಸಿ ಹೋಗುತ್ತಿರಲಿಲ್ಲವಂತೆ. ಅವುಗಳನ್ನು ಹುದಿ ಬಾಗಿಲಲ್ಲೇ ಬಿಡುತ್ತಿದ್ದರಂತೆ. ಆದರೆ ಇತ್ತೀಚಿಗೆ ಹಟ್ಟಿಯೊಳಗೆ ಚಪ್ಪಲು ಹಾಕಿಕೊಂಡು ಹೋಗುವರು. ದೇವರಗುಡಿಯ ಒಳಗಡೆ ಹಾಕಿಕೊಂಡು ಹೋಗುವುದಿಲ್ಲ. ತಮ್ಮ ಕುರಿಹಟ್ಟಿ ರೊಪ್ಪದ ಒಳಗೂ ಸಹ ಇಂದಿಗೂ ಚಪ್ಪಲಿಗಳನ್ನು ಹಾಕಿಕೊಂಡು ಹೋಗುವುದಿಲ್ಲ. ಇಂತಹ ಸಂಪ್ರದಾಯ ಇತ್ತೀಚಿಗೆ ಎಲ್ಲಾ ಹಟ್ಟಿಗಳಲ್ಲಿ ಕಂಡುಬರುವುದಿಲ್ಲ. ಕಾಡುಗೊಲ್ಲರು ಕುರಿ ಮತ್ತು ದನಗಳನ್ನು ದೇವರೆಂದು ಭಾವಿಸುತ್ತಾ ಬಂದಿದ್ದಾರೆ. ಅದು ಅವರ ಸಂಪತ್ತು ಆಗಿರುವುದರಿಂದ ಇಂತಹ ಪದ್ಧತಿಯನ್ನು ಇಂದಿಗೂ ಸಹ ಮುಂದುವರಿಸಿಕೊಂಡು ಬಂದಿದ್ದಾರೆ.

ಹಿಂದಿನ ಕಾಲದಲ್ಲಿ ಹಟ್ಟಿಯಲ್ಲಿ ಹೆಣ್ಣು ಋತುಮತಿಯಾದರೆ ಅವಳನ್ನು ಹಟ್ಟಿಯಿಂದ ಆಚೆ ಬೇವಿನ ಹೊಂಗೆಯ ಹಸಿ ಸೊಪ್ಪಿನಿಂದ ನಿರ್ಮಿಸಿದ ಗುಡ್ಲುಗಳಲ್ಲಿ ಬಿಡುತ್ತಿದ್ದರು. ಅವಳು

೫ ದಿವಸಗಳವರೆಗೆ ಅಲ್ಲಿದ್ದು ಅನಂತರ ಹಟ್ಟಿಯ ಒಳಗೆ ಬರಬೇಕು ಹಾಗೇ ಮುಟ್ಟಾದರೂ ಸಹ ಇದೇ ರೀತಿ ೩ ದಿನಗಳವರೆಗೆ ಹಟ್ಟಿಯಿಂದ ಹೊರಗಿರಬೇಕಾಗಿತ್ತು. ಇಷ್ಟೇ ಅಲ್ಲದೇ ಹೆಣ್ಣು ಮಗುವಿಗೆ ಜನ್ಮ ಕೊಟ್ಟಾಗಲೂ ಸಹ ಅವಳು ಹಟ್ಟಿಯಿಂದ ಸುಮಾರು ೨ ತಿಂಗಳವರೆಗೆ ಹಟ್ಟಿಯ ಹೊರಗಡೆ ಕಟ್ಟಿದಂತಹ ಹುಲ್ಲಿನ ಗುಡ್ಲುವಿನಲ್ಲಿ ವಾಸಮಾಡಬೇಕಾಗಿತ್ತು. ಆ ಸಮಯದಲ್ಲಿ ಮಳೆಗಾಳಿ ಬೀಸಿಲು ಮಿಂಚು ಗುಡುಗು ಬಂದರೂ ಸಹ ಅಲ್ಲೇ ಇರಬೇಕಾದ ಘಟನೆಗಳು ಹಿಂದೆ ನಡೆದಿರುವುದು ಕಂಡು ಬರುತ್ತವೆ.

ಇತ್ತೀಚಿಗೆ ೨ ತಿಂಗಳ ಬದಲಾಗಿ ೯ ರಿಂದ ೧೧ ದಿನ ಮಾತ್ರ ಅಲ್ಲಿದ್ದು ನಂತರ "ಜನಿಗೆ" ಕುರಿಯಿಂದ ತಾಯಿ ಮಗು ಇಬ್ಬರೂ ಹಾಲನ್ನು ಕುಡಿದು ನಂತರ ಅವಳು ಹಟ್ಟಿಯ ಒಳಬರುತ್ತಾಳೆ. ಆದರೆ ಇತ್ತೀಚಿಗೆ ಮನೆ ಮತ್ತು ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿ ಮನೆಯಲ್ಲಿಯೇ ಇಟ್ಟುಕೊಳ್ಳುತ್ತಾರೆ. ಇಂತಹ ನಿಷೇಧಗಳು ಇಂದು ಕಣ್ಮರೆಯಾಗುತ್ತಿವೆ ಮತ್ತು ಬದಲಾವಣೆಯಾಗುತ್ತಿವೆ.

ಹಿಂದಿನ ಕಾಲದಲ್ಲಿ ಹರಿಜನರ ಮನೆಯಲ್ಲಿ ಊಟ ಮಾಡಬಾರದು. ಸತ್ತವರ ಮನೆಯ ತಿಥಿ ಊಟವನ್ನು ಮಾಡಬಾರದು. ಕುರಿಯ ಹಾಲಿನ ಮೊಲೆಯನ್ನು ಕಾಲಿನಿಂದ ಹೊದೆಯಬಾರದು ಇಂತಹ ನಿಷೇಧಗಳು ಪ್ರಚಲಿತದಲ್ಲಿದ್ದವು. ಆದರೆ ಇಂದು ಕಾಡುಗೊಲ್ಲರ ಹಟ್ಟಿಯಲ್ಲಿ ಅವರದೇ ಸಮುದಾಯದವರೂ ವಾಸವಾಗಿ ಇರುವುದು ಕಂಡುಬರುತ್ತದೆ. ಮತ್ತು ಇವರು ಬೇರೆ ಸಮುದಾಯಗಳ ಜೊತೆಗೆ ಹೊಂದಾಣಿಕೆ ಇದ್ದರೂ ತಮ್ಮದೇ ಆದ ಹಟ್ಟಿಗಳನ್ನು ಊರಿನಿಂದ ಸುಮಾರು ದೂರ ಪ್ರದೇಶದಲ್ಲಿ ಹಟ್ಟಿಯನ್ನು ನಿರ್ಮಿಸಿಕೊಂಡು ಜೀವನ ಸಾಗಿಸುತ್ತಿರುವುದನ್ನು ಕಾಣಬಹುದು."[೧೧]

೩.೧೫ ಬೆಡಗುಗಳು:

"ಪ್ರತಿಯೊಂದು ಅಲೆಮಾರಿ ಸಮುದಾಯಗಳಲ್ಲಿಯೂ ಬೆಡಗುಗಳು ಕಂಡು ಬರುತ್ತವೆ. ಅಂದರೆ ಕಾಡುಗೊಲ್ಲರಲ್ಲಿ ಬಹಳ ವಿಶೇಷವಾಗಿ ಸುಮಾರು ೭೩ ಬೆಡಗುಗಳನ್ನು ನಾವು ಕಾಣುತ್ತೇವೆ. ಕಾಡುಗೊಲ್ಲರಲ್ಲಿ ಉಪವರ್ಗಗಳನ್ನು ಬೆಡಗುಗಳೆಂದು ಕರೆಯುತ್ತಾರೆ. ಜೊತೆಗೆ ಬುಡಕಟ್ಟು ಸಮುದಾಯಗಳು ರಕ್ತ ಸಂಬಂಧವನ್ನು ಏರ್ಪಡಿಸಿಕೊಳ್ಳಬೇಕೆಂದರೆ ಬೆಡಗುಗಳು ಗೋತ್ರಗಳು ಮುಖ್ಯವಾಗಿರುತ್ತವೆ. ಒಂದು ಬೆಡಗಿನ ಆಧಾರದ ಮೇಲೆ ಆ ಮನೆತನದ ವೃತ್ತಿ ಮನೆಯ ದೇವರು ಸಂಸ್ಕೃತಿ ಆಚಾರ ವಿಚಾರ ವಿಧಿ ನಿಷೇಧಗಳು ಹಾಗೂ ಮನೆಯ ಮೂಲ ಪುರುಷನ ಇತಿಹಾಸವನ್ನು ತಿಳಿಯಬಹುದು. ಜೊತೆಗೆ ಕಾಡುಗೊಲ್ಲರು ವೈವಾಹಿಕ ಸಂಬಂಧಗಳನ್ನು ಬೆಳೆಸುವಾಗ ಬೆಡಗುಗಳ ಬಗ್ಗೆ ಕಟ್ಟು ನಿಟ್ಟಿನಿಂದಿರುತ್ತಾರೆ. ಕಾಡುಗೊಲ್ಲರು ಬೆಡಗಿಗೆ ಸಮಾನವಾಗಿ ಕುಲಗೋತ್ರಗಳೆಂದೂ ಕರೆಯುವುದುಂಟು ಕಾಡುಗೊಲ್ಲರಲ್ಲಿ ಚಿತ್ತಮುತ್ತಿ, ಚಂದಮುತ್ತಿ ಹಾಗೂ ರಾಮೇಗೌಡನ ಕುಲ ಬಹುಮುಖ್ಯವಾದವುಗಳಾಗಿವೆ. ಅಂದರೆ ಈ ಮೂರು ಕುಲಗಳಲ್ಲಿ ಬೇರೆ ಬೇರೆ ಪಂಗಡಗಳಿವೆ.

೧ ಚಿತ್ತಮುತ್ತಿ ಕುಲದಲ್ಲಿ ಕರಡಿಗೊಲ್ಲರು ಪ್ರಮುಖರು

೨ ಚಂದಮುತ್ತಿ ಕುಲದಲ್ಲಿ ಸನ್ನರಗೊಲ್ಲರು, ಅಜ್ಜಿಯವರ ಗೊಲ್ಲರು, ಸೋಮನರ ಗೊಲ್ಲರು, ಎಗಡಿನವರ ಗೊಲ್ಲರು, ಹಾಗೇ ಅರೇನವರ ಗೊಲ್ಲರು, ಮಾಸಿನವರ ಗೊಲ್ಲರು, ಬೇರೆನವರ ಗೊಲ್ಲರು, ಕಂಚೇಯವರ ಗೊಲ್ಲರು, ಕಹಳೆಯವರ ಗೊಲ್ಲರು, ಒಡೆಯವರ ಗೊಲ್ಲರು, ಒನಕೆಯವರ ಗೊಲ್ಲರು, ಬೆಳ್ಳೂರವರು ಎಂಬ ಅನೇಕ ಪಂಗಡಗಳಿವೆ ಇಲ್ಲಿ ಒಂದೇ ಕುಲದ ಉಪಪಂಗಡಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುವುದು ನಿಷೇಧ ಉದಾಹರಣೆಗೆ, ಚಂದಮುತ್ತಿ ಕುಲದ ಎಲ್ಲಾ ಉಪಪಂಗಡದವರು, ಚಿತ್ತಮುತ್ತಿ ಕುಲದ ಎಲ್ಲಾ ಉಪಪಂಗಡದವರ ಜೊತೆಗೆ ವೈವಾಹಿಕ ಸಂಬಂಧ ಬೆಳೆಸಬಹುದು. ಆದರೆ ಚಿತ್ತಮುತ್ತಿ ಕುಲದ ಉಪಪಂಗಡಗಳಲ್ಲಿಯೇ ವೈವಾಹಿಕ ಸಂಬಂಧ ಏರ್ಪಡಿಸಿಕೊಂಡರೆ ಇದನ್ನು ಕಾಡುಗೊಲ್ಲರು ವಿರೋಧಿಸುತ್ತಾರೆ. ಚಿತ್ತಮುತ್ತಿ ಕುಲದವರು ಸೂರ್ಯನ ವಂಶಸ್ಥರೆಂದೂ ಹೇಳಿಕೊಂಡರೆ ಚಂದಮುತ್ತಿ ಕುಲದವರು, ಚಂದ್ರನ ವಂಶಸ್ಥರೆಂದು ಹೇಳಿಕೊಳ್ಳುತ್ತಾರೆ. ಆದರೆ ಕಾಡುಗೊಲ್ಲರು ಆರ್ಥಿಕವಾಗಿ ಶೈಕ್ಷಣಿಕವಾಗಿ ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ಒಂದೇ ಬೆಡಗಿನವರ ಜೊತೆಗೆ ವೈವಾಹಿಕ ಸಂಬಂಧಗಳನ್ನು ಮಾತ್ರ ಬೆಳೆಸುವುದಿಲ್ಲ. ಜೊತೆಗೆ ರಕ್ತಸಂಬಂಧಿಗಳ ಜೊತೆಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದರೆ ತಮ್ಮ ಆರಾಧ್ಯ ದೈವಗಳು ಅನೇಕ ನಾನಾ ರೀತಿಯ ತೊಂದರೆಗಳನ್ನು ಕೊಡುತ್ತವೆ. ಎಂಬ ಬಲವಾದ ನಂಬಿಕೆ ಕಾಡುಗೊಲ್ಲರಲ್ಲಿಯೂ ಇಂದಿಗೂ ಕೂಡ ಇದೆ ಎಂಬುದು ಕಂಡುಬರುತ್ತದೆ."[೧೨]

ಕಾಡುಗೊಲ್ಲರ ಬೆಡಗುಗಳು:

೧.ಚಿತ್ತಮುತ್ತಿ ವಂಶಸ್ಥರು	**೨.ಚಂದಮುತ್ತಿ ವಂಶಸ್ಥರು**	**೩.ರಾಮ ಮುತ್ತಿ ವಂಶಸ್ಥರು**
ಕರಡಿಗೊಲ್ಲರು	ಸನ್ನೇರ ಗೊಲ್ಲರು	ಅರೇನವರ ಗೊಲ್ಲರು
ಕೆಂಗುರಿ ಗೊಲ್ಲರು	ಅಜ್ಜಿಯವರ ಗೊಲ್ಲರು	ಮೇರೆನವರ ಗೊಲ್ಲರು
ಬಾಲೇನವರ ಗೊಲ್ಲರು	ಎಗಡಿಯವರ ಗೊಲ್ಲರು	ಕಹಳೆಯವರ ಗೊಲ್ಲರು
ಮಾರನವರ ಗೊಲ್ಲರು	ಹಬ್ಬುಗೊಲ್ಲರು	ಕಂಬೇರಗೊಲ್ಲರು
ಕಂಚೀಗೊಲ್ಲರು	ಸೋಮನಗೊಲ್ಲರು	ಪೆದ್ದಟ್ಟಿ ಗೊಲ್ಲರು
ಉಪ್ಪಳರ ಗೊಲ್ಲರು	ಒನಕೆ ಗೊಲ್ಲರು	
	ಕಟ್ಟೆಗೇರ ಗೊಲ್ಲರು	
	ಕೋಣನ ಗೊಲ್ಲರು	
	ಜವಾದಿಗೊಲ್ಲರು	

ಮೋಲೇರ ಗೊಲ್ಲರು

ಕೋಡಥೆ ಗೊಲ್ಲರು

ಸೀಲವಾಡಿ ಗೊಲ್ಲರು

ಬೊಮ್ಮನ ಗೊಲ್ಲರು

೩.೧೬ ನ್ಯಾಯ ಪಂಚಾಯಿತಿ:

ಕಾಡುಗೊಲ್ಲ ಸಮುದಾಯದಲ್ಲಿ ನ್ಯಾಯ ಪಂಚಾಯತಿಯ ವ್ಯವಸ್ಥೆ ಬಹಳ ಕಟ್ಟು ನಿಟ್ಟಿನಿಂದ ಕೂಡಿದ್ದು. ಈ ಪದ್ಧತಿಯನ್ನು ಇಂದಿನ ಕಾಲದಿಂದಲೂ ಅನುಸರಿಸಿಕೊಂಡು ಬಂದಿರುವುದನ್ನು ನಾವು ಕಾಣಬಹುದು. ಕಾಡುಗೊಲ್ಲ ಸಮುದಾಯದಲ್ಲಿ ಪಂಚಾಯಿತಿಯು ಊರಿನ ಅಥವಾ ಹಟ್ಟಿಯ ದೇವಸ್ಥಾನದ ಹತ್ತಿರ ಆ ಊರಿನ ಗೌಡರು ಹಿರಿಯ ಯಜಮಾನರು ಪಟೇಲ ಮತ್ತು ಪೂಜಾರಿಗಳು ನ್ಯಾಯ ಪಂಚಾಯಿತಿಯ ಮುಖ್ಯಸ್ಥನಾಗಿರುತ್ತಾನೆ. ಈ ಅಧಿಕಾರ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಕಾಡುಗೊಲ್ಲರ ಹಟ್ಟಿಯಲ್ಲಿಯ ಎಲ್ಲಾ ಜಗಳ ವ್ಯಾಜ್ಯಗಳು ಮತ್ತು ತಂಟೆ ತಕರಾರು ಮತ್ತು ಬೇರೆ ಬೇರೆ ಸಮಸ್ಯೆಗಳು ಬಂದರು ಇವನೇ ಬಗೆಹರಿಸುತ್ತಾನೆ. ಕಾಡುಗೊಲ್ಲರ ಈ ಪಂಚಾಯಿತಿ ವ್ಯವಸ್ಥೆಯಿಂದ ಹಟ್ಟಿಯ ಜನರ ನೆಮ್ಮದಿ ಶಾಂತಿಯನ್ನು ಕಾಪಾಡುತ್ತದೆ.

ಕಾಡುಗೊಲ್ಲರ ನ್ಯಾಯ ಪಂಚಾಯಿತಿಯಲ್ಲಿ ಊರಿನ ಅಥವಾ ಹಟ್ಟಿಯ ಗೌಡನೇ ಅಥವಾ ಹಿರಿಯರು ಪಂಚಾಯಿತಿಯ ಮುಖ್ಯಸ್ಥನಾಗಿ ಕಾರ್ಯನಿರ್ವಹಿಸಿದರೆ, ಜೊತೆಗೆ ಹಟ್ಟಿಯ ಪೂಜಾರಿಯ ಪಾತ್ರವು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಮತ್ತು ನ್ಯಾಯ ಪಂಚಾಯಿತಿಗೆ ಸಂಬಂಧಿಸಿದ ವಿಷಯವನ್ನು ಊರಲ್ಲಿ ಅಥವಾ ಹಟ್ಟಿಯಲ್ಲಿರುವ ಎಲ್ಲಾ ಜನರಿಗೂ ಗೊತ್ತಾಗುವಂತೆ ಹಲಗೆಯ ಮುಖಾಂತರ ಸಾರಿಸುತ್ತಾನೆ. ಮತ್ತು ಎಲ್ಲರೂ ಈ ಪಂಚಾಯಿತಿಯ ಕಟ್ಟೆಗೆ ಬರಬೇಕು ಎಂಬ ವಿಷಯವನ್ನು ತಿಳಿಸುತ್ತಾನೆ.

ಕಾಡುಗೊಲ್ಲರ ನ್ಯಾಯ ಪಂಚಾಯತಿಯಲ್ಲಿ ಸಾಮಾನ್ಯವಾಗಿ ಆ ಊರಿನ ದೇವರಿಗೆ ಸಂಬಂಧಿಸಿದಂತೆ ವಾರ್ಷಿಕ ವರ್ಷ ನಡೆಯುವ ಆಚರಣೆ ಮತ್ತು ಸಂಪ್ರದಾಯಗಳನ್ನು ಅಂದರೆ ಜಾತ್ರೆ, ಉತ್ಸವ ಹಬ್ಬ ಹರಿದಿನಗಳನ್ನು ನೆರವೇರಿಸುವುದಕ್ಕೆ ಆ ಊರಿನ ಎಲ್ಲರಿಂದಲೂ ಹಣ ಸಂಗ್ರಹಕ್ಕಾಗಿ ಮತ್ತು ಮದುವೆ ಋತುಮತಿ ಜೊತೆಗೆ ಸಾವು ಮುಂತಾದ ಸಣ್ಣಪುಟ್ಟ ಮಡಿ ಮೈಲಿಗೆಗೆ ಸಂಬಂಧಪಟ್ಟ ವ್ಯಾಜ್ಯಗಳನ್ನು ಬಗೆಹರಿಸುವುದಕ್ಕಾಗಿ ಎಲ್ಲರೂ ದೇವಸ್ಥಾನದ ಹತ್ತಿರ ಸೇರುತ್ತಾರೆ. ಕಾಡುಗೊಲ್ಲರಲ್ಲಿ ಎನಾದರೂ ಚಪ್ಪಲಿಗಳಲ್ಲಿ ಹೊಡೆದಾಡಿದರೆ ಆ ಹಟ್ಟಿಯ ದೇವರನ್ನು ಹೊಳೆಗೆ ಕರೆದುಕೊಂಡು ಹೋಗಿ ಗಂಗೆ ಪೂಜೆ ಮಾಡಿಸಿಕೊಂಡು ಬಂದ ಖರ್ಚುಗಳನ್ನು ಅವರೇ ಕೊಡಬೇಕಾಗುತ್ತದೆ. ನಂತರ ಹೊಡೆದವರು ಒಂದು ರೂಪಾಯಿಯಲ್ಲಿ

ಅರ್ಧದಷ್ಟು ಹಣವನ್ನು ಆ ಊರಿನ ಗ್ರಾಮಸ್ಥರು ಮತ್ತು ಹಿರಿಯರು ಪೂಜಾರಿಯು ಹೇಳಿದ ತೀರ್ಪಿಗೆ ಬದ್ಧರಾಗಿರಬೇಕು. ಕಾಡುಗೊಲ್ಲರಲ್ಲಿ ಏನಾದರೂ ಅನೈತಿಕ ಸಂಬಂಧಗಳು ನಡೆದರೆ ಮತ್ತು ಆಚರಣೆಗಳ ನಿಯಮಗಳನ್ನು ವಿರೋಧಿಸಿದವರಿಗೆ ಪಂಚಾಯಿತಿಯಲ್ಲಿ ಕಠಿಣಕ್ರಮ ಕೈಗೊಳ್ಳಲು ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಕಾಡುಗೊಲ್ಲರಲ್ಲಿನ ಕುಟುಂಬಗಳಲ್ಲಿ ಅಣ್ಣ ತಮ್ಮಂದಿರ ಆಸ್ತಿಯ ವಿಚಾರಕ್ಕೆ ಅಥವಾ ಬೇರೆ ಯಾವ ವಿಷಯಕ್ಕೂ ವ್ಯಾಜ್ಯಗಳು ಬಂದರು ಸಹ ಆ ಊರಿನ ನ್ಯಾಯ ಪಂಚಾಯಿತಿಯಲ್ಲೇ ಬಗೆಹರಿಸಿಕೊಳ್ಳಬೇಕೆಂಬ ನಿಯಮ ಅಥವಾ ಕಟ್ಟಳೆ ಇದೆ. ಕಾಡುಗೊಲ್ಲರು ಕುಟುಂಬದ ಒಳಗಿನ ಜಗಳವನ್ನು ಅಥವಾ ವ್ಯಾಜ್ಯವನ್ನು ಎಂದಿಗೂ ಕೋರ್ಟು ಕಛೇರಿಗಳಿಗೆ ನ್ಯಾಯ-ಅನ್ಯಾಯವನ್ನು ಕೇಳಲು ತೆಗೆದುಕೊಂಡು ಹೋಗಲು ಇಷ್ಟಪಡುವುದಿಲ್ಲ.

ಕಾಡುಗೊಲ್ಲರು ಸಣ್ಣ ಪುಟ್ಟ ಜಗಳಗಳನ್ನು ಗುಡಿಕಟ್ಟೆಗಳಲ್ಲಿ ಬಗೆಹರಿಸುವರು. ಮತ್ತು ಗುಡಿಕಟ್ಟೆಗಳಲ್ಲಿ ಏನಾದರೂ ಸಮಸ್ಯೆ ಇತ್ಯರ್ಥವಾಗದಿದ್ದರೆ ಜಟಿಲವಾದ ಸಮಸ್ಯೆಗಳಿದ್ದರೆ ಅಂತಹವುಗಳನ್ನು ಕಟ್ಟೆಮನೆಗಳಲ್ಲಿ ಬಗೆಹರಿಸುತ್ತಾರೆ. ಆದರೆ ಯಾವುದೇ ಕಾರಣಕ್ಕೂ ಮುಂದಿನ ಆ ಊರಿನ ಅಥವಾ ಸಮುದಾಯದ ಹಟ್ಟಿಯ ಹಿರಿಯರು ಕೋರ್ಟು ಕಛೇರಿಗಳ ಮೆಟ್ಟಿಲು ಹತ್ತುವುದಕ್ಕೆ ಬಿಡುವುದಿಲ್ಲ.

ಕಾಡುಗೊಲ್ಲರ ಗಂಡ-ಹೆಂಡಿರ ಮನಸ್ತಾಪ ಅಂತರ್ ಜಾತಿ ವಿವಾಹ ಅನೈತಿಕ ಸಂಬಂಧ ಹೊಂದಿದ್ದರೆ ಮತ್ತು ಮಚ್ಚಿನಿಂದ ಹೊಡೆದರೆ ಅಥವಾ ಹೊಡೆಸಿಕೊಂಡರೆ ಕಟ್ಟೆಮನೆಗಳಲ್ಲಿ ಬಗೆಹರಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತಾರೆ. ಒಂದು ವರ್ಷಕ್ಕೆ ಒಂದು ಮನೆಯಿಂದ ೫೦ ರೂಪಾಯಿಗಳನ್ನು ತೆರಿಗೆ ಕೊಡುವುದು ಕಂಡುಬರುತ್ತದೆ. ಯಾರಾದರೂ ಕೊಡದಿದ್ದರೆ ಕಾರ್ಯಕ್ರಮಗಳಲ್ಲಿ ಕುಲಸ್ಥರಿಗೆ ಮತ್ತು ಬಂಧವರಿಗೆ ಊಟ ಹಾಕದಿದ್ದರೆ ದೇವರಿಗೆ ಹಣ ಮೀಸಲು, ಕೊಡದಿದ್ದರೆ ಮತ್ತು ಸೋಮವಾರ ಎತ್ತನ್ನು ಬೇಸಾಯಕ್ಕೆ ಹೂಡಿದರೆ ಅಥವಾ ಅಂತರ್ಜಾತಿ ವಿವಾಹವಾದರೆ ಹರಿಜನರ ಮನೆಯಲ್ಲಿ ಊಟ ಮಾಡಿದರೆ, ಹಟ್ಟಿಯ ಯಜಮಾನ ಅಥವಾ ಪೂಜಾರಿಗೆ ಅವಮಾನ ಮಾಡಿದರೆ ಮತ್ತು ಕಾಡುಗೊಲ್ಲರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಅವಮಾನ ಎಸಗುವಂತಹ ಕಾರ್ಯಮಾಡಿದರೆ ಅಂತಹವುಗಳನ್ನೆಲ್ಲಾ ಕಟ್ಟೆಮನೆ ಅಥವಾ ಗುಡಿಕಟ್ಟೆಗಳಲ್ಲಿ ಬಗೆಹರಿಸುತ್ತಾರೆ.

ಕಾಡುಗೊಲ್ಲರಲ್ಲಿ ತಪ್ಪಿತಸ್ಥರಿಗೆ ಕೊಡುವ ಕಠಿಣ ಶಿಕ್ಷೆ ಎಂದರೆ ಹಟ್ಟಿಯಿಂದ ಬಹಿಷ್ಕಾರ ಹಾಕುವುದು ಮತ್ತು ಸಣ್ಣಪುಟ್ಟ ತಪ್ಪುಗಳಿಗೆ ದಂಡ ಹಾಕುವುದನ್ನು ಕಾಣುತ್ತೇವೆ. ಜೊತೆಗೆ ಕಟ್ಟೆಮನೆ ಹಾಗೂ ಗುಡಿಕಟ್ಟೆಯ ಯಜಮಾನ ತುಂಬಾ ಪ್ರಮಾಣಿಕನಾಗಿರುತ್ತಾನೆ.

ಕಾಡುಗೊಲ್ಲರ ಗುಡಿಕಟ್ಟೆ: ಕಾಡುಗೊಲ್ಲರು ಸಾಮಾನ್ಯವಾಗಿ ಗುಡಿಕಟ್ಟೆಗಳು ನನ್ನ ಕ್ಷೇತ್ರದ ಅಧ್ಯಯನದ ಹಟ್ಟಿಗೆ ಅಂದರೆ ದೊಡ್ಡಬ್ಬಿಗೇರೆಯ ಕಾಡುಗೊಲ್ಲರಿಗೆ ಮತ್ತು ಕರಡಿಗೊಲ್ಲರಿಗೆ ಹಿರಿಯೂರು ತಾಲ್ಲೂಕಿನ ನಂದಿಹಳ್ಳಿ ಗುಡಿಕಟ್ಟೆಮನೆ ಇರುವುದನ್ನು ಕಾಣುತ್ತೇವೆ. ಚಿತ್ರಲಿಂಗೇಶ್ವರ ಚಿತ್ರಹಳ್ಳಿ ಹೊಳಲ್ಕೆರೆ ತಾಲ್ಲೂಕು ಏನೇ ಸಮಸ್ಯೆ ಇದ್ದರೆ ಇತ್ಯರ್ಥಮಾಡುವುದು ಮತ್ತು ಅವರು ಕೊಟ್ಟ ತೀರ್ಪಿಗೆ ಬದ್ಧರಾಗಿರುವುದರ ಜೊತೆಗೆ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತಾರೆ. ಜೊತೆಗೆ ಗಂಡ–ಹೆಂಡತಿ ಜಗಳ ಮನೆಯಲ್ಲಿ ಬಗೆಹರಿಯದಿದ್ದರೆ ಮತ್ತು ಸ್ತ್ರೀಯರ ಮೇಲೆ ವ್ಯಭಿಚಾರ ನಡೆದರೆ ಅಂತಹವರಿಗೆ ಗುಡಿಕಟ್ಟೆಯಲ್ಲಿ ಯಜಮಾನ ಅಥವಾ ಗೌಡ ಪೂಜಾರಿಯೇ ಎಲ್ಲರು ಸೇರಿ ತೀರ್ಪು ನೀಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತಾರೆ.

ಶಿಕ್ಷೆಗಳು:

೧. ಅಪರಾಧಿಯಿಂದ ಹಣವನ್ನು ಅಥವಾ ದಂಡವನ್ನು ವಸೂಲಿ ಮಾಡುವುದು

೨. ಹಟ್ಟಿಯಿಂದ ಅವರನ್ನು ಬಹಿಷ್ಕಾರ ಹಾಕುವುದು

೩. ಹಟ್ಟಿಯಲ್ಲಿ ಏನೇ ಶುಭ ಕಾರ್ಯಕ್ರಮಗಳು ನಡೆದರೂ ಸಹ ಅಂತಹ ಕಾರ್ಯಕ್ರಮಗಳಿಗೆ ಅವರು ಮತ್ತು ಅವರ ಕುಟುಂಬದವರು ಕೂಡ ಭಾಗವಹಿಸುವಂತಿಲ್ಲ.

ಆದರೆ ಇತ್ತೀಚಿನ ದಿನಗಳಲ್ಲಿ ಕಾಡುಗೊಲ್ಲರಲ್ಲಿಯೂ ಸಹ ವಿದ್ಯಾವಂತರಾಗಿರುವುದರಿಂದ ಸ್ವಲ್ಪ ಮಟ್ಟಿಗೆ ಕಟ್ಟೆಮನೆ ಮತ್ತು ಗುಡಿಕಟ್ಟೆಗಳಲ್ಲಿ ನ್ಯಾಯ ಪಂಚಾಯಿತಿ ವ್ಯವಸ್ಥೆಯನ್ನು ಒಪ್ಪಿಕೊಳ್ಳದೆ ಕೆಲವರು ಕೋರ್ಟು ಕಛೇರಿ ಮೆಟ್ಟಿಲುಗಳನ್ನು ಹತ್ತಿರುವುದನ್ನು ಕಾಣಬಹುದು.

೩.೧೭ ಮರಣದ ಸಂದರ್ಭದಲ್ಲಿನ ಸ್ಥಿತ್ಯಂತರಗಳು:

ಸಮಾಜದಲ್ಲಿ ಪ್ರತಿಯೊಂದು ಜಾತಿ ಸಮುದಾಯಗಳಲ್ಲಿಯೂ ಸಾವಿನ ಬಗ್ಗೆ ಆಚರಣೆಗಳ ಅಥವಾ ನಂಬಿಕೆಗಳ ಬಗ್ಗೆ ವ್ಯತ್ಯಾಸವಿರುವುದು ಕಂಡುಬರುತ್ತದೆ. ಅದೇ ರೀತಿಯಲ್ಲಿ ಕಾಡುಗೊಲ್ಲ ಸಮುದಾಯದವರಲ್ಲಿಯೂ ಸಾವಿನ ಆಚರಣೆಯನ್ನು ಬಹಳ ವಿಶಿಷ್ಟವಾಗಿ ಆಚರಿಸುವುದನ್ನು ನಾವು ಗಮನಿಸಬಹುದು. ಈ ಸಮುದಾಯದಲ್ಲಿಯೂ ಯಾವ ವ್ಯಕ್ತಿಯಾದರೂ ಸತ್ತ ನಂತರ ವ್ಯಕ್ತಿಯ ಸಂಬಂಧಿಕರು ಹಾಗೂ ಆ ಹಟ್ಟಿಯ ಗ್ರಾಮದ ಜನರು ತಮ್ಮ ಸ್ವಂತ ಇಚ್ಛೆಯಿಂದ ಸತ್ತ ವ್ಯಕ್ತಿಯ ಸಂಬಂಧಿಕರಿಗೆ ಅಥವಾ ದೂರದ ಬಂಧು ಬಳಗದವರಿಗೆ ರಕ್ತಸಂಬಂಧಿಗಳಿಗೆ ಯಾವ ಊರು ಅಥವಾ ಹಟ್ಟಿಗಳಲ್ಲಿರುತ್ತಾರೋ ಅಲ್ಲಿಗೆ ಈ ಹಟ್ಟಿಯಿಂದ ಯಾರಾದರೂ ಒಬ್ಬರು ಹೋಗಿ ಮಣ್ಣಿಗೆ ಬರುವಂತೆ ಹೇಳಿ ಸಾವಿನ ಸುದ್ದಿಯನ್ನು ತಿಳಿಸುತ್ತಾರೆ.

ಹಿಂದಿನ ಕಾಲದಲ್ಲಿ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ನಡೆದುಕೊಂಡು ಹೋಗಿ ಸತ್ತ ಸುದ್ದಿಯನ್ನು ತಿಳಿಸುತ್ತಿದ್ದರು. ಆದರೆ ಇಂದಿನ ಆಧುನಿಕ ದಿನಗಳಲ್ಲಿ ಪೋನ್ ಮೊಬೈಲ್‌ಗಳ ಮುಖಾಂತರ ವಿಷಯವನ್ನು ತಿಳಿಸುತ್ತಾರೆ. ಅವರು ಬರುವವರಿಗೂ ಸತ್ತ ಹೆಣದ ಸುತ್ತ

ಹಟ್ಟಿಯ ಹಿರಿಯರು ಕುಳಿತು ಭಜನೆ ಮಾಡುತ್ತಿರುತ್ತಾರೆ. ಜೊತೆಗೆ ಶವದ ಪಕ್ಕ ಒಂದು ಬಟ್ಟಲಲ್ಲಿ ಅಕ್ಕಿಯನ್ನು ಹಾಕಿ ಅದರಲ್ಲಿ ಉದಿನ ಕಡ್ಡಿಗಳನ್ನು ಹಚ್ಚಿ ಇಟ್ಟಿರುವುದು ಜೊತೆಗೆ ದೀಪವನ್ನು ಹಚ್ಚಿ ಇಟ್ಟಿರುವುದು ಕಂಡು ಬರುತ್ತದೆ. ಸತ್ತ ವ್ಯಕ್ತಿಯ ಸಂಬಂಧಿಕರು ನೆಂಟರು ದೂರದ ರಕ್ತ ಸಂಬಂಧಿಗಳು ಸ್ನೇಹಿತರು ಬಂದ ತಕ್ಷಣ ಮನೆಯ ಹೊರಗಡೆ ಇಟ್ಟಿರುವ ಹೆಣವನ್ನು ಎಲ್ಲರೂ ಎತ್ತಿಕೊಂಡು ಬಂದು ಕುರ್ಚಿಯ ಮೇಲೆ ಕೂರಿಸಿ ಬೀಸಿ ನೀರನ್ನು ಹೊಯ್ಯುವುದು ಅಥವಾ ಸ್ನಾನ ಮಾಡಿಸುವುದು ಕಂಡು ಬರುತ್ತದೆ. ಆ ನಂತರ ಹೆಣವನ್ನು ಪೂಜೆ ಮಾಡುತ್ತಾರೆ. ಜೊತೆಗೆ ಶವಕ್ಕೆ ಬಂದಿರುವ ವ್ಯಕ್ತಿಗಳೆಲ್ಲರೂ ಹೂವಿನ ಹಾರದಿಂದ ಶವವನ್ನು ಅಲಂಕರಿಸುತ್ತಾರೆ. ಈ ಆಚರಣೆ ನಡೆಯುತ್ತಿರುವಾಗಲೇ ತಮ್ಮ ಜಮೀನುಗಳಲ್ಲಿಯೇ ಶವವನ್ನು ಹಾಕುವುದಕ್ಕೆ ಗುಂಡಿ ತೆಗೆಯಲು ಕಳುಹಿಸಿರುತ್ತಾರೆ. ನಂತರ ಹೆಣವನ್ನು ಸ್ವಚ್ಛಗೊಳಿಸಿ ಹೊಸ ಬಟ್ಟೆಯನ್ನು ತೊಡಿಸಿ ಚಟ್ಟದ ಮೇಲೆ ಮಲಗಿಸದೇ ಕೂರಿಸುತ್ತಾರೆ, ಆ ನಂತರ ಶವವನ್ನು ಹೊತ್ತುಕೊಂಡು ಗುಂಡಿಯ ಹತ್ತಿರ ಬಂದಾಗ ಇವರು ಹೆಣವನ್ನು ಮಲಗಿಸಿ ಹೂಳುವುದಿಲ್ಲ, ಅದರ ಬದಲು ಉದ್ದದ ಗುಂಡಿ ತೆಗೆದು ಅದರಲ್ಲಿ ಹೆಣವನ್ನು ಕೂರಿಸಲಿಕ್ಕೆ ಆಗುವಷ್ಟು ಕಮಾನು ರೀತಿಯಲ್ಲಿ ಕೊರೆದು ಕಡ್ಡಿಗಳ ಸಹಾಯದಿಂದ ಗೋಡೆಗೆ ಒರಗಿಸಿ ಹೆಣವನ್ನು ಕೂರಿಸುತ್ತಾರೆ, ಆ ಮೇಲೆ ಕೂರಿಸಿದ ಹೆಣದ ಸುತ್ತ ಗುಂಡಿಯ ಒಳಗೆ ಗೋಡೆಯನ್ನು ಹೆಣ ಮುಚ್ಚಿಕೊಳ್ಳುವಂತೆ ನಿರ್ಮಿಸಿರುತ್ತಾರೆ.

ಹೆಣದ ಜೊತೆಗೆ ಬಂದಿರುವ ನೆಂಟರಿಷ್ಟರು, ಹೆಂಡತಿ, ಮಕ್ಕಳು, ಅಣ್ಣ ತಮ್ಮಂದಿರು ದೂರದ ಸಂಬಂಧಿಕರು ಹಟ್ಟಿಯ ಜನರೆಲ್ಲಾ ತಮ್ಮ ಕೈಗಳಿಂದ ಎಲ್ಲರೂ ಮೂರು ಹಿಡಿ ಮಣ್ಣನ್ನು ಹೆಣದ ಮೇಲೆ ಹಾಕುತ್ತಾರೆ. ಆನಂತರ ಎಲ್ಲರೂ ಹಟ್ಟಿಗೆ ಹಿಂತಿರುಗಿ ಬರುತ್ತಾರೆ. ಶವಕ್ಕೆ ಹೋದ ಇವರು ಮನೆಯ ಕಡೆಗೆ ಹೋರಡುವಾಗ ಯಕ್ಕೆಗಿಡದ ಹೂವುಗಳನ್ನು ಶಾಸ್ತ್ರಕ್ಕೆ ಹಿಡಿದುಕೊಂಡು ಬರುತ್ತಾರೆ. ಬಂದ ನಂತರ ಸತ್ತವರ ಮನೆಯ ಮುಂದೆ ಬಂದು ಹಚ್ಚಿರುವ ದೀಪವನ್ನು ನೋಡಿ ಆನಂತರ ತಮ್ಮ ತಮ್ಮ ಮನೆಗಳಿಗೆ ತೆರಳಿ ಸ್ನಾನವನ್ನು ಮಾಡಿ ನಂತರ ದೇವಸ್ಥಾನಕ್ಕೆ ಹೋಗಿ ತೀರ್ಥವನ್ನು ತೆಗೆದುಕೊಂಡು ನಮಸ್ಕಾರ ಮಾಡುವುದು ಕಂಡುಬರುತ್ತದೆ.

ಮೂರು ದಿನದ ತಿಥಿಯ ಸಂದರ್ಭದಲ್ಲಿ ಆಚರಿಸುವ ಸಮಯದಲ್ಲಿ ಕಾಗೆ ಬಂದು ಆ ಅನ್ನವನ್ನು ಮುಟ್ಟಿದರೆ ಸತ್ತ ವ್ಯಕ್ತಿಗೆ ಒಳ್ಳೆಯದೆಂದು ನಂಬುತ್ತಾರೆ. ಕಾಗೆ ಬರದಿದ್ದರೆ ಶವವನ್ನು ಹೊತ್ತವರು ಅನ್ನವನ್ನು ತೆಗೆದುಕೊಂಡು ಹತ್ತಿರದಲ್ಲಿರುವ ಹಳ್ಳಕ್ಕೋ, ಕೆರೆಗೋ ಬಿಟ್ಟು ಬಿಡುತ್ತಾರೆ.

ಒಂದು ತಿಂಗಳಾದ ಮೇಲೆ ಸತ್ತ ವ್ಯಕ್ತಿಯ ಮಕ್ಕಳು ಸಮಾಧಿಯ ಬಳಿಗೆ ಹೋಗುವಾಗ ಅವರು ತಂದಿರುವ ಹೂವು ಹಣ್ಣು ಕಾಯಿಗಳನ್ನು ತೆಗೆದುಕೊಂಡು, ಹೋಗುತ್ತಾರೆ, ಜೊತೆಗೆ ಅವರೊಡನೆ ಹಟ್ಟಿಯಲ್ಲಿರುವ ಸಂಬಂಧಿಕರುಗಳು ಅಥವಾ ಬೇರೆ ಯಾರಾದರೂ ಹೋಗುತ್ತಾರೆ.

ಮಕ್ಕಳು ಸಮಾಧಿಯ ಪೂಜೆ ಮಾಡಿದ ಮೇಲೆ ಎಲ್ಲರೂ ಒಂದೊಂದು ಹೂವನ್ನು ಹಾಕಿ ಜೊತೆಗೆ ಹಾಲು ತುಪ್ಪವನ್ನು ಸಮಾಧಿಯ ಮೇಲೆ ಸುರಿಯುತ್ತಾರೆ, ಆಮೇಲೆ ಶವದ ಮೇಲೊಂದು ಕಲ್ಲು ನೆಟ್ಟು ಅದನ್ನು 'ಸಮಾಧಿ'ಯೆಂದು ಗುರುತಿಸುತ್ತಾರೆ.

ಆದರೆ ಇಂದಿನ ಆಧುನಿಕ ದಿನಗಳಲ್ಲಿ ಅಲೆಮಾರಿ ಕಾಡುಗೊಲ್ಲರು ೯ ದಿವಸಗಳಲ್ಲಿ ಅಥವಾ ೧೧ ದಿವಸಗಳಲ್ಲಿ ಹಾಗೂ ೨೧ ದಿವಸಗಳಲ್ಲಿ ಅಂದರೆ ಅವರವರ ಅನುಕೂಲಕ್ಕೆ ತಕ್ಕಂತೆ ಸತ್ತ ವ್ಯಕ್ತಿಯ ಪುಣ್ಯತಿಥಿಯನ್ನು ಮಾಡಿ ಬಂದಿರುವ ಎಲ್ಲಾ ನೆಂಟರಿಗೆ ಸಂಬಂಧಿಕರಿಗೆ ಹಾಗೂ ಹಟ್ಟಿಯ ಜನರಿಗೆ ಜೊತೆಗೆ ದೂರದ ಸ್ನೇಹಿತರಿಗೂ ಊಟ ಬಡಿಸುವ ಕಾರ್ಯಕ್ರಮವನ್ನು ಮಾಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಹಾಗೂ ಕೆಲವು ಹಿಂದಿನ ಸಂಪ್ರದಾಯಗಳನ್ನು ನಿಧಾನವಾಗಿ ಕೈಬಿಡುತ್ತಿದ್ದಾರೆ. ಜೊತೆಗೆ ಇಂದು ಸತ್ತ ವ್ಯಕ್ತಿಯ ಕಾರ್ಯವನ್ನು ಮಾಡುವುದಕ್ಕೆ ಬಹಳಷ್ಟು ಹಣವನ್ನು ಖರ್ಚುಮಾಡಿ ವಿವಿಧ ರೀತಿಯ ಸಂಪ್ರದಾಯಗಳನ್ನು ಇವರು ಶವ ಸಂಸ್ಕಾರದಲ್ಲಿ ಮಾಡುವುದನ್ನು ನೋಡಬಹುದು.

ಅಡಿಟಿಪ್ಪಣಿಗಳು

೧. ಚಂದ್ರಶೇಖರ ದಾಮ್ಲೆ ಸಮಾಜಶಾಸ್ತ್ರ ಪ್ರಸಾರಾಂಗ ಕ.ವಿ.ವಿ.ಹಂಪಿ ೨೦೦೪ ಪುಟ-೨೨೪

೨. ಗುರುಲಿಂಗಯ್ಯ ಎಂ, ಕರ್ನಾಟಕದ ಗೊಲ್ಲ ಸಮುದಾಯ ೨೦೦೫ ಪುಟ-೨೮

೩. ಗುರುಲಿಂಗಯ್ಯ ಎಂ. ವಿ ನಾಗಪ್ಪ "ಕಾಡುಗೊಲ್ಲ" ೨೦೦೮ ಪುಟ -೭೪ ಮತ್ತು ೭೫

೪. ಗುರುಲಿಂಗಯ್ಯ ಎಂ. ಕರ್ನಾಟಕದ ಗೊಲ್ಲ ಸಮುದಾಯ ೨೦೦೫ ಪುಟ – ೧೯

೫. ಗುರುಲಿಂಗಯ್ಯ ಎಂ. ವಿ ನಾಗಪ್ಪ "ಕಾಡುಗೊಲ್ಲ" ೨೦೦೮ ಪುಟ -೫೪

೬. ಕೃಷ್ಣಮೂರ್ತಿ ಹನೂರು, ಕಾಡುಗೊಲ್ಲರು ಸಂಪಾದಕರು, ಪ್ರೊ. ಎಚ್.ಜೆ.ಲಕ್ಕಪ್ಪಗೌಡರು, ಕರ್ನಾಟಕದ ಬುಡಕಟ್ಟುಗಳು, ಸಂಪುಟ-೧, ೧೯೯೮, ಪುಟ- ೮೨೪ ಮತ್ತು ೮೨೫

೭ ತೀ.ನಂ. ಶಂಕರ ನಾರಾಯಣ ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ೧೯೮೨ ಪುಟ- ೧೫೨

೮. ಗುರುಲಿಂಗಯ್ಯ ಎಂ. ವಿ.ನಾಗಪ್ಪ "ಕಾಡುಗೊಲ್ಲ" ೨೦೦೮ ಪುಟ- ೫೮

೯. ಅದೇ ಪುಟ- ೭೬ ಮತ್ತು ೭೭

೧೦. ನಾಗಪ್ಪ ಬಸಲಿಂಗಪ್ಪ, ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ ಪಿಎಚ್.ಡಿ ಅಪ್ರಕಟಿತ ಪ್ರಬಂಧ ೨೦೧೧ ಪುಟ – ೪೧

೧೧. ವಿಜಯಮ್ಮ ವಿ. "ಗೊಲ್ಲರ ಸಂಸ್ಕೃತಿ" ೨೦೦೬ ಪುಟ- ೧೬ ಮತ್ತು ೧೭

೧೨. ವಿಮಲ ಅಮಲಪ್ಪ "ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು" ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ ೨೦೦೯ ಪುಟ-೯೨

❑❑❑

ಅಧ್ಯಾಯ ನಾಲ್ಕು

ಆರ್ಥಿಕ ಮತ್ತು ಶೈಕ್ಷಣಿಕ ಬದುಕಿನ ಸ್ಥಿತ್ಯಂತರಗಳು

ಅಧ್ಯಾಯ ನಾಲ್ಕು

ಆರ್ಥಿಕ ಮತ್ತು ಶೈಕ್ಷಣಿಕ ಬದುಕಿನ ಸ್ಥಿತ್ಯಂತರಗಳು

ಕರ್ನಾಟಕ ರಾಜ್ಯವು ಬಹಳ ವಿಶಾಲವಾದ ಹಾಗೂ ವೈವಿಧ್ಯಮಯವಾದ ಹಚ್ಚ ಹಸಿರಿನಿಂದ ಕೂಡಿರುವ ಗುಡ್ಡ-ಗಾಡು ಬೆಟ್ಟ ಅಥವಾ ಬಯಲು ಪ್ರದೇಶಗಳಿಂದ ಕಂಡುಬರುತ್ತದೆ. ಇಂತಹ ಸಮತಟ್ಟಾದ ಮಧ್ಯಭಾಗದ ದಾವಣಗೆರೆ ಜಿಲ್ಲೆಯಲ್ಲಿ ಕಾಡುಗೊಲ್ಲರು ನೆಲೆಸಿರುವುದು ಕಂಡುಬರುತ್ತದೆ. ದಾವಣಗೆರೆ ಜಿಲ್ಲೆ ನೀರಾವರಿ ಗುಡ್ಡ ಗಾಡು ಬಯಲು ಪ್ರದೇಶಗಳಿಂದ ಕೂಡಿದೆ. ಈ ಪ್ರದೇಶದಲ್ಲಿ ಸಾಕಷ್ಟು ಮೇವು ನೀರು ಇರುವುದರಿಂದ ಕಾಡುಗೊಲ್ಲರು ಪಶುಪಾಲನೆಗಾಗಿ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡರು. ಜೀವನೋಪಾಯಕ್ಕೆ ಕಾಡುಗೊಲ್ಲರಿಗೆ ಹಸು, ಎಮ್ಮೆ ಕುರಿಗಳು ಬಹಳ ಮುಖ್ಯ, ಇವುಗಳಿಂದ ಬಂದ ಆದಾಯದಿಂದ ಇವರು ಜೀವನ ನಿರ್ವಹಿಸುತ್ತಾರೆ. ಜೊತೆಗೆ ಇಲ್ಲಿರುವ ಕಾಡುಗೊಲ್ಲರು ಇಂದು ಸ್ವಲ್ಪ ಮಟ್ಟಿಗೆ ಸುಧಾರಣೆಯಾಗುತ್ತಿದ್ದಾರೆ ಎಂದು ಹೇಳಬಹುದು.

ಕಾಡುಗೊಲ್ಲರು ಇತ್ತೀಚಿನ ದಿನಗಳಲ್ಲಿ ತಮ್ಮ ಬದುಕಿನಲ್ಲಿ ಶೈಕ್ಷಣಿಕವಾಗಿ, ಸ್ವಲ್ಪ ಮಟ್ಟಿಗೆ ಬದಲಾವಣೆ ಹೊಂದಿರುವುದು ಕಂಡು ಬರುತ್ತದೆ. ಇಂದು ಕಾಡುಗೊಲ್ಲರು ವಿದ್ಯಾವಂತರಾಗಿರುವುದರಿಂದ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಇವರಿಗೂ ಸಹ ಮೀಸಲಾತಿಯನ್ನು ನೀಡಿರುವುದರಿಂದ ಕಾಡುಗೊಲ್ಲ ಸಮುದಾಯದವರು ಸರ್ಕಾರಿ ನೌಕರಿಯಲ್ಲಿ ಇರುವುದನ್ನು ಗಮನಿಸಬಹುದು. ಇಂದಿನ ಆಧುನಿಕ ಜಗತ್ತಿನಲ್ಲಿ ಅವರ ಬದುಕನ್ನು ಶಿಕ್ಷಣದಿಂದ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಕಾಡುಗೊಲ್ಲರ ಮಹಿಳೆಯರು ಕೂಡ ಇಂದು ಶಿಕ್ಷಣದಲ್ಲಿ ಅಥವಾ ಉದ್ಯೋಗದಲ್ಲಿ ತೊಡಗಿರುವುದನ್ನು ಕಾಣಬಹುದು.

೪.೧ ಪಶುಪಾಲನೆ:

ಕಾಡುಗೊಲ್ಲರ ಮೂಲ ವೃತ್ತಿ ಪಶುಪಾಲನೆ. ಪ್ರಾಚೀನ ಕಾಲದಿಂದಲೂ ಕಾಡುಗೊಲ್ಲರು ಕಾಡಿನಲ್ಲಿ ವಾಸವಾಗಿರುವುದರಿಂದ ಮತ್ತು ಕಾಡುಗಳಲ್ಲಿ ಹಚ್ಚ ಹಸಿರಿನಿಂದ ಕೂಡಿರುವ ಹುಲ್ಲುಗಾವಲು ಪ್ರದೇಶವಿರುವುದರಿಂದ ಜೊತೆಗೆ ನೀರಾವರಿ ಪದ್ಧತಿಯು ಸಹ ಕಂಡುಬರುವುದರಿಂದ ಹಳ್ಳ ಕೋಳ್ಳಗಳು ಕೆರೆ ಕಟ್ಟೆಗಳಿಂದ ಕೂಡಿರುವ ಪ್ರದೇಶವಾಗಿರುವುದರಿಂದ ದನಗಳನ್ನು ಸಾಕುವುದು ಕಷ್ಟದ ಕೆಲಸ ಏನು ಆಗಿರಲಿಲ್ಲ. ಈ ಕಾರಣದಿಂದ ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ದನಗಳನ್ನು ಸಾಕಲು ಪ್ರಯತ್ನಿಸಿದರು. ನಂತರ ದಿನಕಳೆದಂತೆ ಹಸುಗಳು ಉತ್ತಮವಾಗಿ ಹಾಲು ಕೊಡಲು ಪ್ರಾರಂಭಿಸಿದವು. ತದನಂತರ ತಮ್ಮ ಮನೆಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಹಾಲು ಮೊಸರು ತುಪ್ಪ ಬೆಣ್ಣೆ ಬರುತ್ತಿತ್ತು. ಅದನ್ನು ಮಾರಿ ಬಂದ ಹಣದಿಂದ ಕಾಡುಗೊಲ್ಲರು ತಮ್ಮ ದೈನಂದಿನ ಜೀವನ ನಡೆಸುತ್ತಿದ್ದರು. ನಂತರ ಹಸು ದನಗಳ

ಗೊಬ್ಬರವನ್ನು ಸಹ ಕಾಡುಗೊಲ್ಲರು ಮಾರಿ ಜೀವನ ನಡೆಸುತ್ತಿದ್ದರು. ಜೊತೆಗೆ ಕಾಡುಗೊಲ್ಲರ ಪುರಾಣಗಳಲ್ಲಿ ಬರುವ "ಸಾಂಸ್ಕೃತಿಕ ವೀರರಾದ ಜುಂಜಪ್ಪ ಮತ್ತು ಎತ್ತಪ್ಪ" ಇವರು ಗೋಪಾಲಕರು. ಇವರು ಹಸು, ಹೋರಿ, ಎತ್ತು, ಕರುಗಳನ್ನು ಕಾಯುತ್ತಾ ಹುಲ್ಲುಗಾವಲು ಪ್ರದೇಶಗಳಲ್ಲಿ ಮೇಯಿಸುತ್ತಾ ಕಾಲ ಕಳೆದರು.

ಕಾಡುಗೊಲ್ಲರು ಪರಂಪರಾನುಗತವಾಗಿ ದನಗಳನ್ನೇ ಸಾಕುತ್ತಿರುವುದು ಕಂಡುಬರುತ್ತದೆ. ಅಲೆಮಾರಿ ಕಾಡುಗೊಲ್ಲರ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವ ದೃಷ್ಟಿಯಿಂದ ಹಿಂದಿನ ಕಾಲದಿಂದಲೂ ಹಸುಗಳು ಮತ್ತು ದನಗಳನ್ನು ಎತ್ತುಗಳನ್ನು ಸಾಕಿ ಅವುಗಳ ಪೋಷಣೆ ಹಾರೈಕೆ ಮಾಡುತ್ತಿರುವುದು ಇಂದೂ ಸಹ ಅವರ ಹಟ್ಟಿಗಳಲ್ಲಿ ಕಂಡುಬರುತ್ತದೆ.

ಕಾಡುಗೊಲ್ಲರಿಗೆ ತಮ್ಮ ದನಕರುಗಳ ಬಗ್ಗೆ ಕಾಳಜಿ ಮತ್ತು ಪ್ರೀತಿ ಇರುವುದು ಕಂಡು ಬರುತ್ತದೆ. ಇವರಿಗೆ ತಿನ್ನಲು ಊಟವಿಲ್ಲದಿದ್ದರೂ ದನಕರುಗಳಿಗೆ, ಹೊಟ್ಟೆತುಂಬ ಮೇವು ತಿನ್ನಿಸಿ ನೀರು ಕುಡಿಯಿಸಿ ಉಪವಾಸ ಮಲಗುತ್ತಾರೆ. ಹಟ್ಟಿಗಳಲ್ಲಿ ಬರಗಾಲ ಬಂದರೆ ಹಟ್ಟಿಯ ಜನರು ಪ್ರತಿ ಮನೆಗೊಬ್ಬರಂತೆ, ಅವರ ಎತ್ತು ಹಾಗೂ ಆಕಳುಗಳನ್ನು ಹುಲ್ಲುಗಾವಲುವಿರುವ ಸ್ಥಳಗಳಿಗೆ ಹೋಗಿ ಅಲ್ಲಿಯೇ ಬೀಡುಬಿಟ್ಟು ನಂತರ ಅವರು ತಮ್ಮ ಊರುಗಳಿಗೆ ಬರುವ ಪ್ರಸಂಗಗಳನ್ನು ನಾವು ಕಾಣಬಹುದು. ಇಂತಹ ಸನ್ನಿವೇಶಗಳಲ್ಲಿ ಅವರು ಕಾಡುಗಳಲ್ಲಿ ದನಗಳನ್ನು ಮತ್ತು ಹಸುಗಳನ್ನು ಕಾಯುವುದಕ್ಕೆ ಹೋದಾಗ ಅಲ್ಲಿ ದನಗಳು ಹಾಕಿದ ಗೊಬ್ಬರವನ್ನು ಒಂದು ಕಡೆ ಶೇಖರಣೆ ಮಾಡಿ ಬರುತ್ತಿದ್ದರು. ನಂತರ ತಡಿಕೆ ಇರುವ ಗಾಡಿಗಳ ಮೂಲಕ ಆ ಗೊಬ್ಬರವನ್ನು ಅವರು ತಮ್ಮ ಜಮೀನುಗಳಿಗೆ ತಂದು ಹಾಕಿಕೊಳ್ಳುತ್ತಿದ್ದರು.

'ಕಾಡುಗೊಲ್ಲ ಸಮುದಾಯದ ಆರ್ಥಿಕ ಜೀವನ ಅವರ ಪಶುಸಂಪತ್ತಿನ ಮೇಲೆ ಅಳೆಯಬೇಕಾಗುತ್ತದೆ. ಕಾಡುಗೊಲ್ಲರು ವಾಸಿಸುವ ಅಥವಾ ಮಲಗುವ ಸ್ಥಳ ಪಕ್ಕದಲ್ಲಿ ದನಗಳ ಕೊಟ್ಟಿಗೆ ನಿರ್ಮಿಸಿಕೊಂಡಿರುತ್ತಾರೆ. ಜೊತೆಗೆ ಅವುಗಳ ಪಕ್ಕದಲ್ಲೇ ಇವರು ಮಲಗುತ್ತಾರೆ. ಏಕೆಂದರೆ ರಾತ್ರಿಯಿಡೀ ಅವುಗಳಿಗೆ ಮೇವು ಹಾಕುವುದಕ್ಕೋಸ್ಕರ ಈ ರೀತಿಯ ಕ್ರಮ ಅನುಸರಿಸುತ್ತಾರೆ. ಪ್ರತಿ ನಿತ್ಯ ಅವುಗಳ ಮೈಯನ್ನು ಸ್ವಚ್ಛವಾಗಿ ನೀರಿನಿಂದ ಮತ್ತು ತೆಂಗಿನ ಗುಂಜಿನಿಂದ ತಿಕ್ಕಿ ತೊಳೆಯುತ್ತಾರೆ. ಹಟ್ಟಿಗಳಲ್ಲಿ ಹಬ್ಬಗಳನ್ನು ಆಚರಿಸುವ ಸಮಯದಲ್ಲಿ ಅಂದರೆ ಕಾರಹಬ್ಬ ಅಥವಾ ಬಸವನ ಹಬ್ಬದಲ್ಲಿ ಎತ್ತುಗಳಿಗೆ ಬಣ್ಣದ ಕಾಗದಗಳಿಂದ ಸಿಂಗರಿಸಿ ಊರಿನಲ್ಲಿ ಮೆರವಣಿಗೆ ಮಾಡಿ ಊರ ಬಾಗಿಲಿನಲ್ಲಿ ಕಟ್ಟಿದ ತೋರಣವನ್ನು ಪೂಜೆ ಮಾಡಿ ಪ್ರತಿ ಮನೆಗಳಿಗೆ ಹೋಗಿ ಮೊದಲು ಆಹಾರದ ಎಡೆಯನ್ನು ದನ ಕರುಗಳಿಗೆ ತಿನಿಸಿ ನಂತರ ತಾವು ಊಟ ಮಾಡುತ್ತಾರೆ. ಕಾಡುಗೊಲ್ಲರು ದನಕರುಗಳನ್ನು ತಮ್ಮ ಮಕ್ಕಳಷ್ಟೇ ಪ್ರೀತಿಸುತ್ತಾರೆ. ದನಕರುಗಳಿಗೆ ರೋಗಗಳು ಬಂದರೆ ಇವರು ನಿದ್ದೇ ಮಾಡುವುದಿಲ್ಲ. ತಮ್ಮ ಸಮುದಾಯದಲ್ಲಿಯ ನಾಟಿ ವೈದ್ಯರನ್ನು ಕರೆಸಿ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧವನ್ನು ಕೊಡಿಸುತ್ತಾರೆ.'[10]

ಇತ್ತೀಚಿನ ಆಧುನಿಕ ಕಾಡುಗೊಲ್ಲರು ದನಕರುಗಳನ್ನು ಎಮ್ಮೆಗಳನ್ನು ಸಾಕುವುದನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿರುವುದು ಕಂಡುಬರುತ್ತದೆ. ಏಕೆಂದರೆ ಹಿಂದಿನ ಕಾಲದಲ್ಲಿ ಕಾಡುಗಳು ಹೆಚ್ಚಾಗಿ ಕಂಡುಬರುತ್ತಿದ್ದವು. ಇತ್ತೀಚೆಗೆ ಕಾಡುಗಳು ಕಣ್ಮರೆಯಾಗಿ ಕೈಗಾರಿಕೆಗಳು ಹಾಗೂ ಪಟ್ಟಣಗಳು ದಿನನಿತ್ಯ ಬೆಳೆಯುತ್ತಿರುವುದರಿಂದ ಅಥವಾ ಕಾಡುಗಳನ್ನು ನಾಶ ಮಾಡುವುದರಿಂದ ಮತ್ತು ಸರಿಯಾದ ಸಮಯಕ್ಕೆ ಮಳೆ ಬಾರದೆ ಇರುವುದರಿಂದ ಮೇವು ನೀರು ಸಿಗದೇ ಪರದಾಡಬೇಕಾಗುತ್ತದೆ. ಹೀಗಾಗಿ ಕಾಡುಗೊಲ್ಲರು ಹಾಲು, ಮೊಸರು, ತುಪ್ಪ, ಬೆಣ್ಣೆ, ಸೇವಿಸಲು ಅವರಿಗೆ ಬೇಕಾಗುವಷ್ಟು ಎಮ್ಮೆ, ಹಸು ಕಟ್ಟಿಕೊಳ್ಳುತ್ತಾರೆ. ಅವರ ಮನೆಯ ಜನಸಂಖ್ಯೆಗೆ ತಕ್ಕಂತೆ ಎರಡು ಮೂರು ಎಮ್ಮೆ ಅಥವಾ ಆಕಳು ಕಟ್ಟಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ೩೦ ರಿಂದ ೪೦ ರಾಸುಗಳನ್ನು ಕಟ್ಟಿಕೊಂಡು ಅಡವಿಗೆ ಹೋಗುತ್ತಿದ್ದರು ಆದರೆ ಇಂದು ಮನೆಯಲ್ಲಿಯೇ ಮೇವು ಮತ್ತು ನೀರು ಕುಡಿಸಲು ವ್ಯವಸ್ಥೆಯನ್ನು ಮಾಡಿದ್ದಾರೆ. ದನಗಳಿಗೆ ಕಾಯಿಲೆ ಅಥವಾ ರೋಗ ರುಜಿನಗಳು ಬಂದರೆ ಸರ್ಕಾರದ ಪಶು ಚಿಕಿತ್ಸಾ ಕೇಂದ್ರಗಳಿಗೆ ಹೋಗಿ ಚಿಕಿತ್ಸೆ ಮಾಡಿಸುತ್ತಾರೆ. ಮತ್ತು ಚುಚ್ಚುಮದ್ದನ್ನು ಕೊಡಿಸುವುದನ್ನು ಕಾಣುತ್ತೇವೆ. ಇಂತಹ ಸಂದರ್ಭಗಳನ್ನು ಮಳೆಗಾಲ ಬರಗಾಲದ ಸಮಯದಲ್ಲಿ ಕಾಡುಗೊಲ್ಲರು ಮೇವಿಗಾಗಿ ಪರದಾಡುವುದನ್ನು ಇಂದು ನಾವು ನೋಡಬಹುದು.

ಕುರಿಸಾಕಾಣಿಕೆ:

ಒಂದು ಕಾಲದಲ್ಲಿ ಕಾಡುಗಳಲ್ಲಿ ಹುಲ್ಲು ಮೇವು ಹೇರಳವಾಗಿ ಸಿಗುತ್ತಿದ್ದ ಸಂದರ್ಭದಲ್ಲಿ ಕಾಡುಗೊಲ್ಲರು ದನಕರುಗಳ ಜೊತೆಗೆ ಕುರಿ ಹಾಗೂ ಮೇಕೆಗಳನ್ನು ಸಾಕುತ್ತಿದ್ದರು. ಒಂದು ಕಾಲದಲ್ಲಿ ಕುರಿಸಾಕಾಣಿಕೆಯಲ್ಲಿ ಇವರಿಗೆ ಆಸಕ್ತಿ ಇರಲಿಲ್ಲ. "ಆಡು ಮುಟ್ಟದ ಸೋಪ್ಪಿಲ್ಲ" ಎಂಬ ಗಾದೆಯಂತೆ ಮೇಕೆ, ಕುರಿಗಳು ಒಂದು ಕಡೆ ನಿಂತು ಆಹಾರವನ್ನು ತಿನ್ನುತ್ತಿದ್ದವು. ಅವು ಇಡೀ ಕಾಡಿನಲ್ಲಿರುವ ಎಲ್ಲಾ ವಿಧದ ಸೊಪ್ಪನ್ನು ಎಲೆಗಳನ್ನು ತಿನ್ನುವ ಜಾತಿಗೆ ಸೇರಿರುವುದರಿಂದ ಅವುಗಳನ್ನು ಕಾಯಲು ಅವರಿಗೆ ಕಷ್ಟವಾಗುತ್ತಿತ್ತು. ಆದರೂ ಸಹ ಸ್ವಲ್ಪ ಮಟ್ಟಿಗೆ ಸಾಕಿರುವುದು ಕಂಡುಬರುತ್ತಿತ್ತು. ಕುರಿ ಎಂದರೆ ಅವರಿಗೆ ಪಂಚಪ್ರಾಣ, ಕುರಿಗಳ ಸಂಖ್ಯೆಗೆ ಅನುಗುಣವಾಗಿ ಅವರ ಸ್ಥಾನಮಾನಗಳು ನಿರ್ಧಾರವಾಗುತ್ತಿದ್ದವು. ಕುರಿಗಳ ಉಣ್ಣೆಯನ್ನು ಸಹ ತೆಗೆದು ಅದರಿಂದ ಬಂದ ಹಣವನ್ನು ಇವರು ಜೀವನಕ್ಕೆ ಬಳಸುತ್ತಿದ್ದರು. ಜೊತೆಗೆ ಉಣ್ಣೆಯಿಂದ ಕರಿಕಂಬಳಿ ಮತ್ತು ಉಣ್ಣೆಯ ರಗ್ಗುಗಳನ್ನು ತಯಾರಿಸುತ್ತಿದ್ದರು. ಕುರಿಗಳನ್ನು ಕಾಯುವುದಕ್ಕೆ ಅವರ ಕುಟುಂಬವೆಲ್ಲಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗಬೇಕಾಗಿತ್ತು. ಏಕೆಂದರೆ ಅವರು ವಾಸವಾಗಿರುವ ಪ್ರದೇಶಗಳಲ್ಲಿ ಮೇವು ನೀರಿನ ಕೊರತೆಯಿಂದಾಗಿ ಅಲೆದಾಡುತ್ತಿದ್ದರು. ಕಾಡುಗೊಲ್ಲರು ಕುರಿಸಾಕಾಣಿಕೆಗಾಗಿ ಅಲೆದಾಡುತ್ತಿರುವ ಸಂದರ್ಭದಲ್ಲಿ ಅಡುಗೆ ಸಾಮಗ್ರಿಗಳು ಪಾತ್ರೆ ಪಡಗ ಅಡುಗೆಯ ಪದಾರ್ಥಗಳನ್ನು ಮಲಗುವುದಕ್ಕೆ

ರಗ್ಗು ಕಂಬಳಿ ಬಟ್ಟೆಗಳನ್ನು ಹೊತ್ತುಕೊಂಡು ಸಾಗುವುದಕ್ಕೆ ಕುರಿ ಮೇಕೆಯ ಜೊತೆಗೆ ಕತ್ತೆಗಳನ್ನು ಸಾಕುತ್ತಾರೆ. ಇವುಗಳ ರಕ್ಷಣೆಗೆ ಸುಮಾರು ೫–೬ ನಾಯಿಗಳನ್ನು ಸಾಕಿರುತ್ತಾರೆ.

'ರಾತ್ರಿ ಹೊಲಗಳಲ್ಲಿ ಕುರಿಗಳನ್ನು ಬೀಡು ಬಿಟ್ಟಿರುವುದಾಗಿ ಆ ಹೊಲದ ಮಾಲೀಕನು ಒಂದು ದಿವಸಕ್ಕೆ ಇಷ್ಟು ಎಂದು ಹಣ ಅಥವಾ ದವಸ ಧಾನ್ಯಗಳ ರೂಪದಲ್ಲಿ ಕೊಡುವುದನ್ನು ಕಾಣಬಹುದು. ರಾತ್ರಿಯ ವೇಳೆ ಕಳ್ಳ ಕಾಕರ ಹಾವಳಿಯಿಂದ ಮತ್ತು ಬೇರೆ ಪ್ರಾಣಿಗಳಾದ ತೋಳ ಕರಡಿಗಳಿಂದ ರಕ್ಷಣೆ ಪಡೆಯುವ ಸಲುವಾಗಿ ನಾಯಿಗಳನ್ನು ಸಾಕಿರುತ್ತಾರೆ. ರಾತ್ರಿ ವೇಳೆಯಲ್ಲಿ ಕುರಿಗಳ ರಕ್ಷಣೆಗಾಗಿ ಸರದಿಯ ಪ್ರಕಾರ ಹಂಚಿಕೊಂಡು ೩ ಮತ್ತು ೪ ತಾಸುಗಳ ಕಾಲ ನಿದ್ದೆ ಮಾಡದೇ ಕಾಯುತ್ತಿದ್ದರು. ಕುರಿಗಳು ಕಾಡುಗಳಲ್ಲಿ ಚನ್ನಾಗಿ ಹಚ್ಚ ಹಸಿರಿನಿಂದ ಕೂಡಿರುವ ಹುಲ್ಲು ಮೇವು ತಿಂದು ಕುರಿಗಳು ಕೊಬ್ಬುತ್ತವೆ ಅಥವಾ ಬೆದೆಗೆ ಬಂದು ಗರ್ಭಕಟ್ಟುತ್ತವೆ. ಇದರಿಂದ ಕುರಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತವೆ.

ಕಾಡುಗೊಲ್ಲರು ಕನಿಷ್ಟ ೨ ಅಥವಾ ೫ ರಿಂದ ಹಿಡಿದು ಗರಿಷ್ಟ ೪೦೦ ರಿಂದ ೬೦೦ ಗಟ್ಟಲೆ ಕುರಿ ಸಾಕುವ ಜನರಿದ್ದಾರೆ. ಆದರೆ ಕುರಿಯನ್ನು ಮನೆಯ ಮುಂದೆ ಅಥವಾ ಪಕ್ಕದಲ್ಲಿ ರೊಪ್ಪವನ್ನು ಮಾಡಿ ಕುರಿಗಳಿಗೋಸ್ಕರ ಕಳ್ಳಿಯ ಗಿಡ ಜಾಲಿಯಗಿಡ ಮುಳ್ಳುಗಿಡಗಳಿಂದ ಕೂಡಿದ ಎತ್ತರವಾದ ಪ್ರದೇಶದಲ್ಲಿ ರೊಪ್ಪಗಳನ್ನು ಕಟ್ಟುತ್ತಾರೆ. ಜೊತೆಗೆ ರೊಪ್ಪದ ಒಳಗಡೆ ಮನೆಯ ಯಾರಾದರೂ ಒಬ್ಬ ವ್ಯಕ್ತಿ ಮಲಗುವ ಸಲುವಾಗಿ ಒಂದು ಮರದ ಮಂಚ ಅಥವಾ ಕಟ್ಟಿಗೆಗಳಿಂದ ಹಲಗೆಗಳಿಂದ ಜೋಡಿಸಿ ಎತ್ತರವಾಗಿ ನಿರ್ಮಿಸಿಕೊಳ್ಳುತ್ತಾರೆ. ಕುರಿಗಳನ್ನು ಆ ಊರಿನ ಸರ್ಕಾರಿ ಗೋಮಾಳಗಳಲ್ಲಿ ಕೆರೆಕಟ್ಟೆಗಳಲ್ಲಿ ಬಯಲು ಪ್ರದೇಶಗಳಲ್ಲಿ ತೋಟ ಗದ್ದೆಗಳಲ್ಲಿಯೂ ಮೇಯಿಸುತ್ತಾರೆ. ಕುರಿಗಳು ಹಾಕುವ ಗೊಬ್ಬರದಿಂದ ಅಥವಾ ಗಂಜಿನಿಂದ ಹೊಲಗಳಲ್ಲಿ ಇರುವ ಮಣ್ಣು ಫಲವತ್ತತೆಯನ್ನು ಪಡೆಯುತ್ತದೆ. ಇವರು ಅತಿ ಹೆಚ್ಚಿನದಾಗಿ ಚಿತ್ರದುರ್ಗ ತುಮಕೂರು ಬಯಲು ಪ್ರದೇಶಗಳಲ್ಲಿ ವಾಸವಾಗಿದ್ದು, ಅಲ್ಲಿ ಮೇವು ನೀರು ದೊರೆಯದ ಸಂದರ್ಭದಲ್ಲಿ ಮುಂತಾದ ಪ್ರದೇಶಗಳ ಕಡೆ ಶಿವಮೊಗ್ಗ ದಾವಣಗೆರೆ ಚಿಕ್ಕಮಗಳೂರು ಈ ರೀತಿ ಕಾಡುಗಳು ಅತಿ ಹೆಚ್ಚಿನದಾಗಿ ಇರುವ ಪ್ರದೇಶಗಳತ್ತಾ ಮತ್ತು ಮಲೆನಾಡು ಪ್ರದೇಶಗಳ ಕಡೆಗೆ ವಲಸೆ ಹೋಗುತ್ತಾರೆ. ಕುರಿ ಸಾಕಾಣಿಕೆಯು ಆರ್ಥಿಕವಾಗಿ ಲಾಭದಾಯಕವಾಗಿದ್ದರೂ ಸಹ ಬಹಳ ಕಷ್ಟದ ಕೆಲಸ ಏಕೆಂದರೆ ಕುರಿಗಳನ್ನು ಕಾಯುವುದಕ್ಕೆ ಮನೆಯಲ್ಲಿರುವ ಹುಡುಗರಿಂದ ಹಿಡಿದು ಮಹಿಳೆಯರು ಕೂಡ ಭಾಗವಹಿಸಬೇಕು. ಇಂತಹ ಸಮಯದಲ್ಲಿ ಬೀಸಿಲು ಗಾಳಿ ಮಳೆ ಎನ್ನದೇ ಕುರಿಗಳು ಎಲ್ಲಿಗೆ ಹೋದರೂ ಸಹ ಅವುಗಳನ್ನು ಹೊಟ್ಟೆ ತುಂಬಾ ಮೇಯಿಸಿಕೊಂಡು ಬರುತ್ತಾರೆ. ಸಾಯಂಕಾಲ ಮನೆಗೆ ಬರುವಾಗ ಇವರ ಮುಖವು ಸೊರಗಿ ಸೊಪ್ಪಾಗಿರುತ್ತದೆ. ಜೊತೆಗೆ ಅಡವಿಗೆ ಕುರಿಗಳನ್ನು ಕಾಯಲು ಹೋದಾಗ

ಇವರಿಗೆ ಅನೇಕ ಸಂದರ್ಭಗಳಲ್ಲಿ ಕುಡಿಯಲು ನೀರು ಸಹ ಸಿಗುವುದಿಲ್ಲ ಜೊತೆಗೆ ಮಧ್ಯಾಹ್ನದ ಊಟವು ಸಹ ಸಿಗುವುದಿಲ್ಲ.

ಕಾಡುಗೊಲ್ಲರ ಕುರಿಗಳಿಗೆ ವಿವಿಧ ರೀತಿಯ ರೋಗಗಳು ಕಂಡುಬರುತ್ತವೆ. ಕುರಿಗಳು ಕೆಮ್ಮು ಅಥವಾ ಸೀನಿದಾಗ ಇಂತಹ ಅಂಟು ರೋಗಗಳು ಬಂದರಂತೂ ಇಡೀ ಕುರಿ ಹಿಂಡಿಗೆ ಹಿಂಡೇ ರೋಗದಿಂದ ನರಳಿ ಸಾಯುತ್ತವೆ. ಇಂತಹ ಸಮಯದಲ್ಲಿ ತಕ್ಷಣ ಔಷಧಿಯನ್ನು ಅಥವಾ ಚುಚ್ಚುಮದ್ದು ಸಿಗದೇ ಇರುವ ಕಾರಣದಿಂದ ಸಾಯುತ್ತವೆ. ಇದರಿಂದ ಇವರಿಗೆ ತುಂಬಲಾರದ ನಷ್ಟವಾಗುತ್ತದೆ. ಈ ನಷ್ಟವನ್ನು ತುಂಬಲು ಇವರಿಗೆ ಸರ್ಕಾರದಿಂದ ಯಾವುದೇ ಸೌಲಭ್ಯಗಳು ದೊರೆಯುತ್ತಿಲ್ಲ ಎಂದು ಹೇಳಬಹುದು.'[೨]

ಇತ್ತೀಚಿನ ದಿನಗಳಲ್ಲಿ ಕಾಡುಗಳು ದೀನೆ ದೀನೆ ಕಡಿಮೆಯಾಗುತ್ತಿವೆ. ಏಕೆಂದರೆ ಆಧುನಿಕ ಯುಗದಲ್ಲಿ ಕೈಗಾರಿಕೀಕರಣ ನಗರೀಕರಣದ ಪ್ರಭಾವದಿಂದ ಕಾಡುಗಳನ್ನು ಕಡಿದು ಅನೇಕ ನಗರಗಳು ಹೆಚ್ಚಾಗಿ ಬೆಳೆಯುತ್ತಿರುವುದನ್ನು ಕಾಣಬಹುದು. ಜೊತೆಗೆ ಕಾಡುಗಳು ನಾಶವಾಗುವುದರಿಂದ ಅಲ್ಲಿ ಹುಟ್ಟುವ ಹುಲ್ಲು ಮೇವು ಕೂಡ ಕಡಿಮೆಯಾಗುತ್ತದೆ. ನಂತರ ಇತ್ತೀಚಿಗೆ ಕುರಿ ಸಾಕುವವರ ಸಂಖ್ಯೆ ಸ್ವಲ್ಪ ಕಡಿಮೆಯಾಗಿದೆ. ಕುರಿಯ ಮಾಂಸವು ಊಟಕ್ಕೆ ಜಾಸ್ತಿ ಬೇಕಾಗಿರುವುದರಿಂದ ಇವತ್ತು ಎಲ್ಲಾ ಸಭೆ ಸಮಾರಂಭಗಳಲ್ಲಿ ಮತ್ತು ಹೋಟೆಲ್‌ಗಳಲ್ಲಿ ಡಾಬಾಗಳಲ್ಲಿ ಅಡುಗೆಗೆ ಕುರಿಯ ಮಾಂಸವನ್ನು ಹೆಚ್ಚಾಗಿ ಬಳಸುತ್ತಾರೆ.

ಆದರೆ ನನ್ನ ಕ್ಷೇತ್ರಕಾರ್ಯದ ಗೊಲ್ಲರ ಹಟ್ಟಿಯಲ್ಲಿ ಇತ್ತೀಚಿಗೆ ಕುರಿಯ ಸಾಕಾಣಿಕೆಯಲ್ಲಿ ಹೆಚ್ಚಿನ ಲಾಭವಿದ್ದರೂ ಸಹ ಕೈಗಾರೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಇಂದಿನ ಯುವಕ ಯುವತಿಯರು ವಿದ್ಯಾಭ್ಯಾಸವನ್ನು ಕಲಿತು ನಗರ ಪ್ರದೇಶಗಳತ್ತ ಕೆಲಸ ಹುಡುಕಿಕೊಂಡು ಹೋಗುತ್ತಿರುವುದನ್ನು ನಾವು ಕಾಣಬಹುದು. ಏಕೆಂದರೆ ಅವರು ಕುರಿಯನ್ನು ಸಾಕುವುದು. ಕೀಳುಮಟ್ಟದ ವೃತ್ತಿ ಎಂದು ಭಾವಿಸಿ ಅವುಗಳನ್ನು ಬಿಟ್ಟು ಇವತ್ತು ಉದ್ಯೋಗಗಳಲ್ಲಿ ತೊಡಗಿ ಹಣ ಹೆಸರು ಮಾಡುತ್ತಿದ್ದಾರೆ. ಆದ್ದರಿಂದ ದಿನ ಕಳೆದಂತೆ ಕುರಿಸಾಕಾಣಿಕೆ ಮೂಲೆಗುಂಪಾಗಿ ವ್ಯಾಪಾರ ಸರ್ಕಾರಿ ಕೆಲಸಗಳಲ್ಲಿ ದುಡಿಯುವ ಪ್ರಯತ್ನ ಮಾಡುತ್ತಿರುವುದು ಕಂಡು ಬಂದಿದೆ. ಇದರ ಜೊತೆಗೆ ವ್ಯವಸಾಯದಲ್ಲೂ ಇವತ್ತು ಕಾಡುಗೊಲ್ಲರು ಹೆಚ್ಚಿನದಾಗಿ ತೊಡಗಿಕೊಂಡಿರುವುದನ್ನು ಗಮನಿಸಬಹುದು.

ಆದರೂ ಗೊಲ್ಲರಹಟ್ಟಿಯಲ್ಲಿ ಕಾಡುಗೊಲ್ಲ ಸಮುದಾಯದವರೂ ಕಡಿಮೆ ಪ್ರಮಾಣದಲ್ಲಿ ಕುರಿಗಳನ್ನು ಸಾಕಿರುವುದನ್ನು ಕಾಣುತ್ತೇವೆ. ಕಾಡುಗೊಲ್ಲರು ಇತ್ತೀಚೆಗೆ ಕುರಿಗಳಿಗೆ ಏನಾದರೂ ಕಾಯಿಲೆ ರೋಗ ರುಜಿನಗಳು ಬಂದರೆ ತಕ್ಷಣ ಪಶು ಚಿಕಿತ್ಸಾ ಕೇಂದ್ರಗಳಿಗೆ ಹೋಗಿ ಡಾಕ್ಟರ್‌ಗಳ ಹತ್ತಿರ ಚುಚ್ಚುಮದ್ದನ್ನು ಹಾಕಿಸಿಕೊಂಡು ಬರುತ್ತಾರೆ. ನಂತರ ಏನಾದರೂ ಬಾಯಿ

ರೋಗ ಕಾಲು ರೋಗ ಹುಣ್ಣು ರೋಗದಿಂದ ಬಳಲಿ ಸತ್ತರೆ ಇವತ್ತು ಪಶು ಸಂಗೋಪನೆ ಇಲಾಖೆಯಿಂದ ಮತ್ತು ಸರ್ಕಾರದಿಂದ ಪರಿಹಾರವು ದೊರುಕುತ್ತದೆ. ಜೊತೆಗೆ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯು ಕುರಿಯನ್ನು ಸಾಕುವುದಕ್ಕೆ ಲೋನ್ ಮುಖಾಂತರ ಹಣ ಕೊಡುವುದನ್ನು ಕಾಣುತ್ತೇವೆ.

೪.೨ ಕೃಷಿ:

ಕರ್ನಾಟಕ ರಾಜ್ಯದಲ್ಲಿ ಅನೇಕ ಅಲೆಮಾರಿ ಸಮುದಾಯಗಳು ಕಂಡುಬರುತ್ತವೆ. ಇಂತಹ ಅಲೆಮಾರಿ ಕಾಡುಗೊಲ್ಲ ಸಮುದಾಯವು ಒಂದು ಏಕೆಂದರೆ ಇವರು ಮೂಲತ: ಪಶುಪಾಲಕರಾಗಿರುವುದರಿಂದ ಇವರು ಒಂದು ಕಡೆ ನೆಲೆನಿಂತು ಭೂಮಿಯನ್ನು ಉಳುಮೆ ಮಾಡುತ್ತಿರಲಿಲ್ಲ. ಆದರೆ ಇತ್ತೀಚಿಗೆ ಒಂದು ಕಡೆ ನೆಲೆ ನಿಂತು ಕೃಷಿ ಭೂಮಿಯಲ್ಲಿ ವ್ಯವಸಾಯ ಮಾಡಲು ಮುಂದಾಗಿರುವುದನ್ನು ಕಾಣಬಹುದು. ಕರ್ನಾಟಕ ರಾಜ್ಯದಲ್ಲಿ ಬೇರೆ ಸಮುದಾಯಗಳಿಗೆ ಹೋಲಿಸಿದರೆ ಕಾಡುಗೊಲ್ಲ ಸಮುದಾಯದವರು ವ್ಯವಸಾಯದಲ್ಲಿ ಬಹಳ ಹಿಂದುಳಿದವರಾಗಿದ್ದಾರೆ. ಇವರಲ್ಲಿ ಕೃಷಿ ಜಮೀನು ಇರುವುದು ತುಂಬಾನೇ ಕಡಿಮೆ ಹೊಂದಿದ್ದಾರೆ. ಜಮೀನು ಇದ್ದರೂ ಸಹ ಸಣ್ಣ ಪ್ರಮಾಣದ ಇಡುವಳಿದಾರರಾಗಿರುತ್ತಾರೆ. ಸರ್ಕಾರದಿಂದ ದೊರೆತರು ಗೋಮಾಳದ ಜಮೀನುಗಳು ಕಾಡಿನ ಹತ್ತಿರ ಇರುವ ಜಮೀನುಗಳು ಮತ್ತು ನೀರಿನ ವ್ಯವಸ್ಥೆ ಇಲ್ಲದ ಜಮೀನುಗಳು ಸಿಗುತ್ತವೆ. ಕಾಡುಗೊಲ್ಲರು ನನ್ನ ಕ್ಷೇತ್ರ ಅಧ್ಯಯನದ ಗೊಲ್ಲರ ಹಟ್ಟಿಯಲ್ಲಿ ಕಂಡು ಬಂದಂತಹ ಕಾಡುಗೊಲ್ಲರ ಜಮೀನುಗಳು ತುಂಬಾ ಉತ್ತಮವಾಗಿರುತ್ತವೆ. ಅಂದರೆ ಬಹಳ ಸಣ್ಣ ಪ್ರಮಾಣದ ಹಿಡುವಳಿದಾರರು ಅಂದರೆ ಸುಮಾರು ಒಂದು ಎಕರೆ ಅಥವಾ ಎರಡು ಎಕರೆ ಜಮೀನನ್ನು ಹೊಂದಿರುವವರು ಬಹಳ ಇದ್ದಾರೆ. ಜೊತೆಗೆ ೪,೫ ಎಕರೆ ಜಮೀನನ್ನು ಹೊಂದಿರುವವರು ಸ್ವಲ್ಪ ಕಡಿಮೆ ಇದ್ದಾರೆ. ನಂತರ ೧೦ ಎಕರೆಗಳಿಗಿಂತ ಹೆಚ್ಚಿಗೆ ಇರುವವರು ಬೆರಳೆಣಿಕೆಯಷ್ಟು ಕಂಡು ಬರುತ್ತಾರೆ.

ಕಾಡುಗೊಲ್ಲರ ಜಮೀನುಗಳು ಬಂಜರು ಭೂಮಿ ಇಲ್ಲವೇ ಗುಡ್ಡ ಗಾಡು ಬೆಟ್ಟದ ತಪ್ಪಲಿನ ಭಾಗದಲ್ಲಿ ಮತ್ತು ಇಳಿಜಾರಿನ ಪ್ರದೇಶದಲ್ಲಿ ಕಂಡುಬರುತ್ತವೆ. ಬಯಲು ಪ್ರದೇಶಗಳಲ್ಲಿ ಏಕೆಂದರೆ ಅವರು ಸಾಕಿದ ಕುರಿ ಹಸು ದನ ಎಮ್ಮೆಗಳನ್ನು ಮೇಯಿಸಲು ಉತ್ತಮವಾದ ಹುಲ್ಲುಗಾವಲು ಪ್ರದೇಶವನ್ನು ಆಯ್ಕೆ ಮಾಡಿಕೊಂಡು ನೆಲೆಸಿರುತ್ತಾರೆ. ಹಿಂದಿನ ಕಾಲದಲ್ಲಿ ಕೃಷಿ ಚಟುವಟಿಕೆಯಲ್ಲಿ ಅವರಿಗೆ ಬೇಕಾದ ಕೆಲಸಗಳು ಸಿಗುತ್ತಿದ್ದವು. ಅಂದರೆ ಪ್ರಮುಖ ಬೆಳೆಗಳಾದ ರಾಗಿ, ಕಡಲೆ, ಜೋಳ, ಸಾಸಿವೆ, ಹೆಸರು, ಹಲಸೆಂದಿ ಸೂರ್ಯಕಾಂತಿ,ಎಳ್ಳು ಮುಂತಾದ ಬೆಳೆಗಳನ್ನು ಬೆಳೆಯುವುದಕ್ಕೆ ಹೊಲಗಳನ್ನು ಉಳುಮೆ ಮಾಡಲು ಎತ್ತುಗಳನ್ನು ಬಳಸುತ್ತಿದ್ದರು. ಇತ್ತೀಚಿಗೆ ಕೃಷಿ ಕಾರ್ಮಿಕರು ಕೃಷಿಯಲ್ಲಿ ಕೆಲಸ ಮಾಡುವುದಕ್ಕೆ ಬರುತ್ತಿಲ್ಲ

ಏಕೆಂದರೆ ದುಬಾರಿಯಾದ ಕೂಲಿ ಕೊಡದ ಕಾರಣದಿಂದ ಅಥವಾ ಕೈಗಾರೀಕರಣ/ನಗರೀಕರಣ ಪ್ರಭಾವದಿಂದ ಬೇರೆ ಕಂಪನಿಗಳಲ್ಲಿ ಕೆಲಸಗಳಿಗೆ ಹೋಗುವುದು ಕಾಣಬಹುದು. ಇತ್ತೀಚೆಗೆ ಕೃಷಿ ಚಟುವಟಿಕೆಗಳಲ್ಲಿ ಅನೇಕ ರೀತಿಯಲ್ಲಿ ಆಧುನಿಕ ತಂತ್ರಜ್ಞಾನದ ಬೆಳೆದಂತೆಲ್ಲಾ ಯಂತ್ರೋಪಕರಣಗಳನ್ನು ಬಳಸುವುದರಿಂದ ಹಿಂದಿನ ಕಾಲದಲ್ಲಿ ಸಿಕ್ಕಂತೆ ಕೃಷಿ ಕೆಲಸ ಈಗ ಇವರಿಗೆ ಸಿಗುತ್ತಿಲ್ಲ.

ಕಾಡುಗೊಲ್ಲರು ಹಿಂದಿನ ಕಾಲದಲ್ಲಿ ಜಮೀನ್ದಾರರ ಅಥವಾ ಸಾಹುಕಾರರ ಜಮೀನಿನಲ್ಲಿ ಅಥವಾ ಮನೆಗಳಲ್ಲಿ ಜೀತದಾಳುಗಳಾಗಿ ಕಷ್ಟ ಪಟ್ಟು ದುಡಿಯುತ್ತಿದ್ದರು. ಜೊತೆಗೆ ಇನ್ನೂ ಕೆಲವು ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ತಾವು ಕೂಡ ಉತ್ತಮ ನೀರಾವರಿ ಸೌಲಭ್ಯವನ್ನು ಇರುವ ಜಮೀನುಗಳಿಗೆ ಕಲ್ಪಿಸಲು ಸಾಧ್ಯವಾಗಿರಲಿಲ್ಲ, ಏಕೆಂದರೆ ಕಡಿಮೆ ಆದಾಯದಲ್ಲಿ ಅವರ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಜೊತೆಗೆ ಹಿಂದಿನ ಕಾಲದಲ್ಲಿ ಬ್ಯಾಂಕುಗಳು ಕೂಡ ಸಾಲವನ್ನು ಸಹ ಕೊಡುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಪೋಸ್ಟ್ ಆಫೀಸಿನಿಂದ ಹಿಡಿದು ಎಲ್ಲಾ ಬ್ಯಾಂಕ್‌ಗಳು ರೈತರಿಗೆ ಸಾಲವನ್ನು ಕೊಡುವುದನ್ನು ಗಮನಿಸಬಹುದು.

ಕಾಡುಗಳು ನಾಶವಾಗುವುದರಿಂದ ಮಳೆಯ ಪ್ರಮಾಣ ಕಡಿಮೆಯಾಗಿ ಪ್ರಮುಖ ನದಿಗಳಲ್ಲಿ ನೀರು ಕಡಿಮೆಯಾಗಿ ಜೊತೆಗೆ ಕೊಳವೆ ಬಾವಿಗಳು ಕೆರೆಗಳು ಹಳ್ಳಕೊಳ್ಳಗಳಲ್ಲಿ ಸಹ ನೀರು ಬತ್ತಿ ಹೋಗುತ್ತಿವೆ. ಇದರಿಂದ ಅಂತರ್ಜಲ ಕಡಿಮೆಯಾಗುವುದನ್ನು ಕಾಣುತ್ತೇವೆ. ಇತ್ತೀಚೆಗೆ ಇವರು ಬೆಳೆಯುವಂತಹ ವಾಣಿಜ್ಯ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗದಂತಾಗಿ ಇವತ್ತು ರೈತರು ಬಹಳ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕಾಡುಗೊಲ್ಲರು ಅಡಿಕೆ, ತೆಂಗು, ಮೆಕ್ಕೆಜೋಳ, ಸೂರ್ಯಕಾಂತಿ, ಹತ್ತಿ, ರಾಗಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕಾರಣ ಇವರು ಮಲೆನಾಡು ಪ್ರದೇಶದಲ್ಲಿ ವಾಸವಾಗಿರುವುದರಿಂದ ಹೆಚ್ಚಿನದಾಗಿ ಮಳೆ ಸುರಿಯುತ್ತದೆ. ನಂತರ ಬೋರ್‌ವೆಲ್‌ಗಳಲ್ಲಿ ನೀರು ಕೂಡ ಸಾಕಷ್ಟು ಸಿಗುವುದರಿಂದ ಕೆಲವರು ಭತ್ತವನ್ನು ಪ್ರಮುಖ ಬೆಳೆಯನ್ನಾಗಿ ಬೆಳೆಯುತ್ತಾರೆ. ಆದರೆ ಅದಕ್ಕೆ ತಕ್ಕಂತೆ ಉತ್ತಮ ಬೆಲೆ ಸಿಗದೇ ಇರುವುದರಿಂದ ಕೃಷಿಯು ಇವರಿಗೆ ಸಹಾಯಕವಾಗಿಲ್ಲ. ಜೊತೆಗೆ ಇವರು ಆರ್ಥಿಕ ಸಂಕಷ್ಟಕ್ಕೆ ಇಡಾಗಿ ದಿನೇ ದಿನೇ ಸಾಲಗಾರರಾಗಿಯೇ ಮುಂದುವರಿಯುತ್ತಾ ಬಡವರಾಗಿಯೇ ಉಳಿಯುತ್ತಿದ್ದಾರೆ.

ಭೂ ಒಡೆತನ: ಪ್ರಸ್ತುತ ಸಮೀಕ್ಷೆಯ ಪ್ರಕಾರ ೯೭ ಕುಟುಂಬಗಳಲ್ಲಿ ಶೇಕಡಾ, ೧೯.೫೮ ರಷ್ಟು ಜನರು ಭೂರಹಿತ ಕುಟುಂಬದವರಿದ್ದಾರೆ ಶೇಕಡಾ ೨೮.೮೭ ರಷ್ಟು ಅತಿ ಸಣ್ಣ ರೈತರಿದ್ದಾರೆ ಶೇಕಡಾ ೨೩.೭೧ ರಷ್ಟು ಜನ ಸಣ್ಣ ರೈತರಾಗಿದ್ದಾರೆ, ಶೇಕಡಾ ೧೮.೫೬ ರಷ್ಟು ಜನರು ಮಧ್ಯಮ ಹಂತದ ರೈತರು ಈ ಸಮುದಾಯದಲ್ಲಿ ಕಂಡುಬರುತ್ತಾರೆ.

ಕೋಷ್ಟಕ ಭೂ ಒಡೆತನ:

ಕ್ರಸಂ	ಭೂ ಹಿಡುವಳಿದಾರರ ಶ್ರೇಣಿ	ಕುಟುಂಬಗಳ ಸಂಖ್ಯೆ	ಶೇಕಡವಾರು
೧	ಎ= ದೊಡ್ಡ ರೈತರು	೯	೯.೨೮
೨	ಬಿ= ಮಧ್ಯಮ ರೈತರು	೧೮	೧೮.೫೬
೩	ಸಿ= ಸಣ್ಣ ರೈತರು	೨೩	೨೩.೭೧
೪	ಡಿ= ಅತಿಸಣ್ಣ ರೈತರು	೨೮	೨೮.೮೭
೫	ಭೂ= ರಹಿತ ರೈತರು	೧೯	೧೯.೫೮
	ಒಟ್ಟು	೯೭	೧೦೦.೦೦

ಎಲ್ಲಕ್ಕಿಂತ ಮುಖ್ಯವಾದ ಅಂಶವೇನೆಂದರೆ ಶೇಕಡಾ ೯.೨೮ ಅಂದರೆ ಶೇಕಡಾ ಒಂಬತ್ತಕ್ಕಿಂತ ಕಡಿಮೆ ದೊಡ್ಡ ಹಿಡುವಳಿದಾರರು ಈ ಸಮುದಾಯದಲ್ಲಿ ಕಂಡುಬರುತ್ತಾರೆ. ಅಂದರೆ ದೊಡ್ಡ ರೈತರ ಸಂಖ್ಯೆ ಅಂದಾಜಿಗೆ ಹೆಚ್ಚಿಗೆ ಜಮೀನು ಇರುವವರು ಈ ಸಮುದಾಯದಲ್ಲಿ ಇಲ್ಲದಿರುವುದು. ಇದರಿಂದ ತಿಳಿದು ಬರುವುದೇನೆಂದರೆ ಕಾಡುಗೊಲ್ಲರಲ್ಲಿ ಬಹುತೇಕ ಜನರು ಕೃಷಿ ಕಾರ್ಮಿಕರು ಸಣ್ಣ ಅತೀ ಸಣ್ಣ ರೈತರಾಗಿದ್ದಾರೆ. ಇದು ಇವರ ಆರ್ಥಿಕ ಹಿಂದುಳಿದಿರುವಿಕೆಯನ್ನು ತೋರಿಸುತ್ತದೆ.

೪.೩ ಇತರೆ ಕಸುಬುಗಳು:

ಕಾಡುಗೊಲ್ಲರು ಹಿಂದಿನ ಕಾಲದಲ್ಲಿ ಕೇವಲ ಪಶುಪಾಲನೆಯಲ್ಲಿ ಮಾತ್ರ ತೊಡಗಿದ್ದರು. ನಂತರ ದಿನಕಳೆದಂತೆ ಕೃಷಿಯಲ್ಲಿಯೂ ತೊಡಗಿಕೊಂಡಿದ್ದರು. ಸಣ್ಣ ಪುಟ್ಟ ಚಿಲ್ಲರೆ ವ್ಯಾಪಾರಗಳಲ್ಲಿ ತೊಡಗಿದ್ದಾರೆ. ದಿನನಿತ್ಯ ಬೇಕಾಗುವ ಸಾಮಗ್ರಿಗಳನ್ನು ಆಹಾರ ಪದಾರ್ಥಗಳನ್ನು ಅಂಗಡಿಗಳಲ್ಲಿ ಇಟ್ಟಿರುವುದು ಕಂಡುಬರುತ್ತದೆ. ಜೊತೆಗೆ ಊರು ಮತ್ತು ಪಟ್ಟಣಗಳಲ್ಲಿ ವಾರಕ್ಕೊಮ್ಮೆ ಜರುಗುವ ಕುರಿ ಸಂತೆ ಮತ್ತು ದನಗಳ ಜಾತ್ರೆಯಲ್ಲಿ ಕಾಡುಗೊಲ್ಲ ಸಮುದಾಯದವರೇ ಕಂಡು ಬರುತ್ತಾರೆ. ಇವರ ಮೂಲ ವೃತ್ತಿಗಳನ್ನು ಸಾಕುವುದಾಗಿರುತ್ತದೆಯಲ್ಲಾ ಆದ್ದರಿಂದ ದನಗಳನ್ನು ಮಾರುವುದಕ್ಕಾಗಿ ಅಥವಾ ಕೊಂಡು ಬೇರೆಯವರಿಗೆ ದನಗಳನ್ನು ಖರೀದಿಗೆ ಕೊಂಡು ಕೊಳ್ಳುವುದಕ್ಕಾಗಿ ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಇವರಲ್ಲಿ ಶ್ರೀಮಂತ ಅಥವಾ ದೊಡ್ಡ ವ್ಯಾಪಾರಸ್ಥರು ಏನು ಕಂಡು ಬರುವುದಿಲ್ಲ. ಏಕೆಂದರೆ ಅವರು ಬಹಳ ಹಿಂದುಳಿದಿರುವಿಕೆಯಿಂದ ಅಥವಾ ಅನಕ್ಷರತೆ ಇದ್ದರು ಇಂದು ನಗರಗಳಲ್ಲಿ ವ್ಯವಹರಿಸುವ ಜ್ಞಾನ ಕೌಶಲ್ಯ ಚಾಣಕ್ಷತನ ಈ ಸಮುದಾಯದ ಜನಗಳಿಗೆ ಇತ್ತೀಚಿಗೆ ತಿಳುವಳಿಕೆ ಬಂದಿದೆ ಎನ್ನಬಹುದು.

ಆದರೆ ಇತ್ತೀಚಿಗೆ ಕಾಡುಗೊಲ್ಲರು ವಿದ್ಯಾವಂತರಾಗಿರುವುದರಿಂದ ಅವರಲ್ಲಿಯೂ ಇಂದು ಉದ್ಯೋಗವನ್ನು ಮಾಡುವವರು ಹೆಚ್ಚಾಗಿರುವುದರಿಂದ ತಾವು ಬೆಳೆದ ಆಹಾರ ಪದಾರ್ಥಗಳನ್ನು ಮತ್ತು ಧಾನ್ಯಗಳನ್ನು ಜೊತೆಗೆ ವಾಣಿಜ್ಯ ಬೆಳೆಗಳನ್ನು ಪಕ್ಕದ ಪಟ್ಟಣಕ್ಕೆ ಅಥವಾ ನಗರ ಪ್ರದೇಶಗಳ ಕೃಷಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಉತ್ತಮ ಬೆಲೆಗೆ ಮಾರಾಟ ಮಾಡುತ್ತಾರೆ. ಆದರೆ ಇತ್ತೀಚಿಗೆ ನಗರ ಪ್ರದೇಶಗಳಲ್ಲಿ ಬಾಡಿಗೆಗೆ ಮಳಿಗೆಯನ್ನು ತೆಗೆದುಕೊಂಡು ತರಕಾರಿ ಅಂಗಡಿಗಳನ್ನು ಜೊತೆಗೆ ಹಣ್ಣಿನ ಅಂಗಡಿಯನ್ನು ಇಟ್ಟುಕೊಂಡಿರುವುದನ್ನು ನಾವು ಕಾಣಬಹುದು. ಜೊತೆಗೆ ನಗರಪ್ರದೇಶಗಳಲ್ಲಿ ಕಿರಾಣಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದನ್ನು ನಾವು ಗಮನಿಸಬಹುದು. ಇಂದು ಬಟ್ಟೆ ಅಂಗಡಿ ಹೋಟೆಲ್‌ಗಳು ಬೇಕರಿಗಳು ಮುಂತಾದವುಗಳ ಮೂಲಕ ವ್ಯಾಪಾರ ಮಾಡುತ್ತಿರುವುದು ಕಂಡುಬರುತ್ತಿದೆ. ಇದರ ಜೊತೆಗೆ ಕಾಡುಗೊಲ್ಲರ ಹಟ್ಟಿಗಳ ಪ್ರದೇಶಗಳಲ್ಲಿ ರೈತರು ಬೆಳೆದಿರುವ ತೆಂಗಿನಕಾಯಿ, ಅಡಿಕೆ, ಮಾವಿನ ಹಣ್ಣು, ಭತ್ತ ಮುಂತಾದ ವ್ಯಾಪಾರಗಳಲ್ಲಿ ಇಂದು ಸ್ವಲ್ಪಮಟ್ಟಿಗೆ ತೊಡಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಿಂದ ಕಾಡುಗೊಲ್ಲ ಸಮುದಾಯದವರು ತಮ್ಮ ವೃತ್ತಿಪರ ಜೊತೆಗೆ ಇತರೆ ವ್ಯಾಪಾರಗಳನ್ನು ಮಾಡುತ್ತಿರುವುದನ್ನು ಈ ಮೂಲಕ ಗಮನಿಸಬಹುದು.

ಕಾಡುಗೊಲ್ಲರು ಇಂದು ಹಲವಾರು ಕಸುಬುಗಳನ್ನು ಮಾಡುತ್ತಿರುವುದು ಗಮನಿಸಬಹುದು. ವ್ಯಾಪಾರ ತರಕಾರಿ ಬೆಳೆಯುವುದು ಯಂತ್ರಗಳ ಚಾಲಕರು ವಾಹನಗಳ ಚಾಲಕರಾಗಿ ಕೆಲಸಗಳನ್ನು ನಿರ್ವಹಿಸುವುದರ ಮೂಲಕ ಆರ್ಥಿಕತೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

೪.೪ ಬಡತನ:

'ಬಡತನವು ಭಾರತದಲ್ಲಿ ಮತ್ತು ಈಡೀ ಜಗತ್ತಿನ ಇತರ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ತುಂಬಾ ಗಮನಾರ್ಹ ಸಾಮಾಜಿಕ ಸಮಸ್ಯೆಯಾಗಿರುವುದು. ಇಂದು ಕೆಲವೇ ಕೆಲವು ರಾಷ್ಟ್ರಗಳನ್ನು ಬಿಟ್ಟರೆ ಜಗತ್ತಿನಲ್ಲಿ ಬಡತನದಿಂದ ಬಳಲುತ್ತಿರುವ ರಾಷ್ಟ್ರಗಳೇ ಅಧಿಕವಾಗಿವೆ. ಹಿಂದುಳಿದ ಹಾಗೂ ಅಭಿವೃದ್ಧಿ ಶೀಲ ರಾಷ್ಟಗಳಲ್ಲಿ ಬಡತನದ ಪರಿಚಯವಿರುವ ವ್ಯಕ್ತಿಗಳು ಹಾಗೂ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿರುವುದೇ ಹೊರತು ಶ್ರೀಮಂತಿಕೆಯ ಪರಿಚಯವಿರುವುದಿಲ್ಲ. ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಅದರಲ್ಲಿಯೂ ಭಾರತದಲ್ಲಿ ಬಡತನ ಅತ್ಯಗತ್ಯವಾದುದಾಗಿದೆ. ಒಂದು ರಾಷ್ಟ್ರದಲ್ಲಿ ಬಡವ ಎಂದು ಪರಿಗಣಿಸಲ್ಪಡುವವನು, ಮತ್ತೊಂದು ರಾಷ್ಟ್ರದಲ್ಲಿ ಸುಮಾರು ಶ್ರೀಮಂತ ಎನಿಸಿಕೊಳ್ಳಬಹುದಾದ ಸಾಧ್ಯತೆಯಿದೆ ಯಾವುದೇ ರಾಷ್ಟ್ರದಲ್ಲಿ ಬಡತನವನ್ನು ಇಲ್ಲವೇ ಬಡತನದ ರೇಖೆಯನ್ನು ಆಯಾ ರಾಷ್ಟ್ರದ ಸಂಪ್ರದಾಯಗಳು ಮತ್ತು ಜೀವನ ವಿಧಾನಗಳಿಂದ ನಿರ್ಧರಿಸಬಹುದಾಗಿದೆ. ಬಡತನವು ನಮ್ಮ ಭಾರತದಲ್ಲಿ ವಾರ್ಷಿಕ ಆದಾಯವು ೨೨೦ ರೂ.ಗಳಿಗಿಂತ ಕಡಿಮೆ ಇದ್ದರೆ ಬಡತನ ಇದರಂತೆ ಲೆಕ್ಕಾಚಾರ

ಮಾಡಿದರೆ ನಮ್ಮ ಭಾರತದಲ್ಲಿ ಶೇಕಡಾ, ೩೫ ಮಂದಿ ಜನರು ಬಡತನದ ರೇಖೆಯಿಂದ ಕೆಳಗೆ ಬರುವವರಾಗಿದ್ದಾರೆ. ಇದರಿಂದ ನಮ್ಮ ದೇಶದಲ್ಲಿ, ಬಡತನ ಎಷ್ಟು ಘನಘೋರವಾದ, ಸಮಸ್ಯೆಯಾಗಿದೆ ಎಂದೂ ಮನವರಿಕೆಯಾಗುತ್ತದೆ. ನಮ್ಮ ದೇಶದಲ್ಲಿ ತಲಾ ಆದಾಯ ೬೭ ರೂ ಆದರೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ತಲಾ ಆದಾಯ ೧೨೦೦ ಡಾಲರು, ನಮ್ಮ ದೇಶದ ಒಬ್ಬನ ಆದಾಯದಿಂದ, ಅಮೇರಿಕಾ ಸಂಸ್ಥಾನಗಳಲ್ಲಿ ಅವರು ಸಾಕುತ್ತಿರುವಂತೆ ಒಂದು ನಾಯಿಯನ್ನು ಸಹ ಸಾಕಲು ಸಾಧ್ಯವಾಗುವುದಿಲ್ಲ. ನಮ್ಮಲ್ಲಿ ಬಡತನವೆಂದರೆ, ಬಹಳ ಮಟ್ಟಿಗೆ ಉಣ್ಣಲು ಅನ್ನವಿಲ್ಲದ ಉಡಲು ಬಟ್ಟೆಯಿಲ್ಲದ ಇರಲು ಮನೆಯಿಲ್ಲದ ಶೋಚನೀಯ ಸ್ಥಿತಿ ಆದರೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಂತಹ ರಾಷ್ಟಗಳಲ್ಲಿ ತಿರುಗಾಡಲು, ಕಾರಿಲ್ಲದಿರುವುದು, ಮನೆಯಲ್ಲಿ ದೂರದರ್ಶನ ಇಲ್ಲದಿರುವುದು ಬಡತನ ಎನಿಸುತ್ತದೆ."[೩]

ವ್ಯಾಖ್ಯೆಗಳು:

೧. **'ಜೆ.ಜೆ.ಗೊಡಾರ್ಡ್‌ರವರ ಪ್ರಕಾರ:** "ವ್ಯಕ್ತಿಯು ತನ್ನ ಮತ್ತು ತನ್ನನ್ನು ಅವಲಂಬಿಸಿರುವವರ ಆರೋಗ್ಯ ಹಾಗೂ ಶಕ್ತಿಯನ್ನು ಕಾಪಾಡಿಕೊಳ್ಳಲು ಅಗತ್ಯವಾಗಿರುವ ಪ್ರಮಾಣದ ಪದಾರ್ಥಗಳನ್ನು ಪೂರೈಸಿಕೊಳ್ಳಲು ಆಗದೇ ಹೋದಾಗ ಬಡತನ, ಎನ್ನುತ್ತೇವೆ"

೨. **ಆಡಮ್ ಸ್ಮಿತ್‌ರವರ ಪ್ರಕಾರ:** "ಒಬ್ಬ ಮನುಷ್ಯನು ಬಡವ ಇಲ್ಲವೇ ಶ್ರೀಮಂತ ಎನ್ನುವುದನ್ನು ಅವನು ಜೀವನದಲ್ಲಿ ಪಡೆದು ಅನುಭವಿಸುತ್ತಿರುವ ಅವಶ್ಯಕತೆಗಳು ಸೌಲಭ್ಯಗಳು ಹಾಗೂ ವಿನೋದಕ್ಕೆ ಸಂಬಂಧಿಸಿದ ಪದಾರ್ಥಗಳ ಪ್ರಮಾಣಗಳ ಪ್ರಕಾರ ನಿರ್ಧರಿಸಬಹುದಾಗಿದೆ"[೪]

ಇದೇ ರೀತಿ ಕಾಡುಗೊಲ್ಲರಲ್ಲಿಯೂ ಬಡತನದ ಪ್ರಮಾಣವನ್ನು ನಾವು ದೈನಂದಿನ ಜೀವನದಲ್ಲಿ ನೋಡಬಹುದು. ಏಕೆಂದರೆ ಕಾಡುಗೊಲ್ಲರಿಗೆ ಭೂಮಿ ಕಡಿಮೆಯಿದೆ ಮತ್ತು ಇದ್ದರೂ ಕೂಡ ಫಲವತ್ತತೆಯಿಂದ ಕೂಡಿರುವುದಿಲ್ಲ. ಜೊತೆಗೆ ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಮಳೆಯ ಪ್ರಮಾಣ ಕಡಿಮೆ ಇರುವ ಕಾರಣ ಬಡತನ ಸಮಸ್ಯೆಯಾಗಿ ಪರಿಣಮಿಸಿದೆ. ಉತ್ತಮ ಮಳೆ ಬೆಳೆಯಾದರೂ ಕೂಡ ಇಂದು ಸರಿಯಾದ ಬೆಲೆ ಸಿಗದೆ ಇರುವುದು ಕಂಡುಬರುತ್ತದೆ. ಸಣ್ಣ ಮತ್ತು ಅತೀ ಸಣ್ಣ ರೈತರಾಗಿದ್ದಾರೆ ಜೊತೆಗೆ ಬಹಳ ಜಮೀನು ಇರುವವರು ಈ ಸಮುದಾಯದಲ್ಲಿ ಕಂಡುಬರುವುದಿಲ್ಲ. ಮತ್ತು ಕಾಡುಗೊಲ್ಲರು ಇತ್ತೀಚೆಗೆ ಕೃಷಿ ಕಾರ್ಮಿಕರಾಗಿ ಮತ್ತು ಬೇರೆ ಕಡೆ ಕೂಲಿ ಕೆಲಸಕ್ಕೆ ಹೋಗುವುದರಿಂದ ಇವರು ಆರ್ಥಿಕವಾಗಿ ಹಿಂದುಳಿದಿದ್ದು ಬಡತನವನ್ನು ಎದುರಿಸುತ್ತಿದ್ದಾರೆ.

ಈ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಬಡವರೆ ಹೆಚ್ಚಾಗಿದ್ದು, ಮೂಲಭೂತ ಸೌಕರ್ಯಗಳು ಇಲ್ಲದೇ ಇರುವುದು ಮತ್ತು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವವರು, ವಾಸದ ಮನೆಗಳು ಕೂಡ ಕೆಲವೊಂದು ಉತ್ತಮವಾಗಿಲ್ಲ ಮತ್ತು

ಕೆಲವೊಬ್ಬರಿಗೆ ಮನೆಯೂ ಕೂಡ ಇಲ್ಲ. ಕೆಲವು ಕಾಡುಗೊಲ್ಲರ ಮನೆಯಲ್ಲಿ ವಯಸ್ಸಾದವರು ಇದ್ದು, ಅವರಿಗೆ ಯಾರು ದುಡಿದು ಹಾಕುವವರು ಇಲ್ಲದಂತಹ ಘಟನೆಗಳನ್ನು ಈ ಸಮುದಾಯಗಳಲ್ಲೂ ನೋಡಬಹುದು. ಆದರೆ ಕಾಡುಗೊಲ್ಲರಲ್ಲಿ ಹೆಚ್ಚು ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲಾರದಷ್ಟು ಕಷ್ಟದ ಜೀವನವನ್ನು ಇಂದು ಕಾಡುಗೊಲ್ಲರು ನಡೆಸುತ್ತಿದ್ದಾರೆ.

ಕಾಡುಗೊಲ್ಲರಲ್ಲಿ ಇಂದು ಮಕ್ಕಳನ್ನು ವಿದ್ಯಾವಂತರನ್ನಾಗಿಸದೇ ಇರುವುದಕ್ಕೆ ಬಡತನವೇ ಕಾರಣ ಈ ರೀತಿಯಿಂದ ಎಷ್ಟೋ ಓದುವ ಮಕ್ಕಳು ಶಾಲೆಯನ್ನು ಬಿಡಲು ಹಣವನ್ನು ಕಟ್ಟಲು ಆಗದೇ ಮತ್ತು ಅವರ ಮನೆಯ ಕೆಲಸವನ್ನು ಮಾಡಿಕೊಳ್ಳಲು ಎಷ್ಟೊಂದು ಚಿಕ್ಕಮಕ್ಕಳು ಮದ್ಯದಲ್ಲೇ ಶಾಲೆಯನ್ನು ಬಿಟ್ಟಿರುವುದನ್ನು ಕಾಣುತ್ತೇವೆ. ಕೂಲಿ ಕೆಲಸವನ್ನು ಹಾಗೂ ಹೊಟೇಲ್‌ಗಳಲ್ಲಿ ದುಡಿಯುವುದಕ್ಕೆ ಮತ್ತು ಅಂಗಡಿಯಲ್ಲಿ ದುಡಿಯುವುದಕ್ಕೆ ದೈನಂದಿನ ಜೀವನವನ್ನು ನಡೆಸುವುದಕ್ಕೋಸ್ಕರ ಬಿಡಿಸುವುದುಂಟು, ಆದರೆ ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಬಡತನ ಕಡಿಮೆಯಾಗುತ್ತಿರುವುದು ಕಂಡುಬರುತ್ತಿದೆ. ಇತ್ತೀಚಿಗೆ ವಿದ್ಯಾವಂತ ನಿರುದ್ಯೋಗಿಗಳು ನಗರಪ್ರದೇಶಗಳತ್ತ ಮುಖಮಾಡಿ ಬೇರೆ ಬೇರೆ ಕೈಗಾರಿಕೆಗಳಲ್ಲಿ ಶಾಪಿಂಗ್‌ಗಳಲ್ಲಿ ಮತ್ತು ವಿವಿಧ ಕಂಪನಿಗಳಲ್ಲಿ ದುಡಿಯುತ್ತಿರುವುದನ್ನು ಕಾಣುತ್ತೇವೆ. ಇದರಿಂದ ಹಣವನ್ನು ಸಂಗ್ರಹಿಸಿ ಜೀವನ ನಡೆಸುತ್ತಿದ್ದಾರೆ. ಜೊತೆಗೆ ಕಾಡುಗೊಲ್ಲರು ಅವರು ಹಳ್ಳಿಗಳಲ್ಲಿ ಮೈಮುರಿದು ದುಡಿದರು ಸಿಗುವ ಪ್ರತಿಫಲ ಕಡಿಮೆ "ಹೇಳುವವನಿಗೆ ಏಳು ಹಣ; ಮಾಡುವವನಿಗೆ ಮೂರು ಹಣ" ಎಂಬ ನಾಣ್ಣುಡಿ ಇದೆ, ಅನಕ್ಷರಸ್ಥನ ಆದಾಯವು, ಅಕ್ಷರಸ್ಥನ ಆದಾಯಕ್ಕಿಂತ ಕಡಿಮೆಯಿರಬಹುದಾದ ಸಾಧ್ಯತೆಯಿರುವುದರಿಂದ ಅನಕ್ಷರತೆಯು ವ್ಯಕ್ತಿಯನ್ನು ಬಡತನಕ್ಕೆ ದೂಡಲು ಒಂದು ಪ್ರಮುಖ ಕಾರಣವಾಗಿದೆ.

ನಿರುದ್ಯೋಗದ ಸಮಸ್ಯೆ:

ಕಾಡುಗೊಲ್ಲರಲ್ಲಿಯೂ ಬೆರಳಣಿಕೆಯಷ್ಟು ಜನರು ಶಿಕ್ಷಣ ಪಡೆದರು, ಅವರಿಗೆ ಉದ್ಯೋಗಗಳು ದೊರೆಯುತ್ತಿಲ್ಲ. ಕಾರಣ ಅವರನ್ನು ಸಂವಿಧಾನದಲ್ಲಿ ಹಿಂದುಳಿದ ವರ್ಗಗಳ ಗುಂಪಿನಲ್ಲಿ ಸೇರಿಸಿರುವುದರಿಂದ ಇದರ ಜೊತೆಗೆ ಇವರು ಬುಡಕಟ್ಟುಗಳ ಇತರೆ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರು ಕೂಡ ಪರಿಶಿಷ್ಟ ಪಂಗಡ ಎಂದು ಪರಿಗಣಿಸದೆ ಇರುವುದರಿಂದ ಮೇಲ್ವರ್ಗದವರೊಂದಿಗೆ ಸ್ಪರ್ಧಿಸಲಾಗದೆ ವಿದ್ಯಾವಂತರಾದವರಿಗೆ ಕೆಲಸ ಸಿಗುತ್ತಿಲ್ಲ. ಇನ್ನು ವಿದ್ಯಾವಂತರನ್ನು ಕೇಳುವವರು ಯಾರು? ಇದರಿಂದಾಗಿ ಇವರುಗಳು ನೌಕರಿಯನ್ನು ಪಡೆಯುವಲ್ಲಿ ಹಿಂದುಳಿದಿದ್ದಾರೆ.

ಅನಕ್ಷರತೆ:

ಬಡತನ ಮತ್ತು ಅನಕ್ಷರತೆಗಳು ಒಂದಕ್ಕೊಂದು ಪರಸ್ಪರ ನಿಕಟ ಸಂಬಂಧವುಳ್ಳವಾಗಿವೆ, ಇತ್ತೀಚೆಗೆ ಕಾಡುಗೊಲ್ಲರಿಗೆ ಅನಕ್ಷರತೆಯ ಸಮಸ್ಯೆಯು ಕಾಡುತ್ತಿರುವುದನ್ನು ಗಮನಿಸಬಹುದು. ಕಾರಣ ಅವರಲ್ಲಿ ಅಜ್ಞಾನ, ಅಂಧಕಾರ, ಮೂಢನಂಬಿಕೆ, ಸಂಪ್ರದಾಯ ಮತ್ತು ಮಡಿಮೈಲಿಗೆಯನ್ನು ಆಚರಿಸುವುದರಿಂದ ಶಿಕ್ಷಣದ ಬಗ್ಗೆ ಅರಿವು ಕಡಿಮೆ ಇರುವುದರಿಂದ ಪಶುಪಾಲನೆಯ ವೃತ್ತಿಯ ಜೊತೆಗೆ ಕೃಷಿಯಲ್ಲಿ ತೊಡಗಿರುವುದರಿಂದ ಊರುಗಳಿಂದ ಹಟ್ಟಿಗಳು ದೂರವಿರುವುದರಿಂದ ದಿನ ಪತ್ರಿಕೆಗಳು ತಲುಪದೇ ಇರುವುದರಿಂದ ಅವರಲ್ಲಿ ಅಕ್ಷರ ಜಾಗೃತಿ ಮೂಡದೆ ಅನಕ್ಷರತೆ ಕಾಡುತ್ತಿದೆ.

ಬಡತನದ ಕಾರಣದಿಂದಾಗಿಯೇ ಅನಕ್ಷರಸ್ಥರಾಗಿಯೇ ಉಳಿದಿರಬಹುದಾದ ಸಂಭವವಿದೆ. ಆದ್ದರಿಂದ ಬಡತನ ಮತ್ತು ಅನಕ್ಷರತೆಗಳು ಜನರ ಕಷ್ಟಕಾರ್ಪಣ್ಯಗಳನ್ನು ಅಧಿಕಗೊಳಿಸಲು ಜೊತೆಗೂಡಿ ನೆರವಾಗುತ್ತವೆ. ಇದರಿಂದ ಹಿಂದಿನ ಕಾಲದಲ್ಲಿ ಕಾಡುಗೊಲ್ಲರಲ್ಲಿ ಬಹಳ ಅನಕ್ಷರಸ್ಥರು ಕಂಡುಬರುತ್ತಿದ್ದರು. ಏಕೆಂದರೆ ಇವರು ಮೂಲತಃ ಕಾಡುಗಳಲ್ಲಿ ಪಶುಪಾಲನೆಯನ್ನು ನಡೆಸಿಕೊಂಡು ಹೋಗುವುದರಿಂದ ಇವರು ಹೆಚ್ಚಿನ ವಿದ್ಯಾಭ್ಯಾಸದ ಕಡೆಗೆ ಗಮನಕೊಡದೆ ಇರುವುದರಿಂದ ಮತ್ತು ಕಾಡುಗಳಲ್ಲಿ ಅವರ ದನಗಳನ್ನು ಕಾಯುವುದಕ್ಕೆ ಹೋಗುವುದರಿಂದ ಅನಕ್ಷರತೆಯು ಬಹಳ ಇತ್ತು ಎಂದೂ ಹೇಳಬಹುದು.

ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ:

'ಶಿಕ್ಷಣವು ಮಾನವನಿಗೆ ಅಗತ್ಯವಾದುದು ಶಿಕ್ಷಣವು ಇಲ್ಲದಿದ್ದರೆ ಅವನೊಬ್ಬ ಅನಾಗರೀಕನಾಗುತ್ತಾನೆ, ಮಾನವ ನಿಜ ಮಾನವನಾಗಬೇಕಾದರೆ, ಶಿಕ್ಷಣ ಅತ್ಯಗತ್ಯ ಶಿಕ್ಷಣ ಯಾವುದೇ ವ್ಯಕ್ತಿಯನ್ನು ಸಾಮಾಜಿಕ ಜೀವಿಯಾಗಿ ರೂಪಿಸುತ್ತದೆ. ಜೊತೆಗೆ ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಒಂದು ಪ್ರಮುಖ ಸಾಧನೆಯಾಗಿದೆ. ಸಮಾಜದಲ್ಲಿ ಶಿಕ್ಷಣ ಇಲ್ಲವಾದರೆ ಜನರು ಹಿಂದುಳಿಯುತ್ತಾರೆ. ಎಲ್ಲಾ ಸಮುದಾಯದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವನ್ನು ಅವಲಂಬಿಸಿದೆ ಶಿಕ್ಷಣ ವ್ಯಕ್ತಿಯ ಮತ್ತು ಸಮಾಜದ ಸಾಮಾಜಿಕ ಮತ್ತು ರಾಜಕೀಯದಲ್ಲಿ ಹಿಂದುಳಿದಿರುವಿಕೆಗೆ ಶಿಕ್ಷಣದ ಕೊರತೆಯೇ ಕಾರಣ ಮತ್ತು ಸಾಮಾಜಿಕ ಮುಖ್ಯ ವಾಹಿನಿಗೆ ಬರಬೇಕೆಂದರೆ ಶಿಕ್ಷಣ ಮುಖ್ಯವಾದುದು.'[೫]

ಅಲೆಮಾರಿ ಕಾಡುಗೊಲ್ಲರ ಸಮುದಾಯದವರು ಹಿಂದಿನ ಕಾಲದಲ್ಲಿ ಗುಡ್ಡಕಾಡು ಬೆಟ್ಟ ಪ್ರದೇಶಗಳಲ್ಲಿ ವಾಸವಾಗಿರುವುದರಿಂದ ಅವರು ಮೂಲತಃ ಪಶುಪಾಲಕರಾಗಿರುವುದರಿಂದ ದನಗಳನ್ನು, ಕುರಿಗಳನ್ನು, ಹಸುಗಳನ್ನು ಹೊಡೆದುಕೊಂಡು ಕಾಡಿನಲ್ಲಿ ಜೀವನ ನಡೆಸುವುದರಿಂದ ಅವರ ಮಕ್ಕಳನ್ನು ಶಿಕ್ಷಣಕ್ಕೆ ಕಳುಹಿಸಲು ಆಗುತ್ತಿರಲಿಲ್ಲ. ಏಕೆಂದರೆ ಅವರು ಊರುಗಳಿಂದ ಸುಮಾರು ೨. ಅಥವಾ ೩.ಕೀ.ಮೀ. ದೂರವಿರುವ ನಿರ್ಜನ ಪ್ರದೇಶಗಳಲ್ಲಿ ಹಟ್ಟಿಗಳನ್ನು

ಕಟ್ಟಿಕೊಂಡು ವಾಸವಾಗಿರುವುದರಿಂದ ಮತ್ತು ಅವರನ್ನು ಶಾಲೆಗೆ ಶಿಕ್ಷಣ ಕಲಿಯುವುದಕ್ಕೆ ಕಳುಹಿಸುತ್ತಿರಲಿಲ್ಲ. ಏಕೆಂದರೆ ಸಾರಿಗೆ ವ್ಯವಸ್ಥೆ ಮತ್ತು ದೂರದ ಪ್ರದೇಶಗಳಲ್ಲಿ ಶಾಲೆಗಳು ಇರುವುದರಿಂದ ಮತ್ತು ಬಡತನವಿರುವುದರಿಂದ ಜೊತೆಗೆ ಅನಕ್ಷರತೆಯೂ ಕೂಡ ಕಾರಣ ಇದರ ಜೊತೆಗೆ ಅವರ ಸಂಪ್ರದಾಯಗಳು ಆಚರಣೆಗಳು ಮೇಲೆ ನಂಬಿಕೆ ಇರುವುದರಿಂದ ಸ್ವಲ್ಪಮಟ್ಟಿಗೆ ಯುವಕರು ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಇನ್ನೂ ಹೆಣ್ಣು ಮಕ್ಕಳು ಶಾಲೆಯ ಮುಖವನ್ನೇ ನೋಡದೇ ಇರುವುದು ಕಂಡುಬರುತ್ತದೆ. ಏಕೆಂದರೆ ಹೆಣ್ಣು ಮಕ್ಕಳು ಋತುಮತಿಯಾದಾಗ ಅಥವಾ ತಿಂಗಳಿಗೆ ಒಮ್ಮೆ ೩ ದಿವಸ ಹೆಣ್ಣು ಮಕ್ಕಳಿಗೆ ಮುಟ್ಟಾದಾಗ ಶಾಲೆಗೆ ಹೋಗಲೂ ಸಾಧ್ಯವಾಗುವುದಿಲ್ಲ, ಜೊತೆಗೆ ತಂದೆ ತಾಯಿಯರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಏಕೆಂದರೆ ಕುರಿ ಮತ್ತು ದನಗಳನ್ನು ಕಾಯಲು ಅವುಗಳಿಗೆ ಮೇವು ನೀರು ತರಲು ಮನೆಯಲ್ಲಿ ಇರುವ ಎಲ್ಲಾ ಸದಸ್ಯರು ಕೂಡ ಬೇಕಾಗಿರುವುದರಿಂದ ಶಾಲೆಗೆ ಯಾರನ್ನು ಕೂಡ ಕಳುಹಿಸುತ್ತಿರಲಿಲ್ಲ.

ಏಕೆಂದರೆ. ಈ ಸಮುದಾಯದ ಹಿರಿಯರು ಹೇಳುವ ಪ್ರಕಾರ ನಾವು ಮಕ್ಕಳನ್ನು ಹಣ ಕೊಟ್ಟು ಓದಿಸಿದರೆ ಅವರು ಓದಿವಿದ್ಯಾವಂತರಾಗಿ ಹಳ್ಳಿಯನ್ನು ಬಿಟ್ಟು ಮತ್ತು ವಯಸ್ಸಾದ ತಂದೆ ತಾಯಿಗಳನ್ನು ಬಿಟ್ಟು ಹೋದರೆ ಅವರ ಪಾಡೇನು? ಮತ್ತು ಕುಟುಂಬದ ಆಸ್ತಿಯನ್ನು ಯಾರು ನೋಡುವುದು ಎಂದಿದ್ದಾರೆ. ಆದ್ದರಿಂದ ಅವರು ಶಿಕ್ಷಣವನ್ನು ಜವಾಬ್ದಾರಿಯಾಗಿ ಕಲಿಯಲು ಕಳುಹಿಸುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕಾಡುಗೊಲ್ಲರು ಕೂಡ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿರುವುದು ಕಂಡುಬರುತ್ತದೆ. ಏಕೆಂದರೆ ಇವತ್ತು ಸರ್ಕಾರವು ಕೂಡ ಶಾಲೆಯ ಮಕ್ಕಳಿಗೆ ಉಚಿತವಾಗಿ ಅಂದರೆ ಹಣಕೊಡದೇ ೬ ರಿದ ೧೪ ವಯಸ್ಸಿನ ಎಲ್ಲಾ ಸಮುದಾಯ ಮಕ್ಕಳಿಗೂ ಕೂಡ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸರ್ಕಾರಗಳು ನೀಡುತ್ತಿವೆ. ಆದ್ದರಿಂದ ಇವತ್ತು ಶಾಲೆಗಳು ಕೂಡ ಹತ್ತಿರವಿದ್ದು ಅವುಗಳಿಗೆ ಸಾರಿಗೆ ವ್ಯವಸ್ಥೆ ಇರುವುದರಿಂದ ಜೊತೆಗೆ ಉಚಿತ ಬೈಸಿಕಲ್ ಯೋಜನೆ ಮತ್ತು ಮಧ್ಯಾಹ್ನದ ಬಿಸಿಯೂಟ ಯೋಜನೆ ಮತ್ತು ಉಚಿತ ಪಠ್ಯ ಪುಸ್ತಕಗಳ ಯೋಜನೆ ಸಮವಸ್ತ್ರ ಯೋಜನೆ ಅಥವಾ ಎಲ್ಲಿ ವಲಸೆ ಹೋಗಿರುತ್ತಾರೆಯೇ ಅಲ್ಲಿ ಶಾಲೆಯನ್ನು ಅಂದರೆ ಸಂಚಾರಿ ಶಾಲೆಯನ್ನು ತೆರೆಯಬೇಕು. ಜೊತೆಗೆ ಆರ್ಥಿಕವಾಗಿ ಹಣ ಇಲ್ಲದಿದ್ದರೂ ಅಥವಾ ಹಿಂದುಳಿದಿದ್ದವರಿಗೆ ವಿದ್ಯಾಸಿರಿ, ಮತ್ತು ಶಿಷ್ಯವೇತನವನ್ನು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಉಚಿತ ವಸತಿ ನಿಲಯಗಳನ್ನು ಸರ್ಕಾರ ಶಿಕ್ಷಣವನ್ನು ಕಲಿಯುವ ಮಕ್ಕಳಿಗೆ ಉಚಿತವಾಗಿ ಒದಗಿಸುತ್ತಿದೆ. ಆದ್ದರಿಂದ ಕಾಡುಗೊಲ್ಲರು ಹಿಂದುಳಿದರೂ ಕೂಡ ಮಕ್ಕಳನ್ನು ಶಾಲೆಗೆ ಪ್ರೌಢಶಾಲೆ ಮತ್ತು ಪದವಿ ಹಂತದವರೆಗೆ ಜೊತೆಗೆ ಇನ್ನೂ ಉನ್ನತ ಶಿಕ್ಷಣಕ್ಕೆ ಕೂಡ ತಮ್ಮ ಮಕ್ಕಳನ್ನು ಕಳುಹಿಸುತ್ತಿರುವುದು ಕಂಡುಬರುತ್ತಿದೆ.

ಇಂದು ಡಾಕ್ಟರ್ ಇಂಜಿನೀಯರ್ ಪ್ರೋಫೆಸರ್ ಲಾಯರ್ ಪೋಲಿಸ್ ಇನ್‌ಸ್ಪೆಕ್ಟರ್ ಮುಂತಾದ ಹುದ್ದೆಗಳಲ್ಲಿ ಮುಂದುವರೆಯುತ್ತಿದ್ದಾರೆ. ಜೊತೆಗೆ ವಿದ್ಯಾಭ್ಯಾಸಕ್ಕಾಗಿ ಮೀಸಲಾತಿಯನ್ನು ನೀಡಿರುವುದು ಮತ್ತು ವಿದೇಶಗಳಿಗೆ ಹೋಗಿ ಓದಲು ಸಾಲ ಸೌಲಭ್ಯವನ್ನು ಕೊಡುತ್ತಿರುವುದರಿಂದ ಆಧುನಿಕ ದಿನಗಳಲ್ಲಿ ಕಾಡುಗೊಲ್ಲರು ಕೂಡ ಶಿಕ್ಷಣದಿಂದ ವಿದ್ಯಾಭ್ಯಾಸವನ್ನು ಕಲಿತು ಸಮಾಜದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಮುಂದುವರಿಯುತ್ತಿರುವುದನ್ನು ನಾವು ಕಾಣಬಹುದು. ಇಂದು ಮಹಿಳೆಯರು ಕೂಡ ಶಿಕ್ಷಣವನ್ನು ಕಲಿತು ಎಲ್ಲಾ ಕ್ಷೇತ್ರಗಳಲ್ಲಿಯೂ ಇರುವುದನ್ನು ಕಾಣಬಹುದು. ಈ ರೀತಿಯಲ್ಲಿ ಕಾಡುಗೊಲ್ಲರು ಸಾಮಾಜಿಕ ಬದಲಾವಣೆಯಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕಾಡುಗೊಲ್ಲರಲ್ಲಿನ ಯುವಕ ಯುವತಿಯರು ವಿದ್ಯಾಭ್ಯಾಸವನ್ನು ಕಲಿತು ಅನೇಕ ಸರ್ಕಾರಿ ಉದ್ಯೋಗಗಳಲ್ಲಿ ಅಥವಾ ನೌಕರಿಯಲ್ಲಿರುವುದನ್ನು ಕಾಣುತ್ತೇವೆ ಮತ್ತು ಕಛೇರಿಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಇರುವ ಖಾಸಗಿ ಕಂಪನಿಗಳಲ್ಲಿ ಇಂದು ದುಡಿಯುವುದರಿಂದ ಅನಕ್ಷರತೆಯನ್ನು ಇತ್ತೀಚೆಗೆ ಹೋಗಲಾಡಿಸಿದ್ದಾರೆ. ಇದರಿಂದ ಕಾಡುಗೊಲ್ಲರೂ ಆರ್ಥಿಕ ಬದಲಾವಣೆಯಾಗಿದ್ದಾರೆ.

೪.೫ ಆಧುನಿಕ ಕಸುಬುಗಳು:

ಇಂದಿನ ಆಧುನಿಕ ಸಮಾಜದಲ್ಲಿ ಅಲೆಮಾರಿ ಸಮುದಾಯಗಳಾದ ಕಾಡುಗೊಲ್ಲರು ಕೂಡ ಇವತ್ತಿನ ದಿನಗಳಲ್ಲಿ ಶಿಕ್ಷಣದ ಮತ್ತು ಉದ್ಯೋಗದ ಕಡೆಗೆ ಹೆಚ್ಚು ಒತ್ತು ಕೊಡುತ್ತಿರುವುದನ್ನು ಕಾಣುತ್ತೇವೆ. ಅಂದರೆ ಕಾಡುಗೊಲ್ಲರಲ್ಲಿಯೂ ಇತ್ತೀಚೆಗೆ ಯುವಕ ಯುವತಿಯರು ಕೈಗಾರಿಕೀಕರಣ ಮತ್ತು ನಗರೀಕರಣದಿಂದ ಸಮುದಾಯದ ವಿದ್ಯಾರ್ಥಿಗಳು ಇಂದು ನಗರ ಮತ್ತು ಪಟ್ಟಣ ಪ್ರದೇಶಗಳ ಕಡೆ ವಲಸೆ ಬಂದು ಉನ್ನತ ಕಾಲೇಜುಗಳಲ್ಲಿ ಶಿಕ್ಷಣವನ್ನು ಪೂರೈಸುತ್ತಾ ನಗರಗಳಲ್ಲಿ ಒಂದು ಕಡೆನೆಲೆ ನಿಲ್ಲುವ ಉದ್ದೇಶದಿಂದ ಇಂದು ಸರ್ಕಾರಿ ನೌಕರರಿಗಾಗಿ ಬಹಳ ಹೋರಾಟವನ್ನು ಮಾಡುತ್ತಾ ಪ್ರಯತ್ನಿಸುತ್ತಿದ್ದಾರೆ.

ಇಂದು ವಿದ್ಯಾವಂತ ಕಾಡುಗೊಲ್ಲರು ಯುವಕ ಯುವತಿಯರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅಥವಾ ಕಛೇರಿಗಳಲ್ಲಿ ಅಂದರೆ ಟೀಚರ್ ಇಂಜಿನೀಯರ್ ಲಾಯರ್ ಪೋಲಿಸ್ ಉಪನ್ಯಾಸಕರ ಹುದ್ದೆಗಳನ್ನು ಗಳಿಸಿಕೊಂಡು ಜೀವನವನ್ನು ನಿರ್ವಹಿಸುತ್ತಿದ್ದಾರೆ. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿಯೂ ನನ್ನ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ಗೊಲ್ಲರಹಟ್ಟಿಯಲ್ಲಿ ಅನೇಕರು ವಿದ್ಯಾವಂತರಾಗಿ ಸರ್ಕಾರಿ ನೌಕರಿಯನ್ನು ಬಯಸದೇ ಬೇರೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗವನ್ನು ಮಾಡುತ್ತಿರುವುದು ಕಂಡುಬರುತ್ತದೆ. ಜೊತೆಗೆ ಇನ್ನು ವಿವಿಧ ಹುದ್ದೆಗಳನ್ನು ಹೊಂದಿರುವವರು ಕಂಡುಬರುತ್ತಾರೆ. ಅಂದರೆ ರಾಜ್ಯದ ಅನೇಕ ತಾಲ್ಲೂಕು ಕಛೇರಿಗಳಲ್ಲಿ ತಹಶೀಲ್ದಾರ ಹುದ್ದೆ ಮತ್ತು ಶಿರಸ್ತೇದಾರ, ರಾಜಸ್ವ ನಿರೀಕ್ಷಕರು ದ್ವಿತೀಯ ದರ್ಜೆಯ ಸಹಾಯಕರು ಕಂಡುಬರುತ್ತಾರೆ. ಕಾಡುಗೊಲ್ಲರನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರ ಹಿಂದುಳಿದ ವರ್ಗಗಳ ಮೀಸಲಾತಿ ಪ್ರವರ್ಗ-೧ ರಲ್ಲಿ ಸೇರಿಸಿರುವುದರಿಂದ ಇವರಿಗೆ ಇಂದು ಉದ್ಯೋಗಗಳು ಸಿಗುತ್ತಿವೆ ಎಂದು ಹೇಳಬಹುದು. ಆದರೆ ನಗರ ಪ್ರದೇಶಗಳಲ್ಲಿ ಇರುವ ವಿದ್ಯಾವಂತರು

ಹುಟ್ಟಿನಿಂದ ಕಾನ್ವೆಂಟಿನಲ್ಲಿ ಇಂಗ್ಲೀಷ್ ಮೀಡಿಯಂ ಹಾಗೂ ಖಾಸಗಿ ಶಾಲೆಗಳಲ್ಲಿ ಸಿಜಿಸಿಎಸ್ ಸಿಲಬಸ್ ಓದಿರುತ್ತಾರೆ. ಆದ್ದರಿಂದ ಇವರು ಬಹಳ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ನೌಕರಿಯನ್ನು ಗಳಿಸಿಕೊಳ್ಳುತ್ತಾರೆ. ಜೊತೆಗೆ ಇಂದು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಕಾಡುಗೊಲ್ಲರು ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮೀಡಿಯಂ ಪಾಠವನ್ನು ಕಲಿತವರು ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿರುವುದು ಕಂಡುಬರುತ್ತದೆ. ಆದರೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗಗಳನ್ನು ಅರಿಸಿಕೊಂಡು ಹೋದವರಿಗೆ ಇಂಗ್ಲೀಷ್ ಮಾತನಾಡುವ ಸಮಸ್ಯೆ ಕಂಡುಬರುತ್ತದೆ. ಇದರಿಂದ ಉದ್ಯೋಗ ಸಿಗದೇ ಇರಬಹುದು. ಇತ್ತೀಚೆಗೆ ಹಳ್ಳಿಗಳಲ್ಲಿಯ ಸರ್ಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಮೀಡಿಯಂ ಕಲಿಸುತ್ತಿದ್ದಾರೆ. ಈ ರೀತಿಯಾಗಿ ಬದಲಾವಣೆಯಾಗುತ್ತಿದ್ದಾರೆ.

ಕಾಡುಗೊಲ್ಲರು ಅವರ ಹಿಂದಿನ ಮೂಲ ವೃತ್ತಿಯನ್ನು ಅಂದರೆ ಪಶುಪಾಲನೆ ಕುರಿಸಾಕಾಣಿಕೆ ವ್ಯವಸಾಯ ಮುಂತಾದವುಗಳು ಲಾಭದಾಯಕವಾಗಿರಲಿ ಅಥವಾ ಬಿಡಲಿ ಅವರ ಘನತೆಯ ದೃಷ್ಟಿಯಿಂದ ಇಂದು ಕಾಡುಗೊಲ್ಲರು ಸಮಾಜದ ಮುಖ್ಯವಾಹಿನಿಗೆ ಬರುವ ಮನೋಭಾವನೆಯಿಂದ ಸಾಂಪ್ರದಾಯಿಕ ಅಥವಾ ಜಾತಿ ಆಧಾರಿತ ಕುಲ ಕಸುಬುಗಳನ್ನು ಮುಂದುವರಿಸದೆ, ಇಂದು ಸರ್ಕಾರದ ವಿವಿಧ ಹುದ್ದೆಗಳಿಗೆ ಅನೇಕ ಪ್ರಯತ್ನಗಳನ್ನು ಅಥವಾ ಹೋರಾಟಗಳನ್ನು ನಡೆಸುತ್ತಿದ್ದಾರೆ. ಜೊತೆಗೆ ಸರ್ಕಾರವು ಕೂಡ ಮೀಸಲಾತಿ ನೀತಿಯನ್ನು ಕಾಡುಗೊಲ್ಲರಿಗೆ ಕೊಟ್ಟಿರುವುದರಿಂದ ಈ ಸಮುದಾಯದ ಇಂದಿನ ಯುವಕರು ಅಥವಾ ಯುವತಿಯರು ಸರ್ಕಾರದ ಜೊತೆಗೆ ವಿವಿಧ ಸಂಸ್ಥೆ ಕಛೇರಿಗಳಲ್ಲಿ ಮತ್ತು ಇಲಾಖೆಗಳಲ್ಲಿ ಎ.ಬಿ.ಸಿ. ದರ್ಜೆಯ ಹುದ್ದೆಗಳನ್ನು ಇಂದು ಪಡೆಯುತ್ತಿದ್ದಾರೆ.

'ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಗೊಲ್ಲ ಸಮುದಾಯದ ಪ್ರಾತಿ ನಿಧ್ಯವೆಂದರೆ ೧ನೇ ದರ್ಜೆಯ ಉದ್ಯೋಗಿಗಳು ೧೦.೨ನೇ ದರ್ಜೆಯ ಉದ್ಯೋಗಿಗಳು ೨,೩ನೇ ದರ್ಜೆಯ ಉದ್ಯೋಗಿಗಳು ೩೨ ಒಟ್ಟು ೪೪ ಒಟ್ಟು ಪ್ರಮಾಣದ ಶೇಖಡವಾರು ಉದ್ಯೋಗಿಗಳ ಪ್ರಮಾಣ ೦.೬% ಅಂದರೆ ರಾಜ್ಯದ ಜನಸಂಖ್ಯೆಯಲ್ಲಿ ಗೊಲ್ಲ ಸಮುದಾಯದ ಜನಸಂಖ್ಯೆಯು ಶೇಕಡಾ ೧.೩% ರಷ್ಟು ಜನರು ಉದ್ಯೋಗಿಗಳಾಗಿದ್ದಾರೆ. ಇದು ರಾಜ್ಯದ ಇತರ ಜನಸಂಖ್ಯೆಯ ಜಾತಿವಾರು ಉದ್ಯೋಗಿಗಳ ಸಂಖ್ಯೆಗಿಂತ ಕಡಿಮೆ ಇದೇ ವಾಸ್ತವ ಏನೆಂದರೆ ವಿಶ್ವವಿದ್ಯಾಲಯದ ಮಟ್ಟದಲ್ಲಿ ಅದರಲ್ಲಿಯೂ ಭೋದಕ ಸಿಬ್ಬಂದಿಗಳಲ್ಲಿ ಗೊಲ್ಲ ಸಮುದಾಯದ ಜನರು ಒಬ್ಬರು ಅಥವಾ ಇಬ್ಬರಿದ್ದಾರೆ ಒಟ್ಟಿಗೆ ಈ ಸಮುದಾಯವು ರಾಜ್ಯದಲ್ಲಿ ಹೊಂದಿರುವ ಎ.ಗುಂಪುಗಳ ಹುದ್ದೆಗಳ ಸಂಖ್ಯೆ ಕೇವಲ ೭೨ ಆದರೆ ಎ.ಬಿ.ಮತ್ತು ಸಿ.ಹುದ್ದೆಯ ಸಂಖ್ಯೆ ೨೫೩೫ ಡಿ.ಗುಂಪು ಹುದ್ದೆಗಳ ಸಂಖ್ಯೆ ೫೧೧ ಎ.ಬಿ.ಮತ್ತುಸಿ ಹುದ್ದೆಗಳನ್ನು ಹೊಂದಿರುವ ಜನಾಂಗದ ಮಹಿಳಾ ನೌಕರರ ಸಂಖ್ಯೆ ೨೯೧ ಎಂದು ಕಂಡುಬರುತ್ತದೆ.'[೬]

ಅಡಿ ಟಿಪ್ಪಣಿಗಳು

೧. ಗುರುಲಿಂಗಯ್ಯ ಎಂ, ಕರ್ನಾಟಕದ ಗೊಲ್ಲ ಸಮುದಾಯ(೨೦೦೫) ಪುಟ-೪೭

೨. ತೀ.ನಂ. ಶಂಕರನಾರಾಯಣ "ಕಾಡುಗೊಲ್ಲರು." (೧೯೮೮) ಪುಟ-೨೩ ಮತ್ತು ೨೪

೩. ಭೈರಪ್ಪ. ಕೆ. ಭಾರತೀಯ ಸಾಮಾಜಿಕ ಸಮಸ್ಯೆಗಳು-೧(೨೦೦೮) ಪುಟ-೨೧ ಮತ್ತು ೨೨

೪. ಅದೇ ಪುಟ-೨೩

೫. ಭೈರಪ್ಪ ಕೆ, ಸಮಾಜಶಾಸ್ತ್ರ (೨೦೦೪) ಪುಟ-೨೮

೬ ಗುರುಲಿಂಗಯ್ಯ ಎಂ.ಕರ್ನಾಟಕದ ಗೊಲ್ಲ ಸಮುದಾಯ (೨೦೦೫) ಪುಟ-೫೨

ಅಧ್ಯಾಯ ಐದು

ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬದುಕಿನ ಸ್ಥಿತ್ಯಂತರಗಳು

ಅಧ್ಯಾಯ ಐದು

ಧಾರ್ಮಿಕ ಸಾಂಸ್ಕೃತಿಕ ಮತ್ತು ರಾಜಕೀಯ ಬದುಕಿನ ಸ್ಥಿತ್ಯಂತರಗಳು

ಕರ್ನಾಟಕ ಬಹಳ ವಿಶಾಲವಾದ ಮತ್ತು ಸಂಪದ್ಭರಿತವಾದದ್ದು. ಜಾತಿ, ಧರ್ಮ ಧಾರ್ಮಿಕ ಕೇಂದ್ರಗಳನ್ನು ಹೊಂದಿರುವ ನೆಲೆಬೀಡಾಗಿದೆ. ಧಾರ್ಮಿಕ ನಂಬಿಕೆ, ಸಂಪ್ರದಾಯಗಳು, ಆಚರಣೆಗಳು, ಹಬ್ಬ-ಹರಿದಿನಗಳು, ಪ್ರಕೃತಿ ದೈವಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕಾಡುಗೊಲ್ಲರು ಕೊಡುತ್ತಿದ್ದಾರೆ. ಇವರು ಸದಾಕಾಲ ಕಾಡುಗಳ ಸಮೀಪ ಇರುವುದರಿಂದ ಗಿಡ, ಮರ, ಬಳ್ಳಿ, ಕಲ್ಲು, ಬೆಟ್ಟ, ಗುಡ್ಡ, ಪ್ರಾಣಿ, ಪಕ್ಷಿಗಳ ಆರಾಧಕರಾಗಿದ್ದಾರೆ. ಕಾಡುಗೊಲ್ಲರ ದೈವಗಳಾದ ಜುಂಜಪ್ಪ, ಶ್ರೀಮೈಲೆ ಮಾರಮ್ಮದೇವಿ, ಶ್ರೀ ಕದುರೆನರಸಿಂಹಸ್ವಾಮಿ ಮುಂತಾದವರ ಉತ್ಸವಗಳನ್ನು ಇಂದಿಗೂ ಆಚರಿಸುವುದನ್ನು ಕಾಣಬಹುದು. ಸಮುದಾಯದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲರೂ ಸಂತೋಷದಿಂದ ಭಾಗವಹಿಸುವರು. ಕಾಡುಗೊಲ್ಲರು ರಾಜಕೀಯ ಕ್ಷೇತ್ರದಲ್ಲಿ ಸ್ಪರ್ಧಿಸಿ ಚುನಾವಣೆಯಲ್ಲಿ ಭಾರೀ ಬಹುಮತದೊಂದಿಗೆ ಗೆದ್ದಿರುವ ಪ್ರಸಂಗಗಳು ಕೂಡ ಸಿಗುತ್ತವೆ. ಇತ್ತೀಚಿಗೆ ಕಾಡುಗೊಲ್ಲರು ತಮ್ಮ ಹಟ್ಟಿಯ ದೇವರ ಉತ್ಸವ ಜಾತ್ರೆಗಳು ಬಂದರೆ ಬೇರೆ ಸಮುದಾಯದವರನ್ನು ಜಾತ್ರೆಗಳಿಗೆ ಆಹ್ವಾನಿಸುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಜಾತ್ರೆಗಳನ್ನು ಬಹಳ ವಿಜೃಂಭಣೆಯಿಂದ ಮತ್ತು ಪರಂಪರಾನುಗತವಾದ ಆಚರಣೆಗಳ ಮುಖಾಂತರ ಆಚರಿಸುತ್ತಾರೆ. ಇದರಲ್ಲಿ ಹಟ್ಟಿಯ ಪೂಜಾರಿಗಳ, ಗೌಡರ ಮತ್ತು ಹಿರಿಯರ ಪಾತ್ರ ಬಹಳ ಮುಖ್ಯವಾಗಿರುತ್ತಿತ್ತು. ಜಾತ್ರೆಗಳಲ್ಲಿ ದೇವರ ಆರಾಧನೆಗಾಗಿ ಪೂಜೆಗೆ ಭಕ್ತರು ತಮ್ಮ ಶಕ್ತಿಗೆ ಅನುಗುಣವಾಗಿ ಹಣವನ್ನು ಕಾಣಿಕೆಯ ರೂಪದಲ್ಲಿ ಕೊಡುವ ಪದ್ಧತಿ ಕಂಡು ಬರುತ್ತದೆ.

೫.೧. ಧಾರ್ಮಿಕ ನಂಬಿಕೆಗಳು:

ಕಾಡುಗೊಲ್ಲರು ತಮ್ಮ ಆರಾಧ್ಯ ದೈವ ಮತ್ತು ಸಾಂಸ್ಕೃತಿಕ ನಾಯಕರಾದ ಜುಂಜಪ್ಪ, ಚಿಕ್ಕಣ್ಣ, ತಿಮ್ಮಪ್ಪ, ಮೇಲುಕೋಟೆ ರಂಗನಾಥ, ಶ್ರೀಮೈಲೆಮಾರಮ್ಮ ದೇವಿ, ಶ್ರೀ ಕದುರೆನರಸಿಂಹ ಸ್ವಾಮಿಯ ಮೇಲೆ ಇಟ್ಟಿರುವ ನಂಬಿಕೆ ಮತ್ತು ಆಚರಣೆಗಳನ್ನು ಕಾಣುತ್ತೇವೆ. ಕಾಡುಗೊಲ್ಲರು ಪರಂಪರಾನುಗತವಾಗಿ ಮಡಿಮೈಲಿಗೆ, ಸೂತಕ ಮುಂತಾದ ಆಚರಣೆ ಸಂಪ್ರದಾಯಗಳಲ್ಲಿ ಬಹಳ ಕಟ್ಟು ನಿಟ್ಟಿನ ವ್ಯವಸ್ಥೆಯನ್ನು ಇಟ್ಟುಕೊಂಡಿರುವುದನ್ನು ಕಾಣುತ್ತೇವೆ.

❖ **ಮಾರಮ್ಮನ ಹಬ್ಬ;** ಕಾಡುಗೊಲ್ಲರು ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಮಾರಮ್ಮನ ಹಬ್ಬವನ್ನು ಆಚರಿಸುವರು. ಈ ಹಬ್ಬಕ್ಕೆ ಒಂದು ವಾರ ಮುಂಚಿತವಾಗಿ ಎಲ್ಲರೂ ತಮ್ಮ ತಮ್ಮ ಮನೆಗಳನ್ನು ಸ್ವಚ್ಛಗೊಳಿಸುವರು. ಜೊತೆಗೆ ಮಾರಮ್ಮನ ಮೂರ್ತಿಯನ್ನು ಮಣ್ಣಿನಿಂದ ಮಾಡುವರು. ಊರಿನ ಮಧ್ಯಭಾಗದ ಅಥವಾ ಹೊರಗೆ ಮೂರ್ತಿಯನ್ನು ಪ್ರತಿಷ್ಠಾಪಿಸಿ ಈ ನವ ಶಕ್ತಿದೇವತೆಯಲ್ಲಿ ಮಾರಿ ಅಥವಾ ಮಾರಮ್ಮ ತಾಯಿ ಒಬ್ಬಳು. ಮಕ್ಕಳಿಗೆ ಸಿಡುಬು, ದಡಾರ ಮೊದಲಾದ

ಮಾರಕ ರೋಗಗಳಿಂದ ರಕ್ಷಿಸಿಕೊಳ್ಳಲು ಮಾರಮ್ಮಗೆ ಹರಕೆ ಹೊತ್ತು ಮಾರಮ್ಮನ ಗುಡಿಯ ಹತ್ತಿರ ಬೇವಿನ ಸೀರೆ ಹುಟ್ಟು, ಹಿಟ್ಟಿನಾರತಿ ತಲೆಯ ಮೇಲೆ ಹೊತ್ತು, ದೇವಿಯನ್ನು ಪ್ರದಕ್ಷಿಣೆ ಹಾಕಿಸುತ್ತಾರೆ. ಆನಂತರ ಮಾರಮ್ಮದೇವಿಗೆ ಕುಂಕುಮ ಅರಿಶಿಣ ಹಚ್ಚುವುದು ನಂತರ ಹಣ್ಣು-ಕಾಯಿ ಕೊಟ್ಟು ಆರತಿ ಬೆಳಗುತ್ತಾರೆ. ಭಕ್ತಾದಿಗಳು ಹರಕೆಯನ್ನು ಹೊತ್ತುಕೊಂಡು ಕುರಿಗಳನ್ನು ಬಲಿಕೊಟ್ಟು ಈಡೇರಿಸುವುದನ್ನು ಕಾಣುತ್ತೇವೆ. ಭಕ್ತರು ಕಷ್ಟ ಮತ್ತು ಸುಖದ ವಿಚಾರಕ್ಕೆ ಹರಕೆಗಳನ್ನು ಹೊತ್ತುಕೊಂಡು ಅವು ಈಡೇರಿದರೆ ಮಾರಿಯ ಹಬ್ಬದಲ್ಲಿ ಹಣದ ರೂಪದಲ್ಲಿ ಕಾಣಿಕೆ ಕೊಡುವರು. ಈ ಹಬ್ಬವನ್ನು ಸುಮಾರು ೨ ದಿನಗಳ ಕಾಲ ಸಂತೋಷದಿಂದ ಆಚರಿಸುವರು. ಜೊತೆಗೆ ಈ ಹಬ್ಬಕ್ಕೆ ಅವರ ನೆಂಟರಿಸ್ಟರು ಸಂಬಂಧಿಕರು ದೂರದ ಊರುಗಳಿಂದ ತಮ್ಮ ಹರಕೆಗಳನ್ನು ತೀರಿಸಿಕೊಳ್ಳಲು ಪ್ರತಿವರ್ಷ ಬರುತ್ತಾರೆ. ಅವರಿಗೆ ಹಬ್ಬದ ದಿನ ಮಾಂಸದ ಅಡುಗೆಯ ಊಟವನ್ನು ಮಾಡಿಸಿರುತ್ತಾರೆ. ನೆಂಟರು ಹಬ್ಬದ ಅಡುಗೆಯ ಊಟ ಮಾಡಿ ತಮ್ಮ ಊರುಗಳಿಗೆ ಹೋಗುತ್ತಾರೆ.

❖ **ಕಾಳಘಟ್ಟದ ಮೈಲಮ್ಮನ ಧಾರ್ಮಿಕ ಆಚರಣೆ:** ಈ ಊರಿನಲ್ಲಿ ಮೈಲಮ್ಮ ಮತ್ತು ಕರಿಯಮ್ಮ ದೇವಿಯ ದೇವಸ್ಥಾನಗಳಿವೆ. ಬಹಳ ವರ್ಷಗಳಿಂದ ದೊಡ್ಡಬ್ಬೀಗೆರೆಯ ಮೈಲಮ್ಮ ದೇವಿಯ ಮೂಲಸ್ಥಾನ ಕಾಳಘಟ್ಟ. ಈ ಹಟ್ಟಿಯ ಜನರು ತಮ್ಮ ಮಕ್ಕಳ ಜವುಳ ತೆಗೆಸುವುದಕ್ಕೆ ದೊಡ್ಡಬ್ಬಿಗೇರೆಯಿಂದ ಸುಮಾರು ೮, ೧೦ ಕಿಲೋ ಮೀಟರ್ ದೂರವಿರುವ ಕಾಳಘಟ್ಟಕ್ಕೆ ಬರುತ್ತಾರೆ. ವರ್ಷಕ್ಕೆ ಒಂದು ಸಲ ಈ ದೇವಿಯ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ಸಮಯದಲ್ಲಿ ಹರಕೆ ಹೊತ್ತವರು ತಮ್ಮ ಮಕ್ಕಳ ಜವುಳ ತೆಗೆಸುತ್ತಾರೆ. ಸಂಬಂಧಿಕರು ಬಂಧು-ಬಳಗ ಮತ್ತು ಹಟ್ಟಿಯ ಜನರೊಂದಿಗೆ ಈ ಕ್ಷೇತ್ರಕ್ಕೆ ಬಂದು ತಮ್ಮ ಹರಕೆ ಈಡೇರಿಸಿ ಜವುಳ ತೆಗೆಸುತ್ತಾರೆ. ಕಾಡುಗೊಲ್ಲರಲ್ಲಿಯ ಶ್ರೀಮಂತರು ತಿರುಪತಿ ತಿಮ್ಮಪ್ಪಗೆ ಜವುಳ ಬಿಟ್ಟಿರುತ್ತಾರೆ. ಕೆಲ ಕಾಡುಗೊಲ್ಲರಿಗೆ ತಿಮ್ಮಪ್ಪ ಮನೆ ದೇವರಾಗಿದ್ದಾನೆ. ಕಾಡುಗೊಲ್ಲರು ಹಿಂದಿನ ಕಾಲದಿಂದಲೂ ಹಟ್ಟಿಯೊಳಗೆ ಕೋಳಿ ಮತ್ತು ಹಂದಿಗಳನ್ನು ಯಾರು ಸಹ ಸಾಕುವಂತಿಲ್ಲ. ಅವುಗಳನ್ನು ಸಾಕಿದರೆ ದೇವರಿಗೆ ಸೂತಕ ಹಿಡಿದು ಮೈಲಿಗೆಯಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಜೊತೆಗೆ ಸಹ ಹಟ್ಟಿಯೊಳಗೆ ಮಾದಿಗರನ್ನು ಬಿಟ್ಟುಕೊಳ್ಳುವುದಿಲ್ಲ ಮತ್ತು ಜಾತ್ರೆ ಸಭೆ ಸಮಾರಂಭಗಳು ನಡೆದರೆ ಅವರನ್ನು ಆಹ್ವಾನಿಸುವುದಿಲ್ಲ. ಒಟ್ಟಾರೆಯಾಗಿ ಕಾಡುಗೊಲ್ಲರು ಹುಟ್ಟಿನಿಂದ ಸಾಯುವವರೆಗೆ ಆಚರಿಸುವ ಸಂಪ್ರದಾಯ, ಆಚರಣೆ, ದೈವಗಳ ಪೂಜೆ ಹಬ್ಬ-ಹರಿದಿನ ಮುಂತಾದವುಗಳನ್ನು ಬಹಳ ಕಟ್ಟುನಿಟ್ಟಿನಿಂದ ಆಚರಿಸುತ್ತಾರೆ. ಏಕೆಂದರೆ ಇವರಲ್ಲಿ ಹುಟ್ಟಿದರೂ ಸೂತಕ ಸತ್ತರೂ ಸೂತಕ ಮಡಿಮೈಲಿಗೆಯ ವಿಚಾರದಲ್ಲಿ ಇವರು ಬಹಳ ಅಚ್ಚುಕಟ್ಟಾಗಿ ಆಚರಣೆ ಮಾಡಿಕೊಂಡು ಹೋಗುವುದನ್ನು ಇಂದಿನ ಆಧುನಿಕ ಯುಗದಲ್ಲಿಯೂ ಕಾಣಬಹುದಾಗಿದೆ.

೫.೨. ಜಾತ್ರೆಗಳು :

ಜುಂಜಪ್ಪನ ಜಾತ್ರೆ : ಕಾಡುಗೊಲ್ಲರು ಜಾತ್ರೆ ಎಂಬ ಪದಕ್ಕೆ ಪರ್ಯಾಯವಾಗಿ ಪರಿಸೆ ಎಂಬ ಅಚ್ಚಗನ್ನಡ ಪದವನ್ನು ಬಳಕೆ ಮಾಡುವುದನ್ನು ಗಮನಿಸಬಹುದು. ಜುಂಜಪ್ಪನ ಪರಿಸೆ, ಕ್ಯಾತಪ್ಪನ ಪರಿಸೆ, ಕಾಟುಮಲಿಂಗನ ಪರಿಸೆ, ಚಿತ್ರದೇವರ ಪರಿಸೆ ಎಂಬುದಾಗಿ ಕರೆಯುವುದು ವಾಡಿಕೆಯಾಗಿದೆ. ಕಾಡುಗೊಲ್ಲರ ಜಾತ್ರೆಗಳು ಕಾಡುಗೊಲ್ಲರಿಗೆ ಮಾತ್ರ ಸೀಮಿತವೆಂದು ಹೇಳಬಹುದು. ಏಕೆಂದರೆ ಇತರೆ ಸಮುದಾಯಗಳು ಮಡಿಮೈಲಿಗೆ ಆಚರಿಸುವುದಿಲ್ಲ. ಅವರು ಜಾತ್ರೆಗೆ ಬಂದರೆ ನಮ್ಮ ದೇವರಿಗೆ ಅಂಟುಮುಂಟಾಗುತ್ತದೆ ಎಂಬ ಭಯ ಅವರಲ್ಲಿದೆ. ಹಾಗಾಗಿ ತಮ್ಮದೇ ವ್ಯಾಪ್ತಿಯ ಒಳಗಡೆ ಅನೇಕ ಆಚರಣೆ ಮಾಡುವುದರ ಮೂಲಕ ಜಾತ್ರೆಯನ್ನು ಮಾಡುತ್ತಾರೆ. ಅದರಲ್ಲೂ ಜುಂಜಪ್ಪನ ಜಾತ್ರೆಯು ಬಹಳ ಕಟ್ಟುನಿಟ್ಟಿನಿಂದ ಕೂಡಿರುತ್ತದೆ. ಈ ಜಾತ್ರೆಯಲ್ಲಿ ಬಾಣಂತಿ, ಸ್ತ್ರೀಯರು, ಮಾಸಿಕ ಋತುಮತಿಯಾದವರು ಮತ್ತು ಋತುಮತಿಯಾದವರು ಜಾತ್ರೆಯಲ್ಲಿ ಯಾವುದೇ ಆಚರಣೆಗಳಲ್ಲಿ ಭಾಗವಹಿಸುವಂತಿಲ್ಲ. ಕಾಡುಗೊಲ್ಲರ ಬಹುತೇಕ ಜಾತ್ರೆಗಳು ಮಾಂಸಹಾರವನ್ನು ನಿಷೇಧ ಮಾಡಿವೆ.

ಜಾತ್ರೆಗಳು ಪ್ರತಿಯೊಂದು ಸಮುದಾಯಗಳಲ್ಲಿಯೂ ಕಂಡು ಬರುತ್ತವೆ. ಕಾಡುಗೊಲ್ಲರ ಸಮುದಾಯದಲ್ಲಿ ಜುಂಜಪ್ಪನ ಜಾತ್ರೆಯನ್ನು ದೊಡ್ಡಬ್ಬೀಗೆರೆ ಗ್ರಾಮ ಗೊಲ್ಲರ ಹಟ್ಟಿಯಲ್ಲಿ ಬಹಳ ಅಚ್ಚುಕಟ್ಟಾಗಿ ಮತ್ತು ಸಂಪ್ರದಾಯ ಬದ್ಧವಾಗಿ ಸಂತೋಷ ಮತ್ತು ಭಕ್ತಿಯಿಂದ ಆಚರಿಸುತ್ತಾರೆ. ಊರಿನ ಎಲ್ಲಾ ಪ್ರಮುಖರು ಒಂದು ಕಡೆ ಸೇರಿ ಜಾತ್ರೆಯ ದಿನವನ್ನು ನಿಗಧಿ ಪಡಿಸುತ್ತಾರೆ. ಜಾತ್ರೆಗೆ ಬೇಕಾಗಿರುವ ವ್ಯವಸ್ಥೆಯ ಬಗ್ಗೆ ಚರ್ಚಿಸುತ್ತಾರೆ. ಜಾತ್ರೆಗೆ ಆಹ್ವಾನ ಪತ್ರಿಕೆಗಳನ್ನು ಸಿದ್ಧಪಡಿಸಿ ಎಲ್ಲಾ ಭಕ್ತಾದಿಗಳಿಗೂ ಹಂಚುತ್ತಾರೆ. ಜಾತ್ರೆಗೆ ಇತರೆ ಸಮುದಾಯದವರಿಗೂ ಆಹ್ವಾನ ಪತ್ರಿಕೆಗಳನ್ನು ಕೊಟ್ಟು ಜಾತ್ರೆಗೆ ಬರಬೇಕೆಂದು ತಿಳಿಸುತ್ತಾರೆ.

ಈ ಜಾತ್ರೆಯು ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಅಂದರೆ ೩ ದಿವಸಗಳ ಕಾಲ ನಡೆಯುತ್ತದೆ. ಈ ಜಾತ್ರೆಯು ಬಹಳ ಅದ್ದೂರಿಯಿಂದ ನಡೆಯುತ್ತದೆ. ಈ ಜಾತ್ರೆಯು ಡಿಸೆಂಬರ್ ತಿಂಗಳ ಎರಡನೇ ಅಥವಾ ಮೂರನೇಯ ವಾರದಂದು ಈ ಜಾತ್ರೆಯು ಆರಂಭವಾಗುತ್ತದೆ.

ಈ ಜಾತ್ರೆ ನಡೆಯುವುದಕ್ಕಿಂತ ಹದಿನೈದು ದಿನ ಮೊದಲು ದೇವಸ್ಥಾನಕ್ಕೆ ಊರಿನಲ್ಲಿರುವ ಐದಾರು ಜನ ಸೇರಿ ದೇವಸ್ಥಾನಕ್ಕೆ ಸುಣ್ಣ ಬಣ್ಣ ಹಚ್ಚುತ್ತಾರೆ. ಮತ್ತು ದೇವಸ್ಥಾನದ ಅಕ್ಕ ಪಕ್ಕದ ಜಾಗದಲ್ಲಿರುವ ಕಸ ಅಥವಾ ಗಿಡಗಳನ್ನು ಸ್ವಚ್ಛ ಮಾಡುವರು. ಆ ಊರಿನ ಗ್ರಾಮಸ್ಥರು ಅಥವಾ ಹಿರಿಯರಾದ ಯಜಮಾನರು ಈ ಕಾರ್ಯಗಳನ್ನು ನಡೆಸಲು ಮುಂಚಿತವಾಗಿಯೇ ಸೂಚಿಸಿರುತ್ತಾರೆ. ಜೊತೆಗೆ ಜಾತ್ರೆಗೆ ದೇವಸ್ಥಾನವನ್ನು ವಿದ್ಯುತ್ ಲೈಟ್‌ಗಳ ಸರದಿಂದ ಸುಂದರವಾಗಿ ಅಲಂಕರಿಸುತ್ತಾರೆ.

ಈ ಜಾತ್ರೆಯು ನಡೆಯುವುದಕ್ಕಿಂತ ೧ ವಾರ ಮೊದಲು ಆದು ಸೋಮವಾರದ ದಿನ ಬೆಳಗ್ಗೆ ಸುಮಾರು ೧೧:೩೦ಕ್ಕೆ ಝುಂಡಾ ಸ್ಥಾಪನೆ ಅಭಿಷೇಕದ ಪೂಜೆಯನ್ನು ಹಟ್ಟಿಯ ಪೂಜಾರಿಯು ನೆರವೇರಿಸಿಕೊಡುತ್ತಾರೆ. ಈ ಜಾತ್ರೆಯ ಮೊದಲ ದಿನ ಸೋಮವಾರ ಊರಿನಲ್ಲಿರುವ ಎಲ್ಲಾ ಪ್ರಮುಖ ದೇವರುಗಳನ್ನು ಹೊರಡಿಸಿಕೊಂಡು ಈ ಊರಿನ ಪೂಜಾರಿಯಾದ ಕೃಷ್ಣಪ್ಪ ಎಂಬುವವರು ಜುಂಜಪ್ಪನ ಸನ್ನಿಧಿಯಲ್ಲಿ ಪಾಲ್ಗೊಳ್ಳುವರು. ಸೋಮವಾರ ಸಾಯಂಕಾಲ ರಾತ್ರಿ ಸುಮಾರು ೮:೩೦ಕ್ಕೆ ಸ್ವಾಮಿಯ ಉತ್ಸವ ಮೂರ್ತಿಗಳಾದ ಹಾಗೂ ಗ್ರಾಮದ ಮೂಲ ದೇವರಾದ ಶ್ರೀ ಕದುರೆ ನರಸಿಂಹಸ್ವಾಮಿ ಉತ್ಸವ ಮೂರ್ತಿ ಗೊಲ್ಲರ ಹಟ್ಟಿಯ ದೇವರುಗಳಾದ ಶ್ರೀ ವೆಂಕಟೇಶ್ವರ, ಶ್ರೀ ಮೈಲೆಮಾರಮ್ಮ ದೇವಿ, ಶ್ರೀ ಕುಕ್ಕುವಾಡೇಶ್ವರಿ ದೇವಿ, ಶ್ರೀ ದ್ಯಾಮಲಾಂಬ ದೇವಿಯವರ ಉತ್ಸವ ಮೂರ್ತಿಗಳನ್ನು ಸಕಲಾಭರಣಗಳಿಂದ ಶೃಂಗರಿಸಿಕೊಂಡು ಮಂಗಳ ವಾದ್ಯಗಳಿಂದ ಮೆರವಣಿಗೆ ಹೊರಟು ಇದೇ ದಿನ ರಾತ್ರಿ ೯:೩೦ಕ್ಕೆ ಶ್ರೀ ಜುಂಜಪ್ಪನ ಸ್ವಾಮಿಯ ಮೂಲ ಸ್ಥಳಕ್ಕೆ ಬರುವುದು ಕಂಡು ಬರುತ್ತದೆ. ನಂತರ ಸ್ವಾಮಿಯ ಗುಗ್ಗಳ ಪೂಜೆ ಮೇಲುದೀಪ ಸ್ಥಾಪನೆ, ಮೂಡಲ ಸೇವೆ, ಭಕ್ತಾದಿಗಳಿಂದ ಕಾಣಿಕೆ ಸಮರ್ಪಣೆ ಮಂಗಳಾರತಿ ನಡೆಯುತ್ತದೆ. ಜಾತ್ರೆಗೆ ಬಂದಿರುವ ಕೆಲ ಭಕ್ತಾಧಿಗಳು ಹರಕೆ ಹೊತ್ತುಕೊಂಡಿರುತ್ತಾರೆ. ಭಕ್ತರು ೧೦ ರಿಂದ ೫೦ ಅಥವಾ ೧೦೦ ರೂಗಳ ವರೆಗೆ ಹಣಕೊಡುತ್ತಾರೆ. ಜೊತೆಗೆ ಬಟ್ಟೆಯನ್ನು ಕೊಡುತ್ತಾರೆ. ಮತ್ತು ಜಾತ್ರೆಯಲ್ಲಿ ಎಲ್ಲಾ ತರಹದ ಅಂಗಡಿಗಳನ್ನು ಹಾಕಿರುತ್ತಾರೆ. ಚಿಕ್ಕ ಮಕ್ಕಳಿಗೆ ಆಟದ ಸಾಮಾನುಗಳು, ಬಳೆ ಅಂಗಡಿಗಳು, ಹೋಟೆಲ್‌ಗಳು, ತಂಪಾದ ಪಾನೀಯ ಅಂಗಡಿಗಳು ಇಲ್ಲಿ ಕಂಡುಬರುತ್ತವೆ. ಇತರೆ ಸಮುದಾಯದವರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ಜಾತ್ರೆಯಲ್ಲಿ ಜುಂಜಪ್ಪನಿಗೆ ಪೂಜಾರಿಯು ಹಾಲು, ತುಪ್ಪ, ಮೊಸರು, ಕಲ್ಲು ಸಕ್ಕರೆ, ಎಳೇನೀರು, ಅರಿಶಿಣ, ಕುಂಕುಮ, ಜೇನುತುಪ್ಪ ಮುಂತಾದವುಗಳಿಂದ ಅಭಿಷೇಕ ಮಾಡುತ್ತಾನೆ. ನಂತರ ಗೋಮೂತ್ರವನ್ನು ಜುಂಜಪ್ಪಗೆ ಹಾಕುತ್ತಾನೆ. ನಂತರ ಮೇಲ್ ದೀಪವನ್ನು ಜಾತ್ರೆಯ, ಅಂದರೆ ಸೋಮವಾರ ರಾತ್ರಿ ೯.೩೦ ರಿಂದ ೧೧ರ ಸಮಯದಲ್ಲಿ ಗರುಡು ಕಂಬದ ಮೇಲೆ ಮೇಲ್ ದೀಪ ಹಚ್ಚುವರು. ಅದು ಬೆಳಗಿನ ಜಾವದವರೆಗೆ ಹುರಿಯುತ್ತಿರುತ್ತದೆ. ೪ರ ಸಮಯದ ನಂತರ "ಮದ್‌ಲ್ ಸಿ" ಮಾಡುತ್ತಾರೆ. ಆನಂತರ ದೇವರನ್ನು ಹೊತ್ತುಕೊಂಡು ಡೊಳ್ಳು ಕುಣಿತ, ಜಾನಪದ ಗೀತೆ ಹೇಳುವ ಕಾರ್ಯಕ್ರಮಗಳು ಜಾತ್ರೆಯಲ್ಲಿ ನಡೆಯುತ್ತವೆ. ಜಾತ್ರೆಗೆ ಮೊದಲನೆಯ ದಿನವೇ ನೆಂಟರಿಸ್ಟರು ಮತ್ತು ಬಂಧು ಬಳಗದವರು ಮನೆಗೆ ಬಂದಿರುವುದರಿಂದ ಅವರಿಗೆ ಊಟದ ವ್ಯವಸ್ಥೆಯನ್ನು ಅವರವರ ಮನೆಗಳಲ್ಲಿ ಮಾಡಿರುತ್ತಾರೆ. ಇಲ್ಲಿ ಊಟಕ್ಕೆ ಪಾಯಸ, ಚಿತ್ರಾನ್ನ, ಅನ್ನ ಸಾಂಬಾರು, ಪಲ್ಯ, ಕೋಸುಂಬರಿ, ಉಪ್ಪಿನಕಾಯಿ, ಪಕೋಡ, ಹಪ್ಪಳ, ಮಜ್ಜಿಗೆ ಮುಂತಾದವುಗಳನ್ನು ಸಿದ್ಧಪಡಿಸಿರುತ್ತಾರೆ. ಕೆಲವರು ಹೋಳಿಗೆ, ತುಪ್ಪ, ಅನ್ನಸಾಂಬಾರು, ಪಲ್ಯ ಮುಂತಾದ ಆಹಾರ ತಯಾರಿಸುತ್ತಾರೆ. ಎಲ್ಲರು ಒಟ್ಟಿಗೆ ಕುಳಿತು ಊಟ ಮಾಡಿದ ಮೇಲೆ ಎಲೆ, ಅಡಿಕೆ ಸೇವಿಸುತ್ತಾರೆ.

ಎರಡನೇಯ ದಿನ ಬೆಳಗಿನ ೫ ಗಂಟೆಯ ಹೊತ್ತಿಗೆ ದೇವರಿಗೆ ಮಂಗಳಾರತಿ ಮತ್ತು ೧೦೧ ಮೇಲ್‌ದೀಪಗಳನ್ನು ಹಚ್ಚುವರು. ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳು ಒಟ್ಟಿಗೆ ಸೇರಿ ಮೇಲ್‌ದೀಪವನ್ನು ಹಚ್ಚುವ ಮೂಲಕ ಹರಕೆಗಳನ್ನು ತೀರಿಸುತ್ತಾರೆ. ನಂತರ ದೇವರಲ್ಲಿ ಯಾವುದೇ ರೀತಿಯ ಕಷ್ಟನಷ್ಟಗಳನ್ನು ಕೊಡಬೇಡ, ಮಳೆ ಬೆಳೆಯನ್ನು ಚನ್ನಾಗಿ ದಯಪಾಲಿಸು ಎಂದು ಬೇಡಿಕೊಳ್ಳುತ್ತಾರೆ. ನಂತರ ಆ ಪೂಜಾರಿಗಳಿಗೆ ಕುಳಿತುಕೊಳ್ಳುವುದಕ್ಕೆ ಗದ್ದಿಗೆ ಹಾಕುತ್ತಾರೆ. ಭಕ್ತರು ಮುಡುಪನ್ನು ಹಾಕುತ್ತಾರೆ. ನಂತರ ಪೂಜಾರಿ ಗೌಡ ಅಥವಾ ಹಿರಿಯ ಯಜಮಾನ "ಮೂಡಲ ಮಣೆವೂ" ಎಂಬ ಕಾರ್ಯಕ್ರಮದಲ್ಲಿ ದೇವರನ್ನು ಹೊತ್ತುಕೊಂಡು ಮಣೆಯ ಸುತ್ತ ಪ್ರದಕ್ಷಿಣೆ ಹಾಕುವರು. ನಂತರ ದಾಸಯ್ಯ ಮತ್ತು ಪೂಜಾರಿಗಳು ಆ ಮಣೆಯ ಮೇಲಿರುವ ಹಣ್ಣುಗಳನ್ನು ತಿನ್ನುತ್ತಾರೆ. ನಂತರ ಪಾನಕದ ಬಂಡಿಯ ವ್ಯವಸ್ಥೆ ಇರುತ್ತದೆ. ಊರಿನ ೫೦೦ ರಿಂದ ೧೦೦೦ ರವರೆಗೆ ಕುರಿಗಳನ್ನು ಒಂದು ಕಡೆ ಸೇರಿಸಿ ದೇವರುಗಳ ಸುತ್ತ ಪ್ರದಕ್ಷಿಣೆ ಹಾಕಿಸುವರು. ಕುರಿಯ ಯಜಮಾನರು ಮಣೆ, ಹಣ್ಣು ಹಂಪಲು ಹಾಕುವರು. ಈ ಹಟ್ಟಿಯಲ್ಲಿ ಅಷ್ಟು ಕುರಿಗಳು ಇಲ್ಲದಿದ್ದರೆ ಬೇರೆ ಕಡೆಯಿಂದ ಕುರಿಗಳನ್ನು ತರಿಸಿ ಆಚರಣೆ ನಡೆಸುತ್ತಾರೆ. ಈ ಕುರಿಗಳಿಗೆ ಅನಾರೋಗ್ಯ ಬರಬಾರದೆಂದು ಈ ಆಚರಣೆ ನಡೆಸುತ್ತಾರೆ.

ಈ ಆಚರಣೆಗಳ ನಂತರ ರಸಮಂಜರಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ರಾತ್ರಿ ೮-೯೦ರ ಸುಮಾರಿಗೆ ಆರ್ಕೇಸ್ಟ್ರಾವರನ್ನು ಕರೆಯಿಸಿ, ಸಿನಿಮಾ ಹಾಡು ಮತ್ತು ಡ್ಯಾನ್ಸ್‌ಗಳನ್ನು ನಡೆಸುತ್ತಾರೆ.

ಮೂರನೇಯ ದಿನ ಅಂದರೆ ಬುಧವಾರ ಸಾಯಂಕಾಲ ೬ ಗಂಟೆಯವರೆಗೆ ಶ್ರೀ ಸ್ವಾಮಿಯ ಸನ್ನಿಧಿಯಿಂದ ಉತ್ಸವ ಮೂರ್ತಿಗಳನ್ನು ಮಂಗಳವಾದ್ಯ ಮೆರವಣಿಗೆಯೊಂದಿಗೆ ಗ್ರಾಮದ ದೇವರುಗಳನ್ನು ಮೂಲ ಸ್ಥಳಕ್ಕೆ ತರುವರು. ಇಲ್ಲಿ ಗ್ರಾಮಸ್ಥರಿಂದ ಮಣೆವೂ ಕಾರ್ಯಕ್ರಮವಿರುತ್ತದೆ. ರಾತ್ರಿ ನಡೆಯುವ ಈ ಆಚರಣೆಯಲ್ಲಿ ಜನರು ಭಾಗವಹಿಸುತ್ತಾರೆ. ಬೆಳಿಗ್ಗೆ ಪ್ರಸಾದ, ಹಣ್ಣು, ಮಂಡಕ್ಕಿಯ ಫಲಹಾರ ಮಾಡಿ ಎಲ್ಲರಿಗೂ ಹಂಚುತ್ತಾರೆ. ಅಭಿಷೇಕ ಮಾಡಿ ಜುಂಜಪ್ಪನ ಪೌಳಿಗೆ ಹೋಗಿ, ಜಾತ್ರೆಯ ದೀಪ ಹಚ್ಚಿ ಬರುವುದರಿಂದ ಜಾತ್ರೆಯು ಮುಕ್ತಾಯವಾಗುತ್ತದೆ.

ಹಬ್ಬಗಳು:

ಕಾಡುಗೊಲ್ಲರು ತಮ್ಮದೇ ಆದ ಸಂಪ್ರದಾಯ ಆಚರಣೆಯ ಮೂಲಕ ಅವರು ಪರಂಪರಾನುಗತವಾಗಿ ಹಬ್ಬಗಳನ್ನು ಆಚರಿಸುತ್ತಿದ್ದರು. ಇತ್ತೀಚಿಗೆ ಆಧುನಿಕತೆಯ ಪರಿಣಾಮದಿಂದ ಕಾಡುಗೊಲ್ಲರ ಸಂಸ್ಕೃತಿ, ಆಚಾರ ವಿಚಾರಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಗಳಾಗುತ್ತಿವೆ. ಕಾಡುಗೊಲ್ಲರು ಇಂದು ನಾಗರ ಪಂಚಮಿ, ಗುಗ್ಗರಿಹಬ್ಬ, ದೀಪಾವಳಿ, ಗಣೇಶನ ಹಬ್ಬ, ಶಿವರಾತ್ರಿ, ನವರಾತ್ರಿ, ಕಾರಹುಣ್ಣಿಮೆ, ಆಯುಧ ಪೂಜೆ, ಹಿರಿಯರ ಹಬ್ಬ ಹೀಗೆ ಹಿಂದೂ ಸಂಸ್ಕೃತಿಯಲ್ಲಿರುವ ಹಬ್ಬ ಹರಿದಿನಗಳನ್ನು ಆಚರಿಸುವುದು ಕಂಡುಬರುತ್ತಿದೆ.

❖ **ಆಯುಧ ಪೂಜೆ** : ಆಯುಧ ಪೂಜೆ ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಲ್ಲಿ ಬರುತ್ತದೆ. ಆಯುಧ ಪೂಜೆಯನ್ನು ಕಾಡುಗೊಲ್ಲರು ಈ ಹಿಂದೆ ಆಚರಿಸುತ್ತಿರಲಿಲ್ಲ. ಪ್ರಸ್ತುತ ದಿನಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಇವರು ಸಹ ಆಯುಧ ಪೂಜೆ ಆಚರಿಸುವುದನ್ನು ಕಾಣಬಹುದು. ಇವರಲ್ಲಿರುವ ಕೆಲವರು ಆರ್ಥಿಕವಾಗಿ ಸದೃಢರಾದವರು ಬೈಕ್, ಕಾರು, ಟ್ರಾಕ್ಟರ್ ಖರೀದಿಸಿರುತ್ತಾರೆ. ತಮ್ಮ ವಾಹನಗಳನ್ನು ಕೆರೆ ಅಥವಾ ಬಾವಿಯ ನೀರಿನಿಂದ ತೊಳೆದು ಅವುಗಳಿಗೆ ವಿಭೂತಿ ಕುಂಕುಮ ಹಚ್ಚಿ, ವಾಹನಗಳ ಚಕ್ರಗಳಿಗೆ ನಿಂಬೆಹಣ್ಣನ್ನು ಇಟ್ಟು ಪೂಜೆ ಮಾಡುತ್ತಾರೆ. ಚಂಡುಹೂವು, ಸೇವಂತಿಗೆ ಹೂವುಗಳನ್ನು ವಾಹನಗಳಿಗೆ ಹಾಕುತ್ತಾರೆ. ನಗರ ಪ್ರದೇಶಗಳಲ್ಲಿರುವ ಈ ಕಾಡುಗೊಲ್ಲರು ಹಬ್ಬವನ್ನು ಬಹಳ ಸಡಗರದಿಂದ ವಾಹನಗಳನ್ನು ಅಲಂಕರಿಸಿ ಪೂಜಿಸುತ್ತಾರೆ. ಮನೆಗೆ ಬಾಳೇಕಂದು, ಮಾವಿನ ಸೊಪ್ಪನ್ನು ಕಟ್ಟುವರು. ಪೂಜೆಗೆ ಬಂದಿರುವವರಿಗೆ ಮಂಡಕ್ಕಿ, ಬಾಳೇಹಣ್ಣು, ಕಡ್ಡಲೆಕಾಳು, ತುಪ್ಪ, ತೆಂಗಿನಕಾಯಿ ಹಂಚುವರು. ಜೊತೆಗೆ ಜೋಳ, ರಾಗಿ ಮುಂತಾದವುಗಳ ಯಂತ್ರಗಳನ್ನು ಬಳಸುವುದರಿಂದ ಇತರ ಸಮುದಾಯದವರ ಪ್ರಭಾವದಿಂದ ಆಯುಧ ಪೂಜೆಯನ್ನು ಮಾಡುವುದು ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. ಆದರೆ ಹಿಂದುಳಿದ ಹಟ್ಟಿಗಳಲ್ಲಿ ಆಯುಧ ಪೂಜೆ ಮಾಡುವ ಪದ್ಧತಿ ಇಂದಿಗೂ ಕಂಡುಬರುವುದಿಲ್ಲ.

❖ **ನವರಾತ್ರಿ** : ಈ ಹಬ್ಬವನ್ನು ಮಹಾನವಮಿ ಎಂಬ ಹೆಸರಿನಿಂದ ಆಚರಿಸುತ್ತಾರೆ. ಇನ್ನಿತರ ಹೆಸರುಗಳೆಂದರೆ ಅಂಬುಹೊಡೆಯುವುದು, ಬನ್ನಿಮುಡಿಯುವುದು. ಬಾಳೆ ಕತ್ತರಿಸುವುದು ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ. ಈ ಹಬ್ಬದ ವಿಶೇಷವೆಂದರೆ ಕಾಡುಗೊಲ್ಲರು ತಮ್ಮ ದೇವರುಗಳನ್ನು ೯ ದಿನಗಳ ಕಾಲ ಪೂಜೆಗೆ ಕೂರಿಸುತ್ತಾರೆ. ಕೆಲವು ಹಟ್ಟಿಗಳಲ್ಲಿ ೯ ದಿನಗಳ ಕಾಲ ಭಜನೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ. ಕೆಲವು ಹಟ್ಟಿಗಳಲ್ಲಿ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೆ ಪೂಜೆಯನ್ನು ಮಾತ್ರ ಮಾಡುತ್ತಾರೆ. ಇನ್ನು ಕೆಲವು ಹಟ್ಟಿಗಳಲ್ಲಿ ಅಮಾವಾಸೆ ಆದ ೯ನೇ ದಿನದಂದು ನೇರವಾಗಿ ಹೊಳೆಗೆ ಹೋಗಿ ಗಂಗೆ ಪೂಜೆ ಮಾಡಿಕೊಂಡು ಸಮೀಪವಿರುವ ಬನ್ನಿಮರದ ಬಳಿಗೆ ಹೋಗಿ ಬನ್ನಿಮರವನ್ನು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಆನಂತರ ಪೂಜಾರಿಯು ಬಿಲ್ಲಿಗೆ ಬಾಣಗಳನ್ನು ಹೂಡಿ ಬನ್ನಿಮರಕ್ಕೆ ಹೊಡೆಯುತ್ತಾನೆ. ಆಗ ಕೆಳಗೆ ಬಿದ್ದ ಬನ್ನಿಯ ಸೊಪ್ಪನ್ನು ದೇವರಿಗೆ ಮುಡಿಸಿ ಆ ದಿನ ರಾತ್ರಿಯಿಂದ ಬೆಳಗಿನ ತನಕ ಉರುಮೆ ವಾದ್ಯ ಬಡಿಸಿಕೊಂಡು ಕುಣಿಯುತ್ತಾರೆ. ಕೆಲವು ದೇವರುಗಳು ಬನ್ನಿಯ ಮರಕ್ಕೆ ಬಾಣ ಹೊಡೆಯುವುದಿಲ್ಲ. ಬನ್ನಿಮರದ ಸುತ್ತ ನಿಲ್ಲಿಸಿರುವ ಬಾಳೆಯ ಗಿಡದ ರೆಂಬೆಗಳನ್ನು ಕಡಿದು ಬನ್ನಿಮುಡಿದು ಬಂದು ಹಟ್ಟಿಯನ್ನು ಪ್ರವೇಶಿಸುತ್ತವೆ.

❖ **ಕಾರ ಹಬ್ಬ:** ಕಾಡುಗೊಲ್ಲರು ಕಾರಹುಣ್ಣಿಮೆಯ ಹಬ್ಬವನ್ನು ಬಹಳ ವಿಶೇಷವಾಗಿ ಆಚರಿಸುವರು. ಈ ಹಬ್ಬದಲ್ಲಿ ವಿಶೇಷತೆ ಏನೆಂದರೆ ಮನೆಯವರು ಎತ್ತುಗಳನ್ನು, ದನಗಳನ್ನು

ತೊಳೆದು, ಸ್ನಾನ ಮಾಡಿಸಿ ಅವುಗಳ ಕೊಂಬುಗಳಿಗೆ ಬಣ್ಣ ಹಚ್ಚಿ ಅಲಂಕಾರ ಮಾಡುತ್ತಾರೆ. ನಂತರ ಸಾಯಂಕಾಲ ದೇವಸ್ಥಾನಕ್ಕೆ ಎತ್ತುಗಳಿಗೆ ಬಂದು ಸುತ್ತಲೂ ಪ್ರದಕ್ಷಿಣೆ ಹಾಕಿಸಿ ಊರಿನ ಸುತ್ತಾ ಓಡಿಸುವ ಕಾರ್ಯಕ್ರಮ ಇಟ್ಟುಕೊಂಡಿರುತ್ತಾರೆ. ಅಂದು ಅಡುಗೆ ಮಾಡಿದ ಆಹಾರವನ್ನು ಸ್ವಲ್ಪ ತಟ್ಟೆಯಲ್ಲಿ "ಎಡೆಯ" ರೂಪದಲ್ಲಿ ತೆಗೆದು ಅದನ್ನು ಎತ್ತುಗಳಿಗೆ ತಿನ್ನಿಸುತ್ತಾರೆ. ಇವರು ಈ ಹಬ್ಬಕ್ಕೆ ಪಾಯಸ, ಅನ್ನ, ಸಾಂಬಾರು ಮಾತ್ರ ಮಾಡುತ್ತಾರೆ. ಮನೆಯವರೆಲ್ಲಾ ಸೇರಿ ಒಟ್ಟಿಗೆ ಊಟವನ್ನು ಮಾಡುತ್ತಾರೆ.

❖ **ಶಿವರಾತ್ರಿ** : ಕಾಡುಗೊಲ್ಲರು ಇತ್ತೀಚಿನ ದಿನಗಳಲ್ಲಿ ಶಿವರಾತ್ರಿಯನ್ನು ಆಚರಿಸುತ್ತಿದ್ದಾರೆ. ಅಷ್ಟು ಸಡಗರದಿಂದ ಈ ಹಬ್ಬವನ್ನು ಇವರು ಆಚರಿಸುವುದಿಲ್ಲ. ಮನೆಯವರೆಲ್ಲಾ ಸ್ನಾನ ಮಾಡಿ ಜುಂಜಪ್ಪನನ್ನು 'ಶಿವ' ಎಂದು ಕಲ್ಪಿಸಿಕೊಂಡು ಇವರು ಜುಂಜಪ್ಪನಿಗೆ ಎಳ್ಳಿನ ಚಿಗಣಿ ಮಾಡುತ್ತಾರೆ. ಆ ರಾತ್ರಿ ಇವರು ಕಲ್ಲಂಗಡಿ, ಸೇಬು, ಕಿತ್ತಳೆ, ದ್ರಾಕ್ಷಿ, ಬಾಳೇ ಹಣ್ಣು, ಕರ್‌ಭುಜ ಮುಂತಾದ ಹಣ್ಣುಗಳನ್ನು ತಿಂದು ರಾತ್ರಿ ಊಟ ಮಾಡದೇ ಧ್ಯಾನ ಮಾಡುತ್ತಾರೆ. ನಂತರ ಶಿವರಾತ್ರಿಯ ಬೆಳಿಗ್ಗೆ ಎಲ್ಲರೂ ಸ್ನಾನ ಮಾಡಿ ಎಲ್ಲಾ ದೇವರಿಗೆ ಪೂಜೆ ಮಾಡಿದ ನಂತರ ಹಟ್ಟಿಯ ದಾಸಯ್ಯನನ್ನು ಕರೆಯಿಸಿ ಗರಡು ಗಂಬಕ್ಕೆ ಪೂಜಿಸಿದ ನಂತರ ಇವರು ದೇವರಿಗೆ ನೈವೇದ್ಯ ಮಾಡುತ್ತಾರೆ. ನಂತರ ಮನೆಯವರೆಲ್ಲರೂ ಸೇರಿ ಕುಳಿತು ಊಟ ಮಾಡುವವರು.

❖ **ಗುಗ್ಗರಿ ಹಬ್ಬ** : ಈ ಹಬ್ಬವು ಕಾಡುಗೊಲ್ಲರು ಮತ್ತು ಮ್ಯಾಸಬೇಡರಲ್ಲಿ ಬಹಳ ವಿಶೇಷವಾಗಿ ಕಂಡುಬರುತ್ತದೆ. ಇದನ್ನು ಕಾಡುಗೊಲ್ಲರು ಕಾಳೀ ಹಬ್ಬವೆಂದು ಕರೆಯುತ್ತಾರೆ. ಈ ಹಬ್ಬವು ಭೂಮಿ ತಾಯಿಯ ಋಣಭಾರವನ್ನು ತೀರಿಸುವುದಾಗಿದೆ. ಬೆಳೆದ ಧಾನ್ಯಗಳನ್ನು ತಾವು ಮೊದಲು ಬಳಸದೆ ದೇವರಿಗೆ ನೈವೇದ್ಯ ಮಾಡಿ ಆನಂತರ ತಾವು ಬಳಸಬೇಕು ಎಂಬ ನಿಯಮವಿದೆ. ಹಾಗಾಗಿ ಅವರ ಅಮವಾಸೆಯ ದೇವರಿಗೆ ಮೊದಲು ಬೆಳೆದ ಕಾಳುಗಳನ್ನು ನೈವೇದ್ಯ ಮಾಡಿ ಆನಂತರ ತಾವು ಭಕ್ಷಿಸುತ್ತಾರೆ.

ಕಾಡುಗೊಲ್ಲರು ಮಾಘ ಮಾಸದಲ್ಲಿ ಆಚರಿಸುವ ಕಾಳ ಹಬ್ಬವನ್ನು "ಗುಗ್ಗರಿ ಹಬ್ಬ" ಎನ್ನುತ್ತಾರೆ. ಗುಗ್ಗರಿ ಹಬ್ಬದಂದು ಸಾಮಾನ್ಯವಾಗಿ ಪುರುಷರು ಹುಲ್ಲು ಗುಡಿಸಲನ್ನು ಕಟ್ಟಿ ಅದರ ಒಳಗೆ ದೇವರನ್ನು ಇಟ್ಟು ಪೂಜೆ ಮಾಡುತ್ತಾರೆ. ಅಂದು ಇವರು ತಮ್ಮ ಜಮೀನುಗಳಲ್ಲಿ ಬೆಳೆದ ಹೊಸ ದವಸ ಧಾನ್ಯಗಳನ್ನು ಅಂದರೆ ಹುರುಳಿ, ಕಡಲೆ, ಅಕ್ಕಿ, ಎಳ್ಳು ಮುಂತಾದವುಗಳನ್ನು ಭಕ್ತಿಯಿಂದ ದೇವರಿಗೆ ಅರ್ಪಿಸುತ್ತಾರೆ. ಮಹಿಳೆಯರು ಬಾಯಿಗೆ ಬಟ್ಟೆ ಕಟ್ಟಿಕೊಂಡು ಉಪ್ಪು ಹಾಕದೆ ಗುಗ್ಗರಿ ಬೇಯಿಸಿ ಇವರು ದೇವರಿಗೆ ಎಡೆ ಮಾಡುತ್ತಾರೆ. ಈ ಹಬ್ಬದಲ್ಲಿ ಅವರ ದೇವರುಗಳನ್ನು ಇಟ್ಟು ಪೂಜಿಸುವರು. ಈ ಹಬ್ಬದಲ್ಲಿ ಮೊದಲು ಗಂಗೆಯನ್ನು ಪೂಜಿಸಿದ ನಂತರವೇ ಉಳಿದ ಕಾರ್ಯಕ್ರಮಗಳು ಪ್ರಾರಂಭವಾಗುತ್ತವೆ.

ಈ ಹಬ್ಬಕ್ಕೆ ಇವರು ಶನಿವಾರದಂದು ಕುಂಬಾರರಲ್ಲಿ ಐದು ಗಡಿಗೆಗಳನ್ನು ತಂದು ಅವುಗಳಲ್ಲಿ ನೀರು ತುಂಬಿ ಗಂಗೆ ಪೂಜೆ ಮಾಡಿದ ಗಡಿಗೆಗಳನ್ನು ಪುನಃ ತರುತ್ತಾರೆ. ನಂತರ ರಾತ್ರಿ ನಾಲ್ಕು ಗಂಟೆಯ ಸಮಯದಲ್ಲಿ ಐದು ಒಲೆಗಳನ್ನು ಹಚ್ಚಿ ಆ ಒಲೆಗಳ ಮೇಲೆ ಇವರು ಗಡಿಗೆಗಳನ್ನು ಇಟ್ಟು ಅವುಗಳಲ್ಲಿ ಕಾಳುಗಳನ್ನು ಹಾಕಿ ಜೊತೆಗೆ ಹಸುವಿನ ಹಾಲು, ಜೇನುತುಪ್ಪ, ಬಾಳೇಹಣ್ಣು ಹಾಕಿ ಎಲ್ಲವನ್ನು ಬೇಯಿಸುತ್ತಾರೆ.

ಹರಕೆ ಹೊತ್ತ ಭಕ್ತರು ಹರಕೆ ತೀರಿಸಿಕೊಳ್ಳುವುದಕ್ಕಾಗಿ ದೇವರು ಬರುವ ದಾರಿಯಲ್ಲಿ ಬಿಳಿವಸ್ತ್ರ ಹಾಸಿ ಅಡ್ಡವಾಗಿ ಮಲಗಿಕೊಳ್ಳುತ್ತಾರೆ. ದೇವರನ್ನು ಹೊತ್ತ ಪೂಜಾರಿ ಎಲ್ಲರನ್ನು ತುಳಿಯುತ್ತಾ ಮುಂದೆ ಬರುತ್ತಾನೆ. ಹೀ ದೇವರನ್ನು ಹೊತ್ತುಕೊಂಡವರು ಯಾರನ್ನು ತುಳಿಯುತ್ತಾರೆಯೋ ಅವರಿಗೆ ಜೀವನದಲ್ಲಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇದೆ. ಹೀಗೆ ತುಳಿಸಿಕೊಂಡವರು ತುಳಿದವರಿಗೆ ಒಂದು ತೆಂಗಿನ ಕಾಯಿ ಕೊಡುತ್ತಾರೆ. ನಂತರ ಮಹಾ ಮಂಗಳಾರತಿಯೊಂದಿಗೆ ಇವರು ಗುಗ್ಗರಿ ಹಬ್ಬವನ್ನು ಮುಕ್ತಾಯ ಮಾಡುತ್ತಾರೆ.

❖ **ಯುಗಾದಿ ಹಬ್ಬ** : ಕಾಡುಗೊಲ್ಲರು ಯುಗಾದಿ ಹಬ್ಬವನ್ನು ಬಹಳ ವಿಶೇಷವಾಗಿ ಮತ್ತು ಸಂಭ್ರಮದಿಂದ ಬೇರೆ ಸಮುದಾಯದವರು ಆಚರಿಸುವ ರೀತಿಯಲ್ಲಿಯೇ ಆಚರಿಸುವರು. ಚೈತ್ರ ಮಾಸದ ವಸಂತಕಾಲದ ಶುದ್ಧ ಪಾಡ್ಯಮಿಯ ದಿವಸ ಬರುವ ಯುಗಾದಿ ಹಬ್ಬ. ಈ ಯುಗಾದಿ ಹಬ್ಬವು ಬಂದಿತೆಂದರೆ ವರ್ಷವಿಡಿ ಇವರು ಮಾಡಿದ ಕೆಲಸಕಾರ್ಯಗಳು ಮತ್ತು ಕೂಲಿ ಕೃಷಿ ಚಟುವಟಿಕೆಯನ್ನು ಮುಗಿಸಿ ಬಿಡುವು ಮಾಡಿಕೊಂಡು ಯುಗಾದಿ ಹಬ್ಬ ಆಚರಿಸುವರು. ಯುಗಾದಿ ಹಬ್ಬಕ್ಕೆ ಒಂದು ತಿಂಗಳ ಮುಂಚಿತವಾಗಿ ಮನೆಯನ್ನು ಸ್ವಚ್ಛಗೊಳಿಸಿ ಸುಣ್ಣ ಬಣ್ಣ ಹಚ್ಚುವುದು ಕಂಡುಬರುತ್ತದೆ. ಮಳೆಗಾಲ ಪ್ರಾರಂಭವಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕಾಗಿರುವುದರಿಂದ ಇವರು ಮನೆಗಳು ಸೋರದಂತೆ ರಿಪೇರಿ ಮಾಡುತ್ತಾರೆ. ಕಾಡುಗೊಲ್ಲರು ಯುಗಾದಿ ಹಬ್ಬದಂದು ಬೆಳಿಗ್ಗೆ ಎದ್ದು ಮಾವಿನ ಮತ್ತು ಬೇವಿನಸೊಪ್ಪನ್ನು ತರಲು ತಮ್ಮ ಸುತ್ತಮುತ್ತ ಇರುವ ಹೊಲಗಳಿಗೆ ಹೋಗುವರು. ಮನೆಯ ಬಾಗಿಲಿಗೆ ಮಾವಿನ ಟೊಂಗೆಗಳಿಂದ ತೋರಣ ಕಟ್ಟುತ್ತಾರೆ. ಜೊತೆಗೆ ಬೇವಿನ ಸೊಪ್ಪನ್ನು ಕಟ್ಟುತ್ತಾರೆ. ಮನೆಯವರೆಲ್ಲ ಕೊಬ್ಬರಿ ಎಣ್ಣೆಯ ಜೊತೆಗೆ ಅರಿಶಿಣ ಬೆರೆಸಿಕೊಂಡು ಮೈಗೆ ಹಚ್ಚಿಕೊಳ್ಳುವರು. ಸ್ವಲ್ಪ ಹೊತ್ತು ಬಿಟ್ಟು ಬೇವಿನ ಸೊಪ್ಪನ್ನು ಬೆರೆಸಿದ ನೀರಿನಿಂದ ಸ್ನಾನ ಮಾಡುತ್ತಾರೆ. ಸಂತೆಯಲ್ಲಿ ತಂದ ಉಡುದಾರವನ್ನು ಮನೆಯ ಗಂಡು ಮಕ್ಕಳು ಸೊಂಟಕ್ಕೆ ಕಟ್ಟಿಕೊಳ್ಳುವರು. ತೆಂಗಿನಕಾಯಿ, ಊದಿನಕಡ್ಡಿ, ಬಾಳೇಹಣ್ಣು, ಕರ್ಪೂರ ಮುಂತಾದವುಗಳನ್ನು ಈ ಹಬ್ಬದ ಮೊದಲನೆ ದಿನ ಇವರು ಆಚರಿಸುವ ವಿಶಿಷ್ಟವಾದ ಆಚರಣೆ ಎಂದರೆ ಭೂಮಿತಾಯಿಯ ಪೂಜೆ, ಮಳೆರಾಯನ ಪೂಜೆ, ವಿದ್ಯಾಧಿಪತಿಯಾದ ಗಣಪತಿಯ ಪೂಜೆಯನ್ನು ಹೊಸ ಮೊದಲ ಬೇಸಾಯ ಎನ್ನುವ ಹೆಸರಿನಲ್ಲಿ ಮಾಡುತ್ತಾರೆ. ಮೂರು ಕಲ್ಲಿನ ಬೆನವ, ಮೂರು ಅಕ್ಕಿ ಹಿಟ್ಟಿನ ಮಿದಿಕೆ, ಒಂದು

ಹಸುವಿನ ಸಗಣಿಯಿಂದ ಮಾಡಿದ ಜೆನವ, ಮೂರು ಎಲೆ, ಮೂರು ಅಡಿಕೆ, ಮೂರು ಅಂಗುದಾರ ಇವುಗಳನ್ನು ಎತ್ತಿನ ಕೊಂಬಿಗೆ, ಕುಂಟೆಗೆ ಮತ್ತು ಹೊಸ ಬೇಸಾಯ ಮಾಡುವ ವ್ಯಕ್ತಿಯು ಕಟ್ಟಿಕೊಂಡು ಪೂಜೆಯನ್ನು ಮಾಡುತ್ತಾನೆ. ಹಬ್ಬಕ್ಕೆಂದು ವಿಶೇಷವಾದ ಅಡುಗೆ ಮಾಡಿ ನೈವೇದ್ಯ ಮಾಡುತ್ತಾರೆ. ಎಲ್ಲರೂ ಸೇರಿ ದೇವರ ಪೂಜೆ ಮಾಡಿ ಒಟ್ಟಿಗೆ ಊಟ ಮಾಡುತ್ತಾರೆ.

ಎರಡನೇಯ ದಿನ : ಎರಡನೇಯ ದಿನ ದೇಹಕ್ಕೆ ಎಣ್ಣೆ ಹಚ್ಚಿಕೊಂಡು ಮತ್ತು ಬೇವಿನ ಸೊಪ್ಪು ಬೆರೆಸಿದ ನೀರಿನಿಂದ ಸ್ನಾನ ಮಾಡಿ ಹೊಸ ಬಟ್ಟೆ ಹಾಕಿಕೊಳ್ಳುವರು. ನಂತರ ದೇವರನ್ನು ಪೂಜೆ ಮಾಡುವರು. ಹಟ್ಟಿಯ ಹೊರಗಡೆ ಅಂದು ದುಡ್ಡಿನ ಆಟವನ್ನು ಆಡುತ್ತಾರೆ. ಬೆಳಿಗ್ಗೆ ತಿಂಡಿಗೆ ಅವಲಕ್ಕಿ, ಉಪ್ಪಿಟ್ಟು, ಮೆಣಸಿನಕಾಯಿ, ಬೊಂಡ ಮುಂತಾದವುಗಳನ್ನು ಮಾಡುತ್ತಾರೆ. ಎಲ್ಲರೂ ಸಾಮಾನ್ಯವಾಗಿ ಅಂದು ಮಧ್ಯಾಹ್ನ ಹುಣಸೆ ಮರದ ರೆಂಬೆಗೆ ಜೋಕಾಲಿಗಳನ್ನು ಕಟ್ಟಿಕೊಂಡು ಸಂತೋಷದಿಂದ ತಮ್ಮ ಚಿಕ್ಕ ಮಕ್ಕಳನ್ನು ಆಟ ಹಾಡಿಸುತ್ತಾರೆ. ನಂತರ ಹೋಳಿಗೆ, ತುಪ್ಪ, ಅನ್ನ ಸಾಂಬಾರು ಮಾಡಿರುತ್ತಾರೆ. ಜೊತೆಗೆ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಕೋಸುಂಬರಿ ಇರುತ್ತದೆ. ಸಾಯಂಕಾಲ ಎಲ್ಲರೂ ಚಂದ್ರನನ್ನು ನೋಡಿ ಪೂಜೆ ಮಾಡಿದ ನಂತರ ಊರಿನ ಹಿರಿಯರಿಗೆ ನಮಸ್ಕಾರ ಮಾಡುತ್ತಾರೆ. ಬೇವು, ಬೆಲ್ಲವನ್ನು ಮನೆ ಮನೆಗೆ ಹೋಗಿ ಹಂಚುತ್ತಾರೆ. ಸುಖ-ದುಃಖಗಳನ್ನು ಎರಡನ್ನು ಸಮನಾಗಿ ಕಾಣಬೇಕು ಎಂದು ಹೇಳುತ್ತಾರೆ.

ಮೂರನೇಯ ದಿನ : ಬಂದ ನೆಂಟರಿಗೆ ಅಥವಾ ಬಂಧು ಬಳಗದವರಿಗೆ ಕುರಿ ಮಾಂಸದ ಅಡುಗೆ ಮಾಡಿ ರಾಗಿ ಮುದ್ದೆ, ಸಾಂಬಾರು ಊಟ ಮಾಡುವರು. ನಂತರ ನೀರನ್ನು ಎರಚುವ ಅಥವಾ ಉಗ್ಗುವ ಕಾರ್ಯಕ್ರಮವಿರುತ್ತದೆ. ಈ ಹಟ್ಟಿಯಲ್ಲಿ ನೆಂಟರಾಗುವವರಿಗೆ ನೀರುಗ್ಗುವ ಆಚರಣೆ ಇರುತ್ತದೆ.

❖ **ಹಿರಿಯರ ಪೂಜೆ:** ಕಾಡುಗೊಲ್ಲರಲ್ಲಿ ಹಿರಿಯರ ಪೂಜೆಯನ್ನು ಎರಡು ಸಂದರ್ಭಗಳಲ್ಲಿ ಮಾಡುತ್ತಾರೆ. ಆದರೆ ಬಹಳಷ್ಟು ಜನರು ಹಿರಿಯರ ಪೂಜೆಯನ್ನು ಯುಗಾದಿ ಹಬ್ಬದ ಮೊದಲನೆಯ ದಿನವೇ ಮಾಡುತ್ತಾರೆ. ಅಂದರೆ ಮನುಷ್ಯ ತನ್ನ ಜೀವಿತದ ಅವಧಿಯಲ್ಲಿ ಯಾವ ಯಾವ ವಸ್ತುಗಳನ್ನು ಬಳಸುತ್ತಿದ್ದನು ಅವೆಲ್ಲವನ್ನು ಹಿರಿಯರ ಕಲ್ಲಿನ ಹತ್ತಿರ ಇಟ್ಟು ಉಡುದಾರದಿಂದ ಹಿಡಿದು ಎಲ್ಲಾ ವಸ್ತುಗಳನ್ನು ಇಡುತ್ತಾರೆ. ತಾವು ಹುಟ್ಟುಕೊಳ್ಳಲು ತಂದಿರುವ ಪ್ರತಿಯೊಂದು ಬಟ್ಟೆಯನ್ನು ಹಿರಿಯರ ಕಲ್ಲಿನ ಮೇಲೆ ಹಾಕಿ ಅವರಿಗೂ ಬೇವು-ಬೆಲ್ಲ ಇಟ್ಟು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಆನಂತರ ತಾವು ಬಟ್ಟೆಗಳನ್ನು ಧರಿಸುತ್ತಾರೆ. ಬೇವು-ಬೆಲ್ಲವನ್ನು ಇತರೆ ಸಮುದಾಯದವರು ತಯಾರು ಮಾಡಿಕೊಳ್ಳುವಂತೆ ಅವರೇ ತಯಾರು ಮಾಡಿಕೊಳ್ಳುವುದಿಲ್ಲ. ಪ್ರತಿಯೊಂದು ಮನೆಯವರು ಒಂದು ತುಂಡು ಬೆಲ್ಲ, ಒಂದು ಪಾವು

ಕಡಲೆ ಬೇಳೆಯನ್ನು ದೇವರ ಗುಡಿಗೆ ಕೊಟ್ಟಾಗ, ದೇವರ ಪೂಜಾರಿಯು ಗುಡಿಯ ಹತ್ತಿರವಿರುವ ಬೇವಿನ ಮರದ ಹೂವನ್ನು ಕಿತ್ತುಕೊಂಡು ಬೇವು-ಬೆಲ್ಲ ಕಲಸಿ ದೇವರಿಗೆ ನೈವೇದ್ಯ ಮಾಡಿ ಇತರೆ ಎಲ್ಲಾ ಮನೆಗಳಿಗೂ ಕೊಡುತ್ತಾನೆ. ಆಗ ಎಲ್ಲರು ಹಿರಿಯರ ಪೂಜೆಯನ್ನು ಮಾಡಿ ಕಡಗಾಲಿಗೆ ಎಡೆಯನ್ನು ಹಾಕಿ ಅನಂತರ ಪೂಜಾರಿಯನ್ನು ಕರೆಯಿಸಿ ಗೋವಿಂದ ಎನ್ನಿಸಿ ಮನೆಯವರೆಲ್ಲಾ ಊಟ ಮಾಡುತ್ತಾರೆ.

೫.೩. ರಾಜಕೀಯ ವ್ಯವಸ್ಥೆ

ಕಾಡುಗೊಲ್ಲರಲ್ಲಿ ಅನೇಕ ಹಳೆ ತಲೆಮಾರಿನವರು ಶಿಕ್ಷಣ ಪಡೆಯದೆ ಅನಕ್ಷರಸ್ಥರಾಗಿ ರಾಜಕೀಯದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿರಲಿಲ್ಲ. ಇವರು ಮೂಲತಃ ಪಶುಪಾಲಕರಾಗಿರುವುದರಿಂದ ಜೊತೆಗೆ ಗುಡ್ಡಗಾಡುಗಳಲ್ಲಿ ಅಥವಾ ನಿರ್ಜನ ಪ್ರದೇಶಗಳಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ವಾಸವಾಗಿದ್ದರು. ಇಂತಹ ಸಂದರ್ಭಗಳಲ್ಲಿ ಇವರಿಗೆ ರಾಜಕೀಯದ ಬಗ್ಗೆ ಮಾಹಿತಿಯೇ ಇರಲಿಲ್ಲ. ಹಳ್ಳಿ ಅಥವಾ ಪಟ್ಟಣಗಳಿಂದ ದೂರವಿರುತ್ತಿದ್ದರು. ಇವರಿಗೆ ಭೂಮಿ ಇಲ್ಲದ ಕಾರಣ ಬಡತನದಿಂದ ಮೂಲ ವೃತ್ತಿಯಾದ ಕುರಿ ಸಾಕಾಣಿಕೆ, ದನ ಕಾಯುವುದು, ಕಾಡಿನಲ್ಲಿ ಅವುಗಳಿಗೆ ನೀರು ಮೇವು, ಸೊಪ್ಪು ತರುವುದು ಮಾತ್ರ ಇವರ ಮುಖ್ಯ ಕೆಲಸವಾಗಿತ್ತು. ಸ್ವಾತಂತ್ರ್ಯ ಬಂದ ನಂತರ ಈ ಸಮುದಾಯದಲ್ಲಿ ಅನೇಕ ಮುಖಂಡರು ರಾಜಕೀಯದ ಬಗ್ಗೆ ಗ್ರಾಮೀಣ ಪ್ರದೇಶಗಳಿಗೆ ಹೋಗಿ ಅರಿವು ಮೂಡಿಸಿದರು.

"ರಾಜ್ಯದಲ್ಲಿ ೧೯೯೨ರಲ್ಲಿ ಹಿಂದುಳಿದ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದೇ ರಾಜಕೀಯ ಮೀಸಲಾತಿ ಇರಲಿಲ್ಲ. ಆದರೆ ಸಂವಿಧಾನಕ್ಕೆ ೭೩ನೇ ತಿದ್ದುಪಡಿ ತಂದು ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಯನ್ನು ಮಾಡಲಾಯಿತು. ೧೯೯೩ರಲ್ಲಿ ಹೊಸ ಪಂಚಾಯತ್ ರಾಜ್ ವ್ಯವಸ್ಥೆ ಅನುಷ್ಠಾನಗೊಳಿಸಲಾಯಿತು. ಇದರ ಪರಿಣಾಮ ಪ್ರಪ್ರಥಮ ಬಾರಿಗೆ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ತಲಾ ಮೂರನೇ ಒಂದರಷ್ಟು ಮೀಸಲಾತಿಯನ್ನು ಕಲ್ಪಿಸಿದರು. ೧೯೯೪ರಲ್ಲಿ ರಾಜ್ಯದಲ್ಲಿ ಸರ್ಕಾರ ಹಾಗೂ ರಾಜ್ಯದ ಎಲ್ಲಾ ಹಿಂದುಳಿದ ಜಾತಿಗಳನ್ನು ಎರಡು ಗುಂಪುಗಳಾಗಿ ಅಂದರೆ ಅತ್ಯಂತ ಹಿಂದುಳಿದ ಜಾತಿಗಳನ್ನು 'ಎ' ಗುಂಪಿಗೆ ಮತ್ತು ಹಿಂದುಳಿದ ಜಾತಿಗಳನ್ನು 'ಬಿ' ಗುಂಪಿಗೆ ಸೇರಿಸಿ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿಯನ್ನು ಒದಗಿಸಿತು. ಆದ ಕಾರಣ ಸಹಜವಾಗಿ ಕರ್ನಾಟಕದ ಕಾಡುಗೊಲ್ಲ ಸಮುದಾಯವು 'ಎ' ಗುಂಪಿನಡಿಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿಯನ್ನು ಪಡೆಯಲು ಪ್ರಾರಂಭಿಸಿತು."[೧]

ಆಧುನಿಕ ದಿನಗಳಲ್ಲಿ ಕಾಡುಗೊಲ್ಲರು ಶಿಕ್ಷಣ ಪಡೆದು ವಿದ್ಯಾವಂತರಾಗುತ್ತಿದ್ದು ನಗರೀಕರಣ, ಕೈಗಾರಿಕೀಕರಣ ಬೆಳೆದಂತೆಲ್ಲಾ ಇಂದಿನ ಯುವಕರಲ್ಲಿ ರಾಜಕೀಯದ ಬಗ್ಗೆ ಪ್ರಜ್ಞೆ ಮೂಡಿ

ಇಂದು ಗ್ರಾಮಪಂಚಾಯತ್, ತಾಲ್ಲೂಕ್ ಪಂಚಾಯತ್, ಜಿಲ್ಲಾ ಪಂಚಾಯತ್, ವಿಧಾನ ಸಭೆ, ಲೋಕಸಭಾ ಸದಸ್ಯರಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಇಂದು ಮೀಸಲಾತಿಯ ನೀತಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿರುವುದು ಕಂಡುಬರುತ್ತದೆ. ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಾಗಿ ಇವರು ಅಧಿಕಾರ ಚಲಾಯಿಸುವುದನ್ನು ಕಾಣುತ್ತೇವೆ.

ಕಾಡುಗೊಲ್ಲರು ತಮ್ಮ ಪಂಚಾಯಿತಿಯ ವ್ಯಾಪ್ತಿಗೆ ಬರುವ ಪ್ರತಿಯೊಂದು ಹಳ್ಳಿಗಳಿಗೆ ಭೇಟಿ ನೀಡಿ ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ಚರಂಡಿ, ವಿದ್ಯುತ್ ಮತ್ತು ಸಾರಿಗೆ ವ್ಯವಸ್ಥೆ ಪ್ರತಿಯೊಂದು ಮನೆಗೆ ಶೌಚಾಲಯ ಕಟ್ಟಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಹಾಗಾಗಿ ಇಂದು ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಹಣ ಗಳಿಸುವುದಕ್ಕಾಗಿ ಕಾಡುಗೊಲ್ಲರು ಮುಂದೆ ಬರುತ್ತಿರುವುದು ಕಂಡುಬರುತ್ತದೆ. ಅಭಿವೃದ್ಧಿ ಯೋಜನೆಗಳ ರೂಪದಲ್ಲಿ ಹಣ ವಸೂಲಿ ಮಾಡುತ್ತಾರೆ. ಹಾಗೆಯೇ ಲೆಕ್ಕಪತ್ರಗಳನ್ನು ಸರಿಯಾಗಿ ಇಡದೇ ಖರ್ಚು ವೆಚ್ಚಗಳಲ್ಲಿ ತಾರತಮ್ಯ ಉಂಟಾಗಿ ಉತ್ತಮವಾದ ಕೆಲಸ ಆಗುವುದಿಲ್ಲ. ನನ್ನ ಕ್ಷೇತ್ರ ಅಧ್ಯಯನದ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ೧ ತಿಂಗಳಿಗೆ ಅಥವಾ ೩ ತಿಂಗಳಿಗೆ ಒಮ್ಮೆ ಮೀಟಿಂಗ್ ಮಾಡಿ ಗ್ರಾಮಗಳಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವರು. ಗೊಲ್ಲರಹಟ್ಟಿಯಲ್ಲಿ ಮೊದಲ ಅಧ್ಯಕ್ಷರು ವೆಂಕಟೇಶಪ್ಪ ಎಂಬುವರು ಗೆದ್ದು ಈ ಹಟ್ಟಿಯನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ಇತ್ತೀಚಿಗೆ ನಡೆದ ಗ್ರಾಮಪಂಚಾಯಿತಿಯ ಚುನಾವಣೆಯಲ್ಲಿ ಚಿತ್ತಪ್ಪನವರು ಸ್ಪರ್ಧಿಸಿ ಚುನಾವಣೆಯಲ್ಲಿ ಗೆದ್ದಿದ್ದಾರೆ.

೫.೪. ಗೊಲ್ಲ ಸಮುದಾಯದ ಹೋರಾಟಗಳು

ಕರ್ನಾಟಕವು ಅನೇಕ ಅಲೆಮಾರಿ ಸಮುದಾಯಗಳನ್ನು ಹೊಂದಿದೆ. ಕಾಡುಗೊಲ್ಲರ ಸಮುದಾಯಗಳಿಗೆ ಈ ಹಿಂದೆ ಅನೇಕ ಹೋರಾಟಗಳನ್ನು ಮಾಡಿದೆ. "ಸ್ವಾತಂತ್ರ್ಯ ಬಂದ ನಂತರ ಬ್ರಿಟಿಷ್ ಶಿಕ್ಷಣದಿಂದ ಪ್ರಭಾವಿತರಾದ ಕೆಲವೇ ಕೆಲವು ಜನಾಂಗದ ಮುಖಂಡರು ಬೆಂಗಳೂರು ಮತ್ತು ಇತರೆ ಕಡೆಗಳಲ್ಲಿ ಜಾತಿ ಸಂಘ ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದರ ಮೂಲಕ ಸಮುದಾಯದ ಅಭಿವೃದ್ಧಿಗೆ ಅಡಿಪಾಯ ಹಾಕಿ ಕೊಟ್ಟರು. ೧೯೨೪ರಲ್ಲಿ ಡಾ.ಬಿ.ಅಬ್ಬಯ್ಯನಾಯ್ಡು ಮತ್ತು ಎಂ.ರಂಗಪ್ಪ, ಮುಖಂಡತ್ವದಲ್ಲಿ ಗೊಲ್ಲ ಸಮುದಾಯದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಿಕ್ಷಣದ ಅನುಕೂಲಕ್ಕಾಗಿ ಬೆಂಗಳೂರಿನ ಗಾಂಧೀ ನಗರದಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪಿಸಲಾಯಿತು. ಇಂದು 'ಯಾದವ ಹಾಸ್ಟೆಲ್' ಎಂಬ ನಾಮಾಂಕಿತದಿಂದ ರಾಜ್ಯದ ಅನೇಕ ಬಡ ಮತ್ತು ಗ್ರಾಮೀಣ ಪ್ರದೇಶದ ಗೊಲ್ಲ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗೆ ಮತ್ತು ಆ ಮೂಲಕ ಸರ್ಕಾರಿ ನೌಕರರಿಗೆ ರಹದಾರಿಯಾಗುವಲ್ಲಿ (pass port) ಒಂದು ಮೈಲಿಗಲ್ಲಾಗಿದೆ. ಬೆಂಗಳೂರಿನ ಆಗಿನ ಲೋಕಸಭಾ ಸದಸ್ಯರಾದ ಶ್ರೀ ರಾಮರೆಡ್ಡಿಯವರು ಯಾದವ ಸಮುದಾಯದವರಾಗಿದ್ದುಕೊಂಡು, ಗೊಲ್ಲ ಸಮುದಾಯದ

ಅಭಿವೃದ್ಧಿಗೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದರು. ಗೊಲ್ಲ ಸಮುದಾಯದ ಮತ್ತೊಬ್ಬ ವ್ಯಾಪಾರಸ್ಥರಾದ ಮುನಿ ವೆಂಕಟಪ್ಪ ಯಾದವರವರು ಬೆಂಗಳೂರಿನ ಗಾಂಧೀ ನಗರದಲ್ಲಿ ಯಾದವ ಹಾಸ್ಟೆಲ್ ನಿರ್ಮಿಸುವುದಕ್ಕೆ ಹಣಕಾಸಿನ ನೆರವನ್ನು ನೀಡಿರುವುದು ಕೇಳಿಬರುತ್ತದೆ.

ಸರ್ಕಾರ ಗೊಲ್ಲರನ್ನು ಗಮನಿಸದಿದ್ದ ಸಮಯದಲ್ಲಿ ಅಂದರೆ ಏಳೆಂಟು ದಶಕಗಳ ಹಿಂದೆ ಕೆ.ಕುಪ್ಪಸ್ವಾಮಿ, ಎಂ.ಎಂ.ಸಂತತಿ, ದೊಡ್ಡ ಕುಂಟಿ ಶ್ರೀ ಕದಿರಪ್ಪ, ಡಾ.ಬಿ. ಜಯರಾಮ್, ಎನ್.ನಾಗರಾಜು, ಎಸ್.ಸಿದ್ದಪ್ಪ, ಎ.ಕೃಷ್ಣಪ್ಪ, ಎಂ.ವಿ.ವೀರಪ್ಪ, ದೊಡ್ಡಿನ, ಕುಂಟಿ ರಾಮಕೃಷ್ಣಪ್ಪ, ಮುಂತಾದವರು ಸಮುದಾಯದ ಬೆಳವಣಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡು ಯುವಕರನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾದರು. ಮಾಧ್ಯಮಿಕ ಶಾಲೆಯ, ವಿದ್ಯಾರ್ಥಿಗಳಿಂದ ಸ್ನಾತಕೋತ್ತರ ವಿದ್ಯಾರ್ಥಿಗಳವರೆಗೆ ವಿದ್ಯಾರ್ಥಿ ವೇತನದ ಸೌಕರ್ಯ ಒದಗಿಸಿದವರು. ಇವರ ಹೋರಾಟದ ಹಾದಿಯನ್ನು ಕಂಡು ೧೯೨೪ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕದ ಯಾದವ ಸಂಘವನ್ನು ಸ್ಥಾಪಿಸಿದರು. ಕಾಡು ಗೊಲ್ಲರಿಗೆ ಉತ್ತಮ ಸಹಕಾರ ದೊರೆಯಿತು. ವಿದ್ಯಾವಂತ ಯುವಕರು ಅನೇಕ ಜಿಲ್ಲೆಗಳ ಮೂಲೆ ಮೂಲೆಗಳಿಗೆ ಹೋಗಿ ಭೇಟಿ ಮಾಡಿ ಯಾದವರನ್ನು ಹುರುದುಂಬಿಸಿ ಅವರಿಗೆ ಜಾಗೃತಿ ಮೂಡಿಸಿ ಸಮುದಾಯದವರಿಗೆ ಶಿಕ್ಷಣ ಪಡೆಯಲು ಉತ್ತೇಜಿಸಿದರು. ಅನೇಕ ಸಮ್ಮೇಳನಗಳನ್ನು ಮತ್ತು ರಾಜಕೀಯದ ಬಗ್ಗೆ ಪ್ರಜ್ಞೆ ತರುವಂತಹ ಅನೇಕ ಸಂಘಟನೆಗಳನ್ನು ಸ್ಥಾಪಿಸಿ ಆ ಮೂಲಕ ಹೋರಾಟ ಮಾಡಿ ಸಮುದಾಯದ ಏಳ್ಗೆಗಾಗಿ ಶ್ರಮಿಸಿದರು.

ರಾಜ್ಯದಲ್ಲಿ ಸಂಘಟಿಸಿದ ಯಾದವ ಸಮ್ಮೇಳನಗಳು:

"ಕರ್ನಾಟಕ ರಾಜ್ಯದ ಯಾದವ(ಗೊಲ್ಲ) ಸಂಘ ಮತ್ತು ತುಮಕೂರು ಜಿಲ್ಲಾ ಯಾದವ ಸಂಘದ ಆಶ್ರಯದಲ್ಲಿ ರಾಜ್ಯಮಟ್ಟದ ಗೊಲ್ಲರ ಸಮ್ಮೇಳನವನ್ನು ದಿನಾಂಕ ೧೩-೧೨-೧೯೮೨ ರಂದು ತುಮಕೂರು ಜಿಲ್ಲೆಯ ಮದುಗಿರಿಯಲ್ಲಿ ಸಂಘಟಿಸಿತ್ತು. ಈ ಸಮ್ಮೇಳನವನ್ನು ಭಾರತ ಸರ್ಕಾರದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಮತ್ತು ಭಾರತೀಯ ಯಾದವ ಮಹಾಸಭಾದ ಅಧ್ಯಕ್ಷರು ಆದ ಶ್ರೀಮಾನ್ ರಾವ್. ಬೀರೆಂದ್ರ ಸಿಂಘ್‌ರವರು ಉದ್ಘಾಟಿಸಿದರು". ಆಗಿನ ರಾಜ್ಯದ ಮುಖ್ಯಮಂತ್ರಿಗಳಾದ ಆರ್.ಗುಂಡುರಾವ್ ರವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಈ ಸಮ್ಮೇಳನದಲ್ಲಿ ಮುಖ್ಯವಾದ ನಿರ್ಣಯವನ್ನು ತೆಗೆದುಕೊಂಡು ರಾಜ್ಯದ ಗೊಲ್ಲ ಜನಾಂಗವನ್ನು ಗಿರಿಜನರ(ಬುಡಕಟ್ಟು) ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಯಿತು."[೨]

"ನಂತರ ದಿನಾಂಕ ೧೨-೫-೧೯೮೯ ರಿಂದ ೩ ದಿನಗಳ ಕಾಲ ಅಖಿಲ ಭಾರತ ಯಾದವ ಮಹಾಸಭಾದ ೫ನೇಯ ರಾಷ್ಟ್ರಮಟ್ಟದ ಯಾದವ ಸಮ್ಮೇಳನವನ್ನು ಬೆಂಗಳೂರಿನ

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಸಲಾಯಿತು. ಅಂದಿನ ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳು ಮತ್ತು ಯಾದವ ಮುಖಂಡರೂ ಆದ ಶ್ರೀ ಶಾಮ್‌ಲಾಲ್ ಯಾದವ್‌ರವರಿಂದ ಯಾದವ ಸಮ್ಮೇಳನ ಉದ್ಘಾಟಿಸಿದರು. ಈ ಸಮ್ಮೇಳನಕ್ಕೆ ದೇಶದ ಮೂಲೆ ಮೂಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಗೊಲ್ಲ ಸಮುದಾಯದವರಿಗೆ ಸರ್ಕಾರದಿಂದ ಮೀಸಲಾತಿ ನೀಡಬೇಕೆಂದು ಒತ್ತಾಯಿಸಲಾಯಿತು. ವಿಧ್ಯಾಭ್ಯಾಸ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕೊಡಬೇಕು. ಜೊತೆಗೆ ಗೊಲ್ಲರ ಹಟ್ಟಿಗಳನ್ನು ವ್ಯವಸಾಯ ಘಟಕಗಳು ಮತ್ತು ಕಂದಾಯ, ಗ್ರಾಮಗಳೆಂದು ಪರಿಗಣಿಸಬೇಕು ಮುಂತಾದ ಬೇಡಿಕೆಗಳನ್ನು ಇಟ್ಟಿರುವುದನ್ನು ಪರಿಗಣಿಸಿ ಕೊಳವೆ ಬಾವಿಗಳನ್ನು ತೋಡಿಸಿ ಸಾಮೂಹಿಕ ನೀರಾವರಿಗೆ ವ್ಯವಸ್ಥೆ ಮಾಡುವುದು, ಮಂಡಲ ವರದಿಯನ್ನು ಕೂಡಲೇ ಜಾರಿಗೆ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯ ಇನ್ನೂ ಮುಂತಾದವುಗಳನ್ನು ಕಾಣಬಹುದು."[೩]

ಯಾದವ ವಿದ್ಯಾರ್ಥಿ ಸಮ್ಮೇಳನಗಳು:

"ದಿನಾಂಕ ೨೫-೨-೧೯೭೩ ರಲ್ಲಿ ಬೆಂಗಳೂರಿನಲ್ಲಿ ರಾಜ್ಯದ ಪ್ರಪ್ರಥಮ ಅಖಿಲ ಕರ್ನಾಟಕ ಯಾದವ ವಿದ್ಯಾರ್ಥಿ ಸಮ್ಮೇಳನ ನಡೆಯಿತು. ಈ ಸಮ್ಮೇಳನವು ಎಸ್.ಸಿದ್ದಪ್ಪ, ಎಂ.ಡಿ.ಕೃಷ್ಣಯ್ಯ ಮತ್ತು ಡಿ.ಕೃಷ್ಣಮೂರ್ತಿ ಮತ್ತು ಅನೇಕ ಹಿರಿಯ ಮುಖಂಡರ ಹಾಗೂ ವಿದ್ಯಾರ್ಥಿ ನಾಯಕರ ನೇತೃತ್ವದಲ್ಲಿ ಜರುಗಿತು. ಈ ಸಮ್ಮೇಳನದಲ್ಲಿ ಯಾದವ ಜನಾಂಗದ ವಿದ್ಯಾಭ್ಯಾಸದ ಬಗ್ಗೆ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆಯೂ ಚರ್ಚಿಸಿ ಕೆಲವು ರಚನಾತ್ಮಕ ಸಲಹೆಗಳನ್ನು ಅಂಗೀಕರಿಸಲಾಯಿತು. ಈ ಸಮ್ಮೇಳನವು ರಾಜ್ಯದ ಜನಾಂಗದ ಎಲ್ಲಾ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ತಮ್ಮ ಸಮಸ್ಯೆಗಳನ್ನು ಕುರಿತು ಚರ್ಚಿಸಿ, ಸಮಾಧಾನಕರವಾದ, ಪರಿಣಾಮಕಾರಿಯಾದ ಪರಿಹಾರಗಳನ್ನು ಕಂಡುಕೊಳ್ಳಲು ಸಹಾಯಕವಾಯಿತು. ವಿದ್ಯಾರ್ಥಿ ನಿಲಯದ ಸೌಲಭ್ಯಕ್ಕಾಗಿ ಹಲವು ಬಾರಿ ಬೀದಿಗಿಳಿದು ಹೋರಾಟ ಮಾಡಿ ಚಳುವಳಿ ತೀವ್ರ ಸ್ವರೂಪ ಪಡೆದುಕೊಂಡು ಪೊಲೀಸರಿಂದ ಲಾಠಿ ಏಟು ತಿನ್ನುವ ಪ್ರಸಂಗಗಳು ನಡೆದವು. ಒಟ್ಟಾರೆ ಈ ರೀತಿ ರಾಜ್ಯದ ಗೊಲ್ಲ ಸಮುದಾಯದ ಹೋರಾಟಗಳನ್ನು ಹಂತ ಹಂತವಾಗಿ ನೋಡಬಹುದು."[೪]

ಅಡಿಟಿಪ್ಪಣಿಗಳು:

೧. ವಿಮಲ ಅಮಲಪ್ಪ, 'ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು', ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ೨೦೦೯, ಪುಟ–೯೬

೨. ಗುರುಲಿಂಗಯ್ಯ ಎಂ., ಕರ್ನಾಟಕದ ಗೊಲ್ಲ ಸಮುದಾಯ, ೨೦೦೫, ಪುಟ–೫೬ & ೫೮

೩. ಅದೇ ಪುಟ–೪೯

೪. ಅದೇ ಪುಟ–೬೧

❑❑❑

ಅಧ್ಯಾಯ ಆರು

ಕಾಡುಗೊಲ್ಲರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಅಧ್ಯಾಯ ಆರು

ಕಾಡುಗೊಲ್ಲರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಕಾಡುಗೊಲ್ಲರು ಹಿಂದುಳಿದ ಬುಡಕಟ್ಟಿನವರ ಸಮುದಾಯದವರಾಗಿದ್ದು ಇವರು ಹೊಲಗದ್ದೆಗಳಲ್ಲಿ ಬಯಲು ಪ್ರದೇಶಗಳಲ್ಲಿ ವಾಸವಾಗಿರುವುದರಿಂದ ಬೀಸಿಲು, ಗಾಳಿ, ಮಳೆ, ಚಳಿಯನ್ನು ಲೆಕ್ಕಿಸದೇ ತಮ್ಮ ಸಂಸಾರವನ್ನು ಕಟ್ಟಿಕೊಂಡು ಕುರಿಗಳ ಜೊತೆಗೆ ಅಲೆದಾಡುತ್ತಾ ಜೀವನ ಸಾಗಿಸುವ ಇವರು ಹಲವಾರು ಸಮಸ್ಯೆಗಳನ್ನು ಇಂದು ಎದುರಿಸುತ್ತಿದ್ದಾರೆ. ಮೂಲತಃ ಅಲೆಮಾರಿ ಕಾಡುಗೊಲ್ಲರಿಗೆ ಸರ್ಕಾರದ ಯೋಜನೆಗಳು ಮೂಲಭೂತ ಸೌಲಭ್ಯಗಳು ದೊರಕುತ್ತಿಲ್ಲ. ಅದಕ್ಕೆ ಸಂಬಂಧಿಸಿದ ಕಾಡುಗೊಲ್ಲರು ತಮ್ಮ ಆರಾಧ್ಯ ದೈವಗಳಲ್ಲಿ ಆತ್ಮ ವಿಶ್ವಾಸ ನಂಬಿಕೆ, ಭಯ ಆಚರಣೆಗಳನ್ನು ಪರಂಪರಾನುಗತವಾಗಿ ನಡೆಸಿಕೊಂಡು ಬಂದಿರುವುದನ್ನು ನೋಡಬಹುದು.

ಇಂದು ಅರಣ್ಯಕ್ಕೆ ಸಂಬಂಧಿಸಿದ ಭೂಮಿಯನ್ನು ಉಳುಮೆ ಮಾಡುವುದಕ್ಕೆ ಮತ್ತು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನೂರಾರು ಎಕರೆ ಸ್ಥಳವನ್ನು ಬಳಸಿಕೊಳ್ಳುತ್ತಿರುವುದರಿಂದ ಅರಣ್ಯ ಪ್ರದೇಶಗಳಲ್ಲಿ ಇರುವ ಗಿಡಮರಗಳನ್ನು ಕಡಿಯುವುದರಿಂದ ಸಮಯಕ್ಕೆ ಸರಿಯಾಗಿ ಮಳೆ ಬಾರದೇ ಇರುವುದರಿಂದ ಇರುವ ಭೂಮಿಯಲ್ಲಿ ಮೇವು ನೀರು ಸಿಗದೇ ಪಶುಪಾಲನೆಗೆ ತೊಂದರೆಯಾಗುತ್ತಿದೆ. ಕಾಡುಗೊಲ್ಲರ ಹಟ್ಟಿಗಳು ಊರುಗಳಿಂದ ಬಹು ದೂರ ವಾಸವಾಗಿರುವುದರಿಂದ ಸಾರಿಗೆ ವ್ಯವಸ್ಥೆಯ ಕೊರತೆಯಿಂದ ಅವರು ತಮ್ಮ ಮಕ್ಕಳನ್ನು ದೂರದ ಊರು ಅಥವಾ ಪಟ್ಟಣಗಳಲ್ಲಿ ಇರುವ ಶಾಲೆ ಕಾಲೇಜುಗಳ ಶಿಕ್ಷಣ ಪಡೆಯಲು ತೊಂದರೆಯಾಗುತ್ತಿದೆ. ಸಾರಿಗೆ ವ್ಯವಸ್ಥೆ ಇಲ್ಲದೆ ಇರುವುದರಿಂದ ಕಾಡುಗೊಲ್ಲರು ಬೆಳೆದ ಬೆಳೆಯನ್ನು ನಗರದ ಮಾರುಕಟ್ಟೆಗಳಲ್ಲಿ ನ್ಯಾಯಯುತ ಬೆಲೆಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ದಲ್ಲಾಳಿಗಳು ಹಟ್ಟಿಗಳಿಗೆ ಆಗಮಿಸಿ ತೂಕ ಮತ್ತು ದರದಲ್ಲಿ ಮೋಸಮಾಡುತ್ತಿರುವುದು ಕಂಡುಬರುತ್ತಿದೆ.

ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಕಾಡುಗೊಲ್ಲರ ಬದುಕು ಅಸ್ಥಿರಗೊಳ್ಳುತ್ತಿದೆ. ಮೇಕೆಗಳನ್ನು ಕಾಡಿನಲ್ಲಿ ಮೇಯಿಸುವುದಕ್ಕೆ ಹೋದ ಸಂದರ್ಭದಲ್ಲಿ ಗುಡುಗು ಸಿಡಿಲು ಬಡಿದು ಕುರಿ ಮೇಕೆಗಳು ಸಾವನ್ನಪ್ಪಿರುವ ಬಗೆಗೆ ಮಾಹಿತಿ ದೊರೆಯುತ್ತದೆ.

ಕಾಡುಗೊಲ್ಲರು ಸಾಕುವ ಕುರಿ ಮೇಕೆ ದನಗಳಿಗೆ ಸಾಂಕ್ರಾಮಿಕ ಕಾಯಿಲೆಗಳಿಗೆ ತುತ್ತಾದರೆ ಅವುಗಳ ಆರೈಕೆಗೆ ಪಶುವೈದ್ಯಕೀಯ ಸೇವೆಯ ಕೊರತೆ ಕಂಡುಬರುತ್ತದೆ. ಹಟ್ಟಿಯಲ್ಲಿ ಅವುಗಳ ರಕ್ಷಣೆ ಇಲ್ಲದಂತಾಗಿದೆ. ಕಳ್ಳರಿಂದ ಅಥವಾ ಕಾಡಿನ ಪ್ರಾಣಿಗಳ ಹಾವಳಿಯಿಂದ ರಕ್ಷಣೆ ಇಲ್ಲದಂತಾಗಿದೆ.

ಪಟ್ಟಣ ಮತ್ತು ನಗರ ಪ್ರದೇಶಗಳಿಂದ ದೂರವಿರುವ ಇವರು ಶಿಕ್ಷಣ ಸರ್ಕಾರದ ಯೋಜನೆ ವಿದ್ಯುತ್ ವಸತಿ ಮುಂತಾದ ಸೌಲಭ್ಯಗಳಿಂದ ವಂಚಿತರಾಗಿರುವುದು ಕಂಡು ಬರುತ್ತದೆ. ಕಾಡುಗೊಲ್ಲರು ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಇವರಿಗೆ ಕುಡಿಯುವುದಕ್ಕೆ ಬೋರ್‌ವೆಲ್‌ಗಳ ವ್ಯವಸ್ಥೆ ಇಲ್ಲ ಬಾವಿ ಕೆರೆ ಕಟ್ಟೆ ಹೊಂಡ ಚೆಕ್ ಡ್ಯಾಂಗಳಲ್ಲಿಯ ನೀರಿನಲ್ಲಿಯೇ ಪಶುಗಳನ್ನ ಮೈತೊಳೆದು ಅದೇ ನೀರನ್ನೇ ಕುಡಿಯುವುದಕ್ಕೆ ಬಳಸುವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ ರೋಗಗಳಿಗೆ ತುತ್ತಾಗುತ್ತಿದ್ದಾರೆ.

ಅಲೆಮಾರಿಗಳಾದ ಇವರು ಕುರಿ ಮೇಕೆಗಳನ್ನು ಮೇಯಿಸಲು ಹೋಗುತ್ತಿದ್ದ ಸಂದರ್ಭದಲ್ಲಿ ಬಿಸಿಲು, ಮಳೆ, ಗಾಳಿ, ಗುಡುಗು, ಮುಂತಾದವುಗಳನ್ನು ಗಮನಿಸುತ್ತಿರಲಿಲ್ಲ. ಜೊತೆಗೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸುತ್ತಿರಲಿಲ್ಲ. ಕಾಡುಗೊಲ್ಲರ ಆರೋಗ್ಯದ ಬಗ್ಗೆ ಹಟ್ಟಿಗಳಲ್ಲಿ ಹಿರಿಯರನ್ನು ವಿಚಾರಿಸಿದರೆ ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರು ಸುಮಾರು ವರ್ಷಗಳವರೆಗೆ ಸುಖವಾಗಿ ಬಾಳಿ ಬದುಕಿದ್ದರು. ಅವರು ಆಸ್ಪತ್ರೆಗಳಿಗೆ ಹೋಗದೆ ಯಾವ ಮಾತ್ರೆಗಳನ್ನು ತೆಗೆದುಕೊಳ್ಳದೇ ಗಿಡಮೂಲಿಕೆಗಳಿಂದ ತಯಾರಾದ ಔಷಧಿಯನ್ನು ತೆಗೆದುಕೊಂಡು ಆರೋಗ್ಯವಂತರಾಗಿದ್ದರು. ಆರೋಗ್ಯದ ಬಗ್ಗೆ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಪ್ರಕೃತಿಯೇ ಅವರಿಗೆ ದೇವರು. ಪ್ರಕೃತಿಯಲ್ಲಿ ಸಿಗುವ ಉತ್ತಮ ಗಾಳಿ ನೀರು ಆಹಾರ ಇವರಿಗೆ ಆರೋಗ್ಯ ನೀಡಿತ್ತು. ಇತ್ತೀಚಿಗೆ ಕಲುಷಿತ ನೀರು ವಾಸಮಾಡುವ ಹಟ್ಟಿಗಳ ಸುತ್ತ ಮುತ್ತಲಿನ ಪರಿಸರದಲ್ಲಿ ಸ್ವಚ್ಛತೆ ಇಲ್ಲದಿರುವುದರಿಂದ ಅನೇಕ ಸಾಂಕ್ರಾಮಿಕ ರೋಗಗಳು ಹರಡುವುದು ಕಂಡು ಬರುತ್ತವೆ. ಚಿಕನ್‌ಗುನ್ಯ, ಡೆಂಗ್ಯೂ, ಮಲೇರಿಯಾದಂತಹ ರೋಗಗಳು, ಹರಡುತ್ತಿವೆ. ಇವರು ಆಸ್ಪತ್ರೆಗಳಿಗೆ ಹೋಗಲು ನಗರ ಪ್ರದೇಶಗಳಿಗೆ ಹೋಗಬೇಕಾಗಿದೆ. ಹಳ್ಳಿಗಳಲ್ಲಿ ಸರಿಯಾದ ವೈದ್ಯಕೀಯ ಸೌಲಭ್ಯ ಇಲ್ಲಿ ಕಂಡುಬರುವುದಿಲ್ಲ.

ಕಾಡುಗೊಲ್ಲರು ಪಶುಪಾಲನೆಯಲ್ಲಿ ತೊಡಗಿಕೊಂಡಿರುವ ಇವರಿಗೆ ಪಶುಗಳ ಯೋಗಕ್ಷೇಮವೇ ಮುಖ್ಯವಾಗಿರುತ್ತಿತ್ತು. ಆದ್ದರಿಂದ ಕಾಡುಗೊಲ್ಲರು ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸದೇ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದೇ ಕುರಿ ಕಾಯಲು ಅಡವಿಗೆ ಕಳುಹಿಸುತ್ತಿದ್ದರು. ಇವರು ಆರ್ಥಿಕವಾಗಿ ಬಡವರು ಜೀವನ ನಿರ್ವಹಣೆಗೋಸ್ಕರ ವ್ಯವಸಾಯ ಮತ್ತು ಪಶುಪಾಲನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರ ಪರಿಣಾಮವಾಗಿ ಶಿಕ್ಷಣದ ಅರಿವು ಇಲ್ಲದಿರುವುದರಿಂದ ಇವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದು ಕಂಡುಬರುತ್ತದೆ.

ಸರ್ಕಾರ ಕಾಡುಗೊಲ್ಲರಿಗೆ ಪಡಿತರ ಚೀಟಿಯನ್ನು ಎಲ್ಲ ಕುಟುಂಬಗಳಿಗೆ ನೀಡಿರುವುದಿಲ್ಲ. ಪಡಿತರ ಚೀಟಿ ಒದಗಿಸಲು ಕೆಲ ಅಧಿಕಾರಿಗಳು ತೊಂದರೆ ಕೊಡುತ್ತಿರುವುದು ಮತ್ತು ಸರಿಯಾದ ಮಾಹಿತಿ ನೀಡದಿರುವುದು ಇದಕ್ಕೆ ಕಾರಣವಾಗಿದೆ.

❖ **ಪರಿಹಾರೋಪಾಯಗಳು** :

"ಕಾಡುಗೊಲ್ಲರು ಪಶುಪಾಲನೆ ಜೊತೆಗೆ ಕೃಷಿಯನ್ನು ನಿರ್ವಹಿಸುತ್ತಿದ್ದಾರೆ. ಅನೇಕರಿಗೆ ಭೂಮಿ ಇಲ್ಲದೇ ಇರುವುದರಿಂದ ಅವರಿಗೆ ಕನಿಷ್ಠ ಪ್ರಮಾಣದ ಭೂಮಿಯನ್ನು ಸರಕಾರ ನೀಡಬೇಕಾಗಿದೆ. ಮೂಲಭೂತ ಸೌಲಭ್ಯಗಳಾದ ವಸತಿ, ಆರೋಗ್ಯ ಶಿಕ್ಷಣದಲ್ಲಿ ಅಭಿವೃದ್ಧಿ ಹೊಂದಲು ಸರಕಾರ ವಿವಿಧ ಯೋಜನೆಗಳನ್ನು ಇವರಿಗೆ ರೂಪಿಸಬೇಕಾಗಿದೆ.

ಕಾಡುಗೊಲ್ಲರಿಗೆ ಪಶುಪಾಲನೆಗೆ ಮುಖ್ಯವಾಗಿ ಹುಲ್ಲುಗಾವಲಿನ ಅವಶ್ಯಕತೆ ಇದೆ. ಸರಿಯಾಗಿ ಮಳೆ ಬಾರದೇ ಮೇವಿಗಾಗಿ ಪರದಾಡುತ್ತಿದ್ದಾರೆ. ಬರಗಾಲದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಆದ್ದರಿಂದ ಸರ್ಕಾರಿ ಗೋಮಾಳ ಅರಣ್ಯ ಭೂಮಿಯಲ್ಲಿ ಕುರಿ ಮೇಕೆ ಮೇಯುವುದಕ್ಕೋಸ್ಕರ ಅನುಮತಿ ನೀಡುವುದು ಜೊತೆಗೆ ಪಶುಪಾಲನೆಗೆ ಮೀಸಲಿಟ್ಟ ಭೂ ಪ್ರದೇಶಕ್ಕೆ ಹನಿ ನೀರಾವರಿ ವ್ಯವಸ್ಥೆಯನ್ನು ಶಾಶ್ವತವಾಗಿ ಒದಗಿಸುವುದು ಹಾಗೂ ಕುರಿಗಳಿಗೋಸ್ಕರ ಉತ್ತಮವಾದ ತಳಿಯ ಬೆಳೆಗಳನ್ನು ಬೆಳೆಯುವುದು. ಈ ರೀತಿ ಬರಗಾಲದ ಅವಧಿಯಲ್ಲಿ ಕುರಿ ಮೇಕೆಗಳಿಗೆ ಮೇವಿನ ಕೊರತೆ ಉಂಟಾದಾಗ ಮೇಲಿನ ಸಮಸ್ಯೆಯನ್ನು ಬಗೆಹರಿಸಬಹುದು."[೧]

❖ **ಕುಡಿಯುವ ನೀರಿನ ವ್ಯವಸ್ಥೆ:** ಕಾಡುಗೊಲ್ಲರು ಹೊಲ ಗದ್ದೆಗಳಲ್ಲಿ ಮತ್ತು ನಿರ್ಜನ ಪ್ರದೇಶಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಜೀವನ ನಿರ್ವಹಿಸುತ್ತಿದ್ದರು. ಆದರೆ ಇವರಿಗೆ ಕುಡಿಯುವ ನೀರಿನ ಸೌಲಭ್ಯ ಸಮರ್ಪಕವಾಗಿರುವುದು ಕಂಡು ಬರುವುದಿಲ್ಲ. ಹಿಂದಿನ ಕಾಲದಲ್ಲಿ ಊರುಗಳಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ವಾಸವಾಗಿರುವುದರಿಂದ ಪ್ರತಿ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯು ಇಲ್ಲದಿರುವುದು ಕಂಡುಬರುತ್ತದೆ. ಜೊತೆಗೆ ದಿನನಿತ್ಯ ಇವರು ಸಾಕಿಕೊಂಡಿರುವ ಕುರಿ, ಮೇಕೆ, ಹಸು, ಎಮ್ಮೆಗಳಿಗೆ ಕುಡಿಯಲು ಸ್ನಾನಮಾಡಲು ನೀರು ಅತ್ಯವಶ್ಯಕ ಆದ್ದರಿಂದ ಕೆರೆ ಕಟ್ಟೆಗಳ ನೀರನ್ನು ದಿನನಿತ್ಯ ಬಳಸುವುದರಿಂದ ಅನೇಕ ಕಾಯಿಲೆಗಳು ರೋಗರುಜಿನಗಳು ಬರುತ್ತವೆ. ಇಂದು ಕಾಡುಗೊಲ್ಲರು ವಾಸವಾಗಿರುವ ಪ್ರತಿಯೊಂದು ಹಟ್ಟಿಗಳಿಗೆ ಕುಡಿಯುವ ನೀರಿಗಾಗಿ ಬೋರ್‌ವೆಲ್‌ಗಳನ್ನು ಕೊರೆಸಿ ಟ್ಯಾಂಕ್‌ಗಳನ್ನು ಅಥವಾ ತೊಟ್ಟಿಗಳನ್ನು ಕಟ್ಟಿಸಿ ವಾರಕ್ಕೊಮ್ಮೆ ಅವುಗಳನ್ನು ಸ್ವಚ್ಚಗೊಳಿಸಿ ಅವುಗಳಿಗೆ ನೀರು ತುಂಬಿಸಿ ಆ ನಂತರ ಪ್ರತಿ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರಿಂದ ಮನುಷ್ಯರಿಗೂ ಹಾಗೂ ಪ್ರಾಣಿಗಳಿಗೂ ಯಾವುದೇ ಕಾಯಿಲೆ ರೋಗ ರುಜಿನಗಳು ಬರದಂತೆ ತಡೆಗಟ್ಟಬಹುದು. ಈ ರೀತಿಯಲ್ಲಿ ನೀರಿನ ವ್ಯವಸ್ಥೆ ಎಲ್ಲರಿಗೂ ಒದಗುವಂತೆ ಮಾಡುವುದು.

❖ **ಉತ್ತಮವಾದ ಮಾರುಕಟ್ಟೆ ಸೌಲಭ್ಯ:** "ಕಾಡುಗೊಲ್ಲರು ಸಾಕಿರುವ ಕುರಿ ಮೇಕೆಗಳಿಗೆ ನ್ಯಾಯಯುತವಾದ ಬೆಲೆ ಮಾರುಕಟ್ಟೆಗಳಲ್ಲಿ ಸಿಗುತ್ತಿಲ್ಲ. ಮಾರುಕಟ್ಟೆಯಲ್ಲಿ. ಮಧ್ಯವರ್ತಿಗಳ ಹಾವಳಿಯಿಂದ ಇವರಿಗೆ ತುಂಬಾ ಅನ್ಯಾಯವಾಗುತ್ತದೆ. ಉತ್ತಮ ತಳಿಯ ಕುರಿಗಳನ್ನು

ತಂದರೂ ಕೂಡ ನಷ್ಟವಾಗುತ್ತಿದೆ. ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಮಾದರಿಯಲ್ಲಿ ಕುರಿ ಮೇಕೆ ಉತ್ಪನ್ನಗಳ ಮಾರುಕಟ್ಟೆ ಕಾಯಿದೆ ಜಾರಿಗೆ ಬರಬೇಕು. ಕುರಿಗಳ ತೂಕದ ಆಧಾರದ ಮೇಲೆ ವ್ಯಾಪಾರ ನಿರ್ಧಾರವಾಗಬೇಕು ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬೇಕು.

❖ **ರೋಗ ನಿರೋಧಕ ಲಸಿಕೆ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳಬೇಕು** : ಕಾಡುಗೊಲ್ಲರ ಕುರಿಗಳ ಬದುಕನ್ನು ಕಾಡುತ್ತಿರುವ ದೊಮ್ಮೆ, ರೋಗ, ನೀಲಿ ನಾಲಿಗೆ, ಸಿಡುಬು, ಮೈಲಿಬೇನೆ, ಅಥವಾ ಕಾಲುಬಾಯಿ, ಜ್ವರ ಮುಂತಾದ ರೋಗಗಳನ್ನು ನಿಯಂತ್ರಣ ಮಾಡುವುದಕ್ಕೆ ಕುರಿಗಳಿಗೆ ರೋಗ ನಿರೋಧಕ ಲಸಿಕೆ ಹಾಕುವ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ."[೨]

❖ **ಕುರಿ ಸಂಗೋಪನೆಗೆ ಹೆಚ್ಚು ಹೆಚ್ಚು ಸಾಲ ಸೌಲಭ್ಯವನ್ನು ನೀಡುವುದು:** ಸರ್ಕಾರ ಹತ್ತರಿಂದ ಇಪ್ಪತ್ತು ಕುರಿಗಳನ್ನು ಮಾತ್ರ ಖರೀದಿಸಲು ಸಾಲದ ಸೌಲಭ್ಯ ನೀಡುತ್ತಿದೆ. ಇದರಿಂದ ಅವರ ಜೀವನ ಆದಾಯ ಕಡಿಮೆಯಾಗುತ್ತಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಖರೀದಿಸಲು ಸಾಲದ ಸೌಲಭ್ಯ ನೀಡಬೇಕಾಗಿದೆ.

ಅಡಿಟಪ್ಪಣಿಗಳು

೧. ಜಯರಾಮ ಕೆ. ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ ಅಪ್ರಕಟಿತ ಎಂ.ಫಿಲ್ ಪ್ರಬಂಧ ೨೦೦೮ ಪುಟ-೧೨೨

೨. ಅದೇ ಪುಟ-೧೨೪

❑❑❑

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ಏಳು

ಸಮಾರೋಪ

ಕಾಡುಗೊಲ್ಲರ ಜೀವನ ಶೈಲಿಯಲ್ಲಿ ನಿಧಾನಗತಿಯಲ್ಲಿ ಹಂತ ಹಂತವಾಗಿ ಬದಲಾವಣೆ ಹೊಂದುತ್ತಿರುವುದು ಕಂಡುಬರುತ್ತಿದೆ. ಕಾಡುಗೊಲ್ಲರ ಬದುಕಿನ ಸ್ಥಿತ್ಯಂತರಗಳನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡಿದಾಗ ಅವರ ಆಚರಣೆ ಸಂಪ್ರದಾಯ ನಂಬಿಕೆ ಜನನ, ನಾಮಕರಣಶಾಸ್ತ್ರ, ಋತುಮತಿ, ಉಡುಗೆ-ತೊಡುಗೆ, ಆಹಾರಪದ್ಧತಿ, ಮದುವೆ, ಗರ್ಭಿಣಿ, ವಸತಿ, ಸಾವು ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆಗಳಾಗುತ್ತಿರುವುದು ಕಂಡುಬರುತ್ತಿದೆ. ಇಂದು ಕಾಡುಗೊಲ್ಲರ ಯುವಕರನ್ನು ನಗರ ಪ್ರದೇಶಗಳು ಹೆಚ್ಚು ಆಕರ್ಷಿಸುತ್ತಿವೆ. ಹಟ್ಟಿಯ ಬದುಕಿಗಿಂತ ನಗರದ ಬದುಕು ಉತ್ತಮ ಎಂದು ತಿಳಿದ ಇವರು ತಮ್ಮ ಬದುಕನ್ನು ಬದಲಾಯಿಸಿಕೊಂಡು ಸಮುದಾಯವನ್ನು ಆಧುನಿಕತೆಗೆ ಮುಖಾಮುಖಿಯಾಗಿಸುತ್ತಿದ್ದಾರೆ.

ಹುಟ್ಟು, ಋತುಮತಿ, ಹೆರಿಗೆ, ಸಾವು ಮುಂತಾದ ಸೂತಕದ ವಿಷಯಗಳಲ್ಲಿ ಕಟ್ಟು ನಿಟ್ಟಾಗಿರುತ್ತಿದ್ದ ಕಾಡುಗೊಲ್ಲರು ಇತ್ತೀಚಿಗೆ ಅವುಗಳ ಆಚರಣೆಗಳಲ್ಲಿ ರಿಯಾಯಿತಿ ಪಡೆದುಕೊಂಡಿದ್ದಾರೆ ಎಂದು ಹೇಳಬಹುದು. ಋತುಮತಿಯಾದ ಹೆಣ್ಣು ಮಕ್ಕಳನ್ನು ಮನೆಯ ಒಳಗಡೆ ಕರೆದುಕೊಂಡು ಅವರಿಗೆ ಪ್ರತ್ಯೇಕ ಕೊಠಡಿ ನೀಡುತ್ತಿದ್ದಾರೆ. ಮದುವೆಯ ಸಂದರ್ಭದಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದು ಅಥವಾ ಕೊಡುವ ಪದ್ಧತಿ ಕಂಡು ಬರುತ್ತದೆ. ಇಂದು ಮದುವೆಗಳು ಹಟ್ಟಿಗಿಂತ ಕಲ್ಯಾಣ ಮಂಟಪಗಳಲ್ಲಿ ನಡೆಯುತ್ತಿರುವುದು ಕಂಡು ಬರುತ್ತದೆ. ಏಕೆಂದರೆ ಎಲ್ಲಾ ಸೌಕರ್ಯಗಳು ಇರುವುದನ್ನು ಅವರು ಮನಗಂಡಿದ್ದಾರೆ.

ಕೈಗಾರಿಕೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಅರಣ್ಯ ಪ್ರದೇಶಗಳು ನಾಶವಾಗುತ್ತಿರುವುದರಿಂದ ಕಾಡುಗೊಲ್ಲರಲ್ಲಿ ಪಶುಪಾಲನೆ ವೃತ್ತಿ ಕಡಿಮೆಯಾಗುತ್ತಿದೆ. ಇತ್ತೀಚಿಗೆ ಪಶುಪಾಲನೆಯ ವೃತ್ತಿಯು ಹೆಚ್ಚು ಲಾಭದಾಯಕವಲ್ಲದ ಕಾರಣ, ಮತ್ತು ಅವುಗಳಿಗೆ ಮೇವು ಒದಗಿಸುವುದು ಕಷ್ಟ ಎಂದು ತಿಳಿದುಕೊಂಡಿದ್ದಾರೆ. ಆದ್ದರಿಂದ ಪಶುಪಾಲನೆಯ ವೃತ್ತಿಯ ಮೇಲೆ ಆಸಕ್ತಿ ಕಡಿಮೆಯಾಗಿ ಇತರೇ ಉದ್ಯೋಗಗಳತ್ತ ಗಮನಹರಿಸುತ್ತಿರುವುದು ಕಂಡುಬರುತ್ತದೆ. ಆದ್ದರಿಂದ ಇಂದು ಅನೇಕ ಕಾಡುಗೊಲ್ಲರು ತಮ್ಮ ಮನೆಗೆ ಬೇಕಾಗುವಷ್ಟು ಹಾಲು ಮೊಸರಿಗಾಗಿ ಮಾತ್ರ ಎಮ್ಮೆ ಆಕಳುಗಳನ್ನು ಕಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಇತ್ತೀಚಿಗೆ ಕುರಿ ಮೇಕೆಗಳನ್ನು ಕಾಯುವುದಕ್ಕೆ ಹಟ್ಟಿಗಳಲ್ಲಿಯ ಜನರು ಹಿಂದೇಟು ಹಾಕುತ್ತಿರುವುದರಿಂದ ಪಶುಪಾಲನೆ ಕಡಿಮೆಯಾಗುತ್ತಿರುವುದು ಕಂಡು ಬರುತ್ತದೆ.

ಕಾಡುಗೊಲ್ಲರಲ್ಲಿ ಕೆಲವರು ಕೃಷಿ ಚಟುವಟಿಕೆಗಳಿಗೆ ಎತ್ತುಗಳ ಬದಲಾಗಿ ಆಧುನಿಕ ಯಂತ್ರೋಪಕರಣಗಳನ್ನು ಟ್ರಾಕ್ಟರ್‌ಗಳನ್ನು ಬಳಸಿ ಉಳುಮೆ ಬಿತ್ತನೆ ಮಾಡುತ್ತಿರುವುದು

ಕಂಡುಬರುತ್ತದೆ. ಕೃಷಿಯಲ್ಲಿ ಉತ್ತಮ ತಳಿಗಳನ್ನು ಬಳಸಿ ತೋಟಗಳನ್ನು ಮಾಡಿರುವುದನ್ನು ಕಾಣಬಹುದು. ಕೃಷಿ ಅಭಿವೃದ್ಧಿಗೆ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದು ಬ್ಯಾಂಕ್‌ಗಳ ಮೂಲಕ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಪ್ರದೇಶದಲ್ಲಿ ಕಡಿಮೆ ಜಮೀನು ಹೊಂದಿದ ಸಣ್ಣ ರೈತರು ಹೆಚ್ಚಾಗಿ ಇರುವುದು ಕಂಡು ಬರುತ್ತದೆ.

ಕಾಡುಗೊಲ್ಲರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಇದ್ದರೂ ಇಂದು ಅವರು ಶಿಕ್ಷಣ ಪಡೆದು ವಿದ್ಯಾವಂತರಾಗಿ ಉದ್ಯೋಗಗಳನ್ನು ಪಡೆದುಕೊಂಡಿರುವವರ ಸಂಖ್ಯೆ ಕಡಿಮೆ ಶಿಕ್ಷಣ ಪಡೆದು ನಿರುದ್ಯೋಗಿಗಳಾಗಿರುವವರ ಸಂಖ್ಯೆ ಹೆಚ್ಚು ಕಂಡು ಬರುತ್ತದೆ.

ಇಂದು ಪುರುಷರು ಬಣ್ಣ ಬಣ್ಣದ ಲುಂಗಿ ಟೀ ಶರ್ಟ್ ಹಾಗೂ ಜೀನ್ಸ್ ಪ್ಯಾಂಟ್‌ಗಳನ್ನು ಧರಿಸುತ್ತಿರುವುದು ಇವರ ಹಟ್ಟಿಯಲ್ಲಿ ಕಂಡುಬರುತ್ತದೆ. ಮಹಿಳೆಯರು ಈ ಹಿಂದೆ ಸೀರೆ ಉಟ್ಟುಕೊಳ್ಳುತ್ತಿದ್ದರು ಆದರೆ ಇಂದು ಇವರು ನೈಟಿ, ಚೂಡಿದಾರ್, ಸೀರೆ ಬಂಗಾರದ ಒಡವೆಗಳನ್ನು ಬಳಸುತ್ತಿದ್ದಾರೆ. ವಯಸ್ಸಾದ ಹಿರಿಯರು ಮಾತ್ರ ತಮ್ಮ ಪಾರಂಪರಿಕ ವೇಷಭೂಷಣಗಳನ್ನು ತೊಡುತ್ತಿರುವುದನ್ನು ಕಾಣುತ್ತೇವೆ.

ಕಾಡುಗೊಲ್ಲರು ಜಗಳ ವ್ಯಾಜ್ಯಗಳನ್ನು ಕಟ್ಟೆಮನೆ ಅಥವಾ ಗುಡಿಕಟ್ಟೆಗಳಲ್ಲಿ ಬಗೆಹರಿಸಿಕೊಳ್ಳುತ್ತಿದ್ದರು. ಇದರಲ್ಲಿ ಊರಗೌಡ ಪೂಜಾರಿಯೂ ಭಾಗವಹಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಇಂತಹ ತೀರ್ಪಿಗೆ ಬದ್ಧರಾಗದೇ, ಕೋರ್ಟ್ ಕಛೇರಿಗಳಿಗೆ ಹೋಗಿರುವ ಘಟನೆಗಳು ಕಂಡುಬರುತ್ತವೆ.

ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಮತ್ತು ರಾಜಕೀಯವಾಗಿ, ಕಾಡುಗೊಲ್ಲರು ಹಂತ ಹಂತವಾಗಿ ಮುಂದುವರಿಯುತ್ತಿದ್ದಾರೆ. ಊರಿನಲ್ಲಿ ನಡೆಯುವ ಹಬ್ಬ ಹರಿದಿನ ಜಾತ್ರೆಗಳನ್ನು ಅದ್ದೂರಿಯಾಗಿ ಮಾಡುತ್ತಾರೆ. ಕಾಡುಗೊಲ್ಲರು ಮನೆಗಳಲ್ಲಿ ತಿರುಪತಿತಿಮ್ಮಪ್ಪ ಶ್ರೀಕೃಷ್ಣನ ಪೋಟೋ ಇಟ್ಟು ಪೂಜೆ ಮಾಡುತ್ತಿರುವುದು ಕಂಡು ಬರುತ್ತದೆ. ಹಟ್ಟಿಯ ಪ್ರಮುಖ ದೇವರುಗಳಾದ ಮೇಲುಕೋಟೆ, ರಂಗನಾಥಸ್ವಾಮಿ, ತಿಮ್ಮಪ್ಪ ಜುಂಜಪ್ಪ, ಮೈಲೆಮಾರಮ್ಮನಹಬ್ಬದ ಜಾತ್ರೆ, ಮಾಡುತ್ತಿರುವುದರ ಜೊತೆಗೆ ಬೇರೆ ಸಮುದಾಯದವರು ಆಚರಿಸುವ ಹಬ್ಬಗಳನ್ನು ಇವರು ಆಚರಿಸುತ್ತಿದ್ದಾರೆ.

ಕಾಡುಗೊಲ್ಲರು ಇತ್ತೀಚೆಗೆ ರಾಜಕೀಯವಾಗಿ ಸ್ವಲ್ಪ ಮುಂದುವರಿಯುತ್ತಿದ್ದಾರೆ. ಕಾಡುಗೊಲ್ಲರು ಶಿಕ್ಷಣ ಪಡೆದು ವಿದ್ಯಾವಂತರಾಗಿ ರಾಜಕೀಯದಲ್ಲಿ ಮೀಸಲಾತಿಯ ಬಗ್ಗೆ ತಿಳಿದುಕೊಂಡು ಗ್ರಾಮಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ನಾಮಪತ್ರವನ್ನು ಸಲ್ಲಿಸುತ್ತಿದ್ದಾರೆ.

ಫಲಿತಗಳು

- ನಾನು ಈ ಅಧ್ಯಯನಕ್ಕೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ದೊಡ್ಡಬ್ಬಿಗೆರೆ ಗೊಲ್ಲರಹಟ್ಟಿ ಮತ್ತು ಚಿಕ್ಕೋಡ ಗೊಲ್ಲರಹಟ್ಟಿಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಈ ಎರಡು ಹಟ್ಟಿಗಳನ್ನು ಗಮನಿಸಿದಾಗ ಮೂಲಭೂತ ಸೌಲಭ್ಯಗಳಾದ ಸಾರಿಗೆ ರಸ್ತೆ ವ್ಯವಸ್ಥೆ ಆಸ್ಪತ್ರೆ ಇಲ್ಲದಿರುವುದು ಕಂಡುಬರುತ್ತದೆ.
- ಈ ಹಟ್ಟಿಯಲ್ಲಿ ಬೆರಳೆಣಿಕೆಯಷ್ಟು ಗುಡಿಸಲುಗಳು ಗುಡಾರಗಳು ಕಂಡು ಬರುತ್ತವೆ. ಆದರೆ ನೂರಕ್ಕೆ ತೊಂಭತ್ತರಷ್ಟು ಹಂಚಿನ ಮನೆಗಳಿರುವುದು ಕಂಡು ಬರುತ್ತದೆ.
- ಸರ್ಕಾರದ ಯೋಜನೆಗಳಾದ ವೃದ್ಧಾಪ್ಯ ವೇತನ ವಿಧವಾ ವೇತನ ಮತ್ತು ಅಂಗವಿಕಲರಿಗೆ ಸಹಾಯಧನ ಮುಂತಾದವು ಇವರಿಗೆ ಸಮರ್ಪಕವಾಗಿ ದೊರೆಯುತ್ತಿಲ್ಲ. ಏಕೆಂದರೆ ಇವರಲ್ಲಿ ಶಿಕ್ಷಣದ ಕೊರತೆಯಿರುವುದರಿಂದ ಇಂತಹ ಯೋಜನೆಗಳಿಂದ ಬಂದ ಮಾಹಿತಿಯನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗಿದ್ದಾರೆ.
- ಈ ಹಟ್ಟಿಯಲ್ಲಿರುವ ಕಾಡುಗೊಲ್ಲರು ಸ್ನಾನದ ಕೊಠಡಿಗಳನ್ನು ತೆಂಗಿನಗರಿಗಳಿಂದ ನಿರ್ಮಿಸಿಕೊಂಡಿರುವುದನ್ನು ಕಾಣುತ್ತೇವೆ.
- ಗೊಲ್ಲರ ಹಟ್ಟಿಯಲ್ಲಿ ಶೌಚಾಲಯಗಳು ಇಲ್ಲದಿರುವುದರಿಂದ ಹಟ್ಟಿಯ ಅಕ್ಕ ಪಕ್ಕ ಇರುವ ಕೆರೆ ಅಥವಾ ಜಮೀನುಗಳೆ ಇವರ ಶೌಚಾಲಯಗಳಾಗಿವೆ. ಇವರಿಗೆ ತಮ್ಮ ಹಟ್ಟಿಯ ಸುತ್ತಮುತ್ತಲಿನ ಪರಿಸರದ ಸ್ವಚ್ಛತೆ ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಲಾಗುತ್ತಿಲ್ಲ.
- ಹುಲ್ಲುಗಾವಲು ಪ್ರದೇಶಗಳ ಜೊತೆಗೆ ಇವರಿಗೆ ಭೂಮಿಯನ್ನು ಉಳುಮೆ ಮಾಡಿಕೊಂಡು ಜೀವನವನ್ನು ಸಾಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.
- ಕಾಡುಗೊಲ್ಲರು ಸಾಕಿರುವ ಕುರಿ, ಮೇಕೆಗಳನ್ನು ಮಾರಾಟ ಮಾಡುವುದಕ್ಕೆ ಉತ್ತಮವಾದ ಮಾರುಕಟ್ಟೆ ವ್ಯವಸ್ಥೆಯ ಸೌಲಭ್ಯವಿಲ್ಲದಿರುವುದು ಕಂಡುಬರುತ್ತದೆ.
- ಕಾಡುಗೊಲ್ಲರು ಬ್ಯಾಂಕ್‌ಗಳ ಸಾಲ ಸೌಲಭ್ಯವನ್ನು ಪಡೆದುಕೊಳ್ಳದೇ ಹೆಚ್ಚಾಗಿ ಮಧ್ಯವರ್ತಿಗಳಿಂದ ಇಲ್ಲವೇ ಖಾಸಗಿ ಲೇವಾದೇವಿಗಾರರ ಅಥವಾ ಹಣವಂತರಿಂದ ಸಾಲ ಪಡೆದುಕೊಳ್ಳುತ್ತಿದ್ದರು. ಇತ್ತೀಚಿಗೆ ಬ್ಯಾಂಕ್‌ಗಳ ಸಾಲ ಪಡೆಯುತ್ತಿರುವುದು ಕಂಡುಬರುತ್ತದೆ.
- ಗೊಲ್ಲರ ಹಟ್ಟಿಗಳಲ್ಲಿಯ ಜನರಿಗೆ ಮೂಲಭೂತ ಸೌಕರ್ಯಗಳು ಸಿಗದೇ ವಂಚಿತರಾಗಿದ್ದಾರೆ. ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸುವಂತೆ ಸರ್ಕಾರಕ್ಕೆ ಒತ್ತಾಯಿಸಬೇಕಾಗಿದೆ.

- ಕಾಡುಗೊಲ್ಲರು ಆಧುನಿಕ ದಿನಗಳಲ್ಲಿಯೂ ತಮ್ಮ ದೇವರ ಬಗ್ಗೆ ನಂಬಿಕೆ, ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯಗಳ ಬಗ್ಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ.
- ಇಂದು ಕಾಡುಗೊಲ್ಲರು ಶಿಕ್ಷಣದಲ್ಲಿ ಹೆಚ್ಚು ಪ್ರಗತಿಯನ್ನು ಕಾಣುತ್ತಿದ್ದು ಉನ್ನತ ಶಿಕ್ಷಣಗಳಾದ ವೈದ್ಯಕೀಯ ಎಂಜಿನೀಯರ್ ಮುಂತಾದ ಶಿಕ್ಷಣವನ್ನು ಕಲಿಯುವವರ ಸಂಖ್ಯೆ ವಿರಳವಾಗಿದೆ.
- ಇತ್ತೀಚಿಗೆ ಕುರಿ ಹಾಗೂ ಮೇಕೆ ಸಾಕಾಣಿಕೆ ಸ್ವಲ್ಪ ಕಡಿಮೆಯಾಗಿದೆ ಇವರ ಮಕ್ಕಳು ಸಹ ಶಿಕ್ಷಣ ಉದ್ಯೋಗ ಆರಿಸಿಕೊಂಡು ನಗರ ಪ್ರದೇಶಗಳಿಗೆ ಹೋಗುತ್ತಿರುವುದು ಕಂಡುಬರುತ್ತದೆ.
- ಇಂದು ಪಶುಪಾಲನೆಯ ಜೊತೆಗೆ ಕೃಷಿ ಮತ್ತು ಸಣ್ಣ ಪುಟ್ಟ ವ್ಯಾಪಾರ ಮಾಡುತ್ತಿರುವುದು ಕಂಡುಬರುತ್ತದೆ.

ಅನುಬಂಧಗಳು

* ಅಂಕಿ ಅಂಶಗಳ ಪಟ್ಟಿ
* ಮಾಹಿತಿದಾರರ ಪಟ್ಟಿ
* ಪರಾಮರ್ಶನ ಗ್ರಂಥಗಳು
* ನಕ್ಷೆಗಳು
* ಛಾಯಾಚಿತ್ರಗಳು

ಅಂಕಿ ಅಂಶಗಳ ಪಟ್ಟಿ

ಸಮೀಕ್ಷೆಗೊಳಪಟ್ಟವರ ವಸತಿ ಮಾದರಿಯ ಕೋಷ್ಟಕ

ಕ್ರಸಂ.	ಮಾದರಿ	ಒಟ್ಟು
೧	ಸ್ವಂತ ನಿವೇಶನ ಹೊಂದಿದವರು	೯೭
೨	ಆರ್.ಸಿ.ಸಿ. ಮನೆ	೪
೩	ಗುಡಿಸಲು	೧೦
೪	ಹಂಚಿನ ಮನೆ	೬೦
೫	ಶೀಟು	೮
೬	ಆಶ್ರಯ	೧೫

ಸಮೀಕ್ಷೆಗೊಳಪಟ್ಟವರ ಪಶುಸಂಪತ್ತಿನ ವಿವರ

ಕ್ರಸಂ.	ಪಶುಸಂಪತ್ತು	ಒಟ್ಟು
೧	ಎತ್ತು	೭೮
೨	ಹಸು	೬೨
೩	ಎಮ್ಮೆ	೧೨೫
೪	ಕುರಿ	೪೨೭
೫	ಮೇಕೆ	೧೨೦

ಸಮೀಕ್ಷೆಗೊಳಪಟ್ಟವರ ವೈವಾಹಿಕ ಸ್ಥಾನಮಾನ

ಕ್ರ.ಸಂ.	ಒಟ್ಟು ಕುಟುಂಬಗಳು	ಗಂಡು	ಶೇಕಡವಾರು	ಹೆಣ್ಣು	ಶೇಕಡವಾರು	ಒಟ್ಟು	ಶೇಕಡವಾರು
೧	ಅವಿವಾಹಿತರು	೧೩೫	೪೭.೭೦	೧೧೪	೪೨.೨೨	೨೪೯	೪೫.೦೨
೨	ವಿವಾಹಿತರು	೧೪೦	೪೯.೪೬	೧೪೫	೫೩.೭೦	೨೮೫	೫೧.೫೩
೩	ವಿಧವೆ-ವಿಧುರ	೦೮	೨.೮೨	೧೧	೪.೦೭	೧೯	೩.೪೩
ಒಟ್ಟು		೨೮೩	೧೦೦	೨೭೦	೧೦೦	೫೫೩	೧೦೦

ಕಾಡುಗೊಲ್ಲರ ಶೈಕ್ಷಣಿಕ ವಿವರದ ಕೋಷ್ಟಕ

ಕ್ರ.ಸಂ.	ವಿವರ	ಗಂಡು	ಹೆಣ್ಣು	ಒಟ್ಟು
೧	ಪ್ರಾಥಮಿಕ ಶಿಕ್ಷಣ	೨೯	೩೪	೬೩
೨	ಮಾಧ್ಯಮಿಕ ಶಿಕ್ಷಣ	೩೦	೨೯	೫೯
೩	ಪ್ರೌಢ ಶಾಲೆ	೬೭	೪೭	೧೧೪
೪	ಪದವಿ ಪೂರ್ವ	೨೪	೨೦	೪೪
೫	ಐಟಿಐ	೫	೦	೫
೬	ಪದವಿ	೧೮	೮	೨೬
೭	ಸ್ನಾತಕೋತ್ತರ	೧	೦	೧
೮	ಇತರೆ	೦	೦	೦
೯	ಅನಕ್ಷರಸ್ಥರು	೫೯	೮೦	೧೩೯
ಒಟ್ಟು		೨೩೩	೨೧೮	೪೫೧

ಸಮೀಕ್ಷೆಗೊಳಪಟ್ಟವರ ಇತರೆ ಸೌಲಭ್ಯಗಳು

ಕ್ರಸಂ.	ಇತರೆ ಸೌಲಭ್ಯಗಳು	ಒಟ್ಟು
೧	ಪಡಿತರ ಚೀಟಿ	೮೩
೨	ಗ್ಯಾಸ್	೧೫
೩	ಸ್ವಂತ ವಿದ್ಯುತ್‌ಚ್ಛಕ್ತಿ	೫೬
೪	ಭಾಗ್ಯಜ್ಯೋತಿ	೪೧
೫	ಸೈಕಲ್	೨೦
೬	ಶೌಚಾಲಯ	೧೫
೭	ಮೊಬೈಲ್	೭೨
೮	ಟಿ.ವಿ.	೫೮
೯	ರೇಡಿಯೋ	೧೫
೧೦	ಟೇಪ್‌ರೆಕಾರ್ಡ್	೧೨

ಮಾಹಿತಿದಾರರ ಪಟ್ಟಿ

ಕ್ರಸಂ	ಹೆಸರು	ವಯಸ್ಸು	ವಿದ್ಯಾರ್ಹತೆ	ಊರು	ಬೆಡಗುಗಳು	ವೃತ್ತಿ
೧	ರತ್ನಮ್ಮ	೭೦	–	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ಕೂಲಿ
೨	ಶಿವಪ್ಪ	೪೦	–	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ಕೂಲಿ
೩	ನಾಗಪ್ಪ	೭೦	೯ನೇತರಗತಿ	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ವ್ಯವಸಾಯ
೪	ರಾಜಪ್ಪ	೬೩	೫ನೇತರಗತಿ	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ವ್ಯವಸಾಯ
೫	ರಂಗಪ್ಪ	೫೦	ಪಿಯುಸಿ	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ಕೂಲಿ
೬	ಮಧು	೨೧	ಐಟಿಐ	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ವಿದ್ಯಾರ್ಥಿ
೭	ವೀರನಾಗಪ್ಪ	೭೦	ಎಸ್‌ಎಸ್‌ಎಲ್‌ಸಿ	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ವ್ಯವಸಾಯ
೮	ಪಾಂಡುರಂಗಪ್ಪ	೨೮	ಬಿಎ	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ವ್ಯವಸಾಯ
೯	ಜಯ್ಯಪ್ಪ	೪೫	ಬಿ.ಎಸ್‌ಸಿ	ಗೊಲ್ಲರಹಟ್ಟಿ	ಕರಡಿಗೊಲ್ಲರು	ವ್ಯವಸಾಯ
೧೦	ಗಂಗಾಧರ	೩೦	ಬಿಎ,ಬಿಎಡ್	ಗೊಲ್ಲರಹಟ್ಟಿ	ಕರಡಿಗೊಲ್ಲರು	ಶಿಕ್ಷಕ
೧೧	ಸತೀಶ್	೨೩	ಎಂ.ಎ	ಗೊಲ್ಲರಹಟ್ಟಿ	ಕರಡಿಗೊಲ್ಲರು	ವಿದ್ಯಾರ್ಥಿ
೧೨	ಚಿಕ್ಕನಾಗಪ್ಪ	೩೮	ಬಿಎ	ಗೊಲ್ಲರಹಟ್ಟಿ	ಕರಡಿಗೊಲ್ಲರು	ವ್ಯವಸಾಯ
೧೩	ರಾಜಪ್ಪ.ವಿ	೫೮	ಬಿಎ,ಬಿಎಡ್	ಗೊಲ್ಲರಹಟ್ಟಿ	ಕರಡಿಗೊಲ್ಲರು	ವ್ಯವಸಾಯ

೧೪	ಚಂದ್ರಪ್ಪ	೬೦	೪ನೇತರಗತಿ	ಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿಸಾಕಾಣಿಕೆ
೧೫	ರಾಜಪ್ಪ	೫೦	–	ಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿ
೧೬	ತಿಮ್ಮಮ್ಮ	೪೦	ಎಸ್‌ಎಸ್‌ಎಲ್‌ಸಿ	ಗೊಲ್ಲರಹಟ್ಟಿ	ಕರಡಿಗೊಲ್ಲರು	ಪಶುಸಂಗೋಪನೆ
೧೭	ಈರಮ್ಮ	೭೦	–	ಗೊಲ್ಲರಹಟ್ಟಿ	ಕಂಬೇರಗೊಲ್ಲರು	ಕುರಿಸಾಕಾಣಿಕೆ
೧೮	ತಿಮ್ಮಪ್ಪ	೪೫	–	ಗೊಲ್ಲರಹಟ್ಟಿ	ಮೇರೆನವರಗೊಲ್ಲರು	ಕುರಿಸಾಕಾಣಿಕೆ
೧೯	ಪರಮೇಶ್ವರಪ್ಪ	೬೫	–	ಗೊಲ್ಲರಹಟ್ಟಿ	ಮೇರೆನವರಗೊಲ್ಲರು	ಕುರಿಸಾಕಾಣಿಕೆ
೨೦	ಮಹಲಿಂಗಪ್ಪ	೬೦	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಅಜ್ಜರಗೊಲ್ಲರು	ಕುರಿಸಾಕಾಣಿಕೆ
೨೧	ಈರಪ್ಪ	೬೨	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಅಜ್ಜರಗೊಲ್ಲರು	ಕುರಿಸಾಕಾಣಿಕೆ
೨೨	ತಿಮ್ಮೇಶ್	೩೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿ ವ್ಯಾಪಾರ
೨೩	ಪೂಜಾರನಿಂಗಪ್ಪ	೮೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಅಜ್ಜರಗೊಲ್ಲರು	ವ್ಯವಸಾಯ
೨೪	ತಿಪ್ಪೇಸ್ವಾಮಿ	೩೨	ಎಸ್‌ಎಸ್‌ಎಲ್‌ಸಿ	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿಸಾಕಾಣಿಕೆ
೨೫	ಶ್ರೀನಿವಾಸ	೪೫	ಎಸ್‌ಎಸ್‌ಎಲ್‌ಸಿ	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ವ್ಯವಸಾಯ
೨೬	ಸಣ್ಣಚಿತ್ತಪ್ಪ	೬೫	ಟಿ.ಸಿಹೆಚ್	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಶಿಕ್ಷಕ
೨೭	ಪರಮೇಶಪ್ಪ	೩೫	ಡಿಎಡ್	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಶಿಕ್ಷಕ
೨೮	ಅಂಜಿನಮ್ಮ	೪೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿಸಾಕಾಣಿಕೆ
೨೯	ರಾಜಪ್ಪ	೪೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿಸಾಕಾಣಿಕೆ

೩೦	ಕೃಷ್ಣಮೂರ್ತಿ.ಪಿ.ಸಿ	೪೮	೯ನೇತರಗತಿ	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಪೂಜಾರಿಕೆ & ವ್ಯವಸಾಯ
೩೧	ಕರಿಯಪ್ಪ.ಪಿ.ಸಿ	೩೬	೪ನೇತರಗತಿ	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ವ್ಯವಸಾಯ
೩೨	ಗಂಗಮ್ಮ	೫೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಕೂಲಿ
೩೩	ಶ್ರೀನಿವಾಸ	೫೦	ಟಿಸಿಹೆಚ್ ಬಿಎ	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ಕುರಿಸಾಕಾಣಿಕೆ
೩೪	ವೆಂಕಟೇಶಪ್ಪ	೪೫	೭ನೇತರಗತಿ	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕರಡಿಗೊಲ್ಲರು	ವ್ಯವಸಾಯ
೩೫	ಜಯ್ಯಮ್ಮ	೬೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕಂಬೇರ್‌ಗೊಲ್ಲರು	ಕುರಿಸಾಕಾಣಿಕೆ
೩೬	ನಾಗಪ್ಪ	೬೩	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಕಂಬೇರ್‌ಗೊಲ್ಲರು	ವ್ಯವಸಾಯ
೩೭	ರುದ್ರಪ್ಪ	೪೫	–	ದೊಡ್ಡಬ್ಬೀಗೆರೆಗೊಲ್ಲರಹಟ್ಟಿ	ಅಜ್ಜರ್‌ಗೊಲ್ಲರು	ಕೂಲಿ

ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ., ೧೯೭೮, ಕಾಡುಗೊಲ್ಲರ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ಅಕ್ಕಮಹಾದೇವಿ (ಅನು) ಬುಡಕಟ್ಟು ನ್ಯಾಯ, ೧೯೮೪, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩. ಇಂದಿರಾ ಆರ್., ೨೦೦೨, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಕರಿಯಪ್ಪ ಡಿ., ಲೇಖನ ಅಡವಿ (ಕಾಡು) ಗೊಲ್ಲರ ಸಮುದಾಯದ ಚಾರಿತ್ರಿಕ ಹಿನ್ನೆಲೆ, ಸ್ಮರಣ ಸಂಚಿಕೆ, (ತುಮಕೂರು ಜಿಲ್ಲಾ ಪ್ರಥಮ ಅಧಿವೇಶನ, ೧೯೭೨)

೫. ಕಾಳೇಗೌಡ ನಾಗವಾರ ಮತ್ತು ಎನ್.ಹುಚ್ಚಪ್ಪ ಮಾಸ್ತರ್., ೨೦೦೦, ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೬. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿಯೊಂದರ ಅಧ್ಯಯನ, ೧೯೭೫ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಪ್ರಬಂಧ.

೭. ಕಾಳೇಗೌಡ ನಾಗವಾರ., ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ (ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ, ೧೯೮೪)

೮. ಕೃಷ್ಣಮೂರ್ತಿ ಹನೂರು., ಕಾಡುಗೊಲ್ಲರು ಸಂಪಾದಕರು, ಪ್ರೊ॥ ಎಚ್.ಜೆ. ಲಕ್ಕಪ್ಪಗೌಡರು ಕರ್ನಾಟಕದ ಬುಡಕಟ್ಟುಗಳು, ಸಂಪುಟ–೧, (ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮)

೯. ಗುರುಲಿಂಗಯ್ಯ ಎಂ., "ಕರ್ನಾಟಕದ ಗೊಲ್ಲ ಸಮುದಾಯ" (ಶಕ್ತಿ ಪ್ರಿಂಟರ್ಸ್‌ಅಂಡ್ ಪಬ್ಲೀಷರ್ಸ್, ಬೆಂಗಳೂರು, ೨೦೦೫,)

೧೦. .... ಬುಡಕಟ್ಟುಗಳು ಮತ್ತು ಅಭಿವೃದ್ಧಿ (ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೫)

೧೧. ಗುರುಲಿಂಗಯ್ಯ ಎಂ., ವಿ.ನಾಗಪ್ಪ, ೨೦೦೮, ಕಾಡುಗೊಲ್ಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೨. ಗಂಗಾಧರ ದೈವಜ್ಞ, ೨೦೦೦, ಬುಡಕಟ್ಟು ಸಮಾಜ, ಹುಟ್ಟು–ಸಾವಿನ ನಡುವೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಚಲುವರಾಜು., ಜುಂಜಪ್ಪ (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭)

೧೪. ನಾಗಭೂಷಣ ಒ.ಎಲ್., ೧೯೯೩, ಪುರಾಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ನಾಗರಾಜು ಬಿ.ವಿ., ಗೊಲ್ಲರಹಟ್ಟಿ (ಆಪ್ತ ಪ್ರಕಾಶನ, ಬೆಂಗಳೂರು, ೧೯೯೮)

೧೬. ನಂಜಮ್ಮಣ್ಣಿ, ೨೦೦೩, ಸಾಮಾಜಿಕ ಸಂಸ್ಥೆಗಳು, ಕುವೆಂಪು ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೭. ಪಾರ್ವತಮ್ಮ ಸಿ., ೨೦೦೭, ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಪ್ರಭಾಕರ ಎ.ಎಸ್., ೨೦೦೦, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ಪ್ರಭಾಕರ ಎ.ಎಸ್. ೨೦೦೪, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಪ್ರಭಾಕರ ಎ.ಎಸ್. ೨೦೦೬, ಆದಿವಾಸಿ ಆಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

೨೧. ಬೋರಲಿಂಗಯ್ಯ ಹಿ. ಚಿ. ಬುಡಕಟ್ಟು ದೈವಾರಾಧನೆ ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಭೈರಪ್ಪ ಕೆ. ಭಾರತೀಯ ಸಮಾಜ, ೨೦೦೫, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೨೩. ಮೀರಾಸಾಬಿಹಳ್ಳಿ ಶಿವಣ್ಣ., ೧೯೯೯, ಗೊಲ್ಲಕಡಗ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೨೪. ಮೀರಾಸಾಬಿಹಳ್ಳಿ ಶಿವಣ್ಣ., ೨೦೦೪, ಕಾಡುಗೊಲ್ಲರ ಸಂಸ್ಕೃತಿ, ಸಿವಿಜಿ, ಪಬ್ಲಿಕೇಷನ್ಸ್, ಬೆಂಗಳೂರು.

೨೫. ಮೀರಾಸಾಬಿಹಳ್ಳಿ ಶಿವಣ್ಣ., ೨೦೦೫, ಕಾಡುಗೊಲ್ಲರ ಬುಡಕಟ್ಟು ವೀರರು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೨೬. ಮೇತ್ರಿ ಕೆ.ಎಂ. ಕೃಷ್ಣಗೊಲ್ಲರ ಕಥನಕಾವ್ಯ, (ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭)

೨೭. .... ಬುಡಕಟ್ಟು ಕುಲಕಸುಬುಗಳು (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೨)

೨೮. ಯರ್ರಪ್ಪ ಡಿ., ೨೦೦೮, ಅಲೆಮಾರಿ ಕುರುಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,

೨೯. ರಮೇಶ ಸ.ಚಿ., ೨೦೦೫, ಅಲೆಮಾರಿಗಳ ಸ್ಥಿತಿಗತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ರಂಗಯ್ಯ ಸಾ., 'ಕಾಡುಗೊಲ್ಲರು' ಸ್ಮರಣ ಸಂಚಿಕೆಯಲ್ಲಿ ಲೇಖನ, (ತುಮಕೂರು ಜಿಲ್ಲಾ ಪ್ರಥಮ ಅಧಿವೇಶನ, ೧೯೭೨)

೩೧. ಶಂಕರನಾರಾಯಣ, ೧೯೮೮, ಕಾಡುಗೊಲ್ಲರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩೨. ಶಂಕರನಾರಾಯಣ, ತೀ ನಂ. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, (ಮೈಸೂರು ಪ್ರಸಾರಾಂಗ,, ಮೈಸೂರು ವಿಶ್ವವಿದ್ಯಾಲಯ, ೧೯೯೪)

೩೩. ಸಣ್ಣೋಬಯ್ಯ, ಎಸ್.ಕೆ., ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ೨೦೦೨)

English Book Reference :

1. AnanthakrishnaIyer, L.k., The Mysore Tribes and castes (Mysore: the Mysore University, 1930; rpt.1998, New Delhi: Mittal publications), 5 vols.

2. Buchanan, Francis., Journey through Mysore, Canara and Malbar (London, 1807)

3. Enthoven, R.E., the Tribes and castes of Bombay (Bombay: Government Central Press, 1922; rpt. 1975, Delhi: cosmo publications) 3 vols.

4. Gurulingaiah, M., "Social Mobility and Social Change among Gollas" Unpublished Ph.d Thesis Submitted to Mangalore University, 2000.

5. ....Tribal culture, Change and Mobility (New Delhi: Anmol publications, 2007)

6. Havanur, L.G (chairman)., Karnataka Backward classes commission Report (Bangalore: Government press, 1975), 5 vols.

7. Jain p.C., 1999, planned Development Among Tribales, Rawat publications, New Delhi.

8. Nagan Gowda, R (chairman)., Mysore Backward Classes committee Report (Bangalore: Government Press, 1979)

9. Nanjundayya, H.v., the Ethnographic Survey of Mysore (Bangalore: Government Press, 1908).

10. Risley,H H., the caste and tribes of Bengal (Calcutta: Bengal secretariat press, 1891; rpt.1981 calcutta: Firma Mukhopadhyay), vols

11. Russell, R.v. and Hiralal, the Tribes and castes of the central provinces of India (London: Macmillan and co., 1916; rpt. 1975, New Delhi:cosmo publications), vols

12. Singh K.S., 2006, Tribal Movements in India.,vol.I, Manohar publication, New Delhi.


13. Singh, K.S., The Scheduled Castes (Delhi: Oxford University, press, 1993) people of India National Series, vol.2

14. Thurrston, E., Ethnographic Notes on Southern India (Madrss: Government Press, 1906).

15. .... Castes and Tribes of Southern India (Madrss: Government Press, 1909; rpt,1975, Delhi: cosmo Publications) 7 vols.

ooo

ಕರ್ನಾಟಕದಲ್ಲಿ ಕಾರ್ಖಾನೆಗಳ ಸ್ಥಳಗಳು




ಸಂಕೇತಗಳು

● ಜಿಲ್ಲಾ ಕೇಂದ್ರಗಳು

▥ ಕಾರ್ಖಾನೆ ಜಿಲ್ಲೆಗಳು

/// ಕಾರ್ಖಾನೆ [illegible]


DAVANAGERE
TALUKA/TEHSIL MAP
Bellary
Haveri
Harapanahalli
Jagalur
Harihar
Davanagere
Honnali
Channagiri
Chitradurga
Shimoga



Kerebilchi
Channapura
Sevanagara
Chikkoda
Basavarajpura
Kondadhalli
Koglur
Arshinaghatta
Ittige
Somshettihalli
Hatti
Hirehuda
Devarahalli
Lingadahalli
Mantaraghatta
Bullsagara
Nallur
Asthapanahalli
Jayanthinagara
Jogerahatti
Byranahalli
Melanayakanakatte
Hiremallali
Donihalli
Mudigere
RT Colony
Chikkulikere
Channeshpura
Channagiri
48
65
76
17

ಛಾಯಾಚಿತ್ರಗಳು



ಡುಗೊಲ್ಲರ ಮದುಮಗಳಿಗೆ ಸುರಗಿ ನೀರು ಹೊಯ್ಯುವ ಶಾಸ್ತ್ರ



ಬಿಬ್ಬಕ್ಕೆ ಹೊರಟಿರುವ ಶಾಸ್ತ್ರ



ಕಾಡುಗೊಲ್ಲರ ನಾಗವಳಿ ಶಾಸ್ತ್ರ



ಕಾಡುಗೊಲ್ಲರ ಮದುವೆ ಸಮಾರಂಭದಲ್ಲಿ ತಾಳಿ ಕಟ್ಟುತ್ತಿರುವುದು



ವಧು ವರಿಂಗೆ ಸಂಬಂಧಿಕರು ಹಾಲು ತುಪ್ಪ ಬೀಡುವ ಶಾಸ್ತ್ರ



ಮದುವೆಗೆ ಮಧುಮಕ್ಕಳು ಸಿಂಗಾರಗೊಂಡಿರುವುದು



ಕುರಿ.ಮೇಕೆಗಳ ದಟ್ಟಿ



ಕಾಡುಗೊಲ್ಲರ ಗುಡಿಸಲು



ಬಸವಣ್ಣನಿಗ ಪೂಜೆ ಮಾಡುವ ಶಾಸ್ತ್ರ



ದೊಡ್ಡಬ್ಬೀಗೆರೆಯ ಕಾಡುಗೊಲ್ಲರ ಹಟ್ಟಿ



ದೊಡ್ಡಿಯಲ್ಲಿ ಕೂಡಿರುವ ಕುರಿಗಳು



ನಿಜಲಿಂಗಪ್ಪನವರಿಂದ ಮಾಹಿತಿ
ಪಡೆಯುತ್ತಿರುವ ಸಂಶೋಧಕ









ಕಾಡುಗೊಲ್ಲರ ಹಿರಿಯ ವಯಸ್ಸಿನ ಅಜ್ಜಿ




ಕಾಡುಗೊಲ್ಲರ ಮುದ್ದು ಮಕ್ಕಳು



ಅಡವಿಗೆ ಹೊರಟಿರುವ ಕಾಡುಗೊಲ್ಲರ ದನಗಳು



ಹಟ್ಟಿಯಲ್ಲಿ ಕಟ್ಟಿರುವ ಕಾಡುಗೊಲ್ಲರ ಎಮ್ಮೆಗಳು



ಕುಡಿಯುವ ನೀರನ್ನು ತುಂಬುತ್ತಿರುವ ಮಹಿಳೆಯರು



ಆಧುನಿಕ ಕಾಲದ ಕಾಡುಗೊಲ್ಲರ ಹಟ್ಟಿಯ ಮನೆಗಳು



ಜಾಗಪ್ಪನಿಂದ ಮಾಹಿತಿಯನ್ನು ಪಡೆಯುತ್ತಿರುವ ಸಂಶೋಧಕ



ಬಯಲು ಜಮೀನಲ್ಲಿ ಬಿಡುವ ಕುರಿಗಳು



ದೊಡ್ಡಜೀಗೆರೆ ಗೊಲ್ಲರ ಹಟ್ಟಿಯ ಜುಂಜಪ್ಪನ ದೇವಸ್ಥಾನ



ಜುಂಜಪ್ಪನ ದೇವಸ್ಥಾನಕ್ಕೆ ಬಿಟ್ಟಿರುವ ಜಮೀನು



ಸರ್ಕಾರಿ ಶಾಲೆ



ದೊಡ್ಡಜೀಗೆರೆ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳು



ನೀರಿನ ಟ್ಯಾಂಕ್



ಗೊಲ್ಲರ ಮಾವಿನ ತೋಟ



ಗೊಲ್ಲರ ಹಂಚಿನ ಮನೆಗಳು



ತಿಮ್ಮಪ್ಪನ ದೇವಸ್ಥಾನ



ಗೊಲ್ಲರ ಅಡಕೆ ತೋಟ



ಮೇಕೆ ಹಿಡಿದಿರುವ ಬಾಲಕರು

ಬುಡಕಟ್ಟು ಅಧ್ಯಯನ ವಿಭಾಗ